ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬಿಜೆಪಿಯಿಂದ ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಅಮಿತ್ ಶಾ

೦೫

ಮೊಜ್ತಬಾ ಮಾಹಿತಿ ನೀಡಿ, 92 ಕೋಟಿ ರೂ. ಪಡೆದುಕೊಳ್ಳಿ!

೦೫



ಬೆಂಗಳೂರು
ಭಾನುವಾರ, 15 ಮಾರ್ಚ್ 2026
ಸಂಪುಟ 33, ಸಂಚಿಕೆ 134, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಶ್ರವಣ

ದಿನದ ಮಾತು

ಆರೋಗ್ಯಕರ ಶರೀರದಲ್ಲಿ ಆರೋಗ್ಯಕರ ಮನಸ್ಸಿರಲೆಂಬುದೇ ನಮ್ಮ ಪ್ರತಿದಿನದ ಪ್ರಾರ್ಥನೆಯಾಗಬೇಕು.

▲ಸುಭಾಷಿತ

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಯುಗಾದಿ, ರಂಜಾನ್ ಹಿನ್ನೆಲೆ: 2 ಸಾವಿರ ಹೆಚ್ಚುವರಿ ಬಸ್

• **ಬೆಂಗಳೂರು:** ಯುಗಾದಿ ಹಾಗೂ ರಂಜಾನ್ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 2 ಸಾವಿರ ಹೆಚ್ಚುವರಿ ಕೆಎಸ್ಆರ್‌ಟಿಸಿ ವಾಹನಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಮಾ.18, 19 ಹಾಗೂ 20ರಂದು ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ ಹೆಚ್ಚುವರಿ ಬಸ್ ಹಾಗೂ ರಾಜ್ಯವಲ್ಲದೆ ಹೊರ ರಾಜ್ಯಗಳ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಮಾ.22ರಂದು ವಿಶೇಷ ಬಸ್‌ಗಳು ಸಂಚರಿಸಲಿವೆ. ➡ಪುಟ ೨

ಎನ್ಎಸ್ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

• **ಜೋಧ್‌ಪುರ:** ರಾಷ್ಟ್ರೀಯ ಭದ್ರತಾ ಕಾಯ್ದೆಯಲ್ಲಿ (ಎನ್ಎಸ್ಎ) ಲಭ್ಯವಿರುವ ಅಧಿಕಾರ ಬಳಸಿಕೊಂಡು ಬಂಧಿತರಾಗಿದ್ದ ಹವಾಮಾನ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆಗೊಳಿಸಲು ಕೇಂದ್ರ ಆದೇಶಿಸಿದೆ. ಈ ಬೆನ್ನಲ್ಲೇ ಜೋಧ್‌ಪುರ ಕೇಂದ್ರ ಕಾರಾಗೃಹದಿಂದ ಬಿಡುಗಡೆ ಮಾಡಲಾಗಿದೆ.

• ಪುಟ ೫

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ: ಮೋದಿ

• ಪುಟ ೫

ಐಎಸ್ಐ ಬೆಂಬಲಿತ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ

• ಪುಟ ೫

ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕ ನಾಶ ಶತಸ್ಸಿದ್ಧ

• ಪುಟ ೫

ಖಾರ್ಗ್ ದ್ವೀಪದಲ್ಲಿನ ಇರಾನ್ ಸೇನಾ ನೆಲೆ ಧ್ವಂಸ

• ಪುಟ ೫

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

• ಪುಟ ೫

ಸಂತ ರವಿದಾಸಗೆ ವಿಶಿಷ್ಟ ಸ್ಥಾನ: ಹೊಸಬಾಳೆ

• ಪುಟ ೨

ಯುಕೆಪಿ ಹಂತ 3ರ ಭೂಪರಿಹಾರ ಒಂದೇ ಬಾರಿಗೆ ಪಾವತಿ ಪೂರಕ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ: ಮುಖ್ಯಮಂತ್ರಿ

ಒಂದೇ ಬಾರಿ ಪರಿಹಾರ

• **ಬಾಗಲಕೋಟೆ:** ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಭೂಸ್ವಾಧೀನವಾಗುವ ರೈತರಿಗೆ ಪರಿಹಾರ ನೀಡಲು ಈ ಬಾರಿಯ ಬಜೆಟ್‌ದಲ್ಲಿ 3 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದು ಬರುವ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಮತ್ತೆ 5 ಸಾವಿರ ಕೋಟಿ ರೂ.ಗಳನ್ನು ರೈತರಿಗೆ ಪರಿಹಾರ ನೀಡಲು ತೆಗೆದಿಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಯುಕೆಪಿ ಮೂರನೇ ಹಂತದ ಭೂಸ್ವಾಧೀನವಾಗುವ ರೈತರಿಗೆ ಹಣ ಇಟ್ಟಿಲ್ಲ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿರುವುದು ಸತ್ಯಕ್ಕೆ ದೂರವಾಗಿದೆ. 8 ಗ್ರಾಮಗಳ 951 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ರೈತರಿಗೆ 446 ಕೋಟಿ ರೂ. ಪರಿಹಾರವನ್ನು ಈಗ ನೀಡಲಾಗುತ್ತಿದೆ ಎಂದರು.

ಬಿಜೆಪಿಯವರು ತಮ್ಮ ಅವಧಿಯಲ್ಲಿ ಯುಕೆಪಿ ಯೋಜನೆಗೆ ಪರಿಹಾರ ನೀಡಲು ಆಸಕ್ತಿ ವಹಿಸಲಿಲ್ಲ. ಆದ್ದರಿಂದ ರೈತರು ಭೂಮಿ ನೀಡಲು ಮುಂದೆ ಬರಲಿಲ್ಲ. ಈಗ ರೈತರಿಗೆ ಭೂ ಪರಿಹಾರವನ್ನು ಒಂದೇ ಬಾರಿಗೆ ನೀಡಲು ಕಾಂಗ್ರೆಸ್ ಸರ್ಕಾರ ನಿರ್ಣಯಿಸಿದೆ. ಸ್ವಯಂಪ್ರೇರಣೆಯಿಂದ ಭೂಮಿ ನೀಡುವ ರೈತರಿಗೆ ನೀರಾವರಿ ಜಮೀನಿಗೆ 40 ಲಕ್ಷ ರೂ, ಹಾಗೂ ಖುಷ್ಕಿ ಜಮೀನಿಗೆ 30 ಲಕ್ಷ ರೂ. ನೀಡಲು ಸರ್ಕಾರ ನಿರ್ಣಯಿಸಿದೆ. ಆದರೆ, ಈ ಬಗ್ಗೆ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಅನುಮತಿ ದೊರಕಿಲ್ಲ: ಕಾಂಗ್ರೆಸ್ ಸರ್ಕಾರ ಎಂದಿಗೂ ನುಡಿದಂತೆ ನಡೆಯುತ್ತದೆ. ಕೇಂದ್ರಕ್ಕೆ ಹಲವು ಮನವಿಗಳ ನಂತರವೂ ಯುಕೆಪಿ, ಮಹದಾಯಿ ಸೇರಿದಂತೆ ಹಲವು ನೀರಾವರಿ ಯೋಜನೆಗೆ ಬೇಕಾದ ಅಗತ್ಯ ಅನುಮತಿಗಳನ್ನು ಕೇಂದ್ರ ಸರ್ಕಾರ ಇದುವರೆಗೆ ನೀಡಿಲ್ಲ, ಆದರೆ, ನಮ್ಮ ಸರ್ಕಾರ ಉತ್ತರ ಕರ್ನಾಟಕದ ಜನತೆಗೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಸರ್ಕಾರ ಬದ್ಧವಾಗಿದೆ ಎಂದರು.



ಉಪಚುನಾವಣೆ ಗಿಮಿಕ್ ಅಲ್ಲ

ಬಾಗಲಕೋಟೆ ಸರ್ಕಾರಿ ಮೆಡಿಕಲ್ ಕಾಲೇಜಿನ ಶಂಕುಸ್ಥಾಪನೆಯಾಗಲು ಎಚ್.ವೈ.ಮೇಟಿಯವರೇ ಕಾರಣ. ಮೇಟಿಯವರ ಕನಸು ಇಂದು ನನಸಾಗಿದೆ. ಈ ಭಾಗದ ಜನರಿಗೆ ಆರೋಗ್ಯ ಸೇವೆ ನೀಡಲು ಅವರು ಕಾಳಜಿ ತೆಗೆದುಕೊಂಡಿದ್ದರು. ಅವರ ಆಶಯದಂತೆ ಇವತ್ತು ಮೆಡಿಕಲ್ ಕಾಲೇಜ್ ಆರಂಭವಾಗುತ್ತಿದೆ. ಇದು ಉಪ ಚುನಾವಣೆಯ ಕಾರಣಕ್ಕಾಗಿ ಅಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಹಾಗೂ ಟ್ರಾಮಾ ಸೆಂಟರ್ ಸ್ಥಾಪನೆಯ ಉದ್ದೇಶವಿದ್ದು, ಈಗಾಗಲೇ ಸುಮಾರು 25 ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ವರ್ಷ ಇಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಆರೋಪ ಸುಳ್ಳು

ಗ್ಯಾರಂಟಿ ಯೋಜನೆಗಳಿಂದಾಗಿ ಸರ್ಕಾರದಲ್ಲಿ ಅಭಿವೃದ್ಧಿಗೆ ಹಣವಿಲ್ಲ ಎಂದು ಬಿಜೆಪಿಯವರು ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಮಾತು. ನಮ್ಮ ಸರ್ಕಾರ ಗ್ಯಾರಂಟಿ ಹಾಗೂ ಅಭಿವೃದ್ಧಿಯನ್ನು ಸಮಾನ ಆದ್ಯತೆ ನೀಡುತ್ತಿದ್ದೇವೆ. ಪ್ರತಿ ವರ್ಷ ಗ್ಯಾರಂಟಿಗಳಿಗೆ ಸುಮಾರು 50 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಇದುವರೆಗೆ 1.22 ಲಕ್ಷ ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಬಿಜೆಪಿಯ ವರು ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ, ಬಾಗಲಕೋಟೆ ಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲಿಲ್ಲ. ಜಾತಿ ಧರ್ಮಗಳ ಮಧ್ಯೆ ವೈಮನಸ್ಸು ತರುವುದು ಅವರ ದುರಾಲೋಚನೆಯಾಗಿದೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವ ಎಂ.ಬಿ.ಪಾಟೀಲ, ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣ ಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ, ಗ್ಯಾರಂಟಿ ಯೋಜನೆ ಅಧ್ಯಕ್ಷ ಅನಿಲ ದಡ್ಡಿ ಇದ್ದರು.

ಇರಾನ್‌ನ ಕುದ್ಸ್ ಮೆರವಣಿಗೆ ವೇಳೆ ಘಟನೆ

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

• **ಟೆಹ್ರಾನ್:** ಇರಾನ್ ಮತ್ತು ಅಮೆರಿಕ-ಇಸ್ರೇಲ್ ಮೈತ್ರಿಕೂಟದ ನಡುವಿನ ಸಂಘರ್ಷವು ಎರಡನೇ ವಾರಕ್ಕೆ ಕಾಲಿಡುತ್ತಿದ್ದಂತೆ, ಶುಕ್ರವಾರ ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರಭಾಗದಲ್ಲಿ ಭೀಕರ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಜಮಾಯಿಸಿದ್ದ ಫಿರ್ದೋಸಿ ಚೌಕದ ವಾರ್ಷಿಕ ಕುದ್ಸ್ ದಿನದ ಮೆರವಣಿಗೆ ವೇಳೆ ಈ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಫಿರ್ದೋಸಿ ಚೌಕದ ಮೇಲೆ ದಾಳಿ: ದಾಳಿಗೂ ಮುನ್ನ ಇಸ್ರೇಲ್ ತನ್ನ ಫಾರ್ಸಿ ಸಾಮಾಜಿಕ ಮಾಧ್ಯಮ ಖಾತೆಯ ಮೂಲಕ ಎಚ್ಚರಿಕೆ ನೀಡಿತ್ತು. ಮೆರವಣಿಗೆಯಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗುಲಾಮ್ ಹೊಸೈನ್ ಮೊಹ್ಸೇನಿ ಎಜೆ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಸ್ಫೋಟದ ನಂತರ ಈ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದ್ದು ಕಂಡುಬಂದರೂ, ಯಾವುದೇ ಪ್ರಾಣ ಹಾನಿಯ ಬಗ್ಗೆ ತಕ್ಷಣದ ಮಾಹಿತಿ ಲಭ್ಯವಾಗಿಲ್ಲ. ➡ಪುಟ ೨



ದುಬೈ ಅಮೆರಿಕ ರಾಯಭಾರ ಕಚೇರಿ ಮೇಲೂ ದಾಳಿ

ದುಬೈ ಮತ್ತು ಇರಾಕ್‌ನ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಮೇಲೆ ಭೀಕರ ದಾಳಿಗಳು ನಡೆದಿವೆ ಎಂದು ಶನಿವಾರ ವರದಿಯಾಗಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದ ಹೃದಯಭಾಗದಲ್ಲಿರುವ ಕಟ್ಟಡವೊಂದಕ್ಕೆ ಆಕಾಶದಲ್ಲಿ ಹೊಡೆದುರುಳಿಸಲಾದ ಕ್ಷಿಪಣಿಯ ಅವಶೇಷಗಳು ಬಂದು ಬಿಡಿದಿವೆ. ಕಳೆದ 24 ಗಂಟೆಗಳಲ್ಲಿ ದುಬೈ ಮೇಲೆ ನಡೆದ ಎರಡನೇ ದಾಳಿ ಇದಾಗಿದೆ. ಯಾವುದೇ ಪ್ರಾಣಹಾನಿ ಅಥವಾ ಬೆಂಕಿ ಅವಘಡ ಸಂಭವಿಸಿಲ್ಲ ಎಂದು ಮಾಧ್ಯಮ ಕಚೇರಿ ಖಚಿತಪಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

• ಪುಟ ೨

ಅಮೆರಿಕ-ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

• **ವಾಷಿಂಗ್ಟನ್:** ಇರಾನ್ ಸಂಘರ್ಷದ ನಡುವೆಯೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉನ್ನತ ಮಟ್ಟದ ಶೃಂಗಸಭೆ ನಡೆಸಲು ಪ್ರಯತ್ನಿಸುತ್ತಿರುವ ಬೆನ್ನಲ್ಲೇ, ಶನಿವಾರ ಉತ್ತರ ಕೊರಿಯಾ ಹತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉಡಾವಣೆ ಮಾಡುವ ಮೂಲಕ ಸವಾಲು ಹಾಕಿದೆ.

ಕ್ಷಿಪಣಿ ಪ್ರಚೋದನೆ: ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಜಂಟಿ ಮಿಲಿಟರಿ ವ್ಯಾಯಾಮದ ಸಮಯದಲ್ಲಿ ಈ ಉಡಾವಣೆ ಮಾಡಲಾಗಿದೆ ಎಂದು ವರದಿಯಾಗಿದೆ. ಒಂದು ಕ್ಷಿಪಣಿ ಟೋಕಿಯೊದ ವಿಶೇಷ ಆರ್ಥಿಕ ವಲಯದ ಹೊರಗಿನ ಸಮುದ್ರದಲ್ಲಿ ಬಿದ್ದಿದೆ ಎಂದು ವರದಿಯಾಗಿದೆ. ಈ ಪರೀಕ್ಷೆಗಳು ಪೆಂಟಗನ್‌ನ 'ಗೋಲ್ಡನ್ ಡೋಮ್' ರಕ್ಷಣಾ ವ್ಯವಸ್ಥೆಗೆ ನೇರ ಸವಾಲು ಎಂದು ವಿಶ್ಲೇಷಿಸಲಾಗುತ್ತಿದೆ. ➡ಪುಟ ೨

₹18,680 ಕೋಟಿ ಸಂಪರ್ಕ ಯೋಜನೆಗೆ ಮೋದಿ ಚಾಲನೆ

ನುಸುಳುಕೋರರಿಗೆ ಟಿಎಂಸಿ ರಕ್ಷಕ

• **ಕೋಲ್ಕತಾ:** ಆಡಳಿತಾರೂಢ ಟಿಎಂಸಿ ತನ್ನ ಆಡಳಿತದಲ್ಲಿ ಅನಿಯಂತ್ರಿತ ಅಕ್ರಮ ವಲಸೆಯು ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಜನಸಂಖ್ಯಾ ಚಿತ್ರಣವನ್ನೇ ಬದಲಾಯಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಗುಡುಗಿದ್ದಾರೆ. ನುಸುಳುಕೋರರ ಮತ ಬ್ಯಾಂಕ್ ರಕ್ಷಿಸಲು ಎಸ್ಐಆರ್‌ನ್ನೂ ವಿರೋಧಿಸುತ್ತಲೇ ಬಂದಿದೆ ಎಂದು ಆರೋಪಿಸಿದ್ದಾರೆ. ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ಟಿಎಂಸಿ ಸಾಂವಿಧಾನಿಕ ಸಂಸ್ಥೆಗಳನ್ನು ಅವಮಾನಿಸುತ್ತಿದೆ ಎಂದು ಆರೋಪಿಸಿದರು. ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಕೌಂಟ್‌ಡೌನ್ ಪ್ರಾರಂಭವಾಗಿದೆ ಎಂದು ಹೇಳಿದರು. ➡ಪುಟ ೨



ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ, ಘರ್ಷಣೆ

ಪಶ್ಚಿಮಬಂಗಾಳದಲ್ಲಿ ಆಳುವ ಟಿಎಂಸಿಯ ಗೂಂಡಾಗಿರಿ ಮುಂದುವರಿದಿದ್ದು, ಶನಿವಾರ ಕೇಂದ್ರ ಕೋಲ್ಕತಾದಲ್ಲಿ ಬಿಜೆಪಿ ಬೆಂಬಲಿಗರ ಮೇಲೆ ಟಿಎಂಸಿ ಗೂಂಡಾಗಳು ಕಲ್ಲು ತೂರಾಟ ನಡೆಸಿದಾಗ ಘರ್ಷಣೆ ಸ್ಫೋಟಿಸಿದೆ. ➡ಪುಟ ೨

ಪಾಕ್, ಬಾಂಗ್ಲಾ ವಲಸಿಗರಿಂದ ದೇಶಕ್ಕೆ ಅಪಾಯ: ಅಶೋಕ

ಬಿಜೆಪಿಯಿಂದ ಎಸ್ಐಆರ್ ಕಚೇರಿ

• **ಬೆಂಗಳೂರು:** ರಾಜ್ಯ ಬಿಜೆಪಿ ಕಚೇರಿಯಲ್ಲಿ ಶನಿವಾರ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಗೆ (ಎಸ್ಐಆರ್) ಸಂಬಂಧಿಸಿದ ಕಚೇರಿ ಉದ್ಘಾಟಿಸಲಾಯಿತು. ಈ ವೇಳೆ ಎಸ್ಐಆರ್ ಕುರಿತ ರಾಜ್ಯ ಕಾರ್ಯಾಗಾರ ನಡೆಯಿತು. ಎಸ್ಐಆರ್ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತೆಗಳ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಯಿತು.

ಈ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಪಾಕಿಸ್ತಾನ, ಬಾಂಗ್ಲಾ ದೇಶದವರು ಬಹಳಷ್ಟು ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಅವರು ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡರೆ ಕಾಯಂ ನಾಗರಿಕರಾಗುತ್ತಾರೆ. ➡ಪುಟ ೨



ಔಟ್ ಗೋಯಿಂಗ್ ಸಿಎಂ: ಛಲವಾದಿ

• **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಸಿದ್ಧರಾಗುತ್ತಿದ್ದಾರೆ, ಅವರು ಔಟ್ ಗೋಯಿಂಗ್ ಸಿಎಂ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. ➡ಪುಟ ೨

ಮಂಡ್ಯದಲ್ಲಿ ವಾಹನ ಪರೀಕ್ಷೆ

• **ಮಂಡ್ಯ:** ಜಿಲ್ಲೆಯಲ್ಲಿ ಸ್ಥಾಪಿಸಲುದ್ದೇಶಿಸಿರುವ ಆಟೊಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾದಿಂದ ವಾಹನಗಳ ಪರೀಕ್ಷೆ, ಪ್ರಮಾಣೀಕರಣ ಮತ್ತು ತಾಂತ್ರಿಕ ಸಂಶೋಧನೆಗಳನ್ನು ಇಲ್ಲಿಯೇ ನಡೆಸಲಾಗುವುದು ಎಂದು ಕೇಂದ್ರ ಭಾರೀ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಆಟೊಮೋಟಿವ್ ಇಂಡಿಯಾದಿಂದ ಸಂಶೋಧನೆ: ಎಚ್‌ಡಿಕೆ

ತಾಲೂಕಿನ ವಿ.ಸಿ.ಫಾರಂನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಕರ್ನಾಟಕದಲ್ಲಿ ವಾಹನಗಳ ಪರೀಕ್ಷಾ ಕೇಂದ್ರದ ಕೊರತೆ ಇತ್ತು. ಇಲ್ಲಿ ಉತ್ಪಾದನೆಯಾದ ವಾಹನಗಳನ್ನು ಪರೀಕ್ಷೆಗಾಗಿ ಪೂನಾ ಅಥವಾ ಚೆನ್ನೈಗೆ ಕೊಂಡೊಯ್ಯಬೇಕಿತ್ತು. ➡ಪುಟ ೨

ಎಲ್‌ಪಿಜಿ ಅಭಾವ ಹಿನ್ನೆಲೆ | ಹೋಟೆಲ್‌ಗಳಿಗೆ ಪೂರೈಕೆ

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

• **ಬೆಂಗಳೂರು:** ಗ್ಯಾಸ್ ಬಿಕ್ಕಟ್ಟಿನ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿ ಜೈವಿಕ ಅನಿಲ ಘಟಕಗಳನ್ನು ಸ್ಥಾಪಿಸಿ, ಬಯೋಗ್ಯಾಸ್ ಉತ್ಪಾದನೆ ಚಿಂತನೆ ಮುನ್ನೆಲೆಗೆ ಬಂದಿದೆ. ಇದನ್ನೇ ನಗರದ ಹೋಟೆಲ್‌ಗಳಿಗೆ ಸರಬರಾಜು ಮಾಡುವ ಕ್ರಮಕ್ಕೆ ಮುಂದಾಗಿದೆ.

ಕೋರಮಂಗಲದಲ್ಲಿರುವ ಜೈವಿಕ ಅನಿಲ ಘಟಕ(ಕಸ-ರಸ ಘಟಕ)ದಲ್ಲಿ 10 ಟನ್ ಬಯೋಗ್ಯಾಸ್ ಉತ್ಪಾದಿಸಿ ಪೈಪ್ ಮೂಲಕ ನೇರವಾಗಿ ಹತ್ತಿರದ ಹೋಟೆಲ್‌ಗೆ ವಿತರಣೆ ಮಾಡಲಾಗುತ್ತಿದೆ. ಆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಲು ಜಿಬಿಎ ಮುಂದಾಗಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲು ವಿವಿಧ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ. 12 ಬಯೋಗ್ಯಾಸ್ ಘಟಕಗಳಲ್ಲಿ 6 ಘಟಕಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಘಟಕದಲ್ಲಿ ದಿನಕ್ಕೆ 5 ಟನ್ ಹಸಿ ತ್ಯಾಜ್ಯ ಸಂಸ್ಕರಿಸಿ ಒಟ್ಟಾರೆ ಸುಮಾರು 30 ಟನ್ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸಲಾಗುತ್ತಿದೆ. ಉಳಿದ 6 ಘಟಕಗಳಲ್ಲಿ ನವೀಕರಣ ಕಾಮಗಾರಿ ನಡೆಯುತ್ತಿದೆ. ➡ಪುಟ ೨



- ಪ್ರಸ್ತುತ ಪರಿಸ್ಥಿತಿಯಲ್ಲಿ ಸಾರ್ವಜನಿಕರು ಹಾಗೂ ಹೋಟೆಲ್ ಮಾಲಿಕರು ತಮ್ಮ ಆವರಣದಲ್ಲಿಯೇ ವಿಕೇಂದ್ರೀಕೃತ ಬಯೋಗ್ಯಾಸ್ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಜಿಬಿಎ ಮನವಿ
- ಮನೆಯಲ್ಲೇ ಉತ್ಪತ್ತಿಯಾಗುವ ಹಸಿ ತ್ಯಾಜ್ಯದಿಂದ ಗ್ಯಾಸ್ ಉತ್ಪಾದಿಸಿ ಅಡುಗೆ ಇಂಧನವಾಗಿ ಬಳಸಬಹುದು
- ಮನೆಮಟ್ಟದ ಘಟಕ ನಿರ್ಮಾಣಕ್ಕೆ ಸುಮಾರು ರೂ.20,000 ವೆಚ್ಚವಾಗಬಹುದು.

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಲಭ್ಯ

• **ಹೊಸದಿಲ್ಲಿ:** ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನಾಗರಿಕರಿಗೆ ಭರವಸೆ ನೀಡಿದೆ.

• ಪುಟ ೫

ಆಫ್ಘನ್ ಮೇಲೆ ಪಾಕ್ ಕ್ಷಿಪಣಿ ದಾಳಿ

• **ಕಾಬೂಲ್:** ಕಳೆದ 48 ಗಂಟೆಗಳಲ್ಲಿ ಪಾಕಿಸ್ತಾನಿ ಪಡೆಗಳಿಂದ ಅಫ್ಘಾನಿಸ್ತಾನದ ಕುನಾರ್ ಪ್ರಾಂತ್ಯದ ಮೇಲೆ 270ಕ್ಕೂ ಹೆಚ್ಚು ರಾಕೆಟ್ ಮತ್ತು ಫಿರಂಗಿ ಗುಂಡುಗಳನ್ನು ಹಾರಿಸಲಾಗಿದ್ದು, ಗಡಿ ಸಂಘರ್ಷ ತೀವ್ರ ಸ್ವರೂಪ ಪಡೆದುಕೊಂಡಿದೆ.

• ಪುಟ ೫

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,75,000**(2,80,000) ಅಪರಂಜಿ ಚಿನ್ನ: **1,59,660**(1,60,690) ಆಭರಣ ಚಿನ್ನ: **1,46,350**(1,47,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

$1 = ₹92.54


4,824 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆ

ಬೆಂಗಳೂರು: ರಾಜ್ಯದ 13 ಜಿಲ್ಲೆಗಳಲ್ಲಿ 37 ಹೊಸ ಕೈಗಾರಿಕೆಗಳು ಮತ್ತು ಹೆಚ್ಚುವರಿ ಹೂಡಿಕೆಯ 2 ಯೋಜನೆಗಳ ಒಟ್ಟು 4,824.31 ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ 158ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.



ಐಟಿ ಮೂಲಸೌಲಭ್ಯ, ಸಕ್ಕರೆ ಕಾರ್ಖಾನೆ, ಟೆಕ್ನಿಕಲ್ ಟೆಕ್ಸ್‌ಟೈಲ್, ಕಂಪ್ರೆಸ್ಡ್ ಗ್ಯಾಸ್, ವೈಮಾಂತರಿಕ್ಷ, ಚಿನ್ನಾಭರಣ ತಯಾರಿಕೆ,ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಹಾಗೂ ಪಂಚತಾರಾ ಹೋಟೆಲ್ ನಿರ್ಮಾಣ ಯೋಜನೆಗಳಿಗೆ ನೀಡಿರುವ ಅನುಮೋದನೆಗಳಿಂದ ರಾಜ್ಯದಲ್ಲಿ ಹೊಸದಾಗಿ 14,525 ಉದ್ಯೋಗ ಅವಕಾಶಗಳು ಸೃಷ್ಟಿಯಾಗಲಿವೆ. ಶುಕ್ರವಾರ ನಡೆದ ಸಭೆಯ ಬಗ್ಗೆ ಮಾಹಿತಿ ನೀಡಿರುವ ಸಚಿವ ಎಂ.ಬಿ ಪಾಟೀಲ ಅವರು, 50 ಕೋಟಿಗೂ ಹೆಚ್ಚು ಹೂಡಿಕೆಯ 22 ಪ್ರಮುಖ ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿರುವುದರಿಂದ ರಾಜ್ಯದಲ್ಲಿ 3908.68 ಕೋಟಿ ಹೂಡಿಕೆ ಆಗಲಿದೆ. 12,475 ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ತಿಳಿಸಿದ್ದಾರೆ. ಇನ್ನೂ 15 ಕೋಟಿಗಳಿಂದ 50 ಕೋಟಿ ಒಳಗಿನ ಹೂಡಿಕೆಯ 15 ಹೊಸ ಯೋಜನೆಗಳಿಗೆ ನೀಡಿರುವ ಅನುಮೋದನೆ ಫಲವಾಗಿ 350.60 ಕೋಟಿ ಹೂಡಿಕೆ ಆಗಲಿದ್ದು, 1,750 ಜನರಿಗೆ ಉದ್ಯೋಗಾವಕಾಶಗಳು ಸಿಗಲಿವೆ. ಹೆಚ್ಚುವರಿ ಹೂಡಿಕೆಯ 2 ಯೋಜನೆಗಳಿಗೆ ನೀಡಿರುವ ಅನುಮೋದನೆಯಿಂದ 565.03 ಕೋಟಿ ಹೂಡಿಕೆಯಾಗಲಿದ್ದು, 300 ಜನರಿಗೆ ಉದ್ಯೋಗಾವಕಾಶ ಸಿಗಲಿವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ರಾಮ ಬಾಣ



ನುಸುಳುಕೋರರಿಗೆ ಟಿಎಂಸಿ ರಕ್ಷಕ

ಪುಟ ೧➡ ಇಲ್ಲಿ ಬಂಗಾಳಿ ಹಿಂದುಗಳನ್ನು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನಾಗಿ ಮಾಡಲಾಗುತ್ತಿದೆ. ಕಿರುಕುಳಕ್ಕೊಳಗಾದ ಹಿಂದು ನಿರಾಶ್ರಿತರಿಗೆ ಪೌರತ್ವ ನೀಡುವುದನ್ನು ಟಿಎಂಸಿ ವಿರೋಧಿಸಿದೆ ಎಂದು ಮೋದಿ ಹೇಳಿದ್ದಾರೆ.

ಇದೇ ವೇಳೆ, ಪಶ್ಚಿಮ ಬಂಗಾಳಕ್ಕೆ 18,680 ಕೋಟಿ ರೂ. ಮೊತ್ತದ ಬೃಹತ್ ರಸ್ತೆ ಸಂಪರ್ಕ ಯೋಜನೆಗಳನ್ನು ಅನಾವರಣಗೊಳಿಸಿದರು. ಇದರಲ್ಲಿ 231ಕಿ.ಮೀ. ದೀರ್ಘ ವ್ಯಾಪ್ತಿಯ ಖರಗ್‌ಪುರ-ಮೋರೆಗ್ರಾಮ್ ಆರ್ಥಿಕ ಕಾರಿಡಾರ್ ಚತುಷ್ಪಥ ಯೋಜನೆಗೆ ಶಿಲಾನ್ಯಾಸವೂ ಸೇರಿದೆ. ಈ ಮಾರ್ಗದಿಂದಾಗಿ ಪ್ರಯಾಣ ದೂರ 120ಕಿ.ಮೀ.ಗಳಷ್ಟು ಇಳಿಕೆಯಾಗಲಿದ್ದು, ಪ್ರಯಾಣದ ಅವಧಿ ಕೂಡ 7ರಿಂದ 8 ಗಂಟೆಗಳಷ್ಟು ಕಡಿಮೆಯಾಗಲಿದೆ. ಈ ರಸ್ತೆ ಯೋಜನೆಯು ಖರಗ್‌ಪುರ -ಸಿಲಿಗುರಿ ನಡುವಣ ಆರ್ಥಿಕ ಕಾರಿಡಾರ್‌ನ ಭಾಗವಾಗಿದ್ದು, ಇದು ಪಶ್ಚಿಮ್ ಮೇದಿನಿಪುರ್, ಬಂಕುರ, ಹೂಗ್ಲೀ , ಪುರ್ಬಾ ಬರ್ಧಮಾನ್, ಬೀರ್‌ಭೂಮ್ ಮತ್ತು ಮುರ್ಷಿದಾಬಾದ್ ಜಿಲ್ಲೆಗಳ ಮೂಲಕ ಹಾದುಹೋಗಲಿದ್ದು, ಲಕ್ಷಾಂತರ ಜನರಿಗೆ ಪ್ರಯೋಜನವಾಗಲಿದೆ. ಹಾಗೆಯೇ , 5.6ಕಿ.ಮೀ. ಉದ್ದದ ದುಬ್ರಜ್‌ಪುರ್‌ನ ಚತುಷ್ಪಥ ಬೈಪಾಸ್ ಮತ್ತು ಕಂಗ್‌ಶಬಾಟಿ ಮತ್ತು ಶಿಲಾಬಾಟಿ ನದಿಗಳಿಗೆ ಎನ್‌ಎಚ್-14ರಲ್ಲಿ ಪ್ರಮುಖ ಹೆಚ್ಚುವರಿ ಚತುಷ್ಪಥ ಸೇತುವೆಗಳಿಗೂ ಪ್ರಧಾನಿಯವರು ಶಿಲಾನ್ಯಾಸಗೈದರು. ಜತೆಗೆ ಎನ್ ಎಚ್-19 ಮತ್ತು ಎನ್‌ಎಚ್-14ರ ಭಾಗಗಳನ್ನೂ ಉದ್ಘಾಟಿಸಿದರು.

ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ

ಪುಟ ೧➡ ಈ ಸಂದರ್ಭ ಬಿಜೆಪಿ ನಾಯಕರೊಬ್ಬರು ಹಾಗೂ ಪೊಲೀಸ್ ಅಧಿಕಾರಿಗೆ ಗಾಯಗಳಾಗಿವೆ. ಪ್ರಧಾನಿ ನರೇಂದ್ರ ಮೋದಿಯವರು ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುವ ಕೆಲ ಗಂಟೆಯ ಮೊದಲು ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ಪ್ರಧಾನಿ ಮೋದಿಯವರನ್ನು ಸ್ವಾಗತಿಸಲು ತೆರಳುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಹಲವೆಡೆಗಳಲ್ಲಿ ಕಲ್ಲು ತೂರಾಟ ಆರಂಭಗೊಂಡಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಕಸಾಪ ಜೊತೆ ಸಂಘರ್ಷ, ನಟ್ ಬೋಲ್ಟ್ ಟೈಟ್ ಮಾಡ್ತೇವೆ ಎಂದು ಸಿನಿಮಾದವರೊಂದಿಗೆ ಸಂಘರ್ಷ , ಬಿಗ್ ಬಾಸ್ ಜತೆಗೂ ಜಗಳ, ರಸ್ತೆ ಸರಿಯಿಲ್ಲ ಎಂದಿದ್ದಕ್ಕಾಗಿ ಉದ್ಯಮಿಗಳೊಂದಿಗೆ ಸಂಘರ್ಷ, ಬ್ಯಾಲೆಟ್ ಪೇಪರ್ ಬೇಕು ಎಂದು ಚುನಾವಣಾ ಆಯೋಗದೊಂದಿಗೆ ಸಂಘರ್ಷ ,ಇದು ಕರ್ನಾಟಕ ಸರಕಾರ

-ವಿ.ಸುನೀಲ್ ಕುಮಾರ್

- ಸಂಘರ್ಷವಿದ್ದಲ್ಲಿ ಸುದ್ದಿಯಾಗುತ್ತೆ, ಸುದ್ದಿ ಇದ್ದಲ್ಲಿ ಸ್ವಾರಸ್ಯವಿರುತ್ತೆ , ಮಾಧ್ಯಮಗಳಿಗೆ ಆಹಾರ ಲಭಿಸುತ್ತೆ, ರಾಜಕಾರಣಿಗಳಿಗೆ ಉಚಿತ ಪ್ರಚಾರ ಸಿಗುತ್ತೆ, ಸರ್ವೇ ಜನಾ: ಸುಖಿನೋ ಭವಂತು!

ದಿನ ಭವಿಷ್ಯ

ಮೇಷ ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ವೃಷಭ ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಬಿಪಿ, ಮಧುಮೇಹ ಇದ್ದವರು ಎಚ್ಚರ ವಹಿಸಿ.

ಮಿಥುನ ವೃತ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕಟಕ ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಸಿಂಹ ನಿಮ್ಮ ಧೋರಣೆಗೆ ಮನೆಯವರಿಂದ ವಿರೋಧ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಕ್ರೀಡಾಳುಗಳಿಗೆ ಸಾಧನೆಯ ಯಶ.

ಕನ್ಯಾ ಅತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನಿಜವಾಗಿ ಸಮಸ್ಯೆ ಕಾಡದು. ವಿವಾದವೊಂದು ಪರಿಹಾರ.

ತುಲಾ ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ. ಸಂಘಟಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ವೃಶ್ಚಿಕ ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವೃತ್ತಿ ಸಂಬಂಧಿತ ಉದ್ವಿಗ್ನತೆ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಧನು ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಮಕರ ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಕಾಬಿಟ್ಟಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕುಂಭ ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಧನಲಾಭ ಸಂಭವ.

ಮೀನ ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 0,5,9.1

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

ಸಂತ ರವಿದಾಸಗೆ ವಿಶಿಷ್ಟ ಸ್ಥಾನ

ಸಮಾಲ್ಖಾ (ಹರಿಯಾಣ): ನಮ್ಮ ಶ್ರೇಷ್ಠ ಸಂತ ಪರಂಪರೆಯು ಭಾರತಕ್ಕೆ ದೇವರು ನೀಡಿದ ವಿಶೇಷ ಕೊಡುಗೆಯಾಗಿದೆ. ನಮ್ಮ ಸುದೀರ್ಘ ಇತಿಹಾಸದ ಪ್ರವಾಹದಲ್ಲಿ ಮಹಾನ್ ಸಂತ ಪರಂಪರೆಯು ಯಾವ ಸಮಾಜದಲ್ಲಿ ದೇವರ ಉಪಾಸನೆ ಮತ್ತು ಭಕ್ತಿಭಾವದ ಜಾಗರಣವನ್ನು ಮಾಡಿತೋ, ಅಲ್ಲಿಯೇ ಸಾಮಾಜಿಕ ರೀತಿಗಳು ಮತ್ತು ಬೇಧಭಾವವನ್ನು ನಿರ್ಮೂಲನೆ ಮಾಡುವ ಮೂಲಕ ಸಾಮರಸ್ಯದ ಸಮಾಜವನ್ನು ಬಲಪಡಿಸುವ ಪ್ರಯತ್ನಗಳನ್ನು ಮಾಡಿತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.



ಹರಿಯಾಣದ ಸಮಾಲ್ಖಾದಲ್ಲಿ ನಡೆಯುತ್ತಿರುವ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭೆ - 2026ರಲ್ಲಿ ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಸಂತ ಶಿರೋಮಣಿ ಸದ್ಗುರು ರವಿದಾಸ್ ಅವರ 650ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಆರ್ ಎಸ್‌ಎಸ್ ಅವರಿಗೆ ಶ್ರದ್ಧೆಯ ಸುಮನಗಳನ್ನು ಅರ್ಪಿಸುತ್ತದೆ. ಮಹಾನ್ ಸಂತ ಪರಂಪರೆಯಲ್ಲಿ ಸಂತ ರವಿದಾಸ ಅವರಿಗೆ ವಿಶಿಷ್ಟ ಸ್ಥಾನವಿದೆ. ಅವರ ಕ್ರಿಯಾಶೀಲ ಜೀವನ ಮತ್ತು ಕಾರ್ಯ ನಮಗೆಲ್ಲರಿಗೂ ಪ್ರೇರಣೆಯಾಗಿದೆ. ಗೃಹಸ್ಥರಾಗಿದ್ದರೂ, ಸಾಂಸಾರಿಕ ವಿಷಯಗಳಲ್ಲಿ ಅಲಿಪ್ತರಾಗಿದ್ದು ಸಾಧು-ಸಂತರ ಮೇಲಿನ ಶ್ರದ್ಧೆ ಮತ್ತು ದೀನ-ಹೀನರ ಸೇವೆ ಅವರ ಸಹಜ ಸ್ವಭಾವವಾಗಿತ್ತು, ಆಧ್ಯಾತ್ಮಿಕ ದೃಷ್ಟಿಯಿಂದ ಪರಿಪೂರ್ಣವಾಗಿತ್ತು. ತಮ್ಮ ಜೀವನದ ಮೂಲಕ ಅವರು ಶ್ರಮದ ಘನತೆ ಮತ್ತು ಸಮಾಜದಲ್ಲಿ ಶುದ್ಧ, ಸಾತ್ವಿಕ ಮತ್ತು ಪಾರದರ್ಶಕ ಆಚರಣೆಯ ಮಹತ್ವವನ್ನು ಪುನಃಸ್ಥಾಪಿಸಿದರು ಎಂದರು.

ಭಕ್ತಿಪ್ರಜ್ಞೆಯ ಮಹಾನ್ ಸಂತ: ರವಿದಾಸ್ ಅವರು ಸಮಾಜದಲ್ಲಿ ಒಂದು ಹೊಸ ಚೇತನವನ್ನು ಪ್ರವಹಿಸಿದ ಭಕ್ತಿಪ್ರಜ್ಞೆಯ ಮಹಾನ್ ಸಂತರಾಗಿದ್ದರು. ಕಾಲಬಾಹ್ಯ ಪರಂಪರೆಯ ತ್ಯಾಗ ಹಾಗೂ ಕಾಲ ಸುಸಂಗತ ಸಾಮಾಜಿಕ ಪರಿವರ್ತನೆಯ ಅಂಗೀಕಾರ ಮಾಡುವಲ್ಲಿ ಸಮಾಜದ ಮನಸನ್ನು ರೂಪಿಸುವಲ್ಲಿ ಅವರು ಐತಿಹಾಸಿಕ ಪಾತ್ರವನ್ನು ವಹಿಸಿದ್ದಾರೆ. ಅವರ ಚಿಂತನೆಗಳ ಮಹತ್ವವನ್ನು ಅರ್ಥೈಸಿಗೊಂಡು ಅವರ 41 ವಾಣಿಗಳನ್ನು ಗುರು ಗ್ರಂಥ ಸಾಹಿಬ್‌ನಲ್ಲಿ ಶಾಬಾದ್ ರೂಪದಲ್ಲಿ ಸೇರಿಸಲಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ರವಿದಾಸರು, ಅವರ ಶಿವಭಕ್ತಿ, ಸೇವಾ ಮನೋಭಾವ ಹಾಗೂ ಸಮಾಜದ ಮೇಲಿನ ನಿಶ್ಚಲಪ್ರೇಮದ ಕಾರಣ ಕಾಶಿಯ ವಿದ್ವತ್ ಜನರ ಸಹಿತ ಸಮಾಜದ ಎಲ್ಲಾ ವರ್ಗಗಳ ಜನರು ಅವರ ಮಹಾನತೆಯನ್ನು ಸ್ವೀಕರಿಸಿದರು. ಕಾಶಿ ನರೇಶ, ಹಾಗೂ ಮೀರಾಬಾಯಿಯಂತಹ ರಾಜಮನೆತನದ ಸದಸ್ಯರು ಕೂಡ ಅವರನ್ನು ತಮ್ಮ ಗುರು ಎಂದು ಪರಿಗಣಿಸಿದರು. ಗುರು ಮತ್ತು ಶಿಷ್ಯರ ರೂಪದಲ್ಲಿ ರವಿದಾಸರು ಮತ್ತು ಮೀರಾಬಾಯಿಯವರ ಬಾಂಧವ್ಯವು ನಿರ್ಗುಣ ಮತ್ತು ಅನುಕರಣೀಯ ಕಲಿಕೆಯೂ ಆಗಿದೆ ಎಂದರು.

ಮತಾಂತರಕ್ಕೆ ಬಂದವರು ಅನುಯಾಯಿಗಳಾದರು



ಮುಸ್ಲಿಂ ಆಕ್ರಮಣಕಾರರ ಭಯೋತ್ಪಾದನೆಯ ಆ ಕಠಿಣ ಸಮಯದಲ್ಲಿ, ಭಕ್ತಿಯ ನಿರ್ಮಲ ಧಾರೆಯ ಪ್ರವಹಿಸುತ್ತಾ ರವಿದಾಸರು ಧರ್ಮದ ಶ್ರೇಷ್ಠತೆಯನ್ನು ಉದ್ಘೋಷಿಸಿದರು ಮತ್ತು ಜನರಿಂದ ಧರ್ಮಪಾಲನೆ ಮಾಡುವುದಕ್ಕೆ ಆಗ್ರಹಿಸಿದರು. ಇವರನ್ನು ಇಸ್ಲಾಂಗೆ ಮತಾಂತರಿಸಿ ಮುಸ್ಲಿಮರಾಗಿಸುವುದಕ್ಕೆ ಹಲವಾರು ಪ್ರಯತ್ನಗಳು ನಡೆದವು. ಆದರೆ ಅವರ ಭಕ್ತಿ ಮತ್ತು ಆಧ್ಯಾತ್ಮಿಕ ಸಾಧನೆಯಿಂದ ಪ್ರಭಾವಿತರಾಗಿ ಅವರನ್ನು ಮತಾಂತರಗೊಳಿಸಬೇಕಾದವರು ಅವರ ಅನುಯಾಯಿಗಳಾದರು. ವರ್ತಮಾನದ ಸಮಯದಲ್ಲಿ ವಿವಿಧ ವಿಭಜನಕಾರಿ ಶಕ್ತಿಗಳು ಜನಮಾನಸವನ್ನು ವರ್ಗ ಮತ್ತು ಜಾತಿಯ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುತ್ತಿರುವಾಗ, ರವಿದಾಸ್ ಅವರ ಜೀವನ ಸಂದೇಶದ ಸಾರವನ್ನು ಅರ್ಥಮಾಡಿಕೊಳ್ಳುವ ಮೂಲಕ, ನಾವೆಲ್ಲರೂ ದೇಶ ಮತ್ತು ಸಮಾಜದ ಏಕತೆಗಾಗಿ ಕಾರ್ಯಮಾಡುವ ಸಂಕಲ್ಪವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ಮಾದಕವಸ್ತುಗಳ ನಿರ್ಮೂಲನೆಗೆ ಕ್ರಮ

ಬೆಂಗಳೂರು: ರಾಜ್ಯದ ಕಾರಾಗೃಹಗಳಲ್ಲಿ ಮಾದಕ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಾರಾಗೃಹ ಇಲಾಖೆ ಈಗ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.



ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರ ವಿಶೇಷ ಸೂಚನೆಯ ಮೇರೆಗೆ, ರಾಜ್ಯಾದ್ಯಂತ ಇರುವ ಎಲ್ಲಾ ಜೈಲುಗಳಲ್ಲಿ ಕೈದಿಗಳನ್ನು ಮಾದಕ ವಸ್ತು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆ ಚುರುಕಿನಿಂದ ಸಾಗಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಸಿಬ್ಬಂದಿಯೇ ಒಳ ಉಡುಪಿನಲ್ಲಿ ಗಾಂಜಾ ಸರಬರಾಜು ಮಾಡಲು ಯತ್ನಿಸಿ ಸಿಕ್ಕಿಬಿದ್ದ ಘಟನೆ ಇಲಾಖೆಯನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಕಾರಾಗೃಹಗಳನ್ನು ಸಂಪೂರ್ಣವಾಗಿ ಮಾದಕ ದ್ರವ್ಯ ಮುಕ್ತಗೊಳಿಸುವ ಉದ್ದೇಶದಿಂದ ನಿಮ್ಹಾನ್ಸ್ ಆಸ್ಪತ್ರೆಯ ತಾಂತ್ರಿಕ ಸಹಯೋಗದೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದ್ದು, ಮೊದಲ ಹಂತದಲ್ಲಿ ರಾಜ್ಯದ ಎಲ್ಲಾ ಜೈಲುಗಳಲ್ಲಿ ಸುಮಾರು ಶೇ. 10ರಷ್ಟು ಕೈದಿಗಳನ್ನು ಆಯ್ದುಕೊಂಡು ಪರೀಕ್ಷೆ ನಡೆಸಲಾಗುತ್ತಿದೆ.

ವಿಶೇಷ ಕಿಟ್ ಮೂಲಕ ಪರೀಕ್ಷೆ

ಕೈದಿಗಳು ಗಾಂಜಾ, ಹೆರಾಯಿನ್, ಕೊಕೈನ್ ಸೇರಿದಂತೆ ವಿವಿಧ ಮಾದಕ ವಸ್ತುಗಳನ್ನು ಸೇವಿಸಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಇಲಾಖೆಯು ವಿಶೇಷ ವೈದ್ಯಕೀಯ ಕಿಟ್‌ಗಳನ್ನು ಒದಗಿಸಿದೆ. ಜೈಲು ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಈ ತಪಾಸಣೆ ನಡೆಯುತ್ತಿದ್ದು, ಅನುಮಾನಾಸ್ಪದ ನಡವಳಿಕೆ ಹೊಂದಿರುವ ಅಥವಾ ಮೊದಲೇ ಚಟಕ್ಕೆ ಬಿದ್ದಿರುವ ಕೈದಿಗಳ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ.

ಶಿಕ್ಷೆಯಲ್ಲ, ಸುಧಾರಣೆಯೇ ಗುರಿ

ಈ ಅಭಿಯಾನದ ವಿಶೇಷವೆಂದರೆ, ಪರೀಕ್ಷೆಯಲ್ಲಿ ಮಾದಕ ವಸ್ತು ಸೇವನೆ ದೃಢಪಟ್ಟ ಕೈದಿಗಳ ಮೇಲೆ ಸದ್ಯಕ್ಕೆ ಯಾವುದೇ ಹೊಸ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದಿಲ್ಲ. ಬದಲಿಗೆ ಅವರನ್ನು ಸುಧಾರಿಸುವ ಹಾದಿಯನ್ನು ಇಲಾಖೆ ಆರಿಸಿಕೊಂಡಿದೆ. ಪಾಸಿಟಿವ್ ಬಂದ ಕೈದಿಗಳಿಗೆ ತಕ್ಷಣವೇ ವೃತ್ತಿಪರ ಕೌನ್ಸೆಲಿಂಗ್ ನೀಡಲಾಗುತ್ತದೆ. ತೀವ್ರವಾಗಿ ಚಟಕ್ಕೆ ಅಡಿಕ್ಟ್ ಆಗಿರುವವರನ್ನು ಗುರುತಿಸಿ, ಅವರಿಗೆ ಆಸ್ಪತ್ರೆಗಳಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಮುಖ್ಯವಾಹಿನಿಗೆ ತರಲು ಇಲಾಖೆ ನಿರ್ಧರಿಸಿದೆ.

ಯುಗಾದಿ, ರಂಜಾನ್ ಹಿನ್ನೆಲೆ: ಎರಡು ಸಾವಿರ ಹೆಚ್ಚುವರಿ ಬಸ್

ಪುಟ ೧➡ ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ. ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಕಾರ್ಯಾಚರಣೆ. ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮತ್ತಿತರ ಸ್ಥಳಗಳಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ. ಇ-ಟಿಕೆಟ್ ಬುಕಿಂಗ್ www.ksrtc.karnataka.gov.in ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿದೆ ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಮುಟ್ಟಿನ ರಜೆ: ಲಾಡ್ ಪ್ರತಿಕ್ರಿಯೆ

ಬೆಂಗಳೂರು: ಮಹಿಳಾ ಉದ್ಯೋಗಿಗಳು ಮತ್ತು ವಿದ್ಯಾರ್ಥಿನಿಯರ ಮುಟ್ಟಿನ ರಜೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರತಿಕ್ರಿಯೆ ನೀಡಿದ್ದು, ರಾಜ್ಯ ಸರ್ಕಾರವು ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ರಜೆಯನ್ನು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಅನ್ವಯಿಸಿ ರೂಪಿಸಿರುವ ನೀತಿಯಯನ್ನು ಪ್ರಶಂಶಿಸಿರುವುದು ಸ್ವಾಗತಾರ್ಹ ಎಂದಿದ್ದಾರೆ. ರಾಜ್ಯದ ಮುಟ್ಟಿನ ರಜೆ ನೀತಿಯ ಕುರಿತು, ನಾವು ಸಂಬಂಧಿಸಿದ ಎಲ್ಲ ತಜ್ಞರು, ಉದ್ಯೋಗದಾತರು, ಕೈಗಾರಿಕೋದ್ಯಮಿಗಳು, ಉದ್ಯಮಿಗಳು, ವೈದ್ಯರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳ ಜೊತೆಗೆ ವ್ಯಾಪಕ ಚರ್ಚೆ ಮಾಡಿ, ಸಾಧಕ-ಬಾಧಕಗಳನ್ನು ಪರಿಶೀಲಿಸಿ ಸೂಕ್ತ ನೀತಿಯೊಂದನ್ನು ಜಾರಿಗೆ ತಂದಿದ್ದೇವೆ. ಘನವೆತ್ತ ಕೋರ್ಟ್ ಅಭಿಪ್ರಾಯಪಟ್ಟಿರುವಂತೆ, ನಾಲ್ಕೈದು ದಿನಗಳ ರಜೆ ಮತ್ತು ಅದನ್ನು ಕಾನೂನನ್ನಾಗಿ ರೂಪಿಸಿ ಜಾರಿಗೆ ತರುವುದು ಪ್ರಾಯೋಗಿಕವಾಗಿ ಸಾಧುವಲ್ಲ ಎಂದರು.

ಮಂಡ್ಯದಲ್ಲಿ ವಾಹನ ಪರೀಕ್ಷೆ

ಪುಟ ೧➡ ಆ ಕೊರತೆ ನೀಗಿಸಲು ಎಆರ್‌ಎಐನಿಂದ ಪರೀಕ್ಷಾ ಕೇಂದ್ರ ಆರಂಭಿಸಲು ರಾಜ್ಯ ಸರ್ಕಾರಕ್ಕೆ ಜಾಗ ನೀಡುವಂತೆ ಪತ್ರ ಬರೆದಿದ್ದಾಗಿ ಹೇಳಿದರು.

ಕೈಗಾರಿಕೆ ಸ್ಥಾಪನೆಗೆ 100 ಎಕರೆ ಜಾಗ ನೀಡುವುದಾಗಿ ರಾಜ್ಯಸರ್ಕಾರ ಬಜೆಟ್ ಪುಸ್ತಕದಲ್ಲಿ ಘೋಷಣೆ ಮಾಡಿದ್ದಾರೆ. ಜಾಗ ಯಾವಾಗ ನೀಡುತ್ತಾರೆ ಎಂಬುದನ್ನು ನೋಡಬೇಕಿದೆ. ಅವರು ಜಾಗ ನೀಡಿದ ಬಳಿಕ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಾನು ಕೈಗಾರಿಕೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಜಿಲ್ಲೆಯ ಜನರ ನಿರೀಕ್ಷೆಯನ್ನು ಯಾವುದೇ ಕಾರಣಕ್ಕೂ ಹುಸಿಗೊಳಿಸುವುದಿಲ್ಲ, ಜಿಲ್ಲೆಯ ವಿದ್ಯಾವಂತ ಯುವಜನರಿಗೆ ಉದ್ಯೋಗಾವಕಾಶ ಸೃಷ್ಟಿಸುವುದಲ್ಲದೆ, ಅಕ್ಕಪಕ್ಕದ ಜಿಲ್ಲೆಗಳ ಯುವಕರಿಗೂ ಉದ್ಯೋಗ ಸಿಗುವಂತೆ ಮಾಡುವುದಾಗಿ ಭರವಸೆ ನೀಡಿದರು.

ಜತೆಗೆ 200-300 ಕೋಟಿ ರೂ. ವೆಚ್ಚದಲ್ಲಿ ಸ್ಟಾರ್ಟಪ್ ಕಂಪನಿಗಳು ಆರಂಭಿಸುತ್ತೇನೆ. ಅಲ್ಲಿಯೂ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ದೇವೇಗೌಡರ ಬಗ್ಗೆ ಅಭಿಮಾನವಿಟ್ಟು ನನ್ನನ್ನು ಬಹುಮತದ ಅಂತರದಿಂದ ಗೆಲ್ಲಿಸಿದ್ದೀರಿ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು. ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಎಚ್ .ಟಿ.ಮಂಜು, ಮಾಜಿ ಶಾಸಕರಾದ ಡಾ. ಕೆ.ಅನ್ನದಾನಿ, ಜಿ.ಬಿ.ಶಿವಕುಮಾರ್, ಕೆ.ಸುರೇಶ್‌ಗೌಡ, ವಿಧಾನಪರಿಷತ್ ಸದಸ್ಯ ವಿವೇಕಾನಂದ, ಮಂಡ್ಯ ವಿಧಾನಸಭಾ ಕ್ಷೇತ್ರದ ಮುಖಂಡ ಬಿ.ಎಸ್.ರಾಮಚಂದ್ರು, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಭಾಗವಹಿಸಿದ್ದರು.

ಸಿಎಸ್‌ಆರ್ ಫಂಡ್ ನೀಡಿದ ಟಿವಿಎಸ್ ಕಂಪನಿಯ ಸಿಎಫ್‌ಒ ಸೇತುರಾಂ, ಉಪಾಧ್ಯಕ್ಷ ಪ್ರಸಾದ್ ಕೃಷ್ಣನ್, ಇನ್‌ಫೋಸಿಸ್‌ನ ಹಿರಿಯ ಉಪಾಧ್ಯಕ್ಷ ಸತೀಶ್ ಬಿ.ನಂಜಪ್ಪ, ಎಚ್‌ಎಂಟಿ ಅಧ್ಯಕ್ಷ ರಾಜೇಶ್ ಕೊಹ್ಲಿ, ಹಿಂದುಜಾ ಹಾಸ್ಪಿಟಲ್‌ನ ಡಾ.ಸಂಜಯ್‌ಕುಮಾರ್ ಬಜಾಜ್, ಪ್ರದೀಪ್, ಸೈಲ್ ಕಂಪನಿಯ ರಾಜೀವ್ ಪಾಂಡೆ, ಸಿವೈಕೆ ಪಾಂಡೆ ಅವರನ್ನು ಅಭಿನಂದಿಸಲಾಯಿತು.

ಬಿಜೆಪಿಯಿಂದ ಎಸ್‌ಐಆರ್ ಕಚೇರಿ



ಪುಟ ೧➡ ಇದು ದೇಶದ ಭದ್ರತೆಗೆ ಅಪಾಯಕಾರಿ. ಈ ಕುರಿತು ಹೆಚ್ಚಿನ ಕ್ರಮ ಕೈಗೊಳ್ಳುವಂತೆ ಕಾರ್ಯಾಗಾರದಲ್ಲಿ ಚರ್ಚೆ ಆಗಿದೆ ಎಂದರು.

ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಎಸ್ ಐಆರ್ ಕರ್ನಾಟಕ-ತೆಲಂಗಾಣದ ಪ್ರಭಾರಿ ಅಲ್ಕಾ ಗುರ್ಜರ್, ವಿಧಾನ ಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಮಾಜಿ ರಾಜ್ಯ ಕಾರ್ಯದರ್ಶಿ ಮತ್ತು ಎಸ್‌ಐಆರ್ ರಾಜ್ಯ ತಂಡದ ಸಂಚಾಲಕ ಜಗದೀಶ್ ಹಿರೇಮನಿ ಸೇರಿ ರಾಜ್ಯ ತಂಡದ ಸದಸ್ಯರು ಕಾರ್ಯಕ್ರಮದಲ್ಲಿದ್ದರು.

ಔಟ್ ಗೋಯಿಂಗ್ ಸಿಎಂ: ಛಲವಾದಿ



ಪುಟ ೧➡ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸಿದ್ದರಾಮಯ್ಯ ರಾಜಕಾರಣವನ್ನೇ ಮೈಗೂಡಿಸಿಕೊಂಡು ಬಂದವರು. ತಮ್ಮ ಉಸಿರು ಇರುವವರೆಗೆ ರಾಜಕೀಯದಲ್ಲಿ ಇರುವೆ ಎಂದು ಹೇಳುತ್ತಾರೆ. ಅವರಿಗೆ ರಾಜಕೀಯವೇ ಜೀವನ ಆಗಿತ್ತು. ಆದರೆ ರಾಜಕೀಯ ಜೀವ ಕೊಟ್ಟ ಈ ರಾಜ್ಯದ ಜನರಿಗೆ ಅವರು ಕೊಟ್ಟಿದ್ದು ಏನು ಎಂದು ಪ್ರಶ್ನಿಸಿದರು. ಈಗ ಮಗನನ್ನು ರಕ್ಷಿಸಿ ಎನ್ನುತ್ತಾರೆ. ವಂಶಪಾರಂಪರ್ಯಕ್ಕೆ ಅವರು ಜೋತು ಬಿದ್ದಿದ್ದಾರೆ. ಅವರು ತಮ್ಮ ಮಗನ ಪರವಾಗಿ ಮಾತನಾಡುವುದನ್ನು ಬಿಟ್ಟು ರಾಜ್ಯದ ಜನರ ಪರ ಮಾತನಾಡಬೇಕಿತ್ತು. ಇದು ಅವರ ರಾಜಕೀಯ ಜೀವನದ ಅಂತ್ಯದ ದಿನಗಳ ಮಾತು ಎಂದು ಹೇಳಿದರು.

ಟೆಹ್ರಾನ್ ಸ್ಫೋಟ ಹೆಚ್ಚಿದ ಉದ್ವಿಗ್ನತೆ

ಪುಟ ೧➡ ಯುದ್ಧ ಆರಂಭವಾದಾಗಿನಿಂದ ಇರಾನ್ ಸರ್ಕಾರ ಇಂಟರ್ನೆಟ್ ಸ್ಥಗಿತಗೊಳಿಸಿರುವುದರಿಂದ, ಇಸ್ರೇಲ್ ನೀಡಿದ್ದ ಎಚ್ಚರಿಕೆ ಬಹುತೇಕ ಜನರಿಗೆ ತಲುಪಿರಲಿಲ್ಲ ಎಂದು ಹೇಳಲಾಗಿದೆ. ಇನ್ನೊಂದೆಡೆ ಯುದ್ಧದಿಂದಾಗಿ ಭಾರತ ಸಮಸ್ಯೆ ಎದುರಿಸುತ್ತಿದ್ದರೂ ಹಂತ ಹಂತವಾಗಿ ಸಮಸ್ಯೆಯಿಂದ ಹೊರಬಂದು ನಾಗರಿಕರ ರಕ್ಷಣೆ ಮತ್ತು ದೈನಂದಿನ ಜೀವನಕ್ಕೆ ಸಮಸ್ಯೆಯಾಗದಂತೆ ಗಮನಹರಿಸುತ್ತಿದೆ.

ಅಮೆರಿಕ-ಉತ್ತರ ಕೊರಿಯಾ ಕ್ಷಿಪಣಿ ಸಂಘರ್ಷ

ಪುಟ ೧➡ ಚೀನಾದ 'ಡಿಎಫ್-17' ನಂತಹ ಹೈಪರ್‌ಸಾನಿಕ್ ಕ್ಷಿಪಣಿಗಳನ್ನು ತಡೆಯಲು ಈ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಜಪಾನ್ ಪ್ರಧಾನಿ ತಕೈಚಿ, ಮುಂಬರುವ ವಾಷಿಂಗ್ಟನ್ ಭೇಟಿಯ ಸಮಯದಲ್ಲಿ ಈ ಬಹುಕೋಟಿ ಡಾಲರ್ ಯೋಜನೆಯಲ್ಲಿ ಸೇರುವ ಬಗ್ಗೆ ಚರ್ಚಿಸುವ ನಿರೀಕ್ಷೆಯಿದೆ.

ರಾಜತಾಂತ್ರಿಕ ಕಾರ್ಯತಂತ್ರ: ಕಿಮ್ ಜೊಂಗ್-ಉನ್ ಅವರ ಈ ಪ್ರಚೋದನಾಕಾರಿ ಕ್ರಮಗಳ ಹೊರತಾಗಿಯೂ, ಚೀನಾದ ಪ್ರಭಾವ ಕುಗ್ಗಿಸಲು ಅಧ್ಯಕ್ಷ ಟ್ರಂಪ್, ಕಿಮ್ ಜಾಂಗ್-ಉನ್ ಅವರೊಂದಿಗೆ ವೈಯಕ್ತಿಕ ಬಾಂಧವ್ಯ ವೃದ್ಧಿಸಲು ಉತ್ಸುಕರಾಗಿದ್ದಾರೆ. ಚೀನಾದ ಭೂಪ್ರದೇಶದಲ್ಲಿ ಸಂಭವನೀಯ ಶೃಂಗಸಭೆ ನಡೆಸುವ ಬಗ್ಗೆ ದಕ್ಷಿಣ ಕೊರಿಯಾದ ಪ್ರಧಾನಿ ಕಿಮ್ ಮಿನ್-ಸಿಯೋಕ್ ಖಚಿತಪಡಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಯುಎಸ್ ನಡೆ ಕುತೂಹಲ ಮೂಡಿಸಿದೆ.

ತೈಲ ಖರೀದಿ: ಅಮೆರಿಕ ನಡೆಗೆ ಇರಾನ್ ವ್ಯಂಗ್ಯ

ಹೊಸದಿಲ್ಲಿ: ಈ ಹಿಂದೆ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳದಂತೆ ಭಾರತಕ್ಕೆ ಎಚ್ಚರಿಕೆ ನೀಡಿ ಸುಂಕ ಹೊರೆ ನೀಡಿದ್ದ ಅಮೆರಿಕ, ಇರಾನ್ ಜತೆ ಯುದ್ಧ ಮಾಡಿದ ಎರಡು ವಾರಗಳಲ್ಲೇ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವಂತೆ ಭಾರತ ಸೇರಿದಂತೆ ಜಗತ್ತಿಗೆ ಬೇಡಿಕೊಳ್ಳುತ್ತಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಲೇವಡಿ ಮಾಡಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಬಗ್ಗೆ ಯುರೋಪಿನ ನಿಲುವನ್ನು ಟೀಕಿಸಿದ ಅರಘ್ಚಿ, ಇರಾನ್ ಮೇಲಿನ ಯುದ್ಧವು 'ಕಾನೂನುಬಾಹಿರ'ವಾಗಿದೆ. ಇರಾನ್ ಮೇಲಿನ ಕಾನೂನುಬಾಹಿರ ಯುದ್ಧ ಬೆಂಬಲಿಸುವುದರಿಂದ ರಷ್ಯಾದ ವಿರುದ್ಧ ಅಮೆರಿಕದ ಬೆಂಬಲ ಸಿಗುತ್ತದೆ ಎಂದು ಯುರೋಪ್ ಭಾವಿಸಿದೆ ಎಂದು ಹೇಳಿದರು.

ತವರಿನತ್ತ ಶಿವಾಲಿಕ್, ನಂದಾದೇವಿ

ಭಾರತದ ಮೊದಲ ಎಲ್‌ಪಿಜಿ ಸಾಗಣೆ ಹಡಗು ಶಿವಾಲಿಕ್ ಹಾರ್ಮುಜ್ ಜಲಸಂಧಿಯಿಂದ ಈಗಾಗಲೇ ತೆರಳಿದ್ದು, ಎರಡನೇ ಹಡಗು ನಂದಾದೇವಿ ಸಹ ಹಾರ್ಮುಜ್ ಜಲಸಂಧಿ ಯಿಂದ ಶನಿವಾರ ಪ್ರಯಾಣ ಆರಂಭಿಸಿದೆ. ಸುಮಾರು 46,000 ಟನ್‌ಗಳಿಗೂ ಹೆಚ್ಚು ಎಲ್‌ಪಿಜಿ ಇನ್ನೆರಡು ದಿನಗಳಲ್ಲಿ ತವರಿಗೆ ತಲುಪಲಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಭಾರತೀಯ ನೌಕಾಪಡೆಯ ಮಾರ್ಗದರ್ಶನದಲ್ಲಿ ಎರಡೂ ಹಡಗುಗಳು ಹಾರ್ಮುಜ್‌ನಿಂದ ಭಾರತದತ್ತ ಪ್ರಯಾಣ ಬೆಳೆಸಿವೆ. ಮುಂದಿನ ಎರಡು ದಿನಗಳೊಳಗೆ ಮುಂಬೈ ಅಥವಾ ಕಾಂಡ್ಲಾ ಬಂದರಿಗೆ ಹಡುಗಳು ಬರುವುದನ್ನು ನಿರೀಕ್ಷಿಸಲಾಗಿದೆ. ನಂದಾದೇವಿ ಹಡಗಿನಲ್ಲಿ 46,000 ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹಾಗೂ ಶಿವಾಲಿಕ್‌ನಲ್ಲೂ 40,000ದಿಂದ 55,000 ಟನ್‌ಗಳಷ್ಟು ಎಲ್‌ಪಿಜಿ ಇದೆಯೆಂದು ಮೂಲಗಳು ತಿಳಿಸಿವೆ. ಇವೆರಡೂ ಹಡಗುಗಳು ಭಾರತದ ಸಂಪೂರ್ಣ ಇಂಧನ ಪೂರೈಕೆ ಸರಪಣಿಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ.

ಬಯೋ ಗ್ಯಾಸ್‌ಗೆ ಜಿಬಿಎ ಕ್ರಮ

ಪುಟ ೧➡ **ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ:** ಬಯೋಗ್ಯಾಸ್ ಘಟಕಗಳಲ್ಲಿ ಪ್ರತಿ ಟನ್ ಹಸಿ ತ್ಯಾಜ್ಯದಿಂದ ಸುಮಾರು 30ರಿಂದ 50 ಕೆಜಿ ಬಯೋಗ್ಯಾಸ್ ಉತ್ಪಾದನೆ ಸಾಧ್ಯವಾಗುತ್ತದೆ. ಪ್ರತಿ ಘಟಕದಲ್ಲಿ ದಿನಕ್ಕೆ ಸುಮಾರು 200 ಕೆಜಿ ಗ್ಯಾಸ್ ಉತ್ಪಾದನೆ ನಡೆಯುತ್ತಿದೆ. ಇಲ್ಲಿ ಉತ್ಪಾದನೆಯಾಗುವ ಬಯೋಗ್ಯಾಸ್‌ನ್ನು ಘಟಕಗಳ ಒಳಾಂಗಣ ಬಳಕೆಗೆ ಬಳಸಲಾಗುತ್ತಿದ್ದು, ಹೆಚ್ಚುವರಿ ಬಯೋಗ್ಯಾಸ್ ಬಳಸಿ ಜನರೇಟರ್ ಮೂಲಕ ವಿದ್ಯುತ್ ಉತ್ಪಾದಿಸಿ ಸಮೀಪದ ಉದ್ಯಾನವನಗಳಲ್ಲಿ ದೀಪಗಳನ್ನು ಬೆಳಗಿಸಲಾಗುತ್ತಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕರೀಗೌಡ ತಿಳಿಸಿದ್ದಾರೆ. ಕೋರಮಂಗಲದಲ್ಲಿರುವ 8.5 ಟನ್ ಸಾಮರ್ಥ್ಯದ ಬಯೋಗ್ಯಾಸ್ ಘಟಕದಿಂದ ಸಮೀಪದ ಹೋಟೆಲ್‌ಗೆ ಪ್ರತಿದಿನ ಸುಮಾರು 120 ಕೆಜಿ ಬಯೋಗ್ಯಾಸ್ ಸರಬರಾಜು ಮಾಡಲಾಗುತ್ತಿದ್ದು, ಪ್ರತಿ ಕೆಜಿಗೆ ರೂ.70ರಂತೆ ದಿನಕ್ಕೆ ಸುಮಾರು ರೂ.8,400 ಆದಾಯ ಲಭ್ಯವಾಗುತ್ತಿದೆ. ಇದರ ಮೂಲಕ ಹಸಿ ತ್ಯಾಜ್ಯದಿಂದ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ಬಯೋಗ್ಯಾಸ್‌ನ್ನು ಸಿಲಿಂಡರ್‌ಗಳಿಗೆ ತುಂಬಿಸಿ ಸರಬರಾಜು ಮಾಡುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುವುದು. ಈ ಬಗ್ಗೆ ಬೆಲೆ ಸೇರಿದಂತೆ ಮತ್ತಿತರ ವಿಷಯದ ಬಗ್ಗೆ ಮಾತುಕತೆ ನಡೆಯುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬಯೋಗ್ಯಾಸ್ ಘಟಕ ಸ್ಥಾಪನೆಗೆ ವೇಗ

ಗೇಲ್ ಗ್ಯಾಸ್ ಇಂಡಿಯಾ ಕಂಪನಿಯ ಸಹಯೋಗದೊಂದಿಗೆ ದಿನಕ್ಕೆ ಸುಮಾರು 300 ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಹೊಸ ಬಯೋಗ್ಯಾಸ್ ಘಟಕ ನಿರ್ಮಾಣಕ್ಕೂ ಚಾಲನೆ ನೀಡಲಾಗಿದೆ. ಇದಲ್ಲದೆ ಕನ್ನಹಳ್ಳಿ ಪ್ರದೇಶದಲ್ಲಿ ಸುಮಾರು 1,000 ಟನ್ ಹಸಿ ತ್ಯಾಜ್ಯದಿಂದ ಬಯೋಗ್ಯಾಸ್ ಉತ್ಪಾದಿಸುವ ಘಟಕ ನಿರ್ಮಾಣಕ್ಕೆ ಸಾತರಾಂ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಅನುಮೋದನೆ ನೀಡಲಾಗಿದೆ. ಅಲ್ಲದೆ ಹೊಸದಾಗಿ ನಾಲ್ಕು ವಿಕೇಂದ್ರೀಕೃತ ಬಯೋಮೆಥನೈಸೇಷನ್ ಘಟಕಗಳನ್ನು ನಿರ್ಮಿಸಲು ಕ್ರಮ ವಹಿಸಲಾಗಿದ್ದು, ಅವುಗಳಲ್ಲಿ ಎರಡು ಘಟಕಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾರ್ಯಾರಂಭಗೊಳ್ಳಲಿವೆ. ಉಳಿದ ಎರಡು ಘಟಕಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಜಿಬಿಎ ತಿಳಿಸಿದೆ.

ಕಡಿಮೆ ಅವಧಿಯಲ್ಲಿ ಪ್ರಸ್ತುತ ಇರುವ ಘಟಗಳನ್ನು ಉನ್ನತೀಕರಣಗೊಳಿಸಿ ಅಲ್ಲಿ ಬಯೋ ಗ್ಯಾಸ್ ಉತ್ಪತ್ತಿ ಮಾಡಿ, ಸ್ಥಳೀಯ ಹೋಟೆಲ್‌ಗಳಿಗೆ ವಿತರಣೆ ಮಾಡಲು ಕ್ರಮ ವಹಿಸಲಾಗುವುದು.

■ **ಮಹೇಶ್ವರ್ ರಾವ್, ಜಿಬಿಎ ಮುಖ್ಯ ಆಯುಕ್ತ**

ತರಬೇತಿಯಿಂದ ಕ್ರೀಡೆಯಲ್ಲೂ ದೇಶ ಮುಂಚೂಣಿ

ಮಂಡ್ಯ: ಭಾರತದ ಕೆಳಮಟ್ಟದ ಕ್ರೀಡಾ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಖೇಲೋ ಇಂಡಿಯಾ ಯೋಜನೆಯನ್ನು ಜಾರಿಗೆ ತಂದಿದೆ. ಇದರಿಂದ ಭಾರತವನ್ನು ಶ್ರೇಷ್ಠ ಕ್ರೀಡಾರಾಷ್ಟ್ರವಾಗಿ ರೂಪಿಸಲು ಸಹಕಾರಿಯಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ವಿಶ್ವಾಸದಿಂದ ನುಡಿದರು

ತಾಲೂಕಿನ ವಿ.ಸಿ.ಫಾರಂನಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಕ್ರೀಡಾಪಟುಗಳುತರಬೇತಿಹಾಗೂಮೂಲಸೌಕರ್ಯಗಳಿಲ್ಲದೆಪರದಾಡುತ್ತಿದ್ದರು. ಕಳೆದ 11 ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಅತ್ಯಾಧುನಿಕ ಕ್ರೀಡಾ ಸೌಲಭ್ಯ, ಅಂತಾರಾಷ್ಟ್ರೀಯ ಮಟ್ಟದ ತರಬೇತಿಯನ್ನು ನೀಡುವ ಮೂಲಕ ಹೆಚ್ಚು ಹೆಚ್ಚು ಪದಕಗಳನ್ನು ಗೆಲ್ಲುವುದಕ್ಕೆ ಸಹಕಾರಿ ಯಾಗಿದೆ ಎಂದು ಹೇಳಿದರು.

2016ರಲ್ಲಿ ಖೇಲೋ ಇಂಡಿಯಾ ಆರಂಭವಾದ ಬಳಿಕ ಇಡೀ ರಾಷ್ಟ್ರದಲ್ಲಿ ಕ್ರೀಡಾ ಚಟುವಟಿಕೆಗಳು ಗರಿಗೆದರಿವೆ. ಎಲ್ಲಾ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ನಗರ ಪ್ರದೇಶಕ್ಕೆ ಸೀಮಿತವಾಗಿದ್ದ ಕ್ರೀಡಾ ಚಟುವಟಿಕೆಗಳು ಪ್ರತಿ ಹಳ್ಳಿ ಮತ್ತು ಶಾಲೆಗಳಲ್ಲೂ ಆರಂಭಗೊಂಡಿವೆ. ಗ್ರಾಮೀಣ ಭಾಗದಿಂದಲೂ ಉತ್ತಮ ಕ್ರೀಡಾಪ್ರತಿಭೆಗಳು ಬೆಳಕಿಗೆ ಬರುವಂತಾಗಿದೆ. ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್, ಒಲಂಪಿಕ್ಸ್ ಕ್ರೀಡಾಕೂಟದಲ್ಲೂ ಕ್ರೀಡಾಪಟುಗಳು ಚಿನ್ನ ಸೇರಿದಂತೆ ಹಲವು ಪದಕಗಳನ್ನುಗೆಲ್ಲುವಂತಾಗಿದೆ ಎಂದು



ತಿಳಿಸಿದರು.

ಮಂಡ್ಯ ನೆಲದಿಂದ ರಾಜ್ಯವಷ್ಟೇ ಅಲ್ಲ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕ್ರೀಡಾಪಟುಗಳು ಬಂದಿದ್ದಾರೆ. ಆ ಪೈಕಿ ನಾನು ಅಥ್ಲೆಟಿಕ್ಸ್‌ನಲ್ಲಿ ವಿಕಾಸಗೌಡ ಹಾಗೂ ವ್ಹೀಲ್ ಚೇರ್ ಟೆನ್ನಿಸ್ ಆಟಗಾರ್ತಿ ಕೆ.ಆರ್. ಶಿಲ್ಪಾ ಅವರನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇಂತಹ ಅನೇಕ ಕ್ರೀಡಾಪಟುಗಳು ಮಂಡ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರು ಭಾರತದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಬೆಳಗುತ್ತಿದ್ದಾರೆ. ಇಲ್ಲಿ ನಿರ್ಮಾಣವಾಗಲಿರುವ ಒಳಾಂಗಣ ಕ್ರೀಡಾಂಗಣದ ಸದುಪಯೋಗ ಪಡೆದುಕೊಂಡು ಇಂತಹ ಅಸಂಖ್ಯಾತ ಪ್ರತಿಭೆಗಳು ಇಲ್ಲಿಂದ ಹೊರಬರಬೇಕು ಎಂದು ಹಾರೈಸುತ್ತೇನೆ ಎಂದು ಆಶಿಸಿದರು.

ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ

ಕೇಂದ್ರ ಸಂಪುಟದಲ್ಲಿ ನನ್ನ ಸಹೋದ್ಯೋಗಿ ಹಾಗೂ ಎನ್‌ಡಿಎ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರ ಪರಿಶ್ರಮದಿಂದ ಮಂಡ್ಯದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣವಾಗುತ್ತಿದೆ. ಕುಮಾರಸ್ವಾಮಿ ಅವರೇ, ಜನರಿಗಾಗಿ ನೀವು ಮಾಡಿರುವ ಕೆಲಸವು ಜನರು ನಿಮ್ಮ ಮೇಲೆ ತೋರಿಸುತ್ತಿರುವ ಪ್ರೀತಿಯಲ್ಲಿಯೇ ಕಾಣುತ್ತಿದೆ ಎಂದು ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.ವಿಶೇಷಚೇತನರ ಬಗ್ಗೆ ನೀವು ಹೊಂದಿರುವ ಮಮತೆ, ಬದ್ಧತೆಯನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ನನಗೆ ಬಹಳ ಸಂತೋಷ ಉಂಟು ಮಾಡಿದೆ. ನೀವು ಮಾಡುತ್ತಿರುವ ಈ ಕೆಲಸ ಶ್ಲಾಘನಾರ್ಹ. ನೀವು ಎಲೆಕ್ಟ್ರಿಕ್ ವಾಹನಗಳನ್ನು ನೀಡುವ ಮೂಲಕ ವಿಶಿಷ್ಟಚೇತನರಿಗೆ ಮಾತ್ರ ಸಹಾಯ ಮಾಡುತ್ತಿಲ್ಲ, ಪರಿಸರಕ್ಕೆ ಕೂಡ ಒಳ್ಳೆಯದು ಮಾಡುತ್ತಿದ್ದೀರಿ ಎಂದು ಮಾಂಡವೀಯ ಅವರು ಶ್ಲಾಘಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಶಾಸಕರಾದ ಎಚ್.ಟಿ. ಮಂಜು, ಕೆ. ವಿವೇಕಾನಂದ, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮಾಜಿ ಶಾಸಕರಾದ ಕೆ. ಅನ್ನದಾನಿ, ಜಿ.ಬಿ. ಶಿವಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಬಿಜೆಪಿ ಮುಖಂಡ ಡಾ. ಸಿದ್ದರಾಮಯ್ಯ ಇದ್ದರು.



ಬಾಗಲಕೋಟೆ ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಶಂಕುಸ್ಥಾಪನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶರಣಪ್ರಕಾಶ ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ ಇದ್ದರು.

ಕಿರುಸುದ್ದಿ

ವಿದೇಶಿ ಪ್ರವಾಸಿಗರ ನೆರವಿಗೆ ಬದ್ಧ: ಸಚಿವ ಪಾಟೀಲ್

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಯುದ್ಧದ ಸನ್ನಿವೇಶ ಹಾಗೂ ಅಂತಾರಾಷ್ಟ್ರೀಯ ಪ್ರಯಾಣದಲ್ಲಿನ ಅನಿಶ್ಚಿತತೆಯಿಂದಾಗಿ ರಾಜ್ಯದಲ್ಲಿ ಸಿಲುಕಿರುವ ವಿದೇಶಿ ಪ್ರವಾಸಿಗರ ನೆರವಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ. ಪ್ರಸ್ತುತ ಯುದ್ಧದ ಕಾರಣದಿಂದಾಗಿ ಪ್ರಯಾಣದ ಅಡಚಣೆ ಎದುರಿಸುತ್ತಿರುವ ಮತ್ತು ವೀಸಾ ಸಂಬಂಧಿತ ಸಮಸ್ಯೆಗಳಿಂದ ಸಂಕಷ್ಟಕ್ಕೆ ಸಿಲುಕಿರುವ ವಿದೇಶಿ ಪ್ರವಾಸಿಗರು ಯಾವುದೇ ಸಹಾಯಕ್ಕಾಗಿ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ರಾಜ್ಯ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ವಿದೇಶಿ ಅತಿಥಿಗಳಿಗೆ ಈ ಸಂಕಷ್ಟದ ಸಮಯದಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಇಲಾಖೆಯು ವಿಶೇಷ ನಿಗಾ ವಹಿಸಿದೆ. ಅತಿಥಿ ದೇವೋ ಭವ ಎಂಬ ಆಶಯದಂತೆ, ರಾಜ್ಯದಲ್ಲಿರುವ ವಿದೇಶಿ ಪ್ರವಾಸಿಗರಿಗೆ ವೀಸಾ ನಿರ್ವಹಣೆ ಸೇರಿದಂತೆ ಅಗತ್ಯವಿರುವ ಎಲ್ಲಾ ನೆರವು ನೀಡಲು ಇಲಾಖೆ ಸನ್ನದ್ಧವಾಗಿದೆ ಎಂದು ಅವರು ಭರವಸೆ ನೀಡಿದ್ದಾರೆ.

ಸಹಾಯಕ್ಕಾಗಿ ಸಂಪರ್ಕಿಸಿ: ವಿದೇಶಿ ಪ್ರವಾಸಿಗರು ಮಾಹಿತಿ ಅಥವಾ ತುರ್ತು ನೆರವಿಗಾಗಿ ಬೆಳಗ್ಗೆ 5:30 ರಿಂದ ರಾತ್ರಿ 10:00 ಗಂಟೆಯವರೆಗೆ. ಈ 89706 50021 ದೂರವಾಣಿ ಸಂಖ್ಯೆಗೆ ಕರೆ ಮಾಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕ ಎಚ್.ಪಿ. ಜನಾರ್ಧನ 96119 21927 ಅವರನ್ನು ಸಂಪರ್ಕಿಸಿ.

ಐಟಿ, ಬಿಟಿ ಕ್ಷೇತ್ರದಿಂದ ಉದ್ಯೋಗಾವಕಾಶ

ವಿಧಾನ ಪರಿಷತ್: ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಹಾಗೂ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ) ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡುತ್ತಿದೆ ಎಂದು ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕೆ.ಎಸ್. ನವೀನ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಐಟಿ ಕಂಪನಿಗಳ ಸ್ಥಾಪನೆ ಮತ್ತು ಸ್ಟಾರ್ಟ್‌ಅಪ್ ಪ್ರೋತ್ಸಾಹ ನೀಡಲು ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಮಾಹಿತಿಯಂತೆ ಕಲಬುರಗಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸುಮಾರು 21 ಐಟಿ ಕಂಪನಿಗಳು ಸ್ಥಾಪನೆಯಾಗಿವೆ. ಬಳ್ಳಾರಿಯ ಐಟಿ ಪಾರ್ಕ್‌ನಲ್ಲಿ ಈಗಾಗಲೇ ಸುಮಾರು 18 ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಸಾರಥಿ ಯೋಜನೆ: ಆಯ್ಕೆ ಪಟ್ಟಿ ರದ್ದು

ವಿಧಾನ ಪರಿಷತ್: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2025-26ನೇ ಸಾಲಿನಲ್ಲಿ ಲಭ್ಯವಿರುವ ಸರ್ಕಾರದ ಸಾಂಸ್ಥಿಕ ಕೋಟಾದಡಿಯಲ್ಲಿ ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತೆ, ಮೈಕ್ರೋ ಕ್ರೆಡಿಟ್ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯ ಅಡಿ ಕೆಲವು ಫಲಾನುಭವಿಗಳನ್ನು ಕ್ರಮಬದ್ಧವಾಗಿ ಆಯ್ಕೆಯಾಗಿಲ್ಲವೆಂದು ಕಂಡು ಬಂದಿರುವ ಹಿನ್ನೆಲೆ ಈ ಪಟ್ಟಿಗಳನ್ನು ರದ್ದುಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ತಿಳಿಸಿದರು. ಸದಸ್ಯರಾದ ಟಿ.ಎನ್. ಜವರಾಯಿ ಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಫಲಾನುಭವಿಗಳನ್ನು ರದ್ದುಪಡಿಸಿರುವ ಪಟ್ಟಿಯನ್ನು ಪರಿಶೀಲಿಸಿ, ಕೆಲವು ಫಲಾನುಭವಿಗಳು ಅರ್ಹರಿದ್ದಲ್ಲಿ ಸಾಂಸ್ಥಿಕ ವಿವೇಚನಾ ಕೋಟಾದ ಮಿತಿಯ ಅಡಿಯಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ತೀರ್ಪು ಪ್ರಕಟವಾಗದಿದ್ದರೂ ರೈತರಿಗೆ ನೆರವು: ಡಿ.ಕೆ.ಶಿವಕುಮಾರ

ಸಂತ್ರಸ್ತರಿಗೆ ಶೀಘ್ರ ಪರಿಹಾರ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಾಗಿ ಬ್ರಿಜೇಶ್ ಪಟೇಲ್‌ರವರ ತೀರ್ಪು ಪ್ರಕಟವಾಗಿಲ್ಲ. ಕೋರ್ಟ್ ಆದೇಶವನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತಿಲ್ಲ, ಆದರೂ ನಮ್ಮ ಸರ್ಕಾರ ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಜಲ ನಮ್ಮ ಹಕ್ಕು ಎಂದು ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ನೀಡುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ನವನಗರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿ, ಮೂರನೇ ಹಂತದ ಯುಕೆಪಿ ಕಾಮ ಗಾರಿಗಾಗಿ 1 ಲಕ್ಷ 33 ಸಾವಿರ ಎಕರೆ ಭೂಸ್ವಾಧೀನ ಮಾಡಿಕೊಂಡು ರೈತರಿಗೆ ಹಣ ಕೊಡಲು ಬದ್ಧರಾಗಿದ್ದೇವೆ. ಚೆಕ್ ಕೂಡ ನೀಡಲಾಗುತ್ತಿದೆ. ಈ ತೀರ್ಮಾಣದಿಂದ ಪಕ್ಕದ ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹಾಕಿ ರೈತರಿಗೆ ಪರಿಹಾರ ನೀಡದಂತೆ ತಕರಾರು ಅರ್ಜಿ ಹಾಕಿವೆ. ಆದರೂ ನಾವು ಈ ಬಗ್ಗೆ ಮನವರಿಕೆ ಮಾಡಲು ಕೇಂದ್ರ ಪ್ರಯತ್ನ ಪಟ್ಟಿದ್ದೇವೆ. ಹೀಗಾಗಿ ನಮ್ಮ ಸರ್ಕಾರ ರೈತರಿಗಾಗಿ ಬಲಿಷ್ಠವಾದ ತೀರ್ಮಾನ ಕೈಗೊಂಡಿದೆ ಎಂದರು.

ಜಾತಿಯನ್ನು ಕೇಳದೇ ಗುಣ ಕೇಳಬೇಕು. ಧರ್ಮ ಕೇಳದೇ ನಡತೆ ಕೇಳಬೇಕು ಎಂಬ ದಾರಿಯಲ್ಲಿ ರೈತರ ಬದುಕಿಗೆ ಸರ್ಕಾರ ನೆರವಾಗಲಿದೆ. ಸಣ್ಣ ನೀರಾವರಿ ಸಚಿವರು ಮತ್ತು ನಾವು ದೆಹಲಿಗೆ ತೆರಳಿ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗಿ



> **ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣವಾಗಲಿದೆ. ರಾಜ್ಯದಲ್ಲಿ 17945 ವಿದ್ಯಾರ್ಥಿಗಳು ಪ್ರತಿ ವರ್ಷ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಓದಿ ಪದವಿ ಪಡೆದುಕೊಳ್ಳಲಿದ್ದಾರೆ. 5070 ಪಿಜಿ ಸೀಟ್, 44,000 ನರ್ಸಿಂಗ್, ಮೆಡಿಕಲ್‌ಗೆ ಶಕ್ತಿ ತುಂಬಲು ಸರ್ಕಾರ ಕೆಲಸ ಮಾಡುತ್ತಿದೆ.**
> ■ **ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ**

ನಮ್ಮ ಕೆಲಸಕ್ಕೆ ಅಡ್ಡಿ ಮಾಡಬಾರದು. ಯೋಜನೆಗೆ ಕೇಂದ್ರದಿಂದ ಅನುದಾನ ಕೂಡ ಬಿಡುಗಡೆ ಮಾಡಬೇಕು ಎಂದು ಒತ್ತಡ ಹಾಕುತ್ತೇವೆ ಎಂದರು.

ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಕಳೆದ ವಿಧಾನಸಭೆಯ ಚುನಾವಣೆಯಲ್ಲಿ 14 ಸ್ಥಾನಗಳನ್ನು ಗೆಲ್ಲಿಸಿಕೊಟ್ಟ ಜನರ ಋಣ ತೀರಿಸಲು ಬಾಗಲಕೋಟೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸಿದ್ದೇವೆ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿ, ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್, ಕ್ಯಾನ್ಸರ್ ಆಸ್ಪತ್ರೆ, ಟ್ರಾಮಾ ಸೆಂಟರ್, ಯೂನಿವರ್ಸಲ್ ಹೆಲ್ತ್ ಮಾಡುವ ಮೂಲಕ ರಾಜ್ಯದ ಜನತೆಗೆ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದರು. ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜ್ ನಿರ್ಮಾಣವಾಗುತ್ತಿರುವ ಪರಿಣಾಮದಿಂದ ಗ್ರಾಮೀಣ ಭಾಗದ ರೈತರು ಮಕ್ಕಳು, ಸಾಮಾನ್ಯ, ಬಡವರ ಮಕ್ಕಳಿಗೆ ಮೆರಿಟ್ ಆಧಾರದ ಮೇಲೆ ಸೀಟ್ ಸಿಗಲಿದೆ ಎಂದರು.

ಸಚಿವ ಎಂ.ಬಿ.ಪಾಟೀಲ,ಆರ್.ಬಿ.ತಿಮ್ಮಾಪುರ, ಎಚ್.ಕೆ.ಪಾಟೀಲ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಸಿದ್ದು ಸವದಿ, ಮಾಜಿ ಸಚಿವ ಅಜಯಕುಮಾರ ಸರನಾಯಕ ಇದ್ದರು.

ಫ್ಲಿಪ್‌ಕಾರ್ಟ್ ವಿರುದ್ಧ ಕ್ರಮ ಕೈಗೊಳ್ಳಲು ಪತ್ರ

ಬೆಂಗಳೂರು: ಹಣ ಮಾಡುವ ಭರದಲ್ಲಿ ಫ್ಲಿಪ್‌ಕಾರ್ಟ್ ಎನ್ನುವ ಸಂಸ್ಥೆ 1 ರೂಪಾಯಿಗೆ 1 ಲೀಟರ್ ಹಾಲು ನೀಡಲು ಮುಂದಾಗಿದೆ. ರೈತ ಸಮುದಾಯವನ್ನು ಧ್ವಂಸ ಮಾಡುವಂತಹ ಕೃತ್ಯಕ್ಕೆ ಕೈ ಹಾಕಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ದೇಶದಾದ್ಯಂತ ದಂಗೆ ಮಾಡಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.



ಶನಿವಾರ ಸದಾಶಿವನಗರದ ನಿವಾಸದಲ್ಲಿ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 1 ರೂಪಾಯಿಗೆ 1 ಲೀಟರ್ ಹಾಲು ಮಾರಲು ಮುಂದಾಗಿರುವ ಫ್ಲಿಪ್ ಕಾರ್ಟ್ ಸಂಸ್ಥೆ ವಿರುದ್ಧ ಕಾಂಪಿಟೇಷನ್ ಕಮಿಷನ್ ಆಫ್ ಇಂಡಿಯಾ ಇವರಿಗೆ ಸೆಕ್ಷನ್ 19/1 ಎ ಅಡಿ ಕ್ರಮ ತೆಗೆದುಕೊಳ್ಳಬೇಕು ಎಂದು ದೂರು ನೀಡಲಾಗಿದೆ. ಜತೆಗೆ ಈ ವಿಚಾರವನ್ನು ಪ್ರಧಾನಿ ಮೋದಿಯವರಿಗೆ ಇ-ಮೇಲ್ ಮುಖಾಂತರ ಕಳಿಸುತ್ತಿದ್ದೇನೆ ಎಂದು ತಿಳಿಸಿದರು.

ಮಾರುಕಟ್ಟೆಯನ್ನು ಆವರಿಸಿಕೊಳ್ಳಬೇಕುಎಂದುಮಾಡುತ್ತಿರುವ ಸ್ಪರ್ಧೆಯಿಂದ ರೈತರಿಗೆ ಹೊಡೆತ ಬೀಳುತ್ತದೆ. ಇದಕ್ಕಾಗಿ ಯೇ ಸುಮಾರು 2 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ರೈತರಿಗೆ ನಾವು 38, 39, 40 ರೂಪಾಯಿ ಹಣವನ್ನು ಪಾವತಿ ಮಾಡುತ್ತಿದ್ದೇವೆ. ಇವರು 1 ರೂಪಾಯಿಗೆ ಕೊಡುವುದಕ್ಕೆ ಹೇಗೆ ಸಾಧ್ಯವಾಗು ತ್ತದೆ.ಯಾರಿಂದ ಖರೀದಿ ಮಾಡುತ್ತಿದ್ದಾರೆ. ಎಲ್ಲಿಂದ ಹಾಲು ಬರುತ್ತಿದೆ ಎಂದು ತಿಳಿದುಕೊಳ್ಳಬೇಕಿದೆ ಎಂದರು.

14.5 ಲಕ್ಷ ಲೀ ಹಾಲು ಮಾರಾಟ

ಈಗಾಗಲೇ 14.5 ಲಕ್ಷ ಲೀಟರ್ ಹಾಲು ಮಾರಾಟ ಆಗಿದೆ. ಈಗಾಗಲೇ ಎಲ್ಲಾ ಕಡೆ ಜಾಹೀರಾತು ನೀಡಿದೆ. ಸಾರ್ವಜನಿಕರ ಹಣವನ್ನ ಹೂಡಿಕೆ ಮಾಡಿ ಗ್ರಾಹಕರನ್ನ ಆಕರ್ಷಣೆ ಮಾಡಲಾಗುತ್ತಿದೆ. ಆ ಕಂಪನಿಯವರು ಎಷ್ಟು ದಿನ ಈ ರೀತಿ ಹಾಲು ಕೊಡುತ್ತಾರೆ ಎಂಬುದನ್ನು ಬಹಿರಂಗಗೊಳಿಸಬೇಕು. ಬಮುಲ್ ಒಕ್ಕೂಟಕ್ಕೆ 40 ರಿಂದ 50 ಸಾವಿರ ಲೀಟರ್ ಹಾಲು ಮಾರಾಟ ಕಡಿಮೆಯಾಗಿದೆ. ಎಷ್ಟು ದಿನದಿಂದ ಇದು ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಬೇಕು ಎಂದರು.

ಪ್ರವಾಸಿಗರ ಸಂಖ್ಯೆ ಇಳಿಮುಖ

ಚಿಕ್ಕಮಗಳೂರು: ಜಿಲ್ಲೆಯ ವಿವಿಧ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಇಳಿಮುಖವಾಗಿದ್ದು, ಪ್ರವಾಸೋದ್ಯಮಕ್ಕೆ ಹೊಡೆತ ಬಿದ್ದಂತಾಗಿದೆ.

ಚಿಕ್ಕಮಗಳೂರು ತಾಲ್ಲೂಕಿನ ಗಿರಿ ತಪ್ಪಲಿನ ನಿಸರ್ಗ ತಾಣಗಳಾದ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ದತ್ತಪೀಠ, ಕೆಮ್ಮಣ್ಣುಗುಂಡಿ ಇನ್ನಿತರೆ ಪ್ರದೇಶಗಳು ಶನಿವಾರ ಪ್ರವಾಸಿಗರಿಲ್ಲದೆ ಬಿಕೋ ಎನ್ನುತ್ತಿದ್ದವು. ವಾರಾಂತ್ಯದ ದಿನಗಳಲ್ಲಿ ಪ್ರವಾಸಿಗರು ಹಾಗೂ ಪ್ರವಾಸಿ ವಾಹನಗಳಿಂದ ಗಿಜಿಗುಡುವ ನಗರ ಸಮೀಪದ ಕೈಮರ ಚೆಕ್‌ಪೋಸ್ಟ್ ಸರ್ಕಲ್‌ನಲ್ಲಿ ಜನ, ವಾಹನ ಸಂಚಾರವೇ ಇರಲಿಲ್ಲ, ಪ್ರಮುಖ ಹೋಟೆಲ್‌ಗಳು ಬಾಗಿಲು ಮುಚ್ಚಿದ್ದ ಪರಿಣಾಮ ಇಡೀ ಪ್ರದೇಶ ಬಿಕೋ ಎನ್ನುತ್ತಿರುವುದು ಕಂಡುಬಂತು.

ಯಾವುದೇ ಪರಿಸ್ಥಿತಿಯಲ್ಲೂ ವಾರಾಂತ್ಯದ ದಿನಗಳಲ್ಲಿ ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಗಳ ಐಟಿ ಉದ್ಯೋಗಿಗಳು ಜಿಲ್ಲೆಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಆದರೆ ಈ ವಾರಾಂತ್ಯದಲ್ಲಿ ಜಿಲ್ಲೆಗೆ ಭೇಟಿ ನೀಡಿರುವವರ ಸಂಖ್ಯೆ ಕ್ಷೀಣಿಸಿದೆ. ಇದರ ಪರಿಣಾಮ ಬಹುತೇಕ ಹೋಂಸ್ಟೇಗಳು, ರೆಸಾರ್ಟ್‌ಗಳು, ಲಾಡ್ಜ್‌ಗಳು ಪ್ರವಾಸಿಗರಿಲ್ಲದೆ ಖಾಲಿ ಉಳಿದಿದೆ.

ಪ್ರವಾಸಿ ಸ್ಥಳಗಳಲ್ಲಿ ಹೋಟೆಲ್‌ಗಳು, ಕ್ಯಾಂ ಟೀನ್, ಕಾಂಡಿಮೆಂಟ್ಸ್‌ಗಳು, ಬೇಕರಿಗಳು ಇನ್ನಿತರೆ ವ್ಯಾಪಾರ ವಹಿವಾಟಿಗೂ ಪೆಟ್ಟು ಬಿದ್ದಿದ್ದು, ಪ್ರವಾ ಸೋದ್ಯಮ ನಷ್ಟ ಅನುಭವಿಸುವಂತಾಗಿದೆ ಎಂದರು.



ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ

ಮಧ್ಯಪ್ರಾಚ್ಯದಲ್ಲಿ ತಲೆದೋರಿದುವ ಯುದ್ಧದ ಪರಿಸ್ಥಿತಿಯಿಂದ ಉಂಟಾಗಿರುವ ಅಡುಗೆ ಅನಿಲ ಅಭಾವದ ಕಾರಣ ಎಲ್ಲೆಡೆ ಹೋಟೆಲ್‌ಗಳು ಮುಚ್ಚಲ್ಪಡುತ್ತಿರುವುದರಿಂದ ಐಟಿ ಉದ್ಯೋಗಿಗಳು ಸೇರಿದಂತೆ ಇತರೆ ಪ್ರವಾಸಿಗರು ತಮ್ಮ ಪ್ರವಾಸದ ಯೋಜನೆಯನ್ನು ಕೈಬಿಟ್ಟಿರುವ ಸಾಧ್ಯತೆ ಇದೆ. ಇಂದಿನ ಒಟ್ಟಾರೆ ಪರಿಸ್ಥಿತಿ ಪ್ರವಾಸವನ್ನು ಸಂಪೂರ್ಣ ಆನಂದಿಸಲು ಪೂರಕವಾಗಿಲ್ಲ ಎನ್ನುವ ಕಾರಣಕ್ಕೆ ಪ್ರವಾಸಿಗರು ಹಿಂದೇಟು ಹಾಕುತ್ತಿದ್ದಾರೆ. ಇದು ಹೀಗೇ ಇರುವುದಿಲ್ಲ. ಒಂದೆರಡು ವಾರಗಳ ನಂತರ ಸಹಜ ಸ್ಥಿತಿಗೆ ಮರುಳಲಿದೆ ಎಂದು ಕೈಮರದ ಹೋಟೆಲ್ ಮಾಲೀಕ ಮುರುಗನ್ ಹೇಳುತ್ತಾರೆ.

ಕೈಮಗ್ಗ ಉತ್ಪನ್ನಗಳಿಗೆ ಉತ್ತಮ ಬೇಡಿಕೆ: ಸಚಿವ

ಬೆಂಗಳೂರು: ರಾಜ್ಯದ ಕೈಮಗ್ಗ ಉತ್ಪನ್ನಗಳು ಹೊರ ರಾಜ್ಯಗಳಲ್ಲಿ ಬೇರೆ-ಬೇರೆ ಬ್ರಾಂಡ್‌ಗಳಲ್ಲಿ ಮಾರಾಟವಾಗುತ್ತಿವೆ. ನಮ್ಮದೇ ಉತ್ಪನ್ನಗಳು ಬೇರೆ ರಾಜ್ಯಗಳಿಂದ ಬೇರೆ ಬ್ರಾಂಡ್‌ಗಳ ರೂಪದಲ್ಲಿ ರಾಜ್ಯಕ್ಕೆ ಬರುತ್ತಿವೆ. ಸ್ಥಳೀಯವಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ರಾಜಾಜಿನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ಟೇಡಿಯಂನಲ್ಲಿ 14 ದಿನಗಳ ಭಾರತೀಯ ಕೈಮಗ್ಗ ಪರಂಪರೆ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಪಾರಂಪರಿಕ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಮ್ಮ ಉತ್ಪನ್ನಗಳಿಗೆ ನಮ್ಮಲ್ಲೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಯಶವಂತಪುರದಲ್ಲಿರುವ ಇಲಾಖೆಯ ಒಂದೂವರೆ ಎಕರೆ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಶೀಘ್ರದಲ್ಲಿ ಶಂಕುಸ್ಥಾಪನೆ ನೆರವೇರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು. ಇತ್ತೀಚೆಗೆ ಪಾರಂಪರಿಕ ಕಲೆ ನಶಿಸಿ ಹೋಗುತ್ತಿದೆ ಎಂದರು.



ಅಂತಿಮ ಹಂತದಲ್ಲಿ ಜವಳಿ ನೀತಿ

2026-30 ಅವಧಿಯ ನೂತನ ಜವಳಿ ನೀತಿ ಅಂತಿಮ ಹಂತಕ್ಕೆ ಬಂದಿದೆ. ಮೆಗಾ ಮತ್ತು ಮಿನಿ ಇಂಡಸ್ಟ್ರಿಸ್‌ಗಳನ್ನು ಒಂದೇ ಸೂರಿನ ಅಡಿಯಲ್ಲಿ ತರುವ ಪ್ರಯತ್ನ ನಡೆದಿದೆ. ಕಲಬುರಗಿಯಲ್ಲಿ ನಿರ್ಮಾಣವಾಗುತ್ತಿರುವ ಪಿಎಂ ಮಿತ್ರ ನೂಲಿನಿಂದ ಬಟ್ಟೆ ಹಂತದವರೆಗೆ ಎಲ್ಲ ಚಟುವಟಿಕೆಗಳು ಪಾರ್ಕ್‌ನಲ್ಲಿ ಒಂದೇ ಸೂರಿನ ಅಡಿಯಲ್ಲಿ ಬರಲಿವೆ. ಈ ಯೋಜನೆ ಅನುಷ್ಠಾನವಾದರೆ ಕರ್ನಾಟಕದಲ್ಲಿ ಮೈಲಿಗಲ್ಲಾಗಲಿದೆ ಎಂದು ಶಿವಾನಂದ ಪಾಟೀಲ್ ಮಾಹಿತಿ ನೀಡಿದರು.

52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ

ವಿಧಾನ ಪರಿಷತ್: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿದ್ದು, ವಿವಿಧ ಇಲಾಖೆಗಳಲ್ಲಿ 52 ಸಾವಿರ ಹುದ್ದೆಗಳ ಭರ್ತಿಗೆ ಶೀಘ್ರ ಅಧಿಸೂಚನೆ ಹೊರಬೀಳಲಿದೆ. ಈ ಸಂಬಂಧ ಸರ್ಕಾರ ಮಟ್ಟದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಡಾ. ಎಂ.ಜಿ. ಮುಳೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬೀದರ ಜಿಲ್ಲೆಯಲ್ಲಿ 106 ಹುದ್ದೆಗಳೂ ಸೇರಿ ರಾಜ್ಯಾದ್ಯಂತ 823 ನಿಲಯ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆರ್ಥಿಕ ಇಲಾಖೆಯಿಂದ ಒಪ್ಪಿಗೆ ಸಿಗಬೇಕಿದೆ. ಉಳಿದಂತೆ ಖಾಲಿ ಇರುವ ಗ್ರೂ-ಡಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆದುಕೊಂಡು ಹಾಸ್ಟೆಲ್‌ಗಳನ್ನು ನಿರ್ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ರಾಜ್ಯದಲ್ಲಿ ವಾರ್ಷಿಕವಾಗಿ ಓಬಿಸಿ ಇಲಾಖೆಯಿಂದಲೇ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ 1.41 ಲಕ್ಷ ವಿದ್ಯಾರ್ಥಿಗಳ ಹಾಸ್ಟೆಲ್ ಪ್ರವೇಶಾತಿ ಬೇಡಿಕೆ ಇದೆ ಎಂದರು.



ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಳ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ರೈಲ್ವೆ ಕಾಮಗಾರಿಗಳಿಗೆ ಸರ್ಕಾರದಿಂದ ಹಿನ್ನಡೆ

ಹುಬ್ಬಳ್ಳಿ: ಧಾರವಾಡ-ಬೆಳಗಾವಿ ಮಧ್ಯೆ ರೈಲ್ವೆ ಮಾರ್ಗದ ಯೋಜನೆ ಕಾಮಗಾರಿಗೆ ರಾಜ್ಯ ಸರ್ಕಾರ ಭೂಸ್ವಾಧೀನಕ್ಕೆ ಸಹಕಾರ ನೀಡುತ್ತಿಲ್ಲ. ಇದರಿಂದ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದ್ದು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಟೈ ಹುಬ್ಬಳ್ಳಿ ಪದಾಧಿಕಾರಿಗಳು ಸರ್ಕಾರ ಮೇಲೆ ಒತ್ತಡ ಹಾಕಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ನಗರದಲ್ಲಿ ಶನಿವಾರ ಟೈ ಹುಬ್ಬಳ್ಳಿ ವತಿಯಿಂದ ಏರ್ಪಡಿಸಿದ್ದ ಟೈಕಾನ್-2026 ಉತ್ತರ ಕರ್ನಾಟಕ ರೈಸಿಂಗ್ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್‌ಗೆ ಸ್ಥಾಪನೆಯಾಗಿದ್ದು, ರಾಜ್ಯ ಸರ್ಕಾರ ಭೂಮಿ ದರ ಹೆಚ್ಚಿಸಿದೆ. ಇದರಿಂದ ಕೈಗಾರಿಕೋದ್ಯಮಿಗಳು ಮುಂದೆ ಬರುತ್ತಿಲ್ಲ. ಈ ಬಗ್ಗೆ ಸಂಸ್ಥೆಗಳು ಸರ್ಕಾರದ ಗಮನಕ್ಕೆ ತರಬೇಕು ಎಂದರು. ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗದ ಕಾಮಗಾರಿಗೆ ಶೀಘ್ರದಲ್ಲಿಯೇ ಅನುಮೋದನೆ ದೊರೆಯಲಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ಕೈಗಾರಿಕೋದ್ಯಮಿಗಳಿಗೆ ಬಹಳಷ್ಟು ಸಹಕಾರವಾಗಲಿದೆ. ಇದು ಬಂದರುಗಳಿಗೆ ಸಂಪರ್ಕದ ಕೊಂಡಿಯಾಗಲಿದ್ದು, ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು. ದೇಶದಲ್ಲಿ ವಾಣಿಜ್ಯೋದ್ಯಮಿಗಳಿಗೆ ಕೌಶಲ್ಯ ಬಹಳ ಅವಶ್ಯಕ. ದೇಶದ ಎಲ್ಲ ಕ್ಷೇತ್ರದಲ್ಲಿ ಅವಕಾಶಗಳು ತೆರೆದುಕೊಂಡಿವೆ. ಕೃತಕ ಬುದ್ಧಿಮತ್ತೆ(ಎಐ), ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರ ಬೆಳೆದಿವೆ. ದೇಶದಲ್ಲಿ ಮುಂದಿನ ಐದು ವರ್ಷದಲ್ಲಿ ಕೋಟ್ಯಾಂತರ ಉದ್ಯೋಗಸೃಷ್ಟಿಯಾಗಲಿವೆ. ಕೃಷಿಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗಲಿದೆ ಎಂದು ತಿಳಿಸಿದರು.

ದೇಶದಲ್ಲಿ 300ಕ್ಕೂ ಹೆಚ್ಚು ಮೊಬೈಲ್ ತಯಾರಿಕಾ ಕಂಪನಿಗಳಿದ್ದು, ವಿಶ್ವಕ್ಕೆ ಶೇ.30ರಷ್ಟು ಮೊಬೈಲ್‌ಗಳನ್ನು ಇಲ್ಲಿಂದ ರಫ್ತು ಮಾಡಲಾಗುತ್ತಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಬೇರೆ ರಾಜ್ಯಗಳಲ್ಲಿ ವಿದ್ಯುತ್ ದರ ಕಡಿಮೆಯಿದ್ದು, ರಾಜ್ಯದಲ್ಲಿ 90 ಪೈಸೆ ಹೆಚ್ಚಿಸಲಾಗಿದೆ. ಇದು ಕೈಗಾರಿಕೋದ್ಯಮಿಗಳಿಗೆ ಹೊರೆಯಾಗಲಿದೆ. ಭಾರತ ಉತ್ಪನ್ನಗಳಿಗೆ ವಿದೇಶದಲ್ಲಿ ಭಾರೀ ಬೇಡಿಕೆ ಇದೆ. ದೇಶದಲ್ಲಿ ವಿಮಾನ ನಿಲ್ದಾಣ, ರೈಲ್ವೆ ಮಾರ್ಗ, ರಸ್ತೆ ಸಂಪರ್ಕ ಮಾಡಿದ್ದರಿಂದ ಅಭಿವೃದ್ಧಿಗೆ ಸಹಕಾರವಾಗಿದೆ ಎಂದರು.

ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಟೈ ಇವತ್ತು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. 16 ವರ್ಷ ಹಿಂದೆ 5 ಜನ ಆರಂಭಿಸಿದ್ದೇವು. ಈಗ ಬಹಳ ಹೆಸರುಗಳಿಸಿದೆ. ನವೋದ್ಯಮಿಗಳಿಗೆ ಮಾರ್ಗ ದರ್ಶನ ಮಾಡಲಾಗುತ್ತಿದೆ. ಶಿಕ್ಷಣ ಸೇರಿದಂತೆ ನಾಲ್ಕು ಕ್ಷೇತ್ರದ ಒಳಗೊಂಡು ಮುಂದೆ ನಡೆದಿದೆ. ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವಂತೆ ವಾತಾವರಣ ನಿರ್ಮಾಣವಾಗಿದೆ. ಸ್ವಂತ ಯೋಜನೆ, ಆಲೋಚನೆಯಿಂದ ಅನೇಕರು ಉದ್ಯಮಿಗಳಾಗಿ ಬೆಳೆದಿದ್ದಾರೆ ಎಂದು ಹೇಳಿದರು.

ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಟೈ ಹುಬ್ಬಳ್ಳಿ ಅಧ್ಯಕ್ಷ ಗಿರೀಶ ಮಾನೆ, ವಿಶಾಲ ನಾಡ ಗೌಡರ, ವಿ.ಎಸ್. ವಿ ಪ್ರಸಾದ, ಅಮೃತ ಕಬಾಡೆ ಇದ್ದರು.

ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವ ಸೂಚನೆ

ಮಾ.28ರಂದು ಮೇಲುಕೋಟೆ ವೈರಮುಡಿ

ಮಂಡ್ಯ: ಮೇಲುಕೋಟೆಯಲ್ಲಿ ಪ್ರಮುಖ ಆಕರ್ಷಣೆಯಾದ ಮೇಲುಕೋಟೆ ವೈರಮುಡಿ ಉತ್ಸವ ಮಾ. 28ರಂದು ನಡೆಯಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ವಹಿಸುವಂತೆ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವೈರಮುಡಿ ಬ್ರಹ್ಮೋತ್ಸವದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾ. 23ರಿಂದ ಏ. 4ರವರೆಗೆ ವೈರಮುಡಿ ಉತ್ಸವ ನಡೆಯಲಿದ್ದು, ಉತ್ಸವದಲ್ಲಿ ಯಾವುದೇ ಲೋಪದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಮತ್ತು ಬಿಗಿ ಭದ್ರತೆ ಒದಗಿಸುವಂತೆ ಸೂಚಿಸಿದರು.

ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ



ಕಾರ್ಯಪ್ರವೃತ್ತರಾಗಬೇಕು ಎಂದು ತಿಳಿಸಿದರು.

ಪೊಲೀಸ್ ಇಲಾಖೆಯವರು ವೈರಮುಡಿ ಬ್ರಹ್ಮೋತ್ಸವದಲ್ಲಿ ಕಿರೀಟಧಾರಣಾ ಮೆರವಣಿಗೆಯ ಸಂದರ್ಭದಲ್ಲಿ ಶಾಂತಿಯುತವಾಗಿ ಹಾಗೂ ಸಮಾಧಾನವಾಗಿ ಜನರು ದೇವರು ನೋಡವಂತೆ ಅಗತ್ಯ ವ್ಯವಸ್ಥೆ ಮಾಡಬೇಕು. ಈ ಸಂಬಂಧ ದೇವಸ್ಥಾನದ ಅರ್ಚಕರೊಂದಿಗೆ ಸಭೆ ನಡೆಸಿ ಶಾಂತಿಯುತವಾಗಿ ನಡೆಯಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಭಕ್ತರಿಗೆ ಕುಡಿಯುವ ನೀರಿನ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ವೈರಮುಡಿ ಉತ್ಸವದಲ್ಲಿ ಜನಸಂದಣಿಯಾಗದಂತೆ ಬ್ಯಾರಿಕೇಡಿಂಗ್ ಅಳವಡಿಸಿ ಸಮಸ್ಯೆ ನಿವಾರಣೆಗೆ ಕ್ರಮ ವಹಿಸಬೇಕು ಎಂದುಹೇಳಿದರು. ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿ, ಈಗಾಗಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಭಕ್ತಾದಿಗಳಿಗೆ ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಮತ್ತು ಸಂಚಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಆರೋಗ್ಯ ಸೇವೆಗಳು, ಸಾರಿಗೆ ವ್ಯವಸ್ಥೆ (ಕೆ.ಎಸ್.ಆರ್.ಟಿ.ಸಿ. ಬಸ್‌ಗಳು) ಮತ್ತು ಬಿಗಿ ಪೊಲೀಸ್ ಬಂದೋಬಸ್ತ್‌ಗೆ ಸಭೆಯಲ್ಲಿ ಆದ್ಯತೆ ನೀಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ವಿ.ಜೆ. ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಉಪವಿಭಾಗಾಕಾರಿ ಶ್ರೀನಿವಾಸ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ತಾಯಿಗೆ ವಾಕಿಂಗ್ ಸ್ಟಿಕ್‌ನಿಂದ ಹಲ್ಲೆ

ಬೆಂಗಳೂರು: ಆಸ್ತಿ ವಿಚಾರವಾಗಿ ನಡೆದ ಜಗಳದಲ್ಲಿ ಮಗನೇ ತಾಯಿ ಮೇಲೆ ವಾಕಿಂಗ್ ಸ್ಟಿಕ್‌ನಿಂದ ಹಲ್ಲೆ ನಡೆಸಿ ತಲೆಗೆ ಗಂಭೀರ ಗಾಯಗೊಳಿಸಿರುವ ಘಟನೆ ನಗರದ ತಿಲಕನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಜಯನಗರದ ನಿವಾಸಿ ಲಕ್ಷ್ಮೀ (65) ಹಲ್ಲೆಗೊಳಗಾದ ವೃದ್ಧೆ. ಲಕ್ಷ್ಮೀ ಮತ್ತು ಸಣ್ಣಸಿದ್ದಪ್ಪ ದಂಪತಿಗೆ ಮೂವರು ಗಂಡು ಮಕ್ಕಳು. ಪತಿ ಸಣ್ಣಸಿದ್ದಪ್ಪ ಹಾಗೂ ಎರಡನೇ ಮಗ ಸುರೇಶ್ ಈಗಾಗಲೇ ಮೃತಪಟ್ಟಿದ್ದಾರೆ. ಕುಟುಂಬವು ಜಯನಗರದಲ್ಲಿ ಮನೆ, ಬನ್ನೇರುಘಟ್ಟದ ಬಳಿ ಫ್ಯಾಕ್ಟರಿ ಹಾಗೂ ಶಿರಾ ತಾಲ್ಲೂಕಿನಲ್ಲಿ 7 ಎಕರೆ ಜಮೀನು ಹೊಂದಿತ್ತು. ಈ ಆಸ್ತಿ ಹಂಚಿಕೆ ವಿಚಾರವಾಗಿ ಮೊದಲ ಮಗ ರಮೇಶ್ ಮತ್ತು ಮೂರನೇ ಮಗ ಪ್ರಕಾಶ್ ನಡುವೆ ದೀರ್ಘಕಾಲದಿಂದ ವಿವಾದವಿತ್ತು. ಪ್ರಕಾಶ್ ಆಸ್ತಿ ಪಾಲಿಗಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, 2016 ರಿಂದ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಜಯನಗರದ 9ನೇ ಬ್ಲಾಕ್‌ನಲ್ಲಿರುವ ಮನೆಗೆ ಗುರುವಾರ ಬಂದ ಪ್ರಕಾಶ್, ಏಕಾಏಕಿ ಮನೆಯ ನವೀಕರಣ ಕಾರ್ಯ ಆರಂಭಿಸಲು ಮುಂದಾಗಿದ್ದಾನೆ. ಈ ವೇಳೆ ತಾಯಿ ಲಕ್ಷ್ಮೀ ಅವರು, ಪ್ರಕರಣ ನ್ಯಾಯಾಲಯದಲ್ಲಿರುವಾಗ ನವೀಕರಣ ಮಾಡುವುದು ಬೇಡ ಎಂದು ತಡೆದಿದ್ದಾರೆ. ಇದರಿಂದ ಕೆರಳಿದ ಪ್ರಕಾಶ್ ಮನೆಯಲ್ಲಿದ್ದ ಪೀಠೋಪಕರಣಗಳನ್ನು ಧ್ವಂಸಗೊಳಿಸಿದ್ದಲ್ಲದೆ, ತಾಯಿಯ ವಾಕಿಂಗ್ ಸ್ಟಿಕ್‌ನಿಂದಲೇ ಅವರ ತಲೆಗೆ ಬಲವಾಗಿ ಹೊಡೆದಿದ್ದಾನೆ. ಹಲ್ಲೆಯಿಂದಾಗಿ ತೀವ್ರ ರಕ್ತಸ್ರಾವವಾಗಿ ಲಕ್ಷ್ಮೀ ಅವರು ಸ್ಥಳದಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಕೂಡಲೇ ಮೊದಲ ಮಗ ರಮೇಶ್ ಅವರನ್ನು ಜಯನಗರ ಜನರಲ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸದ್ಯ ಅವರ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ಮುಂದುವರಿದಿದೆ. ಘಟನೆಗೆ ಸಂಬಂಧಿಸಿದಂತೆ ತಿಲಕನಗರ ಪೊಲೀಸರು ಆರೋಪಿ ಪ್ರಕಾಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಕೃತ್ಯದ ಬಳಿಕ ತಲೆಮರೆಸಿಕೊಂಡಿರುವ ಆರೋಪಿಗಾಗಿ ಶೋಧ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಪಿಯು ಪರೀಕ್ಷೆ: 9,780 ವಿದ್ಯಾರ್ಥಿಗಳು ಗೈರು

ಬೆಂಗಳೂರು: ಶನಿವಾರ ದ್ವಿತೀಯ ಪಿಯುಸಿ ಪರೀಕ್ಷೆ-1ರ ಲೆಕ್ಕಶಾಸ್ತ್ರ ಮತ್ತು ಗಣಿತ ಪರೀಕ್ಷೆ ಸುಸೂತ್ರವಾಗಿ ನಡೆದಿದೆ. ಒಟ್ಟು 9,780 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಪರೀಕ್ಷೆಗೆ ಒಟ್ಟು 5,22,914 ಮಂದಿ ಈ ವಿಷಯಗಳಿಗೆ ನೋಂದಣಿ ಮಾಡಿಕೊಂಡಿದ್ದು 5,13,134 ಮಂದಿ ಪರೀಕ್ಷೆಗೆ ಹಾಜರಾಗಿದ್ದಾರೆ. ಈ ಮೂಲಕ ಶೇ. 98.13 ರಷ್ಟು ಹಾಜರಾತಿ ದಾಖಲಾಗಿದೆ. ಬೆಂಗಳೂರು ಉತ್ತರ 1,124, ಬೆಂಗಳೂರು ದಕ್ಷಿಣ 1,047, ಬೀದರ್ 731, ಕಲಬುರಗಿ 683, ವಿಜಯಪುರ 522, ತುಮಕೂರು 423, ಮೈಸೂರು 415 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗರಿಷ್ಠ ಗೈರು ಹಾಜರಾಗಿದ್ದಾರೆ. ಉಡುಪಿ ಜಿಲ್ಲೆಯಲ್ಲಿ 47 ವಿದ್ಯಾರ್ಥಿಗಳು ಕನಿಷ್ಠ ಗೈರಾಗಿದ್ದಾರೆ. ಕಳೆದ ಫೆ.28 ರಿಂದ ಪ್ರಾರಂಭವಾದ ಪಿಯು ಪರೀಕ್ಷೆ, ಈವರೆಗೂ 13 ಪರೀಕ್ಷೆಗಳು ನಡೆದಿವೆ. ಮಾ. 16 ರಂದು ಸಮಾಜಶಾಸ್ತ್ರ, ಜೀವಶಾಸ್ತ್ರ ಹಾಗೂ ಗಣಕ ವಿಜ್ಞಾನ ವಿಷಯದ ಪರೀಕ್ಷೆ ನಡೆಯಲಿದೆ.

ವೈದ್ಯಕೀಯ ಅರ್ಹತೆ ಇಲ್ಲದಿದ್ದರೂ ಶಸ್ತ್ರಚಿಕಿತ್ಸೆ

ಬೆಂಗಳೂರು: ವೈದ್ಯಕೀಯ ಅರ್ಹತೆಯಿಲ್ಲದೇ ಫಿಸ್ಟುಲಾ ಶಸ್ತ್ರಚಿಕಿತ್ಸೆ ಮಾಡಿರುವುದು ವಂಚನೆಯಲ್ಲದೆ ಮತ್ತೇನು ಎಂದು ಪ್ರಶ್ನಿಸಿರುವ ಹೈಕೋರ್ಟ್, ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಆದೇಶ ಕಾಯ್ದಿರಿಸಿದೆ. ಕಾನೂನುಬಾಹಿರವಾಗಿ ಕ್ಲಿನಿಕ್ ನಡೆಸುತ್ತಿರುವುದು ಮತ್ತು ಜನರಿಗೆ ವಂಚಿಸಿದ ಆರೋಪದ ಮೇಲೆ ಚಿತ್ರದುರ್ಗದ ಹಿರಿಯೂರು ತಾಲೂಕಿನ ನಯನಾ ಕ್ಲಿನಿಕ್‌ನ ಎಂ.ಕೆ. ಮಡಲ್ ವಿರುದ್ಧ ಹಿರಿಯೂರಿನ ಟೌನ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಆದೇಶ ಕಾಯ್ದಿರಿಸಿದೆ. ವಿಚಾರಣೆ ಆರಂಭವಾಗುತ್ತಿದ್ದಂತೆ ಪೀಠವು ಯಾರು ಯಾರನ್ನು ವೈದ್ಯರು ಎಂದು ಕರೆದುಕೊಳ್ಳಬಹುದು? ಅನುಭವಿ ಮತ್ತು ವಂಶಪಾರಂಪರಿಕ ವೈದ್ಯರ ಸಂಘದಿಂದ ಸರ್ಟಿಫಿಕೇಟ್ ಪಡೆಯಲಾಗಿದೆ. ಅರ್ಜಿದಾರರಿಗೆ ಡಾಕ್ಟರೇಟ್ ನೀಡಿದ್ದು ಯಾರು? ಪಾರಂಪರಿಕ, ನಾಟಿ, ಆರ್‌ಎಂಪಿ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್ ಎಂದು ಹೇಳಿದ್ದೀರಿ. ಪಿಎಂಪಿ ಎಂದರೆ ಪೈಲ್ಸ್ ಮೆಡಿಕಲ್ ಪ್ರಾಕ್ಟಿಷನರೇ? ಡಾಕ್ಟರ್ ಫಿಸ್ಟುಲಾ ಅರ್ಹತೆ ಇಲ್ಲದೇ ಫಿಸ್ಟುಲಾ ಶಸ್ತ್ರಚಿಕಿತ್ಸೆ ಮಾಡಿದ್ದೀರಿ. ಇದು ವಂಚನೆಯಲ್ಲದೇ ಇನ್ನೇನು? ಎಂದು ಪ್ರಶ್ನಿಸಿತು. ಕ್ಲಿನಿಕ್‌ನಲ್ಲಿ ಕುಲ್ಟಾಬ್ ಟ್ಯಾಬ್ಲೆಟ್, ಸರ್ಜಿಕಲ್ ಸ್ಪಿರಿಟ್, ಸೀಸರ್ಸ್ ಸಿಕ್ಕಿದೆ. ಶಸ್ತ್ರಚಿಕಿತ್ಸೆಯನ್ನೇ ಮಾಡುವುದಿಲ್ಲ ಎನ್ನುವುದಾದರೆ ಇದೆಲ್ಲಾ ಏತಕ್ಕಾಗಿ ಕ್ಲಿನಿಕ್‌ನಲ್ಲಿ ಸಿಕ್ಕಿದೆ? ಫಿಸ್ಟುಲಾ ಸರ್ಜರಿ ಮಾಡೋಣ ಎಂದು ಲಘುದಾಟಿಯಲ್ಲಿ ಪೀಠ ಮೌಖಿಕವಾಗಿ ಹೇಳಿತು. ಅರ್ಜಿದಾರರ ಪರ ವಕೀಲರು ಕೆಪಿಎಂ ಕಾಯ್ದೆಯ ಸೆಕ್ಷನ್ 4ರ ಅಡಿ ಅರ್ಜಿದಾರರಿಗೆ ಸರ್ಟಿಫಿಕೇಟ್ ನೀಡಲಾಗಿದೆ. ಅಲೋಪಥಿಗಿಂತ ಇಲ್ಲಿನ ಚಿಕಿತ್ಸಾ ವಿಧಾನ ಪರಿಣಾಮಕಾರಿಯಾಗಿದೆ ಎಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು ಆದೇಶ ಕಾಯ್ದಿರಿಸಿತು.

ಒಂದೇ ಬೀದಿ, ಲೇಔಟ್ , ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಬೇರೆ ಬೇರೆ ಮತಗಟ್ಟೆ: ಬಿಎನ್‌ಪಿ ಆರೋಪ

ಪಾಲಿಕೆ ಕರಡು ಮತಪಟ್ಟಿಯಲ್ಲಿ ದೋಷ

ಬೆಂಗಳೂರು: ಮುಂಬರುವ ಪಾಲಿಕೆ ಚುನಾವಣೆಗೆ ಸಿದ್ಧಪಡಿಸಲಾದ ಕರಡು ಮತದಾರರ ಪಟ್ಟಿಯಲ್ಲಿ ದೊಡ್ಡ ಪ್ರಮಾಣದ ವ್ಯವಸ್ಥಿತ ಲೋಪದೋಷ ಕಂಡು ಬಂದಿದೆ. ಒಂದೇ ಬೀದಿ, ಲೇಔಟ್ ಅಥವಾ ಅಪಾರ್ಟ್‌ಮೆಂಟ್ ಸಂಕೀರ್ಣಗಳ ನಿವಾಸಿಗಳನ್ನು ಬೇರೆ ಬೇರೆ ಮತಗಟ್ಟೆಗಳಿಗೆ ಹಂಚಿಕೆ ಮಾಡಲಾಗಿದೆ.

ಇದರಿಂದಾಗಿ ಮತದಾರರು ತಪ್ಪು ವಾರ್ಡ್‌ಗಳಿಗೆ ಸೇರಿಹೋಗಿರುವುದು ಆತಂಕಕಾರಿ ವಿಷಯವಾಗಿದೆ ಎಂದು ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) ಕಳವಳ ವ್ಯಕ್ತಪಡಿಸಿದೆ.

ನೂರಾರು ಮತದಾರರು ಪ್ರಸ್ತುತ ತಾವು ವಾಸಿಸದ ವಾರ್ಡ್‌ಗಳಲ್ಲಿ ಮತದಾನ ಮಾಡುವಂತಾಗಿದ್ದು, ಇದು ಸ್ಥಳೀಯ ಪ್ರಜಾಪ್ರಭುತ್ವ ಪ್ರಕ್ರಿಯೆಯ ತಳಹದಿಗೆ ಧಕ್ಕೆ ತರುವಂತಿದೆ. ಈ ಸಮಸ್ಯೆಯನ್ನು ಪರಿಹರಿಸಲು ಚುನಾವಣಾ ಆಯೋಗಕ್ಕೆ ವಿವರವಾದ ಪೂರಕ ಮಾಹಿತಿಯನ್ನು ಸಲ್ಲಿಸಿದ್ದು, ಸರಿಯಾದ ವಿಭಾಗೀಕರಣ ಇಲ್ಲದಿರುವುದೇ ಇದಕ್ಕೆ ಮೂಲ ಕಾರಣ ಎಂದು ತಿಳಿಸಿದೆ. ಭಾರತೀಯ ಚುನಾವಣಾ ಆಯೋಗದ ಕೈಪಿಡಿಯ ಪ್ರಕಾರ, ಒಂದೇ ಭೌಗೋಳಿಕ ಪ್ರದೇಶದ ನಿವಾಸಿಗಳನ್ನು (ಅಪಾರ್ಟ್ ಮೆಂಟ್ ಸಂಕೀರ್ಣ ಅಥವಾ ಬೀದಿ) ಮತಗಟ್ಟೆಯ ಒಂದೇ ವಿಭಾಗದ ಅಡಿಯಲ್ಲಿ ಗುಂಪು ಮಾಡುವುದು ಕಡ್ಡಾಯವಾಗಿದೆ ಎಂದು ಬಿಎನ್‌ಪಿ ತಿಳಿಸಿದೆ. ಕ್ಷೇತ್ರದಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಸೂಕ್ತ ಮಾಹಿತಿಯ ಕೊರತೆಯಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ .ಮತದಾರರ ವಿಂಗಡಣೆಯ ಜವಾಬ್ದಾರಿಯನ್ನು ಹೊತ್ತಿರುವ ಮೇಲ್ವಿಚಾರಕರು ಮತ್ತು ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ), ಪೂರ್ಣ ವಿಳಾಸದ ಮಾಹಿತಿ ಹೊಂದಿಲ್ಲದಿರುವುದರಿಂದ ತಮ್ಮ ಕರ್ತವ್ಯವನ್ನು ನಿಖರವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಬಿಎನ್‌ಪಿ ಮಾಹಿತಿ ನೀಡಿದೆ. ಚುನಾವಣಾ ಆಯೋಗವು ಮತದಾರರ ಪಟ್ಟಿಯ ಸರಿಯಾದ ವಿಭಾಗೀಕರಣ ಮೂಲಕ ವ್ಯವಸ್ಥಿತ ಮಟ್ಟದ ತಿದ್ದುಪಡಿಯನ್ನು ಕೈಗೊಳ್ಳಬೇಕು ಮತ್ತು ಬೀದಿ, ಲೇಔಟ್ ಹಾಗೂ ಅಪಾರ್ಟ್‌ಮೆಂಟ್ ಸಂಕೀರ್ಣಗಳ ಆಧಾರದ ಮೇಲೆ ಮತದಾರರನ್ನು ತಾರ್ಕಿಕವಾಗಿ ಗುಂಪು ಮಾಡಬೇಕು. ಮತದಾರರ ಪಟ್ಟಿಯು ಪ್ರಜಾಪ್ರಭುತ್ವದ ಅಡಿಪಾಯವಾಗಿದ್ದು, ಚುನಾವಣೆ ನಡೆಸುವ ಮೊದಲು ಅವು ರಚನಾತ್ಮಕವಾಗಿ ಸರಿಯಾಗಿರಬೇಕೆಂದು ಬಿಎನ್‌ಪಿ ಆಗ್ರಹಿಸಿದೆ.





> ಒಂದೇ ಮತಗಟ್ಟೆಯ ವ್ಯಾಪ್ತಿಯಲ್ಲಿರುವ ಮತದಾರರು ಭೌಗೋಳಿಕವಾಗಿ ಬೇರೆ ಬೇರೆ ವಾರ್ಡ್‌ಗಳಿಗೆ ಸೇರಿದ್ದರೂ ಸಹ, ಇಡೀ ಮತಗಟ್ಟೆಯನ್ನೇ ಒಂದು ನಿರ್ದಿಷ್ಟ ವಾರ್ಡ್‌ಗೆ ತಪ್ಪಾಗಿ ಸೇರಿಸಲಾಗುತ್ತಿದೆ.
> ■ ಶ್ರೀಕಾಂತ್ ನರಸಿಂಹನ್, ಬಿಎನ್‌ಪಿ ಸ್ಥಾಪಕ

ಆಕ್ಷೇಪಣೆ ಸಲ್ಲಿಸಲು ಅವಕಾಶ

ಪರಿಷ್ಕೃತ ಕರಡು ಮತದಾರರ ಪಟ್ಟಿ ಪ್ರಕಟಣೆಗೆ ಸಂಬಂಧಿಸಿದಂತೆ ಅಹವಾಲು ಮತ್ತು ಆಕ್ಷೇಪಣೆ ಸಲ್ಲಿಸಲು ಸಂಬಂದಪಟ್ಟ ಕ್ಷೇತ್ರಗಳ ವ್ಯಾಪ್ತಿಗೊಳಪಡುವ ಮತದಾರರ ನೋಂದಣಾಧಿಕಾರಿ, ಕಂದಾಯ ಅಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಲು ಸಾರ್ವಜನಿಕರಲ್ಲಿ ಪಾಲಿಕೆ ಆಯುಕ್ತರು ಮನವಿ ಮಾಡಿದ್ದಾರೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಅಧಿಕಾರಿಗಳೊಂದಿಗೆ ನಡೆದ ಸಭೆ ನಡೆದೆ. ಪಾಲಿಕೆ ಆಯುಕ್ತರು ಜಿಬಿಎ ಸಾರ್ವತ್ರಿಕ ಚುನಾವಣೆ-2026 ಕ್ಕೆ ಸಂಬಂಧಿಸಿದಂತೆ ಕರಡು ಮತದಾರರ ಪಟ್ಟಿಯನ್ನು ಪ್ರಚುರ ಪ್ರಕಟಿಸಲಾಗಿದೆ. ಲೋಪದೋಷಗಳಿದ್ದರೆ ಅಹವಾಲು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಒಂದೇ ಕುಟುಂಬದ ಮತದಾರರು ಬೇರೆ ಮತಗಟ್ಟೆಗೆ, ಬೇರೆ ವಾರ್ಡ ಗಳಿಗೆ ವಿಭಜನೆಯಾಗಿದಲ್ಲಿ, ಮತದಾರರ ಅದಲು-ಬದಲು ಆಗಿರುವುದು ಹಾಗೂ ಮತದಾರರು ಭೌಗೋಳಿಕವಾಗಿ ಒಂದೇ ವಾರ್ಡ್ ನಲ್ಲಿ ವಾಸವಾಗಿದ್ದು, ಮತ್ತೊಂದು ವಾರ್ಡ್ ಮತಗಟ್ಟೆಯಲ್ಲಿ ಸೇರ್ಪಡೆಗೊಂಡಿದ್ದಲ್ಲಿ ಅಹವಾಲು ಆಕ್ಷೇಪಣೆ ಸಲ್ಲಿಸಬಹುದಾಗಿದೆ.

ಒಗ್ಗಟ್ಟಿನಿಂದ ರಾಜುಕ್ಷತ್ರಿಯ ಸಮಾಜಕ್ಕೆ ಬಲ: ಬೋಸರಾಜು



ಬೆಂಗಳೂರು: ನಮ್ಮ ರಾಜು ಕ್ಷತ್ರಿಯ ಸಮುದಾಯದ ಆರ್ಥಿಕ, ಸಾಮಾಜಿಕ, ರಾಜಕೀಯ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗೂಡಬೇಕಾದ ಅವಶ್ಯಕತೆ ಇದೆ ಎಂದು ಯುವ ಕಾಂಗ್ರೆಸ್ ಮುಖಂಡ ರವಿ ಬೋಸರಾಜು ಹೇಳಿದರು.

ರಾಜು ಕ್ಷತ್ರೀಯ ಸಂಘವು ಯುಗಾದಿ ಹಬ್ಬದ ಪ್ರಯುಕ್ತ ಜಯನಗರದ ಚಾಮರಾಜು ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಸಮುದಾಯವು ಹಿಂದುಳಿದ ವರ್ಗಗಳಿಗೆ ಸೇರಲಿದೆ. ರಾಜ್ಯದಲ್ಲಿ 48 ಲಕ್ಷ ಜನರು ಈ ಹಿಂದುಳಿದ ವರ್ಗದಲ್ಲಿದ್ದಾರೆ. ನಮ್ಮಲ್ಲೇ ಆರು ಸಂಘಟನೆಗಳಿವೆ. ನಾವು ಪಕ್ಷಬೇಧ ಮರೆತು, ಸಮುದಾಯದ ಏಳಿಗಾಗಿ ಒಂದೇ ಸಂಘಟನೆಯನ್ನು ಬಲಿಷ್ಟಪಡಿಸಿ ಮುನ್ನಡೆಸಿಕೊಂಡು ಹೋಗಬೇಕಿದೆ ಎಂದು ಕರೆ ನೀಡಿದರು. ಅಖಿಲ ಭಾರತೀಯ ಕ್ಷತ್ರಿಯ ಒಕ್ಕೂಟದ ಅಧ್ಯಕ್ಷ ಪಿ.ವಿ.ಗಿರಿ ಮಾತನಾಡಿ, ನಮ್ಮ ಸಮುದಾಯದಲ್ಲಿರುವ ಜನ ಸಂಖ್ಯೆ ಕಡಿಮೆಯಿದ್ದು, ಇದರಲ್ಲೂ ನಾವು ಒಡಕು ತೋರಿಸಿಕೊಳ್ಳಬಾರದು.

> ಯುಗಾದಿ ಪ್ರಯುಕ್ತ ರಾಜು ಕ್ಷತ್ರಿಯ ಸಂಘದಿಂದ ಸನ್ಮಾನ

ಎಲ್ಲರೂ ಸಮುದಾಯದ ಒಳಿತಿಗಾಗಿ ಒಗ್ಗೂಡಬೇಕು. ನಮ್ಮ ಸಮುದಾಯದವರು ಅನೇಕ ಮಂದಿ ವೈದ್ಯರಾಗಿರುವುದು ನಮ್ಮ ಸಮುದಾಯಕ್ಕೆ ಹೆಮ್ಮೆಯ ವಿಚಾರವಾಗಿದೆ. ಬಡವರ ಸೇವೆ ಮಾಡುವ ಮೂಲಕ ಹಿಂದುಳಿದವರ ಏಳಿಗೆಗಾಗಿ ಶ್ರಮಿಸುವಂತಾಗಲಿ ಎಂದು ಶುಭ ಹಾರೈಸಿದರು. ಇದೇ ವೇಳೆ ಸಮುದಾಯದ 50ಕ್ಕೂ ಹೆಚ್ಚಿನ ವೈದ್ಯರನ್ನು ಗುರುತಿಸಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಗಣೇಶ ರಾಜು, ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಚಂದ್ರಶೇಖರರಾಜು,ಕಾರ್ಯಾಧ್ಯಕ್ಷ ಕೆ.ಬಾಬು ರಾಜು ಸೇರಿದಂತೆ ಇತರರಿದ್ದರು.

ಸ್ತ್ರೀ ನಾವೀನ್ಯತೆ ಯೋಜನೆ ಪರಿಚಯ

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯ (ವಿಟಿಯು), ವಿಶ್ವೇಶ್ವರಯ್ಯ ಸಂಶೋಧನಾ ಮತ್ತು ನಾವೀನ್ಯತೆಯ ಕೇಂದ್ರ (ವಿಆರ್‌ಐಎಫ್) ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರ ಸಬಲೀಕರಣಕ್ಕಾಗಿ ಸ್ತ್ರೀ ನಾವೀನ್ಯತೆ ಎಂಬ ಹೊಸ ಯೋಜನೆಯನ್ನು ಪರಿಚಯಿಸಿದೆ.



> ವಿಟಿಯು, ವಿಆರ್‌ಐಎಫ್ ಆಶ್ರಯದಲ್ಲಿ ಮಹಿಳಾ ದಿನಾಚರಣೆ

ಇತ್ತೀಚಿಗೆ ಈ ಯೋಜನೆಗೆ ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಚಾಲನೆ ನೀಡಿದ್ದು, ಈ ಯೋಜನೆಗೆ ವಿಪ್ರೋ, ಜಾನ್ ಎಐ, ಯುಎನ್ ವುಮೇನ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ), ಟಿಐಇ ಚಾಪ್ಟರ್ ಸಹಕಾರವನ್ನು ನೀಡಿದೆ.

ಗ್ರಾಮೀಣ ಮತ್ತು ಜಿಲ್ಲಾ ಹಂತಗಳಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಪರಿಹಾರ ಕಲ್ಪಿಸಿಕೊಡುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ವಿಟಿಯು ವ್ಯಾಪ್ತಿಯಲ್ಲಿ 220 ಇಂಜಿನಿಯರಿಂಗ್ ಕಾಲೇಜುಗಳಿವೆ. ಇದರಲ್ಲಿ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಪ್ರತಿ ಕಾಲೇಜಿನಿಂದ 80 ವಿದ್ಯಾರ್ಥಿನಿಯರನ್ನು ಈ ಯೋಜನೆಗೆ ನೋಂದಾಯಿಸಿಕೊಳ್ಳುವುದಕ್ಕೆ ಅವಕಾಶ ನೀಡಲಿದೆ. ವಿದ್ಯಾರ್ಥಿನಿಯರಿಗೆ ವಿವಿಧ ಹಂತಗಳಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸ್ಪರ್ಧೆ ನಡೆಸಲಿದೆ. ಅಂತಿಮವಾಗಿ 100 ವಿದ್ಯಾರ್ಥಿನಿಯರನ್ನು ಈ ಯೋಜನೆಗೆ ಆಯ್ಕೆ ಮಾಡಿಕೊಳ್ಳಲಿದೆ.

ವಿದ್ಯಾರ್ಥಿನಿಯರು ರೂಪಿಸಿರುವ ಪ್ರೋಟೋ ಟೈಪ್ ಮಾಡೆಲ್‌ಗಳಿಗೆ ಆರ್ಥಿಕ ಸಹಾಯ ನೀಡುವ ಮೂಲಕ ಅವರ ಯೋಜನೆಗಳನ್ನು ದೊಡ್ಡಮಟ್ಟದಲ್ಲಿ ಅನುಷ್ಠಾನಕ್ಕೆ ವಿಟಿಯು ವೇದಿಕೆಯಾಗಲಿದೆ.

ಈ ಕುರಿತು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಮಾತನಾಡಿ, ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಅವರ ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಸಲುವಾಗಿ ಈ ಯೋಜನೆ ರೂಪಿಸಿದ್ದೇವೆ. ಇದರ ಸಹಾಯಕ್ಕಾಗಿ ಹಲವಾರು ಕಂಪನಿಗಳು ಮುಂದೆ ಬಂದಿದ್ದೇವೆ. ವಿದ್ಯಾರ್ಥಿನಿಯರಿಗೆ ಮೆಂಟರ್ ಸಹ ನೀಡುತ್ತೇವೆ. ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗೆ ಮೊದಲ ಆದ್ಯತೆ ನೀಡುತ್ತೇವೆ ಎಂದರು.

ಜಸ್ಟೀಸ್ ಲೀಗಲ್ ಅಡ್ವೈಸರ್ಸ್ ಕಚೇರಿಯಲ್ಲಿ ಮಹಿಳಾ ದಿನಾಚರಣೆ

ಶಿಕ್ಷಣದಿಂದ ಮಹಿಳೆಯರ ಪ್ರಗತಿ

ಆನೇಕಲ್: ನಾವೆಲ್ಲರೂ ಮಹಾತ್ಮರ ಹಾದಿಯಲ್ಲಿ ಸಾಗುವ ಮೂಲಕ ಜ್ಞಾನವಂತರಾಗಿ ಎಲ್ಲ ಸಮಸ್ಯೆಯನ್ನು ಹಿಮ್ಮೆಟ್ಟಿಸಿ ಸಾಧನೆಯ ಹಾದಿಯಲ್ಲಿ ಸಾಗಬೇಕೆಂದು ರಾಷ್ಟ್ರಪತಿ ಪುರಸ್ಕೃತ ಡಾ.ಚಿನ್ನಪ್ಪ ವೈ.ಚಿಕ್ಕಹಾಗಡೆ ತಿಳಿಸಿದರು.



ಪ್ರಜಾತಾರೆ ಬಳಗ, ಗಂಧದನಾಡು ಜನಪರ ವೇದಿಕೆಯಿಂದ ಪಟ್ಟಣದ ಜಸ್ಟೀಸ್ ಲೀಗಲ್ ಅಡ್ವೈಸರ್ಸ್ ಕಚೇರಿಯಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳಾ ಸಮುದಾಯ ಶಿಕ್ಷಣ ಕಲಿಯುವ ವ್ಯವಸ್ಥೆ ಇರಲಿಲ್ಲ. ಅಂಬೇಡ್ಕರ್ ರೂಪಿಸಿದ ಸಂವಿಧಾನದಿಂದಾಗಿ ಪ್ರತಿಯೊಬ್ಬರೂ ಶಿಕ್ಷಣ ಪಡೆಯುವಂತಾಯಿತು. ಹಾಗಾಗಿ ಸಮಾಜ ಸುಧಾರಕರ ಆಶಯದಂತೆ ನಾವೆಲ್ಲರೂ ಉತ್ತಮ ಜ್ಞಾನವಂತರಾಗಬೇಕೆಂದು ತಿಳಿಸಿದರು.

ಶತಮಾನದಿಂದ ಶಿಕ್ಷಣದಿಂದ ವಂಚಿತರಾಗಿದ್ದ ಮಹಿಳಾ ಸಮುದಾಯದಿಂದು ಶಿಕ್ಷಣ ವೃತ್ತಿಯಿಂದ ರಾಷ್ಟ್ರಪತಿ ಹುದ್ದೆವರೆಗೂ ಸಾಗಿ ಬಂದಿದ್ದಾರೆ. ಇದರ ನಡುವೆಯೂ ಮಹಿಳಾ ಸಮುದಾಯದ ಮೇಲೆ ಅತ್ಯಾಚಾರ, ಹಲ್ಲೆ ಪ್ರಕರಣ ಹೆಚ್ಚಾಗುತ್ತಿದೆ. ಇವೆಲ್ಲ ಸಮಸ್ಯೆಯನ್ನು ಮೀರಿ ಮಹಿಳೆಯರು ಸಾಧನೆಯ ಪಥದತ್ತ ಸಾಗಲಿ. ಅವರ ಬೆಂಬಲಕ್ಕೆ ನಾವೆಲ್ಲರೂ ಇರುತ್ತೇವೆಂದು ಅವರು ವಿಶ್ವಾಸವ್ಯಕ್ತಪಡಿಸಿದರು. ಶಿಕ್ಷಕಿ ಅಮೃತಾ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ವಿದ್ಯಾರ್ಥಿಗಳಾಗುವ ಮೂಲಕ ತಮ್ಮ ತಂದೆ ತಾಯಿ, ಶಿಕ್ಷಕರಿಗೆ ಹಾಗೂ ಊರಿಗೆ ಕೀರ್ತಿ ತರಬೇಕು. ಆ ನಿಟ್ಟಿನಲ್ಲಿ ನಾವೆಲ್ಲರೂ ನಿಮ್ಮ ಬೆಂಬಲಕ್ಕೆ ಇರುತ್ತವೆ ಎಂದು ಹೇಳಿದರು. ಹಿರಿಯ ವಕೀಲ ಶಿವರಾಜ್ ಮಾತನಾಡಿ, ಸರಕಾರಿ ಶಾಲೆಯಲ್ಲಿ ಉತ್ತಮ ಶಿಕ್ಷಕರಿದ್ದಾರೆ. ಅವರಿಂದ ಪಾಠ ಕಲಿಯುತ್ತಿರುವ ವಿದ್ಯಾರ್ಥಿಗಳೆ ಅದೃಷ್ಟಾವಂತರು. ಶಾಲಾ-ಕಾಲೇಜುಗಳಲ್ಲಿ ಉತ್ತಮ ಅಂಕ ಪಡೆಯುವ ಮೂಲಕ ಉತ್ತಮ ಹುದ್ದೆಯನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮುಖ್ಯಶಿಕ್ಷಕಿ ಪದ್ಮಾವತಿ ಮಾತನಾಡಿದರು. ಶಿಕ್ಷಕ ಪುಟ್ಟರಾಜು, ವಕೀಲ ಪುರುಷೋತ್ತಮ್, ಹೋರಾಟಗಾರರಾದ ಮಮತಾ, ವಕೀಲೆ ಅನುರಾಧಾ, ಅಂಬುಜಾ, ಆಶಾ, ಗಂಧದ ನಾಡು ಜನಪರ ವೇದಿಕೆ ಸ್ವಾಭಿಮಾನಿ ಸತೀಶ್, ಸರಿತಾ, ಶಾಂತಿ ಸೇರಿದಂತೆ ಹಲವರಿದ್ದರು.

ನೇಣು ಬಿಗಿದು ಸಾವು ಎಂದು ಕತೆ ಕಟ್ಟಿದವನ ಬಂಧನ

ಸಹಜೀವನದಲ್ಲಿದ್ದ ಗೆಳತಿಯ ಹತ್ಯೆ

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ, ಸಹಜೀವನ ನಡೆಸುತ್ತಿದ್ದ ಗೆಳತಿಯನ್ನು ಹತ್ಯೆ ಮಾಡಿ ನೇಣು ಬಿಗಿದುಕೊಂಡಿರುವುದಾಗಿ ಕಥೆ ಕಟ್ಟಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.



ರಂಜಿತಾ (23) ಕೊಲೆಯಾದ ಯುವತಿ. ಆಕೆಯ ತಾಯಿ ನೀಡಿದ ದೂರಿನ ಮೇರೆಗೆ ಅಯ್ಯಪ್ಪ (29) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ವರ್ತೂರಿನ ಕೊಡತಿ ಬಳಿಯ ಬಾಡಿಗೆ ಮನೆಯೊಂದರಲ್ಲಿ ಯುವತಿ ಮತ್ತು ಆರೋಪಿ ಇಬ್ಬರು ವಾಸವಾಗಿದ್ದರು. ಮಾ.12ರಂದು ಯುವತಿಯ ಹತ್ಯೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೊಡಗಿನ ಪೊನ್ನಂಪೇಟೆ ಮೂಲದ ಅಯ್ಯಪ್ಪನಿಗೆ ಕೆಲ ವರ್ಷಗಳ ಹಿಂದೆ ಮದುವೆಯಾಗಿತ್ತು. ವೈಯಕ್ತಿಕ ಕಾರಣಕ್ಕಾಗಿ ಪತ್ನಿಯನ್ನು ತೊರೆದಿದ್ದ. ಈ ವೇಳೆ ಪಕ್ಕದ ಊರಿನ ಯುವತಿಯನ್ನು ಪರಿಚಯಿಸಿಕೊಂಡಿದ್ದ. ಇಬ್ಬರ ನಡುವೆ ಪ್ರೀತಿ ಚಿಗುರಿತ್ತು. ಮನೆಯಲ್ಲಿ ಪ್ರೀತಿ ವಿಚಾರವನ್ನು ಯುವತಿ ಪೋಷಕರಿಗೆ ಹೇಳಿ ಒಪ್ಪಿಸಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. ಮದುವೆಯಾಗಿರುವ ವಿಚಾರ ತಿಳಿಸಿ, ಪತ್ನಿಗೆ ವಿಚ್ಛೇದನ ನೀಡಿದ್ದು, ನಿಮ್ಮ ಮಗಳನ್ನು ವಿವಾಹವಾಗುವುದಾಗಿ ಆರೋಪಿಯು ಯುವತಿ ಪೋಷಕರಿಗೆ ಭರವಸೆ ನೀಡಿದ್ದ. ಪೋಷಕರ ವಿರೋಧದ ನಡುವೆ ಯುವತಿಯನ್ನು ಬೆಂಗಳೂರಿಗೆ ಕರೆದುಕೊಂಡು ಬಂದಿದ್ದ. ಎರಡು ತಿಂಗಳ ಹಿಂದೆ ವರ್ತೂರು ಬಳಿ ಬಾಡಿಗೆ ಮನೆ ಮಾಡಿ ಆಕೆ ಜತೆ ಸಹ ಜೀವನ ನಡೆಸುತ್ತಿದ್ದ. ಯುವಕ ಡ್ರೈಫ್ರೂಟ್ಸ್ ಅಂಗಡಿಯ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದರೆ, ಯುವತಿ ಸೂಪರ್ ಮಾರ್ಕೆಟ್ ವೊಂದರಲ್ಲಿ ಕೆಲಸ ಮಾಡುತ್ತಿದ್ದಳು. 15ದಿನಗಳ ಹಿಂದೆ ಕರೆ ಮಾಡಿದ್ದ ಯುವತಿ, ಅಯ್ಯಪ್ಪ ಪ್ರತಿನಿತ್ಯ ತನಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿರುವುದಾಗಿ ತಿಳಿಸಿದ್ದಳು ಎಂದು ದೂರಿನಲ್ಲಿ ಯುವತಿಯ ತಾಯಿ ಉಲ್ಲೇಖಿಸಿದ್ದಾರೆ. ಕಳೆದ ಒಂದು ವಾರದಿಂದ ಇಬ್ಬರ ನಡುವೆ ಕ್ಷುಲ್ಲಕ ಕಾರಣಗಳಿಗಾಗಿ ಗಲಾಟೆಯಾಗುತ್ತಿತ್ತು. ಎರಡು ದಿನಗಳ ಹಿಂದೆ ಜಗಳ ವಿಕೋಪಕ್ಕೆ ಹೋಗಿದೆ. ಈ ವೇಳೆ ಕೇಬಲ್ ವೈರ್‌ನಿಂದ ಯುವತಿಯ ಕುತ್ತಿಗೆ ಬಿಗಿದು ಆರೋಪಿ ಹತ್ಯೆ ಮಾಡಿದ್ದ. ಬಳಿಕ ಯುವತಿ ಕುಟುಂಬಸ್ಥರಿಗೆ ಕರೆ ಮಾಡಿ ನಿಮ್ಮ ಮಗಳು ನೇಣು ಬಿಗಿದುಕೊಂಡಿದ್ದಾಳೆ ಎಂದು ಸುಳ್ಳು ಹೇಳಿದ್ದ. ಮಗಳ ಸಾವಿಗೆ ಅಯ್ಯಪ್ಪ ಕಾರಣ ಎಂದು ಅನುಮಾನಿಸಿ ಯುವತಿಯ ತಾಯಿ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಆರೋಪಿ ಹತ್ಯೆ ಮಾಡಿರುವುದು ಕಂಡುಬಂದಿದೆ. ಸದ್ಯ ಆರೋಪಿಯನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿಕ್ಷಣ ಹಕ್ಕಿನಲ್ಲಿ ಖಾಸಗಿ ಶಾಲೆಗಳಿಗೆ ಸೀಟು ಹಂಚಿಕೆ

ಬೆಂಗಳೂರು : ಶಿಕ್ಷಣ ಹಕ್ಕು ಕಾಯ್ದೆಯಲ್ಲಿ (ಆರ್‌ಟಿಇ) 2026-27ನೇ ಸಾಲಿನಲ್ಲಿ ಖಾಸಗಿ ಶಾಲೆಗಳಲ್ಲಿ ಉಚಿತ ಸೀಟು ಹಂಚಿಕೆ ವೇಳಾಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಪರಿಷ್ಕರಿಸಿದೆ.

ಹೊಸ ವೇಳಾಪಟ್ಟಿಯ ಪ್ರಕಾರ ಏ. 9 ರಿಂದ ಮೇ 9ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗುತ್ತದೆ. ಮೇ 16 ರಂದು ಆನ್‌ಲೈನ್ ಲಾಟರಿ ಮೂಲಕ ಮೊದಲ ಸುತ್ತಿನ ಸೀಟು ಹಂಚಿಕೆಯಾಗಲಿದೆ. ಸೀಟು ಪಡೆದವರು ಜೂ.1ರ ಒಳಗೆ ಶಾಲೆಗಳಲ್ಲಿ ದಾಖಲಾತಿ ಪಡೆಯಬೇಕು. ಜೂ.5ರಂದು ಎರಡನೇ ಸುತ್ತಿನ ಸೀಟು ಹಂಚಿಕೆಯಾಗಲಿದ್ದು, ಇವರಿಗೆ ಜೂ.15 ರವರೆಗೆ ಆಯಾ ಶಾಲೆಗಳಿಗೆ ದಾಖಲಾಗಬೇಕು ಎಂದು ತಿಳಿಸಲಾಗಿದೆ. ಎಲ್‌ಕೆಜಿ ಹಾಗೂ 1ನೇ ತರಗತಿ ಪ್ರವೇಶಕ್ಕೆ ಖಾಸಗಿ ಶಾಲೆಗಳಲ್ಲಿ ಶೇ. 25ರಂತೆ ಹಾಗೂ ಅನುದಾನಿತ ಶಾಲೆಗಳಲ್ಲಿ ಲಭ್ಯವಿರುವ ಕನಿಷ್ಠ ಸೀಟುಗಳ ವಿವರವನ್ನು ಏ.6ರಂದು ಪ್ರಕಟಿಸಲಾಗುವುದು ಎಂದು ಶಾಲಾ ಶಿಕ್ಷಣ ಆಯುಕ್ತರು ತಿಳಿಸಿದ್ದಾರೆ.

ಚನ್ನಕೇಶವ ಸ್ವಾಮಿ ದೇಗುಲ ದಾಸೋಹ ಸಮಸ್ಯೆ। ಸ್ಪಂದಿಸಿದ ಅಧಿಕಾರಿಗಳು

ಇಂದಿನಿಂದ ದಾಸೋಹ ಪುನರಾರಂಭ

ಬೇಲೂರು: ವಿಶ್ವ ವಿಖ್ಯಾತ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ ದಾಸೋಹ ವ್ಯವಸ್ಥೆಗೂ ಗ್ಯಾಸ್ ಸಿಲಿಂಡರ್ ಕೊರತೆಯ ಬಿಸಿ ತಟ್ಟಿದ ಹಿನ್ನೆಲೆಯಲ್ಲಿ ಉಂಟಾದ ಸಮಸ್ಯೆಗೆ ಈಗ ತಾಲೂಕು ಆಡಳಿತ ಸ್ಪಂದಿಸಿದೆ. ಮಧ್ಯಪ್ರಾಚ್ಯದಲ್ಲಿನಡೆಯು ತ್ತಿರುವ ಯುದ್ಧದ ಪರಿಣಾ ಮದಿಂದ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್‌ಗಳ ಅಭಾವ ಉಂಟಾಗಿ, ದೇವಾಲಯದಲ್ಲಿ ನಡೆ ಯುತ್ತಿದ್ದ ದಾಸೋಹ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.



ಇದನ್ನು ಗಂಭೀರವಾಗಿ ತೆಗೆದುಕೊಂಡ ತಾಲೂಕು ಆಡಳಿತ ದಾಸೋಹ ಭವನಕ್ಕೆ ಭೇಟಿ ನೀಡಿ ಅಲ್ಲಿಯ ಸಮಸ್ಯೆ ಬಗ್ಗೆ ಮಾಹಿತಿ ತಿಳಿದು ನಂತರ ಮಾತನಾಡಿದ ತಹಸೀಲ್ದಾರ್ ಶ್ರೀಧರ್ ಕಂಕಣ ವಾಡಿ ನಮಗೆ ಮಾಧ್ಯ ಮದ ಮೂಲಕ ದಾಸೋ ಹ ಭವನಕ್ಕೆ ಭಕ್ತಾಧಿಗಳಿಗೆ ಪ್ರಸಾದ ವಿತರಣೆಯಲ್ಲಿ ಸಿಲಿಂಡರ್ ಇಲ್ಲದೆ ಸಮಸ್ಯೆಯಾಗಿದ್ದು ನಮ್ಮಗಮನಕ್ಕೆ ಬಂದಿದೆ. ಆದ್ದರಿಂದ ತಾಲೂಕು ಆಡಳಿತದಿಂದ ಶನಿವಾರದಿಂದ ಭಕ್ತಾದಿ ಗಳಿಗೆ ಪ್ರಸಾದ ವಿತರಣೆ ಯಲ್ಲಿ ಯಾವುದೇ ತೊಂದರೆ ಆಗದಂತೆ ಸಿಲಿಂಡರ್ ವ್ಯವಸ್ಥೆ ಮಾಡಲಾಗಿದೆ.ಇದುವರೆಗೂ ದಾಸೋಹ ವಿತರಣೆಯಲ್ಲಿ ಸಮಸ್ಯೆ ಕಂಡುಬಂದಿರಲಿಲ್ಲ. ಕೊರೋನ ಸಂದರ್ಭದಲ್ಲಿ ಕೂಡ ದಾಸೋಹ ನಡೆಸಿಕೊಂಡು ಬಂದಿದ್ದಾರೆ. ಈಗ ಸಿಲೆಂಡರ್ ಸಮಸ್ಯೆ ಬಂದಿದೆ, ಅದರ ಸಮಸ್ಯೆ ಸರಿಪಡಿಸಲಾಗಿದೆ ಮುಂದೆ ನಿರಂತರವಾಗಿ ದಾಸೋಹ ನಿಲ್ಲದೆ ಪ್ರಾರಂ ಭವಾಗಲಿದೆ. ಜಾತ್ರಾ ಸಮಯ ಹತ್ತಿರ ಇರುವುದ ರಿಂದ ಎಲ್ಲಾ ಸಮಸ್ಯೆ ಬಗೆಹರಿಸಲಾಗುವುದು ಎಂದರಲ್ಲದೆ ಇಂದಿನಿಂದ 20 ಸಿಲೆಂಡರ್ ಗಳನ್ನು ತುರ್ತಾಗಿ ದಾಸೋಹ ಭವನಕ್ಕೆ ಕಳುಹಿಸಲಾಗು ವುದು. ವಿಶ್ವ ವಿಖ್ಯಾತ ಶ್ರೀ ಚನ್ನಕೇಶವ ಸ್ವಾಮಿ ದೇವಾ ಲಯದಲ್ಲಿ ದಾಸೋಹ ವ್ಯವಸ್ಥೆ ತಾತ್ಕಾಲಿಕವಾಗಿ ನಿಂತಿರುವ ವಿಷಯ ನಮ್ಮ ಗಮನಕ್ಕೆ ಬಂದ ತಕ್ಷಣವೇ ಸಂಬಂಧಪಟ್ಟ ಅಧಿಕಾರಿ ಗಳೊಂದಿಗೆ ಚರ್ಚೆ ನಡೆಸಲಾಗಿದೆ.

ಕಂದಾಯ, ಕಾಮಗಾರಿ, ಆರೋಗ್ಯ ಇಲಾಖೆಯಲ್ಲಿ ವಿಭಾಗ ರಚನೆ

ವಿಭಾಗ, ಉಪವಿಭಾಗ ರಚನೆಗೆ ಸುತ್ತೋಲೆ



▸▸ 50 ವಿಭಾಗ ಹಾಗೂ 150 ಉಪ ವಿಭಾಗ ರಚಿಸಿ ಸುತ್ತೋಲೆ

ಪಾಲಿಕೆವಾರು ವಿಭಾಗ ಉಪ-ವಿಭಾಗಗಳ ವಿವರ

ಪಾಲಿಕೆ ಹೆಸರು	ವಾರ್ಡ್ ಸಂಖ್ಯೆ	ವಿಭಾಗದ ಸಂಖ್ಯೆ	ಉಪ-ವಿಭಾಗಸಂಖ್ಯೆ
ಕೇಂದ್ರ	63	7	24
ಪೂರ್ವ	50	7	22
ಪಶ್ಚಿಮ	112	15	45
ಉತ್ತರ	72	11	30
ದಕ್ಷಿಣ	72	10	29
ಒಟ್ಟು	369	50	150

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ನಗರ ಪಾಲಿಕೆಗಳ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ 369 ವಾರ್ಡ್‌ಗಳ ಪುನರ್ ವಿಂಗಡಣೆಯ ಆಧಾರದ ಮೇಲೆ 50 ವಿಭಾಗ ಹಾಗೂ 150 ಉಪ-ವಿಭಾಗವನ್ನು ರಚಿಸಿ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸುತ್ತೋಲೆ ಹೊರಡಿಸಿದ್ದಾರೆ. ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ಅನ್ನು ರಚಿಸಿ, 2025-ಮೇ 15 ರಿಂದ ಜಾರಿಗೆ ತರಲಾಗಿತ್ತು. ಬಳಿಕ ಜಿಬಿಎ ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಬೆಂಗಳೂರು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಿವೆ. ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ವಾರ್ಡ್‌ಗಳ ಪುನರ್ ವಿಂಗಡಣೆಯನ್ನೂ ಮಾಡಲಾಗಿದ್ದು, 369 ವಾರ್ಡ್‌ಗಳು ಅಸ್ತಿತ್ವಕ್ಕೆ ಬಂದಿವೆ. ಜಿಬಿಎ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು 369 ವಾರ್ಡ್‌ಗಳನ್ನು ರಚಿಸಲಾಗಿದೆ. ಜಿಬಿಎ ಪ್ರದೇಶದ ವ್ಯಾಪ್ತಿಯಲ್ಲಿನ ಪಾಲಿಕೆಗಳ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಕಂದಾಯ, ಕಾಮಗಾರಿ ಆರೋಗ್ಯ ಇಲಾಖೆಗಳಿಗೆ ಸಂಬಂಧಿಸಿದಂತೆ 50 ವಿಭಾಗ ಹಾಗೂ 150 ಉಪ-ವಿಭಾಗಗಳನ್ನು ರಚಿಸಲಾಗಿದೆ.

ಭಾರತೀಯರೆಂಬ ಸಂದೇಶ ಪ್ರದರ್ಶಿಸಿದರೆ ತೆರೆಯುತ್ತೆ ಜಲಸಂಧಿ | ನಾವು ಭಾರತಕ್ಕೆ ಸಂಬಂಧಪಟ್ಟ ಹಡಗುಗಳೆಂಬ ಸಂದೇಶ

ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗಷ್ಟೇ ಅವಕಾಶ!



ಹಾರ್ಮುಜ್ ತೆರೆಯದಿದ್ದರೆ ತೈಲ ಘಟಕಗಳ ನಾಶ ಶತಃಸಿದ್ಧ

ಖಾರ್ಗ್‌ನಲ್ಲಿ 15 ಸ್ಫೋಟ?



ಜೈಶಂಕರ್ ಚತುರ ವಿದೇಶಾಂಗ ನೀತಿ

ಮಿಲಿಟರಿ ಸನ್ನದ್ಧತೆ ಮತ್ತು ಸೈನ್ಯ ನಿಯೋಜನೆ

ಹಾರ್ಮುಜ್ ಜಲಸಂಧಿಯಲ್ಲಿನ ಪರಿಸ್ಥಿತಿ

ಇರಾನ್ ನಾಯಕರ ಮಾಹಿತಿ ನೀಡಿದವರಿಗೆ ಭಾರೀ ನಗದು ಬಹುಮಾನ ಘೋಷಿಸಿದ ಅಮೆರಿಕ

ಮೊಜ್ತಬಾ ಮಾಹಿತಿ ನೀಡಿ, ₹92 ಕೋಟಿ ಪಡೆದುಕೊಳ್ಳಿ!





ಮಧ್ಯಪ್ರಾಚ್ಯ ಇತಿಹಾಸದಲ್ಲೇ ಅತಿ ದೊಡ್ಡ ದಾಳಿ

ಹಾರ್ಮುಜ್ ತೆರೆಯಲು ಟ್ರಂಪ್ ತಾಕೀತು

ಹಾರ್ಮುಜ್ ಜಲಸಂಧಿಯಲ್ಲಿ ಭಾರತಕ್ಕೆ ಸಂಬಂಧಪಟ್ಟ ಹಡಗುಗಳು



ಕಿರುಸುದ್ದಿ

ಮಾತುಕತೆ ಮೂಲಕ ಸಂಘರ್ಷ ಪರಿಹಾರ

ಪಾಕ್ ಸರ್ಕಾರಿ ನೌಕರರ ವೇತನ ಶೇ.30 ಕಡಿತ!

ಆ್ಯಂಸ್ಟರ್‌ಡ್ಯಾಮ್ ಯಹೂದಿ ಶಾಲೆ ಮೇಲೆ ಬಾಂಬ್ ದಾಳಿ!

ಮಾದಕದ್ರವ್ಯ ಮುಕ್ತ ಪಂಜಾಬ್ ಗುರಿ: ಶಾ



ಎನ್‌ಎಸ್‌ಎ ಬಂಧನದಿಂದ ವಾಂಗ್‌ಚುಕ್ ಬಿಡುಗಡೆ

ದೇಶಾದ್ಯಂತ ಪೆಟ್ರೋಲ್, ಡೀಸೆಲ್ ಸಮರ್ಪಕ ಲಭ್ಯ



ಐಎಸ್ಐ ಬೆಂಬಲಿತ ಉಗ್ರ ಶಸ್ತ್ರಾಸ್ತ್ರ ಜಾಲ ಪತ್ತೆ, ಇಬ್ಬರ ಸೆರೆ



ಗಡಿ ಸಂಘರ್ಷ ತೀವ್ರ | ಕುನಾರ್ ಪ್ರಾಂತ್ಯ ಪ್ರದೇಶಕ್ಕೆ ಭಾರೀ ಹಾನಿ

ಕುನಾರ್ ಪ್ರಾಂತ್ಯದ ಮೇಲೆ ಪಾಕ್ ಕ್ಷಿಪಣಿ ದಾಳಿ



ದಕ್ಷಿಣ ಏಷ್ಯಾದಲ್ಲಿ ಅಸ್ಥಿರತೆ

ಕಾಂಗ್ರೆಸ್‌ನಿಂದ ಭೀತಿ ಸೃಷ್ಟಿ: ಪ್ರಧಾನಿ ಮೋದಿ ಟೀಕೆ

ಜನಸಾಮಾನ್ಯರ ರಕ್ಷಣೆಗೆ ಕೇಂದ್ರ ಬದ್ಧ





ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಚಿಂತಾಮಣಿಯಂತೆ ದುರ್ಲಭವಾದುದು ಯಾವುದು?

◆ ಚತುರ್ಭದ್ರ

ಚಿಂತಾಮಣಿ ಎಂದರೆ ಚಿಂತಿಸಿದ್ದನ್ನು, ಯೋಚಿಸಿದ್ದನ್ನು, ಇಚ್ಛಿಸಿದ್ದನ್ನು ಕೊಡುವ ಒಂದು ರತ್ನವಿಶೇಷ. ಅದೊಂದು ಮಣಿರೂಪದಲ್ಲಿ ಇರುವಂತಹ ವಸ್ತು. ಅತ್ಯಂತ ಅಪರೂಪದ ವಸ್ತು. ಅದನ್ನು ಪಡೆದವನು ಆ ಮಣಿಯ ಸಹಾಯದಿಂದ ಅವನು ಏನನ್ನು ಬೇಕಾದರೂ ಪಡೆಯಬಹುದು. ಈ ಪ್ರಶ್ನೆಯಲ್ಲಿ ಮಣಿಯ ವಿಷಯವನ್ನು ಪ್ರಸ್ತಾಪಿಸಿಲ್ಲ. ಆದರೆ ಚಿಂತಾಮಣಿಯಂತೆ ದುರ್ಲಭವಾದದ್ದು ಯಾವುದು ಎಂಬ ಪ್ರಶ್ನೆ ಇಲ್ಲಿದೆ. ಅದಕ್ಕೆ 'ಚತುರ್ಭದ್ರ' ಎಂಬ ಉತ್ತರವನ್ನು ನೀಡಲಾಗಿದೆ. ಹಾಗಾದರೆ ಚತುರ್ಭದ್ರವು ಹೇಗೆ ಚಿಂತಾಮಣಿಯಾಗಿದೆ ಎಂಬುದನ್ನು ಚಿಂತಿಸಬೇಕಾಗಿದೆ.

ಚತುರ್ಭದ್ರ ಎಂದರೆ ನಾಲ್ಕು ಕಡೆ ಗಟ್ಟಿಯಾಗಿರುವ ಸಂಗತಿ ಎಂದರ್ಥ. ಅಂದರೆ ಒಂದು ವಿಷಯ ಅಥವಾ ಒಂದು ಪದಾರ್ಥ ಅಚಲವಾಗಿ ನೆಲೆ ನಿಲ್ಲಬೇಕಾದರೆ ಅದಕ್ಕೆ ಸುತ್ತಲೂ ರಕ್ಷಣೆ ಅತ್ಯಂತ ಅವಶ್ಯಕ. ಪ್ರಧಾನವಾಗಿ ನಾಲ್ಕು ದಿಕ್ಕುಗಳನ್ನು ಇಟ್ಟುಕೊಂಡು, ಆ ನಾಲ್ಕು ದಿಕ್ಕುಗಳಲ್ಲೂ ಯಾವುದೇ ರೀತಿಯ ಬಾಧೆ ಇಲ್ಲದಿದ್ದರೆ ಅದಕ್ಕೆ 'ಚತುರ್ಭದ್ರ' ಎಂಬುದಾಗಿ ಹೇಳಬಹುದು. ಹಾಗಾದರೆ ಇಲ್ಲಿ ಆ ಚತುರ್ಭದ್ರ ಯಾವುದು ಎಂದರೆ 'ಪುರುಷಾರ್ಥ'. ಪುರುಷಾರ್ಥಗಳನ್ನೇ 'ಚತುರ್ಭದ್ರ' ಎಂಬ ಇನ್ನೊಂದು ಪದದಿಂದ ಬಳಸಲಾಗಿದೆ. ''ಪುರುಷಾರ್ಥವಿದೆ. ಅದಕ್ಕನುಗುಣವಾದ ನಡೆ ನೋಡಿ ನಡೆಸಿದರೆ ಚತುರ್ಭದ್ರಮಯವಾದ ಜೀವನವಾಗುತ್ತದೆ'' ಎಂಬುದಾಗಿ ಶ್ರೀರಂಗ ಮಹಾಗುರುಗಳು ಈ ಪುರುಷಾರ್ಥ ಮತ್ತು ಚತುರ್ಭದ್ರ ಎಂಬ ವಿಷಯವನ್ನು ಹೀಗೆ ಸಮೀಕರಿಸಿದ್ದನ್ನು ನಾವು ಇಲ್ಲಿ ಗಮನಿಸಬೇಕು. ಆ ಪುರುಷಾರ್ಥಗಳು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬುದಾಗಿ. ಒಬ್ಬ ವ್ಯಕ್ತಿ ಪರಿಪೂರ್ಣವಾಗಿ ಯಾವಾಗ ಆಗಬಲ್ಲ ಎಂದರೆ ಯಾವಾಗ ಈ ನಾಲ್ಕು ಪುರುಷಾರ್ಥಗಳನ್ನು ಅವನು ಅನುಭವಿಸಬಲ್ಲನೋ ಆಗ. ಅವನು ಯಾವುದೇ ರೀತಿಯ ಅಪೇಕ್ಷಿತವಾದ ಅಥವಾ ಚಿಂತಿತವಾದ ವಿಷಯವನ್ನು ಕ್ಷಣಾರ್ಧದಲ್ಲಿ ಪಡೆಯಬಲ್ಲ ಎಂದು ತಾತ್ಪರ್ಯ. ಅಂದರೆ ಅವನಿಗೆ ಈ ಪ್ರಪಂಚದ ಪ್ರತಿಯೊಂದು ಪದಾರ್ಥದ ಅರಿವು ಆಗಿರುತ್ತದೆ ಮತ್ತು ಆ ಪದಾರ್ಥಗಳ ಸ್ವಾಮ್ಯವೂ ಅವನದ್ದಾಗಿರುತ್ತದೆ. ಪದಾರ್ಥಗಳನ್ನು ಹೇಗೆ ಬಳಸಿಕೊಳ್ಳಬೇಕು? ಹೇಗೆ ಬಳಸಿಕೊಂಡರೆ ಆ ಪದಾರ್ಥವು ಮತ್ತು ಆ ಪದಾರ್ಥದಿಂದ ವ್ಯಕ್ತಿಗೂ ಒಂದು ಸಾರ್ಥಕತೆ ಎಂಬುದು ಉಂಟಾಗುತ್ತದೆ? ಎಂಬುದನ್ನು ಆತ ಅರಿಯಬಲ್ಲವನಾಗಿರುತ್ತಾನೆ. ಹಾಗಾಗಿ ಅವನಿಗೆ ಈ ನಾಲ್ಕು ಪುರುಷಾರ್ಥಗಳು ಚಿಂತಾಮಣಿಯಂತೆ ಕೆಲಸ ಮಾಡುತ್ತವೆ ಎಂಬುದು ಇದರ ತಾತ್ಪರ್ಯ. ಹಾಗಾದರೆ ಈ ನಾಲ್ಕು ಪುರುಷಾರ್ಥಗಳನ್ನು ಪಡೆಯಬೇಕಾದರೆ ಅವನಿಗೆ ಬೇಕಾದ ಮೂಲಭೂತ ಅವಶ್ಯಕತೆ ಏನು ಎಂಬುದನ್ನು ವಿವೇಕ ಚೂಡಾಮಣಿ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ–''ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಂ? ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ?'' ಎಂಬುದಾಗಿ. ಅಂದರೆ ಒಬ್ಬ ಮಾನವನಾಗಿ ಹುಟ್ಟಿ, ಅವನಿಗೆ ಮೋಕ್ಷ ಪಡೆಯಬೇಕೆಂಬ ಉತ್ಕಟ ಇಚ್ಛೆಯು ಉಂಟಾಗಿ, ಅದನ್ನು ಪೂರೈಸಲು ಒಬ್ಬ ಮಹಾಪುರುಷನ ಸಂಸರ್ಗ ಉಂಟಾದರೆ ಅವನಿಗೆ ಇನ್ನು ಉಳಿದ ಎಲ್ಲವೂ ಸುಲಭ. ಏಕೆಂದರೆ ಈ ಮೂರು ಸಿಗುವುದು ಅತ್ಯಂತ ದುರ್ಲಭ. ಈ ಮೂರನ್ನು ಪಡೆದವನು ಪುರುಷಾರ್ಥ ಸಂಪತ್ತಿಯನ್ನು ಸುಲಭವಾಗಿ ತನ್ನದಾಗಿಸಿಕೊಳ್ಳುತ್ತಾನೆ. ಅಂದರೆ ಆತ ಚತುರ್ಭದ್ರಮಯವಾದ ಬಾಳಾಟವನ್ನು ಮಾಡಿದಂತೆ ಆಗುತ್ತದೆ ಎಂಬುದು ಇದರ ತಾತ್ಪರ್ಯವಾಗಿದೆ. ಇದೇ ಅವನಿಗೆ ಚಿಂತಾಮಣಿಯಂತೆ ಆಗುತ್ತದೆ.



ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ವಿಪ್ರವೇಷದಲಿ ಭೇಟಿ

ಕೃಷ್ಣಾರ್ಜುನ-ಭೀಮಸೇನರು ಜರಾಸಂಧ ಸಂಹಾರಕ್ಕಾಗಿ ಆಗಮಿಸುತ್ತಿರುವಲ್ಲಿ ಕೆಲವರು ವೇದಪಾರಂಗತ ಬ್ರಾಹ್ಮಣರು ಕೆಲವು ಅಪಶಕುನಗಳನ್ನು ಕಂಡರು. ಅವನ್ನವರು ಜರಾಸಂಧನ ಗಮನಕ್ಕೆ ತಂದರು. ಅವಕ್ಕೆ ಪ್ರತಿಯಾಗಿ ಆತನ ಪುರೋಹಿತರು ಆತನನ್ನು ಆನೆಯ ಮೇಲೆ ಕೂರಿಸಿ ನಾಲ್ಕೂ ಎಡೆಗಳಲ್ಲಿ ಅಗ್ನಿಜ್ವಾಲನ ಮಾಡಿದರು. ಸಂಭಾವ್ಯವಾದ ಅನಿಷ್ಟಗಳ ಪರಿಹಾರಕ್ಕಾಗಿ ಜರಾಸಂಧ ದೀಕ್ಷಿತನಾಗಿ ವ್ರತಿಯಾದನು, ಉಪವಾಸ ಮಾಡಿದನು.

ಇತ್ತ ಸ್ನಾತಕವ್ರತಸ್ಥರಾಗಿ ಬ್ರಾಹ್ಮಣವೇಷದಲ್ಲಿದ್ದ ಈ ಮೂವರು ಆಯುಧಗಳನ್ನು ತೆಗೆದಿಟ್ಟರು. ಅವರಿಗೋ ಎಷ್ಟಾದರೂ ತಮ್ಮ ಬಾಹುಗಳೇ ಆಯುಧಗಳು! ಜರಾಸಂಧನೊಡನೆ ಯುದ್ಧಾಪೇಕ್ಷಿಗಳಾಗಿ ಅವರು ನಗರಪ್ರವೇಶವನ್ನು ಮಾಡಿದರು. ಆ ನರೋತ್ತಮರಾದ ಕೃಷ್ಣ-ಭೀಮ-ಧನಂಜಯರು ಅಲ್ಲಿಯ ರಾಜಮಾರ್ಗಗಳಲ್ಲಿ ಕಂಡದ್ದೇನು? ಭಕ್ಷ್ಯಾಪಣ-ಮಾಲ್ಯಾಪಣಗಳನ್ನು. ಎಂದರೆ, ಬೇಕಾದ್ದನ್ನು ತಿನ್ನಲು ಅಂಗಡಿಗಳು ಹಾಗೂ ಹೂಮಾಲೆಗಳ ಅಂಗಡಿಗಳು! ಅವುಗಳ ಸಿರಿಯನ್ನೂ, ಸರ್ವಕಾಮಗಳನ್ನೂ ಪೂರೈಸುವ ಅಲ್ಲಿಯ ಸಮೃದ್ಧಿಯನ್ನೂ ಅವರು ಕಂಡುಕೊಂಡರು. ಮಹಾಬಲಶಾಲಿಗಳಾದ ಅವರು ಹೂಕಟ್ಟುವವನೊಬ್ಬನಿಂದ ಮಾಲೆಗಳನ್ನು ಬಲಾತ್ಕಾರವಾಗಿ ಸ್ವೀಕರಿಸಿ ಮಾಲಾಧಾರಿಗಳಾದರು. ಅವರ ವಸ್ತ್ರಗಳೂ ನಾನಾವರ್ಣಗಳಿಂದ ಕೂಡಿದ್ದವು. ಹೊಳೆಯುವ ಕುಂಡಲಗಳನ್ನವರು ಧರಿಸಿದ್ದರು. ಜರಾಸಂಧನ ಅರಮನೆಯನ್ನು ಮುಟ್ಟಿದರು. ಅವರು ನಡೆದು ಬರುತ್ತಿದ್ದ ರೀತಿಯು ಹೇಗಿತ್ತೆಂದರೆ, ಹಸುಗಳು ಎಲ್ಲೆಲ್ಲಿವೆಯೆಂದು ಗೋಶಾಲೆಯನ್ನು ನೋಡಿಕೊಂಡು ನಡೆಯುತ್ತಿರುವ ಹಿಮಾಲಯದ ಸಿಂಹಗಳಂತೆ. ಯುದ್ಧಗಳಲ್ಲಿ ಶೋಭಿಸುವ ಅವರ ತೋಳ್ಗಳು ಮಹಾಗೃಹದ ಕಂಭಗಳಂತೆ ಇದ್ದುವು. ಒಟ್ಟಿನಲ್ಲಿ, ವಿಶಾಲವಕ್ಷಃಸ್ಥಳವುಳ್ಳವರೂ ಆನೆಗಳಂತಿರುವವರೂ ಆದ ಅವರನ್ನು ಕಂಡು ಮಾಗಧರಿಗೆ, ಎಂದರೆ ಮಗಧ ದೇಶದ ಪ್ರಜೆಗಳಿಗೆ, ವಿಸ್ಮಯವೇ ಉಂಟಾಯಿತು.ಜನಗಳು ಕಿಕ್ಕಿರಿದಿದ್ದ ಅಲ್ಲಿಯ ಮೂರು ಕಕ್ಷಗಳನ್ನು ದಾಟಿದರು ಆ ಮೂವರು ಮಹಾಪುರುಷರು. ನಿರ್ಭಯರಾಗಿದ್ದ ಅವರು ಅಭಿಮಾನಿಗಳಾಗಿಯೇ ಜರಾಸಂಧನನ್ನು ಸಮೀಪಿಸಿದರು. ಜರಾಸಂಧನೂ ಅವರನ್ನು ಆದರದೊಂದಿಗೇ ಸತ್ಕರಿಸಿದನು. ಪಾದ್ಯ-ಮಧುಪರ್ಕಗಳಿಗೆ, ಗೋದಾನಕ್ಕೆ, ಅರ್ಹರಾದವರು ಅವರು. ಪ್ರತ್ಯುತ್ಥಾನ ಮಾಡಿ, ಎಂದರೆ ತಾನೇ ಎದ್ದು ಬಂದವನಾಗಿ, ಅವರಿಗೆ ವಿಧ್ಯನುಸಾರವಾದ ಆತಿಥ್ಯವನ್ನು ಸಲ್ಲಿಸಿದನು ಜರಾಸಂಧ. ತಮಗೆ ಸ್ವಾಗತ ಎಂದನು. ಆದರೆ ಭೀಮಾರ್ಜುನರು ಮೌನದಿಂದಿದ್ದರು. ಅವರಲ್ಲಿ ಕೃಷ್ಣನೇ ಎಷ್ಟಾದರೂ ಮಹಾಬುದ್ಧಿಶಾಲಿಯಲ್ಲವೇ? ಆತನೇ ಮಾತನಾಡಿದನು. ''ರಾಜಶ್ರೇಷ್ಠನೇ, ಇವರಿಬ್ಬರೂ ನಿಯಮದಲ್ಲಿರುವವರು, ಎಂದರೆ ಮೌನವ್ರತದಲ್ಲಿರತಕ್ಕವರು. ಮಧ್ಯರಾತ್ರಿಯು ಕಳೆದ ನಂತರವೇ ನಿನ್ನೊಡನೆ ಇವರು ಮಾತನಾಡತಕ್ಕವರು'' ಎಂದನು. ತದನುಸಾರ ಯಜ್ಞಗೃಹದಲ್ಲುಳಿದುಕೊಳ್ಳಲು ಅವರಿಗೊಂದು ವ್ಯವಸ್ಥೆ ಮಾಡಿ ತನ್ನ ಅಂತಃಪುರಕ್ಕೆ ತೆರಳಿದನು. ಅರ್ಧರಾತ್ರವು ಕಳೆಯಲು, ಆ ದ್ವಿಜರಿದ್ದೆಡೆಗೆ ತೆರಳಿದನು. ಆ ರಾಜನ ಈ ವ್ರತವು ಜಗದ್ ವಿಶ್ರುತವಾಗಿದ್ದಿತು. ಏನೆಂದರೆ, ಸ್ನಾತಕಬ್ರಾಹ್ಮಣರು ಬಂದರೆಂದರೆ ಅದು ಅರ್ಧರಾತ್ರವೇ ಆಗಿದ್ದರೂ ಸಹ ಅವರನ್ನು ತಾನೇ ಎದುರ್ಗೊಂಡು ಸ್ವಾಗತಿಸುತ್ತಿದ್ದನು. ಬಂದಿದ್ದವರ ವೇಷವೇ ಅಪೂರ್ವವಾಗಿದ್ದರಿಂದ, ಜರಾಸಂಧನು ವಿಸ್ಮಯದಿಂದಲೇ ಅವರ ಬಳಿ ಸಾರಿದನು. ಆತನನ್ನು ಕಾಣುತ್ತಲೇ, ಸ್ವಸ್ತ್ಯಸ್ತು, ನಿನಗೆ ಕಲ್ಯಾಣವಾಗಲಿ ಎಂದು ಅವರೆಂದರು. ಪರಸ್ಪರ ಮುಖ ನೋಡಿಕೊಂಡರು. ಬ್ರಾಹ್ಮಣವೇಷದಲ್ಲಿದ್ದ ಆ ಪಾಂಡವ-ಯಾದವರಿಗೆ ಕುಳಿತುಕೊಳ್ಳಿ ಎಂದು ಹೇಳಿದನು.

ಗ್ಯಾಸ್ ಟ್ರಬಲ್ ಪ್ರಕರಣವು

ವಕ್ರದೃಷ್ಟಿ

◆ ಎನ್.ರಾಮನಾಥ್
anakuramanath@gmail.com



''ಸುಮ್ಮನೆ ಇರಾಣಂದ್ರೆ ಇರಾಕ್ ಬಿಡಾಕಿಲ್ಲ'' ಎಂದಿದ್ದರು ವೈಎನ್ಕೆ. ಈಗ ಇರಾಕ್ ಯಾವುದಕ್ಕೂ ಬರಾಕ್ ಇಲ್ಲ. ಆದರೆ ಬರಾಕ್ (ಒಬಾಮಾ) ಇದ್ದ ಜಾಗಕ್ಕೆ ಬಂದವನು ಇಡೀ ಪ್ರಪಂಚವೇ ಸುಮ್ಮನೆ ಇರಾಕ್ ಬಿಡಾಕಿಲ್ಲ! ಒಂದು ಕಾಲದಲ್ಲಿ ಇದ್ದ 'ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದರಂತೆ'' ಎಂಬ ಗಾದೆಯನ್ನು ಈಗ ''ಬಾವಿಗೆಬೆಂಕಿಬಿದ್ದಾಗಗಡ್ಡಕೆರ್ಕೊಂಡ್ರಂತೆ'' ಎಂದುಬದಲಾಯಿಸಿದ್ದಾರಂತೆ. ಕೊಲ್ಲಿ ರಾಷ್ಟ್ರಗಳ (ಶಾಂತಿಯುತ ದೇಶಗಳನ್ನು 'ಕೊಲ್ಲದಿರಿ ರಾಷ್ಟ್ರಗಳು' ಎನ್ನಬಹುದೆ?) ತೈಲಕೂಪಗಳಿಗೆ ಬೆಂಕಿ ಬಿದ್ದ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಗ್ಯಾಸ್ ಟ್ರಬಲ್ ಶುರುವಾಗಿದೆ. ಎಲ್‌ಪಿಜಿ ಸಿಲಿಂಡರ್ ದೊರಕುವುದು ನಿಧಾನವಾಗುವುದೆಂಬ ಸುದ್ದಿಯನ್ನು ಕೊಳಕ್ಮೀಡಿಯಾ.ಕಾಮ್ ರಾಸಭ ಕಂಠಕ್ಕೆ ಲೌಡ್‌ಸ್ಪೀಕರ್ ಅಳವಡಿಸಿಕೊಂಡು ಅರಚುತ್ತಿದೆ. 'ದಿನಾ ಬಾಯ್ಬಡ್ಕೋಳೋವ್ನ ಕಾಮನಹಬ್ಬ ಬಂದಾಗ ಸುಮ್ಮನಿರ್ತಾನೆಯೇ?' ಎಂಬಂತೆಯೇ ಜಾಲತಾಣಗಳು ಸಿಕ್ಕಸಿಕ್ಕವರ ಜನ್ಮ ಜಾಲಾಡುವ ತಾಣಗಳಾಗಿ ಬದಲಾಗಿವೆ.

''ಹೋಟೇಲಲ್ಲಿ ತಿಂದೂ ತಿಂದೂ ಗ್ಯಾಸ್ ಟ್ರಬಲ್ ಆಗ್ತಿತ್ತು. ಹೋಟೇಲಿಗೇ ಗ್ಯಾಸ್ ಟ್ರಬಲ್ ಶುರುವಾಗಿರೋದ್ರಿಂದ ಸಲಾಡ್ ತಿಂದು ಸಾಲಿಡ್ ಹೆಲ್ತ್ ಪಡೆಯಬಹುದು'' ಎಂದಿತು ಬಿಪಾಸಿಟಿವ್.ಎವರ್‌ನ ಟ್ವೀಟ್.

'ಸಿಲಿಂಡರ್‌ಪ್ರಾಬ್ಲಂಅಂತೆ.ನನಗೂಸಿಲಿಂಡ್ರಿಕಲ್‌ವಿಷನ್ನಿನದೇಪ್ರಾಬ್ಲಮ್ಮು. ಕ್ಯಾನ್‌ಎನಿಬಡಿಸಜೆಸ್ಟ್‌ಎಗುಡ್‌ನೇತ್ರವೈದ್ಯ?'' ಎಂದಿತುಬ್ಲೈಂಡ್.ಡೇಟ್.ಆರ್ಗ್.

''ಎಲ್‌ಪಿಜಿ ಶುರುವಾಗಿದ್ದೇ 1991ರಲ್ಲಿ. ಮೂವತ್ತೈದು ವರ್ಷಗಳು ತೊಂದರೆಯಿಲ್ಲದೆ ನಡೆಯಿತಲ್ಲ, ಅದೇ ಸಂತೋಷ'' ಎಂದು ಟ್ವೀಟಿಸಿತು ಮನ್ಮೋಹನ್.ಸಿಸ್ಯ.ನೆಟ್

''ಎಲ್‌ಪಿಜಿ ಸಿಲಿಂಡರ್‌ಗಳು ಅದಕ್ಕೂ ಮುಂಚೆ ಇದ್ದವು ಸಿಸ್ಯಾ'' ಎಂದು ಕೆಣಕಿತು ಗುರು.ಟ್ವೀಟ್

''ಓಹ್! ಸಿಲಿಂಡರ್ ಬಾಬ್ತೋ? ನಾನು ಲಿಬರಲೈಸೇಷನ್, ಪ್ರೈವೆಟೈಸೇಷನ್, ಗ್ಲೋಬಲೈಸೇಷನ್ ಎಲ್‌ಪಿಜಿಎಂದುಕೊಂಡೆ.''ಮೊದ್ದು ಸ್ಮೈಲಿಯನ್ನು ಲಗತ್ತಿಸಿದ ಸಿಸ್ಯ.

''ಆಕ್ಚುಯಲಿ, ಗ್ಯಾಸ್‌ಟ್ರಬಲ್‌ಹೊಸದೇನಲ್ಲ. ಐದುದಶಕಗಳಹಿಂದೆಯೇ ಆಗಾಗ್ಗೆ ದೊಂಬಿ ನಡೆಯುತ್ತಿತ್ತು'' ಎಂದಿತು ಓಲ್ಡೀ.ಏನ್ಷಿಯೆಂಟ್‌ನ ಟ್ವೀಟ್.

''ದೊಂಬಿ? ಎಂತಹ ದೊಂಬಿ?'' ಕೇಳಿತು ಕ್ಯೂರಿಯಸ್.ಕ್ಯಾಟ್

''ಕಲ್ಲುತೂರಾಟ, ಡೌನ್ ಡೌನ್ ಪ್ರಿನ್ಸಿಪಾಲ್, ಬಸ್‌ಸುಡುವಿಕೆ... ಜನರಲಿ ದೊಂಬಿ.''

''ಸಿಲಿಂಡರ್ ಸಿಗುವುದು ನಿಧಾನವೆಂದು ಬಸ್ ಸುಟ್ಟರೆ?''

''ಓಹ್! ಯೂ ಮೀನ್ ಗ್ಯಾಸ್ ಸಿಲಿಂಡರ್! ನಾನೆಲ್ಲೋ ನೀವು ಗವರ್ನ್‌ಮೆಂಟ್ ಆರ್ಟ್ಸ್‌&ಸೈನ್ಸ್‌ಕಾಲೇಜಿನಬಗ್ಗೆಹೇಳ್ತಿದ್ದೀರಿಅನ್ಕೊಂಡಿದ್ದೆ. ಒಂದು ಕಾಲದಲ್ಲಿ ರೌಡಿಗಳೇ ಹೆಚ್ಚಾಗಿದ್ದ ಆ ಕಾಲೇಜನ್ನ ಗ್ಯಾಸ್ ಕಾಲೇಜ್ ಅಂತಾನೇ ಕರೀತಿದ್ದದ್ದು'' ವಿವರಿಸಿತು ಓಲ್ಡೀ. ಏತನ್ಮಧ್ಯೆ ''ಗ್ಯಾಸ್ ಟ್ರಬಲ್? ಈನೋ ಸೇವಿಸಿ'' ಎಂಬ ಜಾಹೀರಾತು ಟ್ರಾಫಿಕ್ ಜ್ಯಾಮ್ ಮಧ್ಯದಲ್ಲಿ ತೂರುವ ಆಟೋದಂತೆ ಆಗಾಗ್ಗೆ ಮೂಡಿ ಹೋಯಿತು.

''ಸಿಲಿಂಡರ್‌ಗಳಿಗೆ ಬರವಿಲ್ಲ, ನಮ್ಮ ಗೋಡೌನ್ ಭರ್ತಿ ಸ್ಟಾಕ್ ಇದೆ'' ಎಂದಿತು ಸರ್ಕಾರದ ಟ್ವೀಟ್. ''ಸರ್ಕಾರ ನಿಜ ಹೇಳುತ್ತಿದೆ'' ಎಂದಿತು ವಿಪಕ್ಷದ ಟ್ವೀಟ್. ಕೂಡಲೆ ಸರ್ಕಾರವು ಒಂದು ಏಕವ್ಯಕ್ತಿಯ ಆಯೋಗವನ್ನು ರಚಿಸಿ 'ವಿಪಕ್ಷವು ಆಡಳಿತಪಕ್ಷವು ಹೇಳಿದುದನ್ನು ಒಪ್ಪಿದೆಯೆಂದರೆ ನಮ್ಮದೋ, ಅದರದೋ ದೋಷವಿದೆ. ಕೂಲಂಕಷವಾಗಿ ತನಿಖೆ ನಡೆಸಿ ವರದಿಯನ್ನು ಕೂಡಲೆ ಒಪ್ಪಿಸಿ' ಎಂದು ಒಳಗೊಳಗೇ ಟ್ವೀಟಿಸಿತೆಂದು ಏನೇನೂ ಅರಿಯದ, ಆದರೆ 'ಬಲ್ಲ ಮೂಲಗಳು' ಎಂಬ ಬ್ಲಾಗ್ ತಿಳಿಸಿದೆ. ''ಆದರೆ ಕೆಲವೇ ನಿಮಿಷಗಳಲ್ಲಿ ವಿಪಕ್ಷವೇ ಇನ್ನೊಂದು ಪೋಸ್ಟ್ ಹಾಕಿದ್ದರಿಂದ ತನಿಖೆಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ'' ಎಂದೂ ಅದೇ ಬ್ಲಾಗ್ ತಿಳಿಸಿದೆ.

''ಸರ್ಕಾರವು ನಿಜ ಹೇಳಿದೆ. ಗೋಡೌನಿನಲ್ಲಿ ಸಿಲಿಂಡರ್‌ಗಳು ಇವೆ. ಆದರೆ ಅವೆಲ್ಲವೂ ಖಾಲಿ ಇವೆ'' ಎಂಬುದೇ ವಿಪಕ್ಷದ ಮುಂದುವರಿದ ಟ್ವೀಟ್ ಅಂತೆ. ಈ ಟ್ವಿಟರಾಟ ಇಷ್ಟಕ್ಕೇ ನಿಂತಿಲ್ಲ. ಇದೋ ಮುಂದಿನ ಟ್ವೀಟುಗಳು:

''ಸಿಲಿಂಡರ್ ಖಾಲಿ ಇಲ್ಲ'' ಸರ್ಕಾರದ ಟ್ವೀಟ್

''ಅಂದರೆ ನಿಮ್ಮ ತಲೆ ಖಾಲಿ ಇದೆ ಎಂದೋ?'' ವಿಪಕ್ಷದ ಟ್ವೀಟ್.

''ನಮ್ಮಲ್ಲಿ ಗ್ಯಾಸ್ ಟ್ರಬಲ್ಲೇ ಇಲ್ಲ.''

''ಮೂರು ಹೊತ್ತೂ ತಿಂದವರಿಗೆ ಗ್ಯಾಸ್ ಟ್ರಬಲ್ ಇರಲ್ಲ. ಹೊಟ್ಟೆಯನ್ನ ಖಾಲಿ ಬಿಟ್ಟುಕೊಂಡವರಿಗಷ್ಟೇ ಆ ತೊಂದರೆಯ ಪರಿಚಯ ಇರುತ್ತದೆ.''

''ನಾವು ಹೇಳಿದ್ದು ಸಿಲಿಂಡರ್ ತೊಂದರೆ ಇಲ್ಲವೆಂದು!''

''ತೊಂದರೆ ಇರುವುದು ಸಿಲ್ಲಿ ಲೀಡರ್‌ದು!''

ಇವೆಲ್ಲ ಪರಪಂಚದ ಗ್ಯಾಸ್ ಟ್ರಬಲ್ ಆದರೆ ನನ್ನದೇ ಆದ ಗ್ಯಾಸ್ ಟ್ರಬಲ್ ಉದ್ಭವಿಸುವುದರಲ್ಲಿತ್ತು. ಟ್ವಿಟರಾಟಿಯ ಗಲಭೆಯಲ್ಲಿ ತಲೆಯನ್ನು ಹುದುಗಿಸಿದ್ದವನನ್ನು ಮಡದಿಯ ಫೋನ್ ಕರೆ ಸೆಳೆಯಿತು.

''ವಾಟ್ ಈಸ್ ದ ಸ್ಟೋರಿ?''

''ಗ್ಯಾಸ್ ಟ್ರಬಲ್!''

''ಯಾವ ಬಾಬ್ತು?''

''ಸಿಲಿಂಡರ್‌ದು. ಗೇಟಲ್ಲಿ ವಾಚ್‌ಮನ್ ಹತ್ರ ಇಟ್ಹೋಗಿದ್ದಾನೆ. 'ತುಂಬಾ ಡೆಲಿವರಿಗಳು ಇವೆ. ಪ್ಲೀಸ್ ಕೋಆಪರೇಟ್' ಅಂತ್ಹೇಳಿ 'ಈ ನಂಬರಿಗೆ ಟಿಪ್ಸ್ ಕಳಿಸಿ' ಅಂತ ನಂಬರ್ ಕಳಿಸಿದ್ದಾನೆ ಡೆಲಿವರಿ ಬಾಯ್. ನಿಮಗೆ ನಂಬರ್ ಫಾರ್ವರ್ಡ್ ಮಾಡಿದ್ದೇನೆ'' ಎನ್ನುತ್ತಾ ಫೋನಿಟ್ಟಳು ಮಡದಿ.

ನಮ್ಮ ಅಪಾರ್ಟ್‌ಮೆಂಟಿನ ವಾಚ್‌ಮನ್ ನಿಜಕ್ಕೂ ಕಾಯುತ್ತಿರುವುದು ಯಮನನ್ನು ಮಾತ್ರ ಎಂಬುದು ನನ್ನ ದೃಢವಾದ ನಂಬಿಕೆ. ಬಾವಲಿಯ ಬೆಳಗಿನ ದೃಷ್ಟಿ, ಜೇಡದ ಶ್ರವಣಶಕ್ತಿ, ಆಮೆಯ ನಡಿಗೆಯ ಈತನನ್ನು ಗಾಂಧೀಜಿಯೇ 'ಕೈಸೇ ಹೋ ಅಂಕಲ್?' ಎಂದು ವಿಚಾರಿಸಿಕೊಂಡಿದ್ದರಂತೆ. ಅವನನ್ನು ಹೊರಲು ಜನರು ಬೇಕಾಗಿರುವ ಪರಿಸ್ಥಿತಿಯಲ್ಲಿರುವವನನ್ನು ಸಿಲಿಂಡರ್ ಹೊರು ಎನ್ನಲಾದೀತೇ! ನಾನೇ ಹೋದೆ. ಬೆಂಗಳೂರಿನ ರಸ್ತೆಗಳ ತದ್ರೂಪವಾಗಿರುವ ನಮ್ಮ ಅಪಾಟ್‌ಮೆಂಟಿನ ಬೇಸ್‌ಮೆಂಟಿನಲ್ಲಿ ಹಳ್ಳಗಳನ್ನು ಹಾರಿಸಿ, ಗುಡ್ಡೆಗಳಿಗೆ ಢೀ ಕೊಟ್ಟು ಪುಡಿಯಾಗಿಸಿ, ಸಿಲಿಂಡರನ್ನು ಲಿಫ್ಟಿಗೆ ವರ್ಗಾಯಿಸಿ ಫ್ಲಾಟಿಗೆ ತಂದೆ. ''ಗ್ಯಾಸ್ ಮುಗಿದಿತ್ತು. ಸಿಲಿಂಡರ್ ಚೇಂಜ್ ಮಾಡಿ ಪುಟ್ಟಿ ಬರುವಷ್ಟರಲ್ಲಿ ಅನ್ನಕ್ಕಿಡಿ'' ಎಂದಿತು ವಾಟ್ಸ್‌ಆಪ್.

ಸಿಲಿಂಡರ್‌ಗಳಿಗೆ ಮುತ್ತೈದೆಯ ಲಕ್ಷಣಗಳಿರುತ್ತವೆ. ಮೈಭರ್ತಿ ಕುಂಕುಮದ ಬಣ್ಣವಿರುವ ಇವಕ್ಕೆ ಕುತ್ತಿಗೆಯಲ್ಲಿ ಅರಿಶಿನದ ದಾರದ ಬದಲಿಗೆ ಬಿಳಿಯಬಣ್ಣದದಾರವೊಂದಿರುತ್ತದೆ. ವಿವಾಹಿತಳ ಅರಿಶಿನದದಾರವಾದರೂ ಸುಲಭವಾಗಿ ತುಂಡಾದೀತು, ಆದರೆ ಸಿಲಿಂಡರ್‌ನ ದಾರವು 'ಎಳೆದರಾಗಲಿ, ಅಲುಗಿಸಿದರಾಗಲಿ, ದಾರವನ್ನು ಹಿಡಿದೇ ಸಿಲಿಂಡರನ್ನು ಎತ್ತಿಹಿಡಿದರಾಗಲಿ, ನಾತಿಚರಾಮಿ' ಎಂಬಂತೆ ಭದ್ರವಾಗಿ ನೇತಾಡುತ್ತಿರುತ್ತದೆ. ಆ 'ತಾಳಿದಾರ'ವನ್ನು ಸಿಲಿಂಡರಿನ ಕೊರಳಿನಿಂದ ಬೇರ್ಪಡಿಸುವ ವಿಚ್ಛೇದನ ವಕೀಲನ ಕೆಲಸವನ್ನು ಮಾಡದಿದ್ದರೆ ಗ್ಯಾಸ್ ಹೊರಬರದೆ ಇಡೀ ಕಿಚನ್ 'ಗ್ಯಾಸ್ ಟ್ರಬಲ್'ನಿಂದ ನರಳುತ್ತದೆ.

ಹಳೆಯಸಿಲಿಂಡರಿನಿಂದಸರಬರಾಜುಮೂತಿಯನ್ನುಹೊರಸೆಳೆದುಹೊಸ ಸಿಲಿಂಡರಿಗೆಹೊಂದಿಸುವಮುನ್ನ ಸಿಲಿಂಡರಿನ 'ತಾಳಿದಾರ'ವನ್ನು ತೆಗೆಯಲು ಉದ್ಯುಕ್ತನಾದೆ. ಭೂಮಿಗೆ ಸಮಾನಾಂತರವಾಗಿ ದಾರವನ್ನು ಸೆಳೆದು ಹಿಡಿದು ಎಡಕ್ಕೆ ಬಲವಾಗಿ ಜಗ್ಗಿದೆ. ಊಹೂಂ. ದುಂಬಿಕೊರೆದರೂ ತೊಡೆಯಲುಗಿಸದ ಕರ್ಣನಂತೆ ದಾರವು ಯಥಾಸ್ಥಿತಿಯಲ್ಲಿತ್ತು.

ಎಡಕ್ಕೆ ಜಗ್ಗಿದೆ. ಅದು ಕಾರ್ಲ್ ಮಾರ್ಕ್ಸ್‌ನ ಅನುಯಾಯಿ ಅಲ್ಲವೆಂದು ದೃಢವಾಯಿತು. ದಾರವನ್ನು ಮುಷ್ಟಿಯಲ್ಲಿ ಹಿಡಿದು ಅನಾಮತ್ತಾಗಿ ಸಿಲಿಂಡರನ್ನು ಎತ್ತಿದೆ. ದಾರವು ಸ್ಥಿತಿಸ್ಥಾಪಕತ್ವವನ್ನು ಕಾಪಾಡಿಕೊಂಡಿತು. ಚಿಂತಾಕ್ರಾಂತನಾದೆ. ಕ್ಲಾಂತನಾದೆ. ಟ್ವಿಟರ್‌ನಲ್ಲಿ ಕಾಣಿಸಿಕೊಂಡ ಗ್ಯಾಸ್‌ಟ್ರಬಲ್ ನನ್ನನ್ನೇನೂ ಕಾಡಿರಲಿಲ್ಲ. ಮೊನ್ನೆ ಬುಕ್ ಮಾಡಿದ್ದೆ, ಇವತ್ತು ಅನ್ನಕ್ಕೆ ಇಡಬೇಕಾದ ಸಮಯಕ್ಕೆ ಸರಿಯಾಗಿ ಸಿಲಿಂಡರ್ ಬಂದಿತ್ತು. ಆದರೆ ದಾರ?

'ಸಂಸ್ಕೃತದಲ್ಲಿ ಹೆಂಡತಿಯನ್ನು ದಾರಾ ಎಂದು ಕರೆಯುತ್ತಾರೆ'' ಎಂಬಮಾತು ನೆನಪಾಯಿತು. ಈ ದಾರದ ಸಮಸ್ಯೆ ಬಗೆಹರಿಯದಿದ್ದರೆ ಆ ದಾರಾ ಸಮಸ್ಯೆ ಆಗುವ ಸಂಭವವಿದೆ ಎಂದು ಮನ ಭವಿಷ್ಯ ನುಡಿಯಿತು. ಹೇಗಾದರೂ ದಾರವನ್ನು ಮಣಿಸಿ ದಾರಾಳನ್ನು ಮೆಚ್ಚಿಸಬೇಕೆಂದು ನಿರ್ಧರಿಸಿ ಮಡದಿ ಫಾರ್ವರ್ಡಿಸಿದ್ದ ನಂಬರಿಗೆ ಫೋನ್ ಮಾಡಿ, ವಿಷಯವನ್ನು ತಿಳಿಸಿ, ಗೋಗರೆದೆ. ಗೋರ್ಕಲ್ಲಿನ ಮೇಲಿನ ಮಳೆಯ ನೆನಪಾಯಿತು. ಪರಿಣಾಮವೂ ಡಿಟ್ಟೋ.

ಬಾಗಿಲ ಬಳಿ ನೆರಳಾಡಿತು. ತಲೆಯೆತ್ತಿದೆ. 'ಕೈಸೇ ಹೋ ಅಂಕಲ್' ಅನ್ನಿಸಿಕೊಂಡವ ನಿಂತಿದ್ದ.

'ಅಮ್ಮ ಫೋನ್ ಮಾಡಿದ್ದರು'' ಎಂದ. ಅವರ ಅಮ್ಮ ಇದ್ದ ಸಮಯದಲ್ಲಿ ಗ್ರಹಂ ಬೆಲ್ ಹುಟ್ಟಿದ್ದನೋ ಇಲ್ಲವೋ ಎಂಬ ಆಲೋಚನೆಯೊಂದು ಸುಳಿದು ಕಷ್ಟದಲ್ಲಿಯೂ ನಗೆಯ ಸುಳಿಗಾಳಿ ಸುಳಿಯಿತು.

''ಸಿಲಿಂಡರ್‌ನ ದಾರ ತೆಗೆಯಕ್ಕೆ ಅಪ್ಪೋರಿಗೆ ಬರಲ್ಲ, ತೆಕ್ಕೊಡು ಅಂದ್ರು ಅಮ್ಮ.'' ನನಗೇಮಣಿಯದಆದಾನವದಾರವುಗೋರಿಗೆಎರಡುಹೆಜ್ಜೆದೂರ ಇವನಿಗೆ ಸಗ್ಗುವುದೇನು? ವಾಚ್‌ಮನ್ ನೇರವಾಗಿ ಸಿಲಿಂಡರ್ ಬಳಿ ಹೋದ. ಒಂದೇ ಒಂದು ಕ್ಷಣದಲ್ಲಿ 'ತಾಳಿದಾರ'ವನ್ನು ಸಿಲಿಂಡರಿನ ಕುತ್ತಿಗೆಯಿಂದ ಬೇರ್ಪಡಿಸಿ, ಸರಬರಾಜುಮೂತಿಯನ್ನು ತಗುಲಿಸಿ ಹೊರನಡೆದ.

ಮನೆಯ ಗ್ಯಾಸ್ ಟ್ರಬಲ್ ಸಾಲ್ವ್ ಆಯಿತು. ಪ್ರಪಂಚದ್ದು?

ಸದ್ಯದಲ್ಲೇ ಪ್ರಪಂಚದ ಎಲ್ಲ ತೊಂದರೆಗಳಿಗೂ ಪರಿಹಾರವನ್ನು ಹೊಂದಿರುವ 'ಯುದ್ಧಪ್ರೇಮಿ ಶಾಂತಿದೂತ' ಟ್ರಂಪ್ ಎಲ್ಲರ ಮನೆಗೂ ಸಿಲಿಂಡರ್ ಕಳುಹಿಸುವನಂತೆ. ನೀವು ಮಾಡಬೇಕಾದುದಿಷ್ಟೆ.

ಕೂಡಲೆ ನಿಮ್ಮ ಕನ್ಸ್ಯೂಮರ್ ನಂಬರನ್ನು ವೈಟ್‌ಹೌಸಿಗೆ ವಾಟ್ಸಪ್ ಮಾಡಿ!

ಆರ್ಷಸಾಹಿತ್ಯಕ್ಕೆ ಹೊಸ ಸ್ಪರ್ಶ ನೀಡಿದ ಬನ್ನಂಜೆ

▶ ಗ.ನಾ. ಭಟ್ಟ

ಸಂಸ್ಕೃತ ವಾಙ್ಮಯದಲ್ಲಿ ಭರತಭೂಮಿಯ ಕೀರ್ತಿ ಎರಡು ಮಹಾಕಾವ್ಯಗಳಿಂದ ಅಮರವಾಗಿ ಅತ್ಯುನ್ನತವಾಗಿ ಬೆಳಗುತ್ತಿದೆ. ವೇದಗಳ ನಂತರ ರಾಮಾಯಣ ಮತ್ತು ಮಹಾಭಾರತಗಳು ಪರಮಪೂಜ್ಯ, ಜೀವನಾದರ್ಶ ಗ್ರಂಥಗಳಾಗಿ ಕೋಟಿ ಕೋಟಿ ಭಾರತೀಯರ ಹೃದಯದಲ್ಲಿ ನೆಲೆಗೊಂಡಿವೆ. ಈ ಎರಡರಲ್ಲಿ ರಾಮಾಯಣವು ಹಿಮಾಲಯ ಪರ್ವತದಂತೆ ಅತ್ಯಂತ ರಮಣೀಯವೂ, ಗಗನಚುಂಬಿಯೂ ಆಗಿದ್ದರೆ ಮಹಾಭಾರತವು ಸಮುದ್ರದಂತೆ ವಿಸ್ತಾರವಾಗಿ ಪ್ರಕ್ಷುಬ್ಧವಾಗಿ ಜೀವನದ ತೊಡಕಿನ ಪ್ರಸಂಗಗಳನ್ನು ತೋರಿಸುತ್ತಾ ಮಾರ್ಗಜ್ಯೋತಿಯಾಗಿ ಕಂಗೊಳಿಸುತ್ತಿದೆ. ಮನುಷ್ಯಜೀವನದ ಅರ್ಥವೇನು? ಧರ್ಮವೇನು? ಸಾರಭೂತವಾದ ಗುಣಗಳೇನು ಎಂಬಿತ್ಯಾದಿ ಪ್ರಶ್ನೆಗಳಿಗೆ ರಾಮಾಯಣ, ಮಹಾಭಾರತಗಳಿಂದ ನಾವು ಉತ್ತರಗಳನ್ನು ಕಂಡುಕೊಳ್ಳಬಹುದು.

ಆದರೂ ಅವು ಒಮ್ಮೊಮ್ಮೆ ನಮಗೆ ಎಟುಕುವುದಿಲ್ಲ. ಅದರ ಒಳಮರ್ಮವನ್ನು, ಸಂದೇಶ-ಆದರ್ಶಗಳನ್ನು, ಧರ್ಮಾಧರ್ಮಗಳನ್ನು, ಒಳಿತು-ಕೆಡುಕುಗಳನ್ನು ತೋರಿಸಿಕೊಡುವುದಕ್ಕೆ ಖಂಡಿತಕ್ಕೂ ಒಬ್ಬ ಗುರು ಬೇಕಾಗುತ್ತಾನೆ. ಅಂತಹ ಗುರುಗಳಲ್ಲಿ ಒಬ್ಬರು ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯರು, ಇನ್ನೊಬ್ಬರು ವಾಲ್ಮೀಕಿ-ವ್ಯಾಸಹೃದಯಜ್ಞ ಎಂದೇ ಖ್ಯಾತರಾದ ಡಾ. ಕೆ.ಎಸ್.ನಾರಾಯಣಾಚಾರ್ಯರು. ಇವರಿಬ್ಬರೂ ಇಂದು ನಮ್ಮೊಂದಿಗಿಲ್ಲ. ಆದರೆ ಅವರು ರಚಿಸಿದ ಕೃತಿಗಳು, ಮಾಡಿದ ಪ್ರವಚನಗಳು ನಮ್ಮೊಂದಿಗೆ ಇವೆ. ರಾಮಾಯಣ-ಭಾರತದ ಒಳಬಗೆ- ಗುಟ್ಟು-ಸ್ವಾರಸ್ಯಗಳನ್ನು ತಿಳಿಯುವುದಕ್ಕೆ ಇಬ್ಬರೂ ಒಂದೊಂದು ಮಾರ್ಗವನ್ನು ಅನುಸರಿಸಿದರು. ಕೆ.ಎಸ್.ನಾರಾಯಣಾಚಾರ್ಯರು ಐರೋಪ್ಯ ಸಾಹಿತ್ಯ ಕೃಷಿಯ ವಿಮರ್ಶಾ ಮಾನದಂಡವನ್ನೂ, ಭಾರತೀಯ ವ್ಯಾಖ್ಯಾನ ಪರಂಪರೆಯನ್ನೂ, ಇಲ್ಲಿಯ ಕಾವ್ಯಮೀಮಾಂಸೆಯ ಅಳತೆಗೋಲನ್ನೂ ಇಟ್ಟುಕೊಂಡು ಈ ಮಹಾಕಾವ್ಯಗಳ ಅಂತರಂಗವನ್ನು ಮೊಗೆದು ಮೊಗೆದು ಕೊಟ್ಟರು. ಬನ್ನಂಜೆಯವರು ಇಲ್ಲಿಯ ಮಹಾಕಾವ್ಯಗಳ ಉಪಕ್ರಮ-ಉಪಸಂಹಾರಗಳಿಂದಲೇ, ಅದರ ಪೂರ್ವೋತ್ತರ ಸಮನ್ವಯದಿಂದಲೇ ಅವುಗಳ ಅಂತರಂಗವನ್ನು ಬಿಡಿಸಿ ಬಿಡಿಸಿ ಕಾವ್ಯರಸಿಕರಿಗೆ ಉಣಬಡಿಸಿದರು.


ಪೂರ್ವೋತ್ತರಾವಿರೋಧೇನ ಕೋತ್ರಾರ್ಥೋಭಿಮತೋ ಭವೇತ್ ।
ಇತ್ಯಾದ್ಯಮೂಹನಂ ತರ್ಕಃ ಶುಷ್ಕತರ್ಕಂ ತು ವರ್ಜಯೇತ್ ॥

ಎಂಬ ಮಾನದಂಡವನ್ನಿಟ್ಟುಕೊಂಡು ಮಹಾಕಾವ್ಯಗಳ ಅಂತರಂಗಕ್ಕೆ ಹೊಸ್ಪರ್ಶವನ್ನು ನೀಡಿದರು. ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿದರು.

ಬನ್ನಂಜೆ ಗೋವಿಂದಾಚಾರ್ಯರು ಈ ನಾಡಿನ ಭಾಗ್ಯ. ಎಲ್ಲಿ ಬೇಕೆಂದರೆ ಅಲ್ಲಿ, ಯಾವಾಗ ಬೇಕೆಂದರೆ ಆವಾಗ ಕಾಣಸಿಗುವ ವ್ಯಕ್ತಿತ್ವವಲ್ಲ. ಅವರದ್ದು ಶತಮಾನಕ್ಕೊಮ್ಮೆ ಭೂಮಿಯಲ್ಲಿ ಹುಟ್ಟಿಬರುವ ಅಪರೂಪದ ಚೈತನ್ಯ. ಅಸಾಧಾರಣವಾದ ವೈದುಷ್ಯ, ಚಿಂತನೆ, ವಿಮರ್ಶೆ-ಇವನ್ನು ಒಂದೇ ಕಡೆ ನೋಡಬೇಕೆಂದರೆ ಅದು ಬನ್ನಂಜೆಯವರಲ್ಲಿ ಮಾತ್ರ. ಪ್ರಾಚೀನ ಸಾಹಿತ್ಯಗಳಿಗೆ ಭಾಷ್ಯಕಾರರಾಗಿ, ವ್ಯಾಖ್ಯಾನಕಾರರಾಗಿ, ಮಹಾವಾಗ್ಮಿಯಾಗಿ, ಕವಿಯಾಗಿ, ಕಥನಕಾರರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ಪತ್ರಕರ್ತರಾಗಿ, ದಾರ್ಶನಿಕರಾಗಿ, ವೇದಾಂತಿಯಾಗಿ, ಸಂಶೋಧಕರಾಗಿ, ನೂರೈವತ್ತಕ್ಕೂ ಹೆಚ್ಚು ಕೃತಿರಚಯಿತರಾಗಿ ಅವರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಪ್ರಪಂಚಕ್ಕೆ ನೀಡಿದ ಕೊಡುಗೆ ಅನನ್ಯವಾದುದು.

ಅವರ ವ್ಯಕ್ತಿತ್ವದಲ್ಲಿ ಸುಂದರ ಭಾವುಕತೆಯೂ ಪ್ರೌಢ ವೈಚಾರಿಕತೆಯೂ ಮೇಳೈಸಿದ್ದವು. ಸಂಪ್ರದಾಯದೊಟ್ಟಿಗೆ ಆಧುನಿಕತೆಯೂ ಅಷ್ಟೇ ಪ್ರಮಾಣದಲ್ಲಿ ಬೆರೆತಿದ್ದವು. ಸರಳತೆ-ಸಂಕೀರ್ಣತೆಯೊಂದಿಗೆ ಸರಸತೆ-ವಿನೋದ, ಸ್ನೇಹ-ಸಾಹಸ-ಇವೆಲ್ಲವೂ ಮುಪ್ಪುರಿಗೊಂಡಿದ್ದವು. ವಿಕ್ಷಿಪ್ತತೆ ಅವರ ವಿಶೇಷ ಗುಣವಾಗಿತ್ತು. ''ನನ್ನದು ವಿಕ್ಷಿಪ್ತವಾದ ಅಧ್ಯಯನ, ವಿಕ್ಷಿಪ್ತವಾದ ಓದುವಿಕೆ, ವಿಕ್ಷಿಪ್ತವಾದ ಬದುಕು. ಆದರೂ ಅದೊಂದು ತನ್ನಷ್ಟಕ್ಕೆ ಒದಗಿ ಬಂದ ವೇದಿಕೆ'' ಎಂದು ಅವರೇ ಹೇಳಿಕೊಂಡಿದ್ದಾರೆ. (ಆತ್ಮನಿವೇದನೆ-28)

ಅವರು ಬಾಲ್ಯದಿಂದಲೂ ಜಿಜ್ಞಾಸು ಪ್ರವೃತ್ತಿಯನ್ನು ಹೊಂದಿದ್ದರು. ಪ್ರಶ್ನೆ ಕೇಳುವುದು ಅವರ ಜಾಯಮಾನವಾಗಿತ್ತು. ಸಾಂಪ್ರದಾಯಿಕ ಪಂಡಿತರಿಂದ ಅವರಿಗೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಅದರಿಂದ ಅವರು ತುಂಬಾ ಅತೃಪ್ತರಾದರು. ಇದಕ್ಕೆ ಪರಿಹಾರ ಏನು ಎಂದು ಅವರು ತಮ್ಮ ತಂದೆಯವರ ಬಳಿ ಕೇಳಿದಾಗ ''ಪ್ರಶ್ನೆ ನಿನಗೆ ಬಂತಲ್ಲ, ಆ ಪ್ರಶ್ನೆ ಎಲ್ಲಿಂದ ಬಂತು ಅಲ್ಲೇ ಉತ್ತರ ಹುಡುಕು'' ಅಂತ ಹೇಳಿದರು. ''ತಪಸಾ ಬ್ರಹ್ಮ ವಿಜಿಜ್ಞಾಸಸ್ವ'' ಎಂಬ ಉಪನಿಷದ್ವಾಣಿ ಅವರನ್ನು ಪ್ರೇರಿಸಿ, ಮುನ್ನಡೆಸಿತು. ''ತಂದೆಯವರ ಮಾತು ನಿಜವಾಗಿ ನನ್ನನ್ನು ಚಿಂತನೆಗೆ ಹಚ್ಚಿತು. ನನ್ನ ಜೀವನಕ್ಕೆ ಹೊಸ ರೂಪರೇಷೆ ನೀಡಿತು'' ಎಂದಿದ್ದಾರೆ ಬನ್ನಂಜೆ. ಅವರ ದೊಡ್ಡಪ್ಪ ಪಡುಮುನ್ನೂರು ಶ್ರೀನಿವಾಸಾಚಾರ್ಯರು, ಪೇಜಾವರ ಶ್ರೀಗಳು ಮತ್ತು ಭಂಡಾರಕೇರೆ ಶ್ರೀ ವಿದ್ಯಾಮಾನ್ಯ ತೀರ್ಥರು ಇವರುಗಳಿಂದ ಒಂದಿಷ್ಟು ಪಾಠ ಹೇಳಿಸಿಕೊಂಡಿದ್ದನ್ನು ಬಿಟ್ಟರೆ ಬನ್ನಂಜೆಯವರದ್ದು ಸ್ವಾಧ್ಯಾಯವೇ ಹೆಚ್ಚು. ಇದರ ಜೊತೆಗೆ ''ಗುರೋರಭಾವೇ ಯೋಗ್ಯಸ್ಯ ಸ್ವಯಮೇವಾಭ್ಯಸೇತ್ ಶ್ರುತೀಃ'' ಎಂಬ ಮಧ್ವಾಚಾರ್ಯರ ಒಂದು ಮಾತು ಅವರ ಸ್ವಾಧ್ಯಾಯವನ್ನು ಪೋಷಿಸಿತು. ಹೀಗೆ ಬಾಲ್ಯದಿಂದಲೇ ಸ್ವಾಧ್ಯಾಯ ಮತ್ತು ಪ್ರವಚನದ ಮೂಲಕ ಅವರು ಬೆಳೆದ ಪರಿ ವಿಸ್ಮಯಾವಹವಾದುದು.



ಇಂದು ಸಂಜೆ 5-30ಕ್ಕೆ ಮೈಸೂರಿನ ರಮಾಗೋವಿಂದ್ ಕಲಾವೇದಿಕೆಯಲ್ಲಿ (ಗಾನಭಾರತೀ ವೀಣೆ ಶೇಷಣ್ಣ ಭವನದ ಆವರಣ) 'ಬನ್ನಂಜೆ 90 ವಿಶ್ವನಮನ' ಕಾರ್ಯಕ್ರಮ ಜರುಗಲಿದೆ.

ಬನ್ನಂಜೆಯವರು ತಮ್ಮ ಓದಿನ ಬಲದಿಂದ, ಜಿಜ್ಞಾಸು ಮತ್ತು ಪ್ರಶ್ನೋತ್ಥಾಪಕಪ್ರವೃತ್ತಿಯಿಂದ ತಥಾಕಥಿತಸಾಹಿತ್ಯ ಮತ್ತು ಚರ್ವಿತಚರ್ವಣ ಹಳಸಲು ಮಾತುಗಳಿಂದ ಬಹುಬೇಗನೆ ಹೊರಬಂದುಬಿಟ್ಟರು. ಅದರ ಫಲವಾಗಿ ಅವರು ನೀಡಿದ ಒಂದೊಂದು ನವೋನವೀನ ಹೇಳಿಕೆಯೂ ಸಂಪ್ರದಾಯಶರಣರಿಗೆ, ಮಡಿವಂತರಿಗೆ ವ್ಯತಿರಿಕ್ತವಾಗಿ, ವಿರುದ್ಧವಾಗಿ ಕಾಣಿಸಿಕೊಂಡವು. ವಸ್ತುತಃ ಅವು ವಿರುದ್ಧವಾಗಿಯೂ, ವ್ಯತಿರಿಕ್ತವಾಗಿಯೂ ಇರಲಿಲ್ಲ. ಚಿಂತನ-ಮಂಥನದಿಂದ ಬಂದ ನವನೀತವಾಗಿತ್ತು. ಅದು ಇತರರಿಗೆ ಅರ್ಥವಾಗಲಿಲ್ಲ. ಅಂತಹವರ ಬಗ್ಗೆ ಅವರೇ ಹೇಳಿದ ಒಂದು ಮಾತು-''ಕುರುಡರಿಗೆ ಕಂಬ ಕಾಣದೇ ಇದ್ದರೆ ಅದು ಕಂಬದ ತಪ್ಪಲ್ಲ'' ಎಂದು. ಇದರಿಂದಾಗಿಯೇ ಬನ್ನಂಜೆ ತಥಾಕಥಿತ ಆಸ್ತಿಕರಿಗೆ ಮೈಲಿಗೆಯಾದರು; ತಥಾಕಥಿತ ನಾಸ್ತಿಕರಿಗೆ ಮಡಿವಂತರಾದರು. ಇದಕ್ಕೊಂದು ಸುಂದರ ಉದಾಹರಣೆಯೆಂದರೆ- ''ಸಂಸ್ಕೃತ ನಾಟಕಗಳನ್ನು ತೆಗೆದರೆ ಐವತ್ತರಿಂದ ಅರವತ್ತು ನಾಟಕಗಳು ರಾಮಾಯಣದ್ದೇ. ಎಲ್ಲ ಕವಿಗಳ ವಿಷಯ ಹೆಚ್ಚಾಗಿ ರಾಮಾಯಣದ್ದು. ಕಾಳಿದಾಸ ಮಹಾಭಾರತದ ಶಾಕುಂತಲ ತೆಗೆದುಕೊಂಡ. ನನಗೆ ವಾಲ್ಮೀಕಿಯ ಪ್ರಭಾವ ಅಷ್ಟೊಂದಿಲ್ಲ. ನನ್ನ ದೃಷ್ಟಿಯಲ್ಲಿ ವೇದವ್ಯಾಸರು ಒಂದು ಪರ್ವತವಾದರೆ ವಾಲ್ಮೀಕಿ ತಪ್ಪಲು ಇದ್ದ ಹಾಗೆ. ವ್ಯಾಸರ ಪ್ರಜ್ಞೆಯ ಮುಂದೆ ಏನೂ ಅಲ್ಲ. ಆದರೆ ವಾಲ್ಮೀಕಿಯ ಪ್ರಭಾವವೂ ನನ್ನ ಮೇಲಿದೆ. ಕಾಳಿದಾಸ ನನಗೆ ಯಾವ ಹಂತದಲ್ಲೂ ಪ್ರಭಾವ ಬೀರಲೇ ಇಲ್ಲ. ನನಗೆ ಮಹಾಕಾವ್ಯಗಳಲ್ಲಿ ತುಂಬಾ ಕಾಡಿದ್ದು ಭಾರವಿಯ ಕಿರಾತಾರ್ಜುನೀಯ. ಸಂಸ್ಕೃತವನ್ನು ಅವನು ದುಡಿಸಿಕೊಂಡ ಚೆಂದ ಇದೆಯಲ್ಲ ಅದ್ಭುತ ಅದು. ಅದರ ನಂತರ ಮಾಘ. ಕೆಲವರು ಮಹಾಕಾವ್ಯ ಅಂದರೆ ನೈಷಧ ಅಂತಾರೆ. ಯಾವುದೂ ಕೂಡಾ ಪ್ರಭಾವ ಮಾಡಲಿಲ್ಲ. ನನಗೆ ತುಂಬ ಖುಷಿ ಕೊಟ್ಟವನು ಭಾರವಿ. ನಾಟಕಗಳಲ್ಲಿ ತುಂಬಾ ಖುಷಿ ಕೊಟ್ಟವ ಭವಭೂತಿ ಮತ್ತು ಭಾಸ; ಕಾಳಿದಾಸ ಅಲ್ಲ'' ಎಂದು ಬನ್ನಂಜೆ ಹೇಳುತ್ತಾರೆ.

ಇಲ್ಲಿ ಒಂದು ಸೂಕ್ಷ್ಮವಿದೆ. ಇಲ್ಲಿ ಬನ್ನಂಜೆ ವ್ಯಾಸ, ವಾಲ್ಮೀಕಿ, ಕಾಳಿದಾಸ, ಭಾಸ, ಭವಭೂತಿ ಮೊದಲಾದವರ ಬಗ್ಗೆ ತುಂಬಾ ಭಿನ್ನವಾಗಿ ಮಾತನಾಡಿದ್ದಾರೆ. ಇದು ಮಾಮೂಲಿ ಜಾಡಿಗಿಂತ ತುಂಬಾ ಭಿನ್ನವಾದ, ಹೊಸದಾದ ಮಾತು ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನೇ ಸ್ವಲ್ಪ ವಿವರಿಸಿ ಹೇಳುವುದಾದರೆ-

ಉಪಮಾ ಕಾಳಿದಾಸಸ್ಯ ಭಾರವೇರರ್ಥಗೌರವಮ್ ।
ದಂಡಿನಃ ಪದಲಾಲಿತ್ಯಂ ಮಾಘೇ ಸಂತಿ ತ್ರಯೋಗುಣಾಃ ॥
ಕಾವ್ಯೇಷು ನಾಟಕಂ ರಮ್ಯಮ್ ತತ್ರ ರಮ್ಯಾ ಶಕುಂತಲಾ ।
ತತ್ರಾಪಿ ಚತುರ್ಥೋಂಕೋ ತತ್ರ ಶ್ಲೋಕಚತುಷ್ಟಯಮ್ ॥

''ಉಪಮೆಗೆ ಕಾಳಿದಾಸ, ಅರ್ಥಗೌರವಕ್ಕೆ ಭಾರವಿ, ಪದಲಾಲಿತ್ಯಕ್ಕೆ ದಂಡಿ-ಈ ಮೂರೂ ಗುಣಗಳು ಮಾಘನಲ್ಲಿ ಇವೆ''. ''ಕಾವ್ಯಗಳಲ್ಲಿ ರಮಣೀಯವಾದುದು ನಾಟಕ; ಅದರಲ್ಲೂ ಶಕುಂತಲಾ; ಅದರಲ್ಲೂ ನಾಲ್ಕನೇ ಅಂಕ; ಅದರಲ್ಲೂ ನಾಲ್ಕನೆ ಶ್ಲೋಕ'' ಎಂದು ಯಾವನೋ ಒಬ್ಬ ತನ್ನ ಅನಿಸಿಕೆಯನ್ನು ಹರಿಬಿಟ್ಟ. ಇದನ್ನು ಹಿಂದುಮುಂದು ಯೋಚಿಸದೆ ಎಲ್ಲರೂ ಸ್ವೀಕರಿಸಿ ಪ್ರಚಾರ ಮಾಡತೊಡಗಿದರು. ಇಂತಹ ಕೊಂಡಾಟದ, ಅನಿಸಿಕೆಯ ಮಾತುಗಳು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿ ದಂಡಿಯಾಗಿ ಸಿಗುತ್ತವೆ. ಇಂತಹ ಮಾತುಗಳಿಗೆ ಬನ್ನಂಜೆ ಅಪವಾದ. ಅವರು ಸ್ವತಂತ್ರವಾಗಿ ಚಿಂತಿಸಿ, ತನಗೆ ಅನಿಸಿದ್ದನ್ನು ನೇರವಾಗಿ ದಿಟ್ಟವಾಗಿ ಸಹೃದಯರೆಲ್ಲರೂ ಮೆಚ್ಚುವಂತೆ ಸಾಧಾರಿತವಾಗಿ ಹೇಳುವವರು. ಇದು ಅನೇಕರಿಗೆ ಪಥ್ಯವಾಗುವುದಿಲ್ಲ. ಅಂತಹವರನ್ನು ಕಂಡೇ ಬನ್ನಂಜೆ 'ತಥಾಕಥಿತ ಸಾಹಿತಿಗಳು' ಎಂದು ಖಾರವಾಗಿ ಹೇಳಿದ್ದು.

ಬನ್ನಂಜೆಯವರ ಓದು ಆಳವಾದುದು, ವಿಶಾಲವಾದುದು ಮತ್ತು ಸೃಷ್ಟಿಶೀಲವಾದುದು. ಪ್ರವಚನವೂ ಹಾಗೆಯೇ. ಯಾವುದೇ ಆದರೂ ಕೂಡಾ ಭಿನ್ನವಾಗಿ, ಹೊಸದಾಗಿ, ವಿಚಿಕಿತ್ಸಕ ದೃಷ್ಟಿಯಿಂದ ನೋಡುವುದು ಅವರಕ್ರಮ. ಈ ಕಾರಣದಿಂದಲೇ ಅವರು ನಮ್ಮ ನಾಡಿನ ಪ್ರವಚನಕಾರರಲ್ಲಿ, ಲೇಖಕರಲ್ಲಿ, ಆರ್ಷಸಾಹಿತಿಗಳಲ್ಲಿ ಅಗ್ರಮಾನ್ಯರೆನಿಸಿಕೊಂಡರು.

ಅರಬ್ ರಾಷ್ಟ್ರಗಳ ವಿಶ್ವಾಸ ಕಳಕೊಂಡ ಅಮೆರಿಕ

▶ ದಿನೇಶ ನಾಯಕ್

ಇರಾನ್ ಸಮರ ಇನ್ನೂ ಮುಂದುವರಿದಿದ್ದು, ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಇರಾನ್ ತನ್ನ ಶತ್ರುಗಳಿಗೆ ಪ್ರಬಲ ಪ್ರತಿಯೇಟು ನೀಡುತ್ತಿದೆ. ಅದು ಇಸ್ರೇಲ್‌ನ ವಿರುದ್ಧ ದಾಳಿ ಮಾಡಿರುವುದಷ್ಟೇ ಅಲ್ಲದೇ ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕನ್ ಮಿಲಿಟರಿ ನೆಲೆಗಳ ಮೇಲೂ ದಾಳಿ ನಡೆಸಿದೆ. ಅದರ ಜತೆಗೇ ತೈಲ ಸಂಗ್ರಹಾಗಾರಗಳ ಮೇಲೆ, ತೈಲ ನಿಕ್ಷೇಪಗಳ ಮೇಲೆ ಕೂಡಾ ದಾಳಿ ನಡೆಸಿದೆ. ಅದು ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವ ಕಾರಣದಿಂದಾಗಿ ಇಡೀ ಜಾಗತಿಕ ತೈಲ ಪೂರೈಕೆಯ ಮೇಲೆ ಪರಿಣಾಮ ಉಂಟಾಗಿದೆ. ಅಮೆರಿಕದ ಕೆಲವು ಯುದ್ಧವಿಮಾನಗಳನ್ನೂ ಹೊಡೆದುರುಳಿಸಿದೆ.

ಈ ಸಮರದಲ್ಲಿ ವಿನಾಕಾರಣ ಕೊಲ್ಲಿಯ ಕೆಲವು ದೇಶಗಳು ಸಿಲುಕಿಕೊಂಡಿವೆ. ಅಮೆರಿಕಕ್ಕೆ ಮಿಲಿಟರಿ ನೆಲೆ ಸ್ಥಾಪಿಸಲು ಅವಕಾಶ ನೀಡಿದ ಕಾರಣಕ್ಕಾಗಿ ಅವುಗಳೂ ದಾಳಿಗೆರವಾಗಿವೆ. ಅವುಗಳಿಗೆ 'ರಕ್ಷಣಾ ಕೊಡೆ' ಒದಗಿಸುವುದಾಗಿ ಹೇಳಿದ್ದ ಅಮೆರಿಕವು ಈ ಕಾರ್ಯದಲ್ಲಿ ಈಗ ವಿಫಲಗೊಂಡಿರುವುದು ಅದರ ಮಿತ್ರರಾಷ್ಟ್ರಗಳಿಗೆ ಅಸಮಾಧಾನ ಉಂಟು ಮಾಡಿದೆ. ತನ್ನ ಸ್ನೇಹಿತ ರಾಷ್ಟ್ರಗಳ ಮೇಲೆ ದಾಳಿಯಾಗದಂತೆ ತಾನು ತಡೆಯುವುದಾಗಿ ಅಮೆರಿಕ ಈ ಹಿಂದೆ ಹೇಳಿದ್ದರೂ ಈ ವಾಗ್ದಾನವನ್ನು ಪಾಲಿಸಲು ಅದು ವಿಫಲವಾಗಿದೆ. ಹಾಗಾಗಿ ಈಗ ಕೊಲ್ಲಿಯ ಕೆಲವು ರಾಷ್ಟ್ರಗಳು ತಮ್ಮದೇ ಆದ ಪರ್ಯಾಯ ಭದ್ರತಾ ವ್ಯವಸ್ಥೆಯನ್ನು ಮಾಡಿಕೊಳ್ಳುವತ್ತ ಚಿಂತನೆ ನಡೆಸಿವೆ.

1960ರ ದಶಕದ ತನಕ ಗಲ್ಫ್ ರಾಷ್ಟ್ರಗಳಿಗೆ ಬ್ರಿಟನ್ ಸರಕಾರವು ಮಿಲಿಟರಿ ರಕ್ಷಣೆ ನೀಡುತ್ತಿತ್ತು. ಅಲ್ಲಿಂದ ಬಳಿಕ ಅಮೆರಿಕ ಈ ಹೊಣೆಯನ್ನು ಹೊತ್ತುಕೊಂಡಿತು. ಅಮೆರಿಕದ ನೆರವಿನ ಮೂಲಕ ಇರಾನ್ ಮತ್ತು ಸೌದಿ ಅರೇಬಿಯಾಗಳು ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಭದ್ರತಾ ವ್ಯವಸ್ಥೆಯ ಹೊಣೆಗಾರಿಕೆ ವಹಿಸಿಕೊಳ್ಳುವಂತಾಯಿತು. 1979ರಲ್ಲಿ ಇರಾನ್‌ನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದುದರಿಂದ ಈ ವ್ಯವಸ್ಥೆ ವಿಫಲಗೊಂಡಿತು. ಈ ಸಂದರ್ಭದಲ್ಲಿ ಅಮೆರಿಕವು ಗಲ್ಫ್‌ನ ಭದ್ರತಾ ಉಸ್ತುವಾರಿಯನ್ನು ತಾನೇ ನೋಡಿಕೊಳ್ಳುವುದಾಗಿ ಹೇಳಿತು. ಗಲ್ಫ್ ಪ್ರದೇಶದಲ್ಲಿ ನಡೆಯುವ ಯಾವುದೇ ದಾಳಿಯನ್ನು ಅಮೆರಿಕದ ಹಿತಾಸಕ್ತಿಗಳ ಮೇಲೆ ನಡೆಯುವ ದಾಳಿ ಎಂಬುದಾಗಿ ಪರಿಗಣಿಸಿ ಅದನ್ನು ಹಿಮ್ಮೆಟ್ಟಿಸಲಾಗುವುದು ಎಂದು ಅಮೆರಿಕ ಘೋಷಿಸಿತು. ಅದರಂತೆ ಗಲ್ಫ್‌ನ ಎರಡು ರಾಷ್ಟ್ರಗಳಾದ ಇರಾನ್ ಮತ್ತು ಇರಾಕ್‌ಗಳು ತಮ್ಮ ಭದ್ರತೆಗೆ ಅಪಾಯಕಾರಿ ಎಂದು ಭಾವಿಸಿದ್ದ ಹಲವಾರು ಗಲ್ಫ್ ರಾಷ್ಟ್ರಗಳು ಇವೆರಡು ದೇಶಗಳ ವಿರುದ್ಧವಾಗಿ 'ಗಲ್ಫ್ ಸಹಕಾರಿ ಮಂಡಳಿ' (ಜಿಸಿಸಿ) ರಚಿಸಿಕೊಂಡವು. ಅದಕ್ಕೆ ಅಮೆರಿಕವೂ ಸಹಕಾರ ನೀಡಿತು.

1991ರಲ್ಲಿ ಇರಾಕ್ ಸಮರದ ಬಳಿಕ ಅಮೆರಿಕವು ಅಲ್ಲಿ ಕೆಲವು ಶಾಶ್ವತ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಅಮೆರಿಕದ ನೌಕಾಪಡೆಯೊಂದು 1995ರಲ್ಲಿ ಬಹ್ರೇನ್‌ನಲ್ಲಿ ತಳವೂರಿತು. 1996ರಲ್ಲಿ ಕತಾರ್‌ನಲ್ಲಿ ಇನ್ನೊಂದು ನೆಲೆ ಸ್ಥಾಪಿಸಿತು. ಅಲ್ಲಿಂದ ಬಳಿಕ ಕೊಲ್ಲಿ ಪ್ರದೇಶದಲ್ಲಿ ಅಮೆರಿಕದ ನೆಲೆಗಳು ಇನ್ನಷ್ಟು ವಿಸ್ತಾರಗೊಂಡವು. 2017ರಲ್ಲಿ 'ಅರಬ್ ನ್ಯಾಟೋ' ವ್ಯವಸ್ಥೆ ರೂಪುಗೊಂಡಿತು. ಇದರಲ್ಲಿ ಈಜಿಪ್ಟ್ ಮತ್ತು ಜೋರ್ಡಾನ್‌ಗಳೂ ಸೇರಿಕೊಂಡವು. 2022ರಲ್ಲಿ ಈಜಿಪ್ಟ್, ಇರಾಕ್, ಜೋರ್ಡಾನ್ ಸೇರಿದಂತೆ ಗಲ್ಫ್ ರಾಷ್ಟ್ರಗಳೆಲ್ಲಾ ತಮ್ಮ ಪ್ರದೇಶಕ್ಕೆ ಎದುರಾಗುವ ಬೆದರಿಕೆಯನ್ನು ಒಟ್ಟಾಗಿ ಎದುರಿಸುವ ನಿರ್ಧಾರ ತಾಳಿದವು. ಕಳೆದ ವರ್ಷ ಇಸ್ರೇಲ್ ಹಮಾಸ್ ಮೇಲೆ ದಾಳಿ ನಡೆಸಿದಾಗಲೂ ಅಮೆರಿಕವು ಕತಾರ್‌ಗೆ ತಾನು ಭದ್ರತೆ ನೀಡುವುದಾಗಿ ವಾಗ್ದಾನ ನೀಡಿತ್ತು.

ಇದೀಗ ಇರಾನ್ ಯುದ್ಧ ಸ್ಫೋಟಿಸುವುದರೊಂದಿಗೆ ಅಮೆರಿಕ ನೀಡಿದ ಆಶ್ವಾಸನೆಗಳೆಲ್ಲಾ ಪೊಳ್ಳಾಗಿದೆ. ಗಲ್ಫ್ ರಾಷ್ಟ್ರಗಳು ಇರಾನಿನ ಕ್ಷಿಪಣಿ ದಾಳಿಗೆ ತುತ್ತಾಗುತ್ತಿವೆ. ಅವುಗಳ ಮೇಲೆ ದಾಳಿ ನಡೆಯದಂತೆ ರಕ್ಷಣೆ ನೀಡುವಲ್ಲಿ ಅಮೆರಿಕ ವಿಫಲವಾಗಿದೆ.

ಅಮೆರಿಕವು ತಮಗಿಂತ ಇಸ್ರೇಲ್‌ಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದೆ. ಇಸ್ರೇಲ್‌ಗೆ ವಾಯುರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದರೆ, ಇತರ ಗಲ್ಫ್ ದೇಶಗಳಿಗೆ ಅಂತಹ ವ್ಯವಸ್ಥೆ ಪೂರೈಸದ್ದರಿಂದ ಅವು ಇರಾನಿನ ರಾಕೆಟ್ ದಾಳಿಗೆ ತುತ್ತಾಗುತ್ತಿವೆ ಎಂದು ಕೊಲ್ಲಿ ರಾಷ್ಟ್ರಗಳು ಆಪಾದಿಸುತ್ತಿವೆ.

''ಅಮೆರಿಕವು ಕೊಲ್ಲಿ ರಾಷ್ಟ್ರಗಳಿಗೆ ನೆರವು ನೀಡುವುದಕ್ಕಿಂತ ಹೆಚ್ಚಾಗಿ ಕೊಲ್ಲಿ ರಾಷ್ಟ್ರಗಳೇ ಅಮೆರಿಕಕ್ಕೆ ರಕ್ಷಣೆ ನೀಡುವಂತಾಗಿದೆ'' ಎಂದು ಕುವೈತ್‌ನ ರಕ್ಷಣಾ ವಿಶ್ಲೇಷಕನೊಬ್ಬ ಹೇಳಿದ್ದು, ಅದಕ್ಕೆ ಕೊಲ್ಲಿಯ ಇತರ ದೇಶಗಳೂ ಸಹಮತ ವ್ಯಕ್ತಪಡಿಸಿವೆ.

ಯುದ್ಧ ಸಾರುವ ಮೊದಲು ತಮಗೆ ಆ ಕುರಿತಂತೆ ಮಾಹಿತಿಯನ್ನೂ ನೀಡದಿರುವ ಬಗ್ಗೆ ಕೂಡಾ ಈ ಕೊಲ್ಲಿ ರಾಷ್ಟ್ರಗಳು ಅಸಮಾಧಾನಗೊಂಡಿವೆ.

ಗಾಝಾ ಕದನ ನಡೆದಾಗ ಒಂದೆರಡು ವಿಷಯಗಳು ಸ್ಪಷ್ಟವಾಗಿದ್ದವು. ಇಸ್ರೇಲ್ ಮತ್ತು ಅಮೆರಿಕಗಳು ಇರಾನ್ ಮೇಲೆ ದಾಳಿ ನಡೆಸಲು ತಮ್ಮ ವಾಯುಪ್ರದೇಶ ಬಳಸಲು ಗಲ್ಫ್ ರಾಷ್ಟ್ರಗಳು ಅನುಮತಿ ನೀಡಿದ್ದವು. ಹಾಗಿದ್ದರೂ ಇರಾನ್ ಅವುಗಳ ಮೇಲೆ ದಾಳಿಗೆ ಮುಂದಾಗಿರಲಿಲ್ಲ. ಇತ್ತೀಚೆಗೆ ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ದಾಳಿ ನಡೆಸಿದಾಗ ಇದೇ ಗಲ್ಫ್ ರಾಷ್ಟ್ರಗಳು ಇರಾನಿನ ತಮ್ಮ ಬೆಂಬಲ ವ್ಯಕ್ತಪಡಿಸಿದ್ದವು. ಆದರೆ ವಿಪರ್ಯಾಸವೆಂದರೆ ಇರಾನ್ ಈ ಬಾರಿ ಈ ಗಲ್ಫ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ.

ಇವೆಲ್ಲದರ ಹಿನ್ನಡೆಯಲ್ಲಿ ಗಲ್ಫ್‌ನ ಕೆಲವು ದೇಶಗಳು ತಮ್ಮ ಭದ್ರತೆಯ ಕುರಿತಂತೆ ಚಿಂತಿತವಾಗಿದ್ದು, ಪರ್ಯಾಯ ವ್ಯವಸ್ಥೆ ರೂಪಿಸಲು ಯೋಚಿಸುತ್ತಿವೆ. ಬಲಿಷ್ಠಶಕ್ತಿಯಾಗಿರುವ ಅಮೆರಿಕವು ಕೊಲ್ಲಿಯಲ್ಲಿ 13 ಮಿಲಿಟರಿ ನೆಲೆಗಳನ್ನು ಹೊಂದಿದ್ದರೂ ಕೇವಲ ಒಂದು ದೇಶದ ದಾಳಿಯನ್ನು ತಡೆಯಲು ವಿಫಲವಾಗಿರುವುದು ಈ ದೇಶಗಳಿಗೆ ಭ್ರಮನಿರಶನ ಉಂಟು ಮಾಡಿದೆ.

ಇರಾನಿನ ವಿರುದ್ಧ ದಾಳಿಗೆ ತಮ್ಮ ನೆಲೆಗಳನ್ನು ಮತ್ತು ವಾಯುಪ್ರದೇಶ ಬಳಸುವುದನ್ನು ನಿರ್ಬಂಧಿಸುವ ಕುರಿತಂತೆ ಈ ರಾಷ್ಟ್ರಗಳು ಚಿಂತಿಸುತ್ತಿವೆ. ಅಂತಹ ನಿರ್ಧಾರ ತಳೆದಲ್ಲಿ ಅದು ಈ ಸಮರದ ಮೇಲೆ ಮಹತ್ವದ ಪರಿಣಾಮ ಬೀರಲಿದೆ.

ಇರಾನ್ ಸಮರವು ಬೇಗ ಮುಗಿಯುವುದನ್ನು ಕೊಲ್ಲಿ ದೇಶಗಳು ಬಯಸುತ್ತಿವೆ. ಅದಕ್ಕೆ ಟ್ರಂಪ್ ಧೋರಣೆಯೇ ಅಡ್ಡಿಯಾಗಿದೆ. ಇದೂ ಅವುಗಳಿಗೆ ಅಮೆರಿಕದ ಕುರಿತಂತೆ ಅಸಮಾಧಾನ ಹೆಚ್ಚಿಸಿದೆ.

ಕಿರುಸುದ್ದಿ

ಹೆಬ್ಬಗೋಡಿ ಮಂಜುನಾಥ್‌ಗೆ ಪ್ರಶಸ್ತಿ ಪ್ರದಾನ



ಆನೇಕಲ್: ಕರ್ನಾಟಕ ಮಾಧ್ಯಮ ಅಕಾಡೆಮಿ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಭಾಜನರಾದ ವಿಷ್ಯಾನೆಟ್ ಸುವರ್ಣ ನ್ಯೂಸ್ ಆನೇಕಲ್ ತಾಲೂಕು ವರದಿಗಾರರಾಗಿ ಹೆಬ್ಬಗೋಡಿ ಟಿ. ಮಂಜುನಾಥ್ ಅವರಿಗೆ ಪ್ರದಾನ ಮಾಡಲಾಯಿತು. ಕಳೆದ ಎರಡು ದಶಕದಿಂದ ಗ್ರಾಮೀಣ ಭಾಗದಲ್ಲಿ ಜನರ ಧ್ವನಿಯಾಗಿ ಕಾರ್ಯನಿರ್ವಹಿಸಿದ ಅಂಗವಾಗಿ ಅವರಿಗೆ ಕರ್ನಾಟಕ ಮಾಧ್ಯಮ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿ ಹಂಪ ನಾಗರಾಜಯ್ಯ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ, ಆಯುಕ್ತರು ನಿಂಬಾಳ್ಕರ್, ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಸೇರಿದಂತೆ ಇತರರಿದ್ದರು.

ಪರ್ವಿಜ್ ಪಾಷಾಗೆ ಡಾಕ್ಟರೇಟ್ ಪದವಿ ಪ್ರದಾನ



ನೆಲಮಂಗಲ: ನಗರಸಭೆ ವ್ಯಾಪ್ತಿಯ ರೇಣುಕನಗರದ ಪರ್ವಿಜ್ ಪಾಷಾ .ಎಸ್ ಅವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ. ಜಾಲಹಳ್ಳಿಯ ಸೈಂಟ್‌ಕ್ಲಾರೆಟ್ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಪರ್ವಿಜ್ ಪಾಷಾ .ಎಸ್ ಅವರು ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕ ಡಾ.ಪ್ರಭುಸೇನಾ.ಡಿ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಇಕ್ಕಿಸವಿ ಸದಿ ಕಿ ಹಿಂದಿ ಕವಿತಾವೊ ಮೆ ಅಭಿವ್ಯಕ್ತ್ ಚೇತನಾ ಕೆ ವಿವಿಧ್ ಆಯಾಮ್ (21ನೇ ಶತಮಾನದ ಹಿಂದಿ ಕವಿತೆಯಲ್ಲಿ ಅಭಿವ್ಯಕ್ತಗೊಂಡಿರುವ ಚಿಂತನೆಯ ವಿಭಿನ್ನ ಆಯಾಮಗಳು) ಎಂಬ ಮಹಾ ಪ್ರಬಂಧಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮುಕ್ತ ಗಂಗೋತ್ರಿ ಪಿಎಚ್.ಡಿ ಪದವಿಯನ್ನು ನೀಡಿ ಗೌರವಿಸಿದೆ. ಪೋಷಕರಾದ ಶೇಖ್ ಮುತ್ತುಜಾ, ತಾಜುನ್ನಿಸಿ ಆಶೀರ್ವಾದ ಹಾಗೂ ಸುದೀರ್ಘ ಅಧ್ಯಯನ ಪರಿಶ್ರಮದಿಂದಾಗಿ ಪಿಎಚ್.ಡಿ ದೊರೆತಿರುವುದು ಸಂತೋಷವಾಗಿದೆ ಎಂದು ಪಿಎಚ್.ಡಿ ಪಡೆದ ಪರ್ವಿಜ್ ಪಾಷಾ ತಿಳಿಸಿದರು. ಸೈಂಟ್‌ಕ್ಲಾರೆಟ್ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳು, ಪೋಷಕರು, ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

ಮನ ಪ್ರಾಜೆಕ್ಟ್‌ನ ಬ್ರ್ಯಾಂಡ್ ಅಂಬಾಸಿಡರ್ ನಟ ರಣಬೀರ್ ಕಪೂರ್

ಬೆಂಗಳೂರು: ರಿಯಲ್ ಎಸ್ಟೇಟ್ ಡೆವಲಪರ್ ಮನ ಪ್ರಾಜೆಕ್ಟ್‌ನ ಬ್ರ್ಯಾಂಡ್ ಅಂಬಾಸಿಡರ್ ಆಗಿ ನಟ ರಣಬೀರ್ ಕಪೂರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಕಿಶೋರ್ ರೆಡ್ಡಿ ಹೇಳಿದರು. ಈ ಬಗ್ಗೆ ಮಾತನಾಡಿದ ಅವರು, ರಣಬೀರ್ ಕಪೂರ್ ಜೊತೆಗೆ ಆರಂಭವಾಗಿರುವ ಹೊಸ ಅಧ್ಯಾಯವು ಉತ್ತಮ ಗುಣಮಟ್ಟದ ಜೀವನ ನಡೆಸಲು ಸಾಧ್ಯವಾಗುವ ಸಮುದಾಯವನ್ನು ಕಟ್ಟುವುದನ್ನು ಪ್ರತಿಬಿಂಬಿಸುತ್ತದೆ ಎಂದರು. ನಟ ರಣಬೀರ್ ಕಪೂರ್ ಮಾತನಾಡಿ, ಮನೆಯೆನ್ನುವುದು ಜನರು ತಮ್ಮ ಜೀವನದಲ್ಲಿ ಮಾಡುವ ಅತ್ಯಂತ ಪ್ರಮುಖ ಹೂಡಿಕೆಯಾಗಿದೆ. ಈ ಹೂಡಿಕೆಯು ಸೌಕರ್ಯ, ಆಪ್ತತೆ ಮತ್ತು ಸ್ವಂತಿಕೆಯನ್ನು ಪ್ರತಿಬಿಂಬಿಸಬೇಕು. ನನಗೆ ಮನ ಪ್ರಾಜೆಕ್ಟ್ಸ್ ಅವರ ಯೋಚನೆಯ ಪ್ರಬುದ್ಧತೆ, ಡಿಸೈನ್, ಸ್ವಭಾವ ಮತ್ತು ಕಾರ್ಯಕ್ಷಮತೆ ಒಟ್ಟಾಗಿ ನಿತ್ಯದ ಜೀವನವನ್ನು ಉತ್ತಮಗೊಳಿಸುವುದು.

2 ಜಿಲ್ಲೆಯ ನಗರಗಳಲ್ಲಿ ಕುಡಿಯುವ ನೀರಿಗೆ ಆತಂಕ | ಸಚಿವ ಕೆಎಚ್‌ಎಂ ತವರಲ್ಲೇ ಯೋಜನೆಗೆ ವಿರೋಧ

ಜಕ್ಕಲುಮಡವಿಗೆ ವಿಷಕಾರಿ ವೃಷಭಾವತಿ ಕಂಟಕ

ಪ್ರದೀಪ್ ದೊಡ್ಡಬಳ್ಳಾಪುರ

ದೊಡ್ಡಬಳ್ಳಾಪುರ: ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ನಗರಗಳಿಗೆ ಕುಡಿಯುವ ನೀರಿನ ಸಮಸ್ಯೆ ನೀಗಿಸುತ್ತಿರುವ ಜಕ್ಕಲುಮಡುಗು ಜಲಾಶಯಕ್ಕೆ ವೃಷಭಾವತಿ ವಿಷದ ನೀರು ಬರುವ ದಿನದಲ್ಲಿ ಕಂಟಕವಾಗಲಿದೆ.


ವೃಷಭಾವತಿ ವ್ಯಾಲಿಯಿಂದ ನೀರು ತುಂಬಿಸುವ ಕೆರೆಗಳ ಪಟ್ಟಿಯಲ್ಲಿ ಜಕ್ಕಲಮಡುಗು ಜಲಾಶಯ ಒಡಲಲ್ಲಿ ರುವ 19ಕೆರೆಗಳು ಒಳಗೊಂಡಿವೆ. ಒಂದು ವೇಳೆ ವೃಷಭಾವತಿ ನೀರು ನೇರವಾಗಿ ಈ ಕೆರೆಗಳಿಗೆ ಬಿಟ್ಟಿದ್ದೆ ಆದರೆ, ಬರುವ ದಿನದಲ್ಲಿ ಈ ಭಾಗ ವಿಷವಾಗುವುದರಲ್ಲಿ ಅನುಮಾನವಿಲ್ಲ. ಈಗಾಗಲೇ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಕೆ.ಸಿ.ವ್ಯಾಲಿ ನೀರಿನಿಂದ ಕೆರೆ, ಕುಂಟೆ ಸಂಪೂರ್ಣ ವಿಷಯವಾಗಿದೆ. ಅಲ್ಲಿ ಬೆಳೆಯುತ್ತಿರುವ ಹಣ್ಣು ತರಕಾರಿಗಳ ಮೇಲೆ ಇದರ ನೇರ ಪರಿಣಾಮ ಉಂಟಾಗಿದೆ.

ವಿಷಕಾರಿ ವಸ್ತುಗಳು ಅಂತರ್ಜಲ ಸೇರ್ಪಡೆ: ಅಲ್ಲಿನ ರೈತರು ಇದರ ವಿರುದ್ಧ ಹೋರಾಟಕ್ಕೆ ನಿಂತಿದ್ದಾರೆ. ಸ್ಥಳೀಯರು ಕುಡಿಯುವ ನೀರಿಗಾಗಿ ಸಮಸ್ಯೆ ಎದುರಿಸುತ್ತಿದ್ದಾರೆ. ಹೀಗಿದ್ದರೂ ಈ ವರ್ಷ ರಾಜ್ಯದ ಬಜೆಟ್‌ನಲ್ಲಿ ಬೆಂಗಳೂರು ನಗರದ ವೃಷಭಾವತಿ ವ್ಯಾಲಿಯಿಂದ ದ್ವಿತೀಯ ಹಂತದಲ್ಲಿ ಸಂಸ್ಕರಿಸಿದ 308 ಎಂಎಲ್‌ಡಿ ನೀರಿನಿಂದ 259 ಕೆರೆಯನ್ನು ತುಂಬಿಸುವ ಮೂಲ ಯೋಜನೆಯ ಪೈಕಿ ಗೋಪಾಲಪುರ ಕೆರೆಯಿಂದ ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲೂಕಿನ 119 ಕೆರೆಗೆ ನೀರನ್ನು ತುಂಬಿಸುವ ಯೋಜನೆಯನ್ನು 650 ಕೋಟಿ ರೂ. ಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಲಾಗಿದೆ .

ಅದರಲ್ಲಿ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದ ಕೆರೆಯನ್ನು ಹೊರತುಪಡಿಸಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಸ್ವಕ್ಷೇತ್ರವಾದ ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ದೊಡ್ಡಬಳ್ಳಾಪುರ ತಾಲೂಕಿನ ತೂಬಗೆರೆ ಹೋಬಳಿಯ 19 ಕೆರೆಗಳಿಗೆ ವೃಷಭಾವತಿ ವ್ಯಾಲಿಯಿಂದ ನೀರು ಕಲ್ಪಿಸುವ ಯೋಜನೆ ರೂಪಿಸಲಾಗಿದೆ.

ದೊಡ್ಡಬಳ್ಳಾಪುರ ತಾಲೂಕಿನ (ದೇವನಹಳ್ಳಿ ವಿಧಾನಸಭಾ ಕ್ಷೇತ್ರ) ಕೆರೆಗಳ ಕಾರ್ನಾಳ ಕೆರೆ, ಲಕ್ಷ್ಮೀದೇವಿಪುರ ಕೆರೆ, ತಿರುಮಗೊಂಡನಹಳ್ಳಿ ಕೆರೆ, ಕುರುವೇಗೆರೆ ಕೆರೆ, ಕಾರ್ನಾಳ ಕೆರೆ, ಕಸಬಾ ತೂಬಗೆರೆ ಕೆರೆ, ಗೂಳ್ಯ ನಂದಿಗುಂದಿ ಕೆರೆ, ಮೆಳೇಕೋಟೆ ಕೆರೆ, ಗಂಟಿಗಾನಹಳ್ಳಿ ಕೆರೆ, ಕಂಚಿಗಾನಳ ಕೆರೆ, ತಪಸೀಪುರ ಕೆರೆ, ದೊಡ್ಡರಾಯಪ್ಪನಹಳ್ಳಿ ಕೆರೆ, ಶ್ರೀನಿವಾಸಪುರ ಕೆರೆ, ನಾಗಶೆಟ್ಟಿಹಳ್ಳಿ(ಚೀಲೇನಹಳ್ಳಿ) ಕೆರೆ, ಅಂತರಹಳ್ಳಿ ಕೆರೆ, ಬಚ್ಚಹಳ್ಳಿ ಕೆರೆ, ಕಲ್ಲದೇವನಹಳ್ಳಿ (ಶಿರವಾರ) ಕೆರೆ, ಕಮಲೂರು ಕೆರೆ, ತಪಸೀಹಳ್ಳಿ ಕೆರೆಗಳಿಗೆ ವೃಷಭಾವತಿ ನೀರನ್ನು ಬಳಸಲಾಗುವುದು ಎಂದು ಹೇಳಲಾಗಿದೆ. ಸ್ಥಳೀಯರ ವಿರೋಧದ ನಡುವೆ ವೃಷಭಾವತಿ ಯೋಜನೆಯನ್ನು ಅನುಷ್ಠಾನ ಮಾಡಲು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಸ್ಥಳೀಯ ಜನರ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ. ತೂಬಗೆರೆ ಭಾಗದಲ್ಲಿ ಅತಿಹೆಚ್ಚು ತರಕಾರಿ, ಹೂವು ಹಣ್ಣು , ಮಾವು ಸೇರಿದಂತೆ ವಾಣಿಜ್ಯ ಬೆಳೆಗಳು ಹೆಚ್ಚಾಗಿವೆ. ಜನರು ಉತ್ತಮ ಕೃಷಿಯನ್ನು ಅವಲಂಬಿಸಿದ್ದಾರೆ. ಇದರ ನಡುವೆ ರಾಜ್ಯ ಸರ್ಕಾರ ಈ ಭಾಗದ 19 ಕೆರೆಗಳಿಗೆ ವೃಷಭಾವತಿ ವ್ಯಾಲಿಯಿಂದ ಕೆರೆಗಳಿಗೆ ನೀರು ಬಿಡುವ ಯೋಜನೆ ರೂಪಿಸಿರುವುದು ಈ ಭಾಗದ ರೈತರ ಕೆಂಗಣ್ಣಿಗೆ ಗುರಿಯಾಗಿದೆ.

ಮುಖ್ಯವಾಗಿ ಈ ಭಾಗದಲ್ಲಿ ರೈತರಿಗೆ ಎತ್ತಿನಹೊಳೆ ಯೋಜನೆ ಅನುಷ್ಠಾನ , ಉತ್ತಮ ರಸ್ತೆ ಸಂಪರ್ಕ ಕಲ್ಪಿಸಿಕೊಡಿ ಎಂದು ಕೇಳುತ್ತಿರುವ ಜನರಿಗೆ ಅವಶ್ಯಕತೆ ಇಲ್ಲದ ಸ್ವಪ್ರತಿಷ್ಠೆಗಾಗಿ ಈ ಯೋಜನೆ ಮಾಡಿರುವುದು ಎಷ್ಟರಮಟ್ಟಿಗೆ ಸರಿ ಎಂದು ಹೇಳಲಾಗಿದೆ.



ದಿಗಂತ ವಿಶೇಷ

19 ಕೆರೆಗಳಿಗೆ ವಿಷದ ನೀರು

ಜಕ್ಕಲು ಮಡಗು ಜಲಾಶಯ ವ್ಯಾಪ್ತಿಯಲ್ಲಿ ಬರುವ 19 ಕೆರೆಗಳಿಗೆ ವೃಷಭಾವತಿ ವ್ಯಾಲಿ ನೀರು ಬಿಟ್ಟಿದ್ದೆ. ಆದರೆ, ನೇರವಾಗಿ ಜಕ್ಕಲು ಮಡಗು ಜಲಾಶಯ ಸೇರುವುದರಲ್ಲಿ ಅನುಮಾನವೇ ಇಲ್ಲ. ಈ ಜಲಾಶಯದಿಂದ ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರಗಳಿಗೆ ಕುಡಿಯುವ ನೀರು ಸರಬರಾಜು ಆಗುತ್ತಿರುವ ಕಾರಣ ಇದರ ನೇರ ಪರಿಣಾಮ ಹೊಡೆತ ಎರಡು ಜಿಲ್ಲೆಯ ಜನರಿಗೆ ತಟ್ಟುತ್ತದೆ ಎಂದು ಹೇಳಲಾಗಿದೆ. ಆದ್ದರಿಂದ ಈ ಕೂಡಲೇ ವೃಷಭಾವತಿ ವ್ಯಾಲಿಯಿಂದ ನೀರು ತುಂಬಿಸುವ ಯೋಜನೆಯನ್ನು ಕೈಬಿಡಬೇಕು ಎಂದು ಸ್ಥಳೀಯರು ಆಗ್ರಹಿಸಿ ಮುಂದಿನ ದಿನದಲ್ಲಿ ಉಗ್ರ ಪ್ರತಿಭಟನೆ ಮಾಡುದಾಗಿ ಎಚ್ಚರಿಕೆ ನೀಡಿದ್ದಾರೆ.

ಬೆಳೆಯುವ ತರಕಾರಿಯಲ್ಲೂ ವಿಷಕಾರಿ ಅಂಶ

ಈ ನೀರು ಬಿಟ್ಟಿದ್ದೆ ಆದರೆ ಭೂಮಿ, ನೀರು ವಿಷವಾಗಿರುವುದರಿಂದ ಬೆಳೆಯುವ ತರಕಾರಿಯೂ ವಿಷಯವಾಗುವುದರಲ್ಲಿ ಸಂಶಯವಿಲ್ಲ. ಈ ಭಾಗದ ಜನರಿಗೆ ಅನೇಕ ರೋಗಗಳು ತುತ್ತಾಗುವ ಸಾಧ್ಯತೆ ಇದೆ. ಸರ್ಕಾರ ಈ ಯೋಜನೆಯನ್ನು ಕೈ ಬಿಟ್ಟು ಸ್ಥಳೀಯವಾಗಿ ಅಂತರ್ಜಲ ಗುಣಮಟ್ಟ ಹೆಚ್ಚಿಸಲು ಹೊಸ ಯೋಜನೆ ರೂಪಿಸಲು ಆಸಕ್ತಿ ವಹಿಸಬೇಕೆಂದು ತಾಲೂಕಿನ ಜನರು ಆಗ್ರಹಿಸಿದ್ದಾರೆ.

> ವೃಷಭಾವತಿ ವ್ಯಾಲಿಯಿಂದ ತಾಲೂಕಿನ ತೂಬಗೆರೆ ಹೋಬಳಿಯ 19 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಲಾಗಿದೆ. ಆದರೆ, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಒಂದು ಕೆರೆಗೂ ವೃಷಭಾವತಿ ವ್ಯಾಲಿಯಿಂದ ಬರುವ ನೀರನ್ನು ಬಿಡಿಸುವುದಿಲ್ಲ. ಅದಕ್ಕೆ ನಾನು ಬದ್ಧನಾಗಿದ್ದೇನೆ.
>
> ■ ಧೀರಜ್ ಮುನಿರಾಜ್, ಶಾಸಕ

> ತೂಬಗೆರೆ ಹೋಬಳಿಯ ಜನರಿಗೆ ಎತ್ತಿನ ಹೊಳೆ ನೀರಿಗೆ ಬೇಡಿಕೆ ಇದೆ . ಆದರೆ, ವೃಷಭಾವತಿ ಕೊಳಚೆ ನೀರು ನಮಗೆ ಅವಶ್ಯಕತೆ ಇಲ್ಲ. ಈ ಕೊಳಚೆ ನೀರು ಕೊಡಿ ಎಂದು ಯಾರು ಕೇಳಿಲ್ಲ. ಈ ಕೊಳಚೆ ನೀರು ನೇರವಾಗಿ ಎರಡು ನಗರಗಳಿಗೆ ನೀರಿನ ಸಮಸ್ಯೆ, ಕುಡಿಯುವ ನೀರಿಗೆ ತಟ್ಟಲಿದೆ. ಆದ್ದರಿಂದ ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ಜನರ ಬೆಂಬಲ ಪಡೆದು ರಾಜ್ಯಮಟ್ಟದ ಪ್ರತಿಭಟನೆ ಮಾಡುತ್ತೇವೆ.
>
> ■ ಹಳ್ಳಿರೈತ ಅಂಬರೀಶ್, ಅಧ್ಯಕ್ಷ , ನವಕರ್ನಾಟಕ ಯುವ ಶಕ್ತಿ ವೇದಿಕೆ

> ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರ ನಗರದ ಕುಡಿಯುವ ನೀರಿನ ಜೀವನಾಡಿಯಾದ ಜಕ್ಕಲು ಮಡುಗು ಜಲಾಶಯದ ಭಾಗಕ್ಕೆ ವೃಷಭಾವತಿ ನೀರು ಬಿಟ್ಟು ವಿಷ ನೀಡಲು ಹೊರಟಿರುವುದು ಸರಿಯಲ್ಲ . ಈ ಯೋಜನೆ ಕಾಲಿಡಲು ನಾವು ಬಿಡುವುದಿಲ್ಲ . ತಾಲೂಕಿನ ಎಲ್ಲಾ ಸಂಘಟನೆಗಳು ಸೇರಿ ಉಗ್ರ ಹೋರಾಟ ಮಾಡಲಾವುದು.
>
> ■ ಸಂಜೀವ್ ನಾಯಕ್, ರಾಜ್ಯ ಉಪಾಧ್ಯಕ್ಷ, ಕನ್ನಡ ಪಕ್ಷ

ದೇವೇಗೌಡ ಕಪ್ ಕ್ರಿಕೆಟ್‌ಗೆ ಚಾಲನೆ



ದೇವನಹಳ್ಳಿ: ತಾಲೂಕಿನ ಕುಂದಾಣ ಹೋಬಳಿಯ ಕೊಯಿರಾ ಕಾಲೊನಿಯಲ್ಲಿ ಜೈ ಭೀಮ್ ಕ್ರಿಕೆಟರ್ಸ್ ತಂಡದಿಂದ ಆಯೋಜಿಸಲಾಗಿದ್ದ ಕೆಸಿಪಿಎಲ್ ಪ್ರೀಮಿಯರ್ ಲೀಗ್ ದೇವೇಗೌಡ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಅದ್ದೂರಿ ಚಾಲನೆ ನೀಡಲಾಯಿತು.

ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಹಾಗೂ ಜೆಡಿಎಸ್ ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ. ಮಂಜುನಾಥ್ ಅವರು ಜಂಟಿಯಾಗಿ ದೀಪ ಬೆಳಗಿಸುವ ಮೂಲಕ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವ ಇಂತಹ ಪ್ರಯತ್ನಗಳು ನಿಜಕ್ಕೂ ಶ್ಲಾಘನೀಯ ಎಂದರು. ಕ್ರೀಡೆಯು ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಪೂರಕವಾಗಿದೆ. ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಎಲ್ಲಾ ತಂಡಗಳ ಕ್ರೀಡಾಪಟುಗಳು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಕ್ರೀಡಾ ಮನೋಭಾವದಿಂದ ಆಟವಾಡಿ ಯಶಸ್ಸು ಗಳಿಸಲಿ ಎಂದು ಶುಭ ಹಾರೈಸಿದರು. ಮುಖಂಡರಾದ ಮನಗೊಂಡನಹಳ್ಳಿ ಜಗದೀಶ್, ಹೊಸಹಳ್ಳಿ ಟಿ.ರವಿ, ಕಾರಹಳ್ಳಿ ಶ್ರೀನಿವಾಸ್, ತೈಲಗೆರೆ ಚಂದ್ರು, ರಾಮನಾಥಪುರ ಮಧು, ಕೋಯಿರಾ ನಾಗರಾಜ್, ರಾಮಾಂಜಿನಪ್ಪ, ರಾಧಮ್ಮ, ನಂದಪ್ಪ ಸೇರಿದಂತೆ ಗ್ರಾಮದ ಪ್ರಮುಖರು, ಯುವಕರು ಹಾಗೂ ಕ್ರೀಡಾಭಿಮಾನಿಗಳಿದ್ದರು.

ಪರಸ್ಪರ ಗೌರವದಿಂದ ಮಹಿಳೆಗೆ ಉನ್ನತ ಸ್ಥಾನ



ಹೊಸಕೋಟೆ: ಸಮಾಜದಲ್ಲಿ ಹೆಣ್ಣು ಹೆಣ್ಣನ್ನು ದ್ವೇಷಿಸುವ ಬದಲು ಪರಸ್ಪರ ಗೌರವಿಸುವಂತಾಗಬೇಕು. ಈ ರೀತಿ ಗೌರವಿಸುವ ಕೆಲಸ ಆದಾಗ ಮಾತ್ರ ಹೆಣ್ಣು ಮತ್ತಷ್ಟು ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯಎಂದು ಸಂಸ್ಥೆ ಫೌಂಡೇಷನ್ ಸಂಸ್ಥಾಪಕಿ ಪ್ರತಿಭಾ ಶರತ್ ಅವರು ತಿಳಿಸಿದರು.

ತಾಲೂಕಿನ ಅನುಗೊಂಡನಹಳ್ಳಿ ಹೋಬಳಿಯ ದೇವನಗೊಂದಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಡಿ.ಹೊಸಹಳ್ಳಿ ಗ್ರಾಮದಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಕುಟುಂಬದ ಅಭಿವೃದ್ಧಿಯಲ್ಲಿ ಸಿಂಹಪಾಲನ್ನು ವಹಿಸಲಿ ದೆಂದರು. ಸಮಾಜದ ವಿವಿಧ ಕ್ಷೇತ್ರ ದಲ್ಲೂ ಮಹಿಳೆ ಅವಿರತ ಶ್ರಮಿಸುತ್ತಿದ್ದಾಳೆ. ಇದರ ನಡುವೆ ಸಮಾಜದ ಹಲವಾರು ಟೀಕೆಗಳ ನಡುವೆಯೂ ಯಶಸ್ವಿ ಜೀವನ ನಡೆಸುತ್ತಿರುವುದು ಪ್ರಶಂಶನೀಯ. ಆದರೆ, ಹೆಣ್ಣು ಹೆಣ್ಣನ್ನೆ ಪರಸ್ಪರ ಟೀಕಿಸುವುದನ್ನು ಬಿಟ್ಟು ಗೌರವಿಸುವ ಕೆಲಸ ಆಗಬೇಕೆಂದು ಸಲಹೆ ನೀಡಿದರು. ಮುಖ್ಯವಾಗಿ ಮನೆಯಲ್ಲಿ ಮಕ್ಕಳಿಗೆ ಸ್ವತಂತ್ರವಾಗಿ ಬದುಕಲು ಬಿಡಿ. ಪ್ರತಿಯೊಂದು ವಿಷಯದಲ್ಲೂ ಬೆನ್ನು ತಟ್ಟಿ ಪ್ರೋತ್ಸಾಹಿಸಿ. ಶಿಕ್ಷಣ, ಆಟ-ಪಾಠ ಸೇರಿ ದಂತೆ ಎಲ್ಲಾ ಕ್ಷೇತ್ರದಲ್ಲೂ ನಿಮ್ಮ ಇಷ್ಟದಂತೆ ಬೆಳೆಸು ವುದನ್ನು ಬಿಟ್ಟು ಅವರ ಇಷ್ಟದಂತೆ ಸಾಧನೆ ಮಾಡಲು ಬಿಡಿ. ಆಗ ಸಮಾಜದಲ್ಲಿ ಸತ್ಪ್ರಜೆಗಳಾಗಿ ಮಕ್ಕಳು ಬೆಳೆಯುತ್ತಾರೆ ಎಂದರು. ಪಿಡಿಒ ಹರೀಶ್ ಮಾತನಾಡಿ, ಪ್ರತಿ ವರ್ಷ ಗ್ರಾಪಂನಿಂದ ಮಹಿಳಾ ದಿನಾಚರಣೆ ಪ್ರಯುಕ್ತ ವಿವಿಧ ಕ್ರೀಡೆಯನ್ನು ಆಯೋಜನೆ ಮಾಡುವ ಮೂಲಕ ಅವರಿಗೆ ಬಹುಮಾನ ವಿತರಿಸಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದೇವೆಂದರು. ಅನಗೊಂಡನಹಳ್ಳಿ ಹೋಬಳಿ ಮುಖಂಡ ಬಿಎಂ.ಪ್ರಕಾಶ್ ಮಾತನಾಡಿ, ಮುಂದಿನ ದಿನದಲ್ಲಿ ಹೋಬಳಿ ಮಟ್ಟದ ದೊಡ್ಡ ಮಟ್ಟದ ಮಹಿಳಾ ದಿನಾಚರಣೆಯನ್ನು ಒಂದು ಸಾವಿರ ಮಹಿಳೆಯರನ್ನು ಸೇರಿಸಿ ಆಚರಣೆ ಮಾಡಲಾಗುವುದು ಎಂದರು. ಅನಗೊಂಡನಹಳ್ಳಿ ಹೋಬಳಿ ಕಾಂಗ್ರೆಸ್ ಮುಖಂಡ ಬಿ.ಎಂ.ಪ್ರಕಾಶ್, ಟಿಎಪಿಸಿಎಂಎಸ್ ಉಪಾಧ್ಯಕ್ಷ ಮುತ್ಕೂರು ಮುನಿರಾಜು, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಡಿ.ಸಿ.ಲಕ್ಷ್ಮಿ, ಪಿಡಿಒ ಹರೀಶ್, ಗ್ರಾಪಂ ಮಾಜಿ ಅಧ್ಯಕ್ಷರಾದ ಮಾರೇಗೌಡ, ವಿಜಯ್ ಕುಮಾರ್, ರತ್ನ ಗೋವಿಂದರಾಜ್, ನಗರಸಭೆ ಮಾಜಿ ಸದಸ್ಯೆ ರಮಾದೇವಿ, ರಂಗನಾಥ ಪ್ರೌಢಶಾಲೆ ಅಧ್ಯಕ್ಷ ಕೇಶವರೆಡ್ಡಿ, ಮುಖಂಡರಾದ ಸಮೇತನಹಳ್ಳಿ ಸೊಣ್ಣಪ್ಪ, ಹಂದೇನಹಳ್ಳಿ ಪ್ರಕಾಶ್ ಸೇರಿದಂತೆ ಹಲವರಿದ್ದರು.

ಕಾನೂನು ಬಾಹಿರ ಶಾಲಾ ದಾಖಲಾತಿ ಪ್ರಕ್ರಿಯೆ

ಬೆಂಗಳೂರು: ಹೈಕೋರ್ಟ್ ಆದೇಶ ಹಾಗೂ ಸರ್ಕಾರದ ನಿಯಮವನ್ನು ಗಾಳಿಗೆ ತೂರಿ ಕಾನೂನುಬಾಹಿರವಾಗಿ ಶಾಲಾ ದಾಖಲಾತಿ ಪ್ರಕ್ರಿಯೆ ಆರಂಭಿಸಿರುವ ಥಣಿಸಂದ್ರದ ಸಾಮರ್ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್ ವಿರುದ್ಧ ಶಾಲಾ ಶಿಕ್ಷಣ ಇಲಾಖೆ ಕಠಿಣ ಕ್ರಮಕ್ಕೆ ಮುಂದಾಗಿದೆ.

ಸದರಿ ಶಾಲೆಯ ಮಾನ್ಯತೆಯು ಈಗಾಗಲೇ ರದ್ದಾಗಿದ್ದು, ಈ ಕುರಿತ ಪ್ರಕರಣವು ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ. ನ್ಯಾಯಾಲಯದ ಅಂತಿಮ ಆದೇಶ ಬರುವವರೆಗೂ ಯಾವುದೇ ಹೊಸ ದಾಖಲಾತಿಗಳನ್ನು ಮಾಡಿಕೊಳ್ಳಬಾರದೆಂದು ಹೈಕೋರ್ಟ್ ಸ್ಪಷ್ಟ ಸೂಚನೆ ನೀಡಿದೆ. ಹೀಗಿದ್ದರೂ, ಶಾಲಾ ಆಡಳಿತ ಮಂಡಳಿಯು 2026-27ನೇ ಶೈಕ್ಷಣಿಕ ಸಾಲಿಗೆ 6 ರಿಂದ 8ನೇ ತರಗತಿಯವರೆಗೆ ಗುಪ್ತವಾಗಿ ದಾಖಲಾತಿ ಪ್ರಕ್ರಿಯೆ ಆರಂಭಿಸಿರುವುದು ಬೆಳಕಿಗೆ ಬಂದಿದೆ. ಗಂಗೊಂಡನಹಳ್ಳಿಯ ಅಬ್ದುಲ್ ಹಮೀದ್ ಪಾಷ ಹಾಗೂ ಭಾರತಿ ನಗರದ ಅರ್ಷಿಯ ಮೊದಮ್ಮದಿ ಸರಿಷ್ ಅವರು ಈ ಕುರಿತು ಶಿಕ್ಷಣ ಇಲಾಖೆಗೆ ಅಧಿಕೃತ ದೂರು ಸಲ್ಲಿಸಿದ್ದರು. ಶಾಲೆಯು ದಾಖಲಾತಿಗಾಗಿ ಹಣ ಸಂಗ್ರಹಿಸುತ್ತಿದ್ದರೂ ಯಾವುದೇ ರಸೀದಿ ನೀಡುತ್ತಿಲ್ಲ, ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ದಾಖಲಾತಿ ನಡೆಸುತ್ತಿರುವುದು ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದೆ ಎಂದು ದೂರುದಾರರು ತಿಳಿಸಿದ್ದಾರೆ. ಈ ದೂರನ್ನು ಗಂಭೀರವಾಗಿ ಪರಿಗಣಿಸಿರುವ ದಕ್ಷಿಣ ವಲಯ-14ರ ಬಿಇಒ ಶಾಲೆಯುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನೋಟಿಸ್ ನೀಡಿದ್ದಾರೆ. ನ್ಯಾಯಾಲಯದ ಆದೇಶ ಉಲ್ಲಂಘಿಸಿ ದಾಖಲಾತಿ ಮುಂದುವರಿಸಿದಲ್ಲಿ ಇದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಿ, ಉನ್ನತ ಅಧಿಕಾರಿಗಳಿಗೆ , ನ್ಯಾಯಾಲಯಕ್ಕೆ ವರದಿ ಸಲ್ಲಿಸುವುದಾಗಿ ಎಚ್ಚರಿಸಿದ್ದಾರೆ.

1. ಜಯಲಕ್ಷ್ಮಿ ವಿ.ಎಸ್. ಕೋಂ. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 85 ವರ್ಷ
2. ಲಕ್ಷ್ಮಿ ನರಸಿಂಹ ಪ್ರಕಾಶ್ ವಿ.ಎಸ್. ಬಿನ್. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 67 ವರ್ಷ. ಇಬ್ಬರ ವಾಸ: ನಂ. 60, 2ನೇ ಕ್ರಾಸ್, ನುರಾಣಿ ಲೇಔಟ್, ಜೆ.ಪಿ. ನಗರ, 7ನೇ ಹಂತ, ಬೆಂಗಳೂರು-560 078.
3. ಮಂಜುಳ, ಕೋಂ. ಎಸ್.ಎಸ್. ಸುಬ್ರಮಣ್ಯ, ಬಿನ್. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 63 ವರ್ಷ, ವಾಸ: ನಂ. 14, ಲಕ್ಷ್ಮಿ ಫ್ಲೋರ್‌ಮಿಲ್ ಕ್ರಾಸ್, ಆರೋಬಿಟ್ ಎದುರು, ಮಂದಮ್ಮ ದೇವಸ್ಥಾನ ಬಳಿ, ಹೆಬ್ಬಾಳ ಹೆಚ್.ಎ ಫಾರಂ, ಬೆಂಗಳೂರು-560 024.
4. ಸುರೇಶ್ ವಿ.ಎಸ್. ಬಿನ್. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 62 ವರ್ಷ, ವಾಸ: ನಂ. 81, ಎಸ್.ಬಿ.ಎಂ. ಕಾಲೋನಿ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹತ್ತಿರ, ಆನಂದ ನಗರ, ಹೆಚ್.ಎ ಫಾರಂ ಅಂಚೆ, ಬೆಂಗಳೂರು-560 024. ...ಅರ್ಜಿದಾರರು

ಮತ್ತು

ಮಾನ್ಯ ತಹಸೀಲ್ದಾರ್, ಜನನ ಮತ್ತು ಮರಣ ನೋಂದಣಾಧಿಕಾರಿ, ಯಲಹಂಕ ತಾಲ್ಲೂಕು ಯಲಹಂಕ, ಬೆಂಗಳೂರು-560 064. ...ಎದುರುದಾರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ ಮೊದಲನೇ ಅರ್ಜಿದಾರರ ಅತ್ತೆ ಮತ್ತು 2 ರಿಂದ 4ನೇ ಅರ್ಜಿದಾರರ ಅಜ್ಜಿ ಶಾರದಮ್ಮ ದಿವಂಗತ ಸುಬ್ಬಯ್ಯ ರವರು ದಿನಾಂಕ: 19.03.1975 ರಂದು [illegible] ದಿನಾಂಕ: 09.04.2026 ರಂದು 11.00 A.M. ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

[illegible]

ಪ್ರಿ. ಶಂಕರಪ್ಪ ವಿ. ಪಕೀಲರು [illegible]

BEFORE THE ASSISTANT COMMISSIONER BENGALURU NORTH SUB-DIVISION, BENGALURU

RA (YLK) No. 474/2023

BETWEEN: Smt. Nagarathnamma and Ors. **... Appellants**

AND

The Tahasildar and others **... Respondents**

NOTICE TO RESPONDENT Nos. 3 & 5

TO. 3) Sri. P.SUBBA RAO
Aged about 62 years
S/o Late V.S. Pattabhiramaiah
5) Sri. Sri. SHYAMA SUNDAR
Aged about 32 years, S/o Sri. P. Subba Rao R/at Addevishwanathapura Village, Arakere Post, Hesaraghatta Hobli, Previously Bangalore North Taluk, Presently Yelahanka Taluk.

Whereas the above Revenue Appeal is filed by the Appellants questioning the mutation order dated 22.11.2022 passed by the Respondent-1/ Tahasildar in M.R. No.H4/2022/23 in respect of land measuring 01 acre 20 Guntas in Sy.No.125/1 (Old Sy No.125), situated at Kadathanamele Village, Hesaraghatta Hobli, Yelahanka Taluk, You are hereby summoned to appear in person or through a duly authorised advocate before this court on **18.03.2026 at 3.00 P.M.** failing which the above revenue appeal will be proceeded **ex-parte** against you.

By Order of the Court

Address of the Advocate: **N.R. NAGARAJA,** Advocate, No.5/1, 1st Floor, 1st Cross, CSI Compound, Mission Road, Bengaluru-27.

IN THE COURT OF THE PRL. CIVIL JUDGE AND JMFC AT ANEKAL

C.Mis.No. 463 /2026

BETWEEN: SRI. MANJUNATHA. M, S/o Late Madduruppa.M, aged about 39 years, R/at Karpur Village, Kasaba Hobli, Anekal Taluk, Bengaluru District... **PETITIONER**

AND: THE TAHSILDAR, Anekal Taluk... **RESPONDENT**

PUBLIC NOTICE

Whereas, the petitioner has filed the above petition for seeking death certificate of father of the petitioner namely **MUDDURAPPA.M** S/O LATE MUNIYAPPA, who expired on 25/04/1998 at Karpur Village,, Kasaba Hobli, Anekal Taluk, Bengaluru District. Take notice that, any interested persons in respect of death certificate of MUDDURAPPA.M S/O LATE MUNIYAPPA, are hereby called upon to appear before this Hon'ble Court either personally or through an advocate duly instructed on **10-04-2026** at 11:00 A.M, otherwise, the matter will be heard and decided ex-parte.

Given my hand and seal of the court on this 14-03-2026

By order of the Court, Sheristedar, Civil Judge, Jr Dvn & JMFC Court, Anekal.

SRI. MANJUNATHA. H.V AND SRI. DILIP. A, Advocate
No. 1, 2nd Floor, Dharma Shastha Complex, Attibele Road, Anekal Town, Bengaluru District.

IN THE COURT OF THE CHAIRAMAN / PRESIDING OFFICER / TRIBUNAL / ASSISTANT COMMISSIONER/ DODDABALLAPURA SUB DIVISION FOR MAINTENANCE ECVICTION AND WELFARE OF PARENTS AND SENIOR CITIZENS ACT AT DODDBALLAPURA

Misc. SCA. No. 23/2025

Between : Smt. V.T. Leelavathi ...Petitioner

AND : Sri J. Sameera Jayatheertha ...Respondent

NOTICE TO THE RESPONDENT BY WAY OF PAPER PUBLICATION

Sri. J. Sameera Jayatheertha S/o Late Jayatheertha. B, Aged about 39 years R/at Flat No.207, Nisarga Comforts, Opp. HNT Kitchen, Nisarga Layout, Hosakote Town, Hosakote Taluk, Bangaluru Rural District.

Whereas Smt. V.T. Leelavathi the petitioner has filed the above petition for seeking for stay in the schedule property not to transfer the schedule property in favour of third parties bearing CMC Katha No. 236/206/301-2, Measuring an Extent of East-West 10.04 sq.ft , North-South 18.04 sq.ft, and towards western side East East-West 98.05 feet and North-South 14 feet Total 1560 Sq.feet, with consisting of 2 floor House measuring 577.5 sq.feet. bounded on East-Bramhanara Beedi, West-House of Vittalrayara, North-Property of H V Gopalachar and house of H V Ranganathachar, South-house of Bheemesenacharaya House and vacant Space and directing the 1st Respondent to pay maintenance of Rs.40,000/- per month to the petitioner and other such reliefs against you. You are hereby noticed / summoned to appear in this court in person or by pleader **on 16.04.2026 at 3.00 P.M.** to answer the same, failing which, the petition will be disposed of ex-parte.

Given under my hand and seal of the court on this 13.03.2026.

By order of the Court, Assistant Commissioner, Doddaballapura Sub Division, Doddaballapura Bangalore Rural Dist.

Advocate for Petitioner : **Lakshmana Murthy .N,** Advocate

IN THE COURT OF THE HON'BLE IV CIVIL JUDGE AND J.M.F.C. AT TUMAKURU

Crl. Mis.76/2026

PETITIONERS: Bhavyasree S.C. D/o Late. Chikkanna, Aged about 27 years, R/at, Sangalapura village, Hebbur Hobli, Tumakuru Taluk. -V/S-

RESPONDENT: 1. Deputy Tahasildar, Nadakacheri, Hebbur Hobli, Hebbur, Tumakuru Taluk. **2. Marisiddamma** W/o Late. Chikkanna, Aged about 80 years. **3. Siddalingaiah** S/o Late. Chikkanna, Aged about 60 years. **4. Chikkamma** D/o Late. Chikkanna, Aged about 57 years. **5. Chandrakala** D/o Late. Chikkanna, Aged about 55 years. **6. Umesh** S/o Late. Chikkanna, Aged about 49 years. Respondent No.2 & 5 are all R/at, Sangalapura village, Hebbur Hobli, Tumakuru Taluk.

PAPER PUBLICATION

WHEREAS, the above Petitioner has field the above petition. Under Section 13(3) of Registration 13(3) of Registration of Birth & Death Act: to obtain the death certificate of Mother of the petitioner and Daughter-in-law of Respondent No.2 and Brother wife of Respondent No.3 to 5 by name LAKSHMAMMA W/O LATE. CHIKKANNA who died on 08-09-2005 at Sangalapura village, Hebbur Hobli, Tumakuru Taluk. If anybody have objection or right with respect to the above said fact and petition may file objection in the above said case by personally or by counsel. The case is posted on 16.04.2026 at 11.00 a.m. otherwise the said matter will be disposed in accordance with law.

Give under my hand and the seal of the court on this of 13th day of March. 2026 at Tumakuru.

By Order of the Court

Gangachannegowda B.A., L.L.B., Advocate, No.11, Prathibha Paradise, M.G. Road, 3rd Cross, Tumakuru, Mob. 9449940285

ಮಾನ್ಯ 2ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ಗ್ರಾಮಾಂತರ

ಸಿ. ಮಿಸ್. ನಂ. 556/2026

1. ಜಯಲಕ್ಷ್ಮಿ ವಿ.ಎಸ್. ಕೋಂ. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 85 ವರ್ಷ
2. ಲಕ್ಷ್ಮಿ ನರಸಿಂಹ ಪ್ರಕಾಶ್ ವಿ.ಎಸ್. ಬಿನ್. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 67 ವರ್ಷ. ಇಬ್ಬರ ವಾಸ: ನಂ. 60, 2ನೇ ಕ್ರಾಸ್, ನುರಾಣಿ ಲೇಔಟ್, ಜೆ.ಪಿ. ನಗರ, 7ನೇ ಹಂತ, ಬೆಂಗಳೂರು-560 078.
3. ಮಂಜುಳ, ಕೋಂ. ಎಸ್.ಎಸ್. ಸುಬ್ರಮಣ್ಯ, ಬಿನ್. ಲೇಟ್. ವಿ.ಎಸ್. ನೀಲಕಂಠರಾವ್, ವಯಸ್ಸು 63 ವರ್ಷ, ವಾಸ: ನಂ. 14, ಲಕ್ಷ್ಮಿ ಫ್ಲೋರ್‌ಮಿಲ್ ಕ್ರಾಸ್ [illegible]

[illegible]

ಮಾನ್ಯ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಓ.ಎಸ್.ನಂ: 80/2026

[illegible]

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ

ಸಿ.ಮಿಸ್.ನಂ.:65/2025

[illegible]

ಗೌರವಾನ್ವಿತ ಮೂರನೇ ಜೆ.ಎಂ.ಎಫ್.ಸಿ.ನ್ಯಾಯಾಲಯ, ಮೈಸೂರು

ಸಿ.ಮಿಸ್ ಸಂಖ್ಯೆ: 161/2026

ಅರ್ಜಿದಾರರು :1) ಶ್ರೀ. ಎಂ.ವೆಂಕಟೇಶ್ ಬಿನ್ ಲೇಟ್ ಮಾಣಿಕ್ಕಂ (Manickam) ವಯಸ್ಸು ಸುಮಾರು 55 ವರ್ಷ, ವಾಸ: ಮನೆ ನಂ.26, ಕಸ್ತೂರಬಾ, 1ನೇ ಮಹಡಿ, ಬಂಟರ ಲೇಔಟ್, ಪಟ್ಟಣ ಪಂಚಾಯಿತಿ ಕಛೇರಿ ಹತ್ತಿರ, ಬೋಗಾದಿ, ಮೈಸೂರು-570026. ಮೊಬೈಲ್: 9449248117. 2) ಶ್ರೀಮತಿ, ಸುಮಿತ್ರ ಕಲೈಸೆಲ್ವನ್ (Sumithra Kalaiselvan) ಬಿನ್ ಲೇಟ್ ಮಾಣಿಕ್ಕಂ (Manickam) ಕೋಂ ಕಲೈಸೆಲ್ವನ್ (Kalaiselvan) ವಯಸ್ಸು ಸುಮಾರು 57 ವರ್ಷ, ವಾಸ: ಮನೆ ನಂ.4/52, ಮಾಂಬಳ್ಳಿ, ಮೈಲಾರಿಪಾಲ್ಯಂ, ಓತಕಲ್‌ಮಂಡಪಂ, ಕೊಯಂಬತ್ತೂರು ದಕ್ಷಿಣ, ಕೊಯಂಬತ್ತೂರು ಜಿಲ್ಲೆ, ತಮಿಳುನಾಡು-641 032. ಮೊಬೈಲ್: 9698872596 -ವಿರುದ್ಧ-

ಎದುರುದಾರರು: ಜನನ ಮತ್ತು ಮರಣ ನೋಂದಣಾಧಿಕಾರಿಗಳು ಬೋಗಾದಿ ಪಟ್ಟಣ ಪಂಚಾಯಿತಿ, ಬೋಗಾದಿ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಈ ಮೇಲ್ಕಂಡ ಅರ್ಜಿದಾರರ ತಂದೆಯವರಾದ ಮಾಣಿಕ್ಕಂ (Manickam) ಬಿನ್ ಲೇಟ್ ಕಂದೇಗೌಡ ಮತ್ತು ಲೇಟ್ ಪೊನ್ನಮ್ಮಾಳ್ (Ponnammal) ರವರು ದಿನಾಂಕ 13.01.2025 ರಂದು ಮನೆ ನಂ.26, ಕಸ್ತೂರಬಾ, 1ನೇ ಮಹಡಿ, ಬಂಟರ ಲೇಔಟ್, ಪಟ್ಟಣ ಪಂಚಾಯಿತಿ ಕಛೇರಿ ಹತ್ತಿರ, ಬೋಗಾದಿ, ಮೈಸೂರು-570026 ಇಲ್ಲಿ ಮರಣ ಹೊಂದಿರುತ್ತಾರೆ. ಸದರಿ ಅರ್ಜಿದಾರರು ಈ ಘನ ನ್ಯಾಯಾಲಯದಲ್ಲಿ ಈ ಮೇಲ್ಕಂಡವರ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಕಂಡ ಅರ್ಜಿದಾರರ ತಂದೆ ಮಾಣಿಕ್ಕಂ (Manickam) ಬಿನ್ ಲೇಟ್ ಕಂದೇಗೌಡ ಮತ್ತು ಲೇಟ್ ಪೊನ್ನಮ್ಮಾಳ್ (Ponnammal) ರವರ ಮರಣದ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಯಾವುದಾದರೂ ವ್ಯಕ್ತಿಗಳು ತಮ್ಮ ಹಿತಾಸಕ್ತಿ/ ತಕರಾರು ಏನಾದರೂ ಇದ್ದಲ್ಲಿ ಸದರಿ ಪ್ರಕರಣವು ಈ ಘನ ನ್ಯಾಯಾಲಯದಲ್ಲಿ ದಿನಾಂಕ 15/4/2026 ರಂದು ಸುನಾವಣೆಗೆ ನಿಗದಿಯಾಗಿದ್ದು, ಆ ದಿನ ಯಾವುದೇ ಹಿತಾಸಕ್ತಿ ಇರುವ ವ್ಯಕ್ತಿಗಳು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಸ್ವತಃ ಆಗಲೀ, ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ ತಾವು ಹಾಜರಾಗದೇ ಇದ್ದ ಪಕ್ಷದಲ್ಲಿ ನಿಮ್ಮ ಗೈರು ಹಾಜರಿಯನ್ನೇ ಪರಿಗಣಿಸಿ ನ್ಯಾಯಾಲಯವು ಮುಂದಿನ ಕ್ರಮ ಕೈಗೊಳ್ಳುತ್ತದೆ ಎಂದು ಈ ಮೂಲಕ ತಿಳಿಯಪಡಿಸುತ್ತೇವೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, 3ನೇ ಜೆಎಂಎಫ್‌ಸಿ ನ್ಯಾಯಾಲಯ, ಮೈಸೂರು

ಅರ್ಜಿದಾರರ ಪರ ವಕೀಲರು.
ದಿನಾಂಕ: ಸ್ಥಳ: ಮೈಸೂರು

ಮಾನ್ಯ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ದೊಡ್ಡಬಳ್ಳಾಪುರ

ಅಸಲುದಾವೆ ನಂ:241/2022

[illegible]

ಪಶ್ಚಿಮಕ್ಕೆ: ರಾಮಣ್ಣ, ಜಯಲಕ್ಷ್ಮಿ ಬಾಯಿಯವರ ಜಮೀನು, ಉತ್ತರಕ್ಕೆ: ಕಾಮಣ್ಣಯ್ಯರವರ ಜಮೀನು, ದಕ್ಷಿಣಕ್ಕೆ: ಚಿಕ್ಕರಾಮಾನಾಯ್ಕ, ಆಂಜಿನಪ್ಪ ಮತ್ತು ರಾಮಚಂದ್ರನಾಯ್ಕರವರ ಜಮೀನು.

ನ್ಯಾಯಾಲಯದ ಆದೇಶದ ಮೇರೆಗೆ
ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ದೊಡ್ಡಬಳ್ಳಾಪುರ

ಅರ್ಜಿದಾರರ ಪರ ವಕೀಲರು : ಚನ್ನೇಗೌಡ ವಕೀಲರು, ಗಣ್ಣುಗೆ ಕಟ್ಟಡ, ತಾಲ್ಲೂಕು ಕಚೇರಿ ಹತ್ತಿರ, ದೊಡ್ಡಬಳ್ಳಾಪುರ ನಗರ,

---

DRAFT PAPER PUBLICATION IN THE COURT OF THE HON'BLE 1st ADDL CIVIL JUDGE AT KGF.

O.S. No.429/2023.

PLAINTIFF : Smt. Shantha & others.
DEFENDANT : Sri. Venkateshappa & another.

Notice to Lrs Defendant No 1(a) to (d) by paper publication

1 (a) Smt. Venkatamma, W/o Late Venkateshappa, Aged about 58 Years, **1(b) Sri. Ravikumar** S/o Late Venkateshappa Aged about 40 Years, **1(c) Sri. Suresh Kumar** S/o Late Venkateshappa Aged about 37 Years, **1(d) Smt. Vijayalakshmi** D/o Late Venkateshappa Aged about 35 Years, All are R/at Aruchala Layout, Venkateshwara Best English School, SUB, School back side, V.C. Abdul Ali Garden Bangarpet 563114.

COURT NOTICE TO LRS OF DEFENDANT No 1(a) to (d)

Please take notice to the Lrs of Defendant No.1(a) to 1(d) named above that the plaintiff has filed suit against defendant for Injuction and declaration and other reliefs. The suit Notice was sent by court Speed Post has returned unserved. Hence through paper publication Notice is issued to you calling upon you to appear in person or through advocate **on : 01.06.2026** at 11.00 A.M. Failing which the court will be proceeded ex-parte.

Dated this day the 09-03-2026 at K.G.F.

CHIEF MINISTERIAL OFFICER PRL CIVIL JUDGE AND JMFC COURT KOLAR GOLD FIELDS.

Place: KGF, Date:7/3/2026

PAPER PUBLICATION IN THE COURT OF THE 4TH ADDL DISTRICT AND SESSION JUDGE AT MADHUGIRI.

R.A. NO. 5014/2023.

APPELLANT : Sri. Seenappa S/o late Venkatappa Aged about 93 years residing at Chinakavaraja Village, Kasaba hobli, Madhugiri taluk. Appellant Seenappa died hence the Respondent No.14 is transposed as Appellant and Now the appellant is H.Shivakumar S/o late Hanumanthappa a/a 60 years Aged about Aehandahalli village, Kasaba Hobli, Madhugiri taluk

V/S

RESPONDENTS : 1) **Bhavya C.V.** d/o Venkatachalaiah a/a 25 years, 2) **Venkatalakshmamma** d/o Seenappa aged about Aged about 61 years, 3) **Smt. Shanthamma** D/o Seenappa a/a 50 years, residing at Chinnakavaraja Village, Kasaba hobli Madhugiri taluk. 4) **Shivanna** s/o Puttagangaiah a/a 38 years r/o Chinakavaraja village, Kasaba hobli, Madhugiri taluk.

Paper Publication Publish in as per court order

That the above named Appellants has preferred the above appeal against the Judgment and decree passed in O.S. No. 66/2016 Dt; 11-4-2023 on the file of the Add. Senior Civil judge Madhugiri You being the Respondent No.6, 12, 13 and 16 respectively are remain absent through court, as well as R.P.A.D. and said court, hence you are hereby inspite of taking sufficient steps against you you have avoid to receive notices issued to the inform to appear before this court on : personally or through an advocate. If you are unable to appear the Hon'ble court you will be placed exparte and case will be proceeded against you. Given under my hand the seal of the court of this day at Madhugiri.

BY ORDER OF THE COURT CMO, 4TH ADDITIONAL DISTRICT & SESSIONS JUDGE MADHUGIRI.

Advocate for appellant : **S. Raghuantha Reddy.** B.A. LL.B. Advocate, 22nd ward Raghavendra colony, Madhugiri town, Madhugiri.

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

[illegible]

ಈ ಮೂಲಕ ತಿಳಿಯಪಡಿಸುತ್ತೇನೆ. ತಪ್ಪಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು. ಸದರಿ ಪ್ರಕಟಣೆಯನ್ನು ದಿನಾಂಕ:10.03.2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಅರ್ಜಿದಾರರ ಪರ ವಕೀಲರು : [illegible] ಬಿ.ಎಸ್, ವಕೀಲರು, ನ್ಯಾಯಾಲಯದ ಎದುರು, ದೊಡ್ಡಬಳ್ಳಾಪುರ, ದೊಡ್ಡಬಳ್ಳಾಪುರ ನಗರ

IN THE COURT OF THE CITY CIVIL JUDGE AT BENGALURU CITY

P & SC No. 567 of 2025

BETWEEN : 1.MRS. RUKMINI JANARDHAN W/o Late Janardhan M.S. Aged about 68 years Residing at No. 119, "Vishwas", 3rd Cross, HMT Layout, Mathikere, Bengaluru -560 054.
2. MRS. JYOTHI SAMPATH W/o Sampath Kumar N.R. D/o Late Janardhan M.S. Aged about 45 years Residing at 167, 1st Floor Backside house, 5th 'A' Main, 5th Cross, MICO Layout, BTM 2nd Stage, Bengaluru -560076
3. MR. RAVI KIRAN M.J. S/o Late Janardhan M.S. Aged about 43 years Residing at No. 119, Vishwas, 3rd Cross, HMT Layout, Mathikere, Bengaluru - 560054. **...Petitioners**

AND : 1.M/S. ZERODHA BROKING LTD. #192A, 4th Floor, Kalyani Vista, 3rd Main Road, JP Nagar 4th Phase, Bengaluru-560076. Rep. by its Director **2. M/S. MIRAE ASSET SHAREKHAN** SS Royals, New no. 5, 3rd Floor, Elephant Rock Road, Jayanagar 3rd Block, Bengaluru-560011. Rep. by its Director **...Respondent**

Public Notice

Whereas the aforementioned petitioners have filed the above petition under Section 372 of the Indian Succession Act, 1925 before this Court for grant of Succession Certificate in favour of Petitioner No.1 - Mrs. Rukmini Janardhan W/o Late Janardhan M.S who expired intestate on 22.03.2025 at his residence in Bengaluru.

Notice is issued in the name of respondent(s) that in case anybody has any objection for the grant of succession certificate, he/she can file objections to the same on or before the next date of hearing i.e **24.04.2026,** failing which the petition shall be decided in accordance with law.

Schedule

1. Shares held in Zerodha Broking Ltd Demat Account No. 1208160104630611
2. Shares held in Mirae Asset Sharekhan, Demat Account No. 201819821446274

Given under my hand and the seal of the Court, this 9.03.2026.

By Order of the Court
Sd/- Senior Sheristedar
City Civil Court, Bangalore

B.M. SANTOSH, Advocate
No.16, 6th Cross, Vidyaranyapura Main Road, Doddabommasandra, Bengaluru -560 097
Mob : 9740849899
E-mail : santoshgowda007@gmail.com

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ

ಸತ್ತಿ ರಸ್ತೆ, ಚಾಮರಾಜನಗರ-571313

ಇ-ಮೇಲ್ :apmccrnagar@rediffmail.com,apmccrnagar@gmail.com,

ದೂ: 08226-222103,225665

ಸಂಖ್ಯೆ:ಕೃಉಮಾಸ(ಚಾ): 761:2025-26, ದಿನಾಂಕ : 09/03/2026

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪದ್ಧತಿಯಲ್ಲಿ ಮಾತ್ರ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೊಂದಾಯಿತ ಹಾಗೂ Standard Tender Documents KW-4 Clause 3 (with latest amendments) ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ.1 ಕಾಮಗಾರಿಯ ಹೆಸರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ 2025-26ನೇ ಸಾಲಿನ ನಬಾರ್ಡ್ ಆರ್‌ಐಡಿಎಫ್-31 ಯೋಜನೆಯಡಿ ಅನುಮೋದಿತ ಸಂತೆಮರಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ತೆಂಗಿನಕಾಯಿ ಮಾರುಕಟ್ಟೆಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ. (ಐಟಂವಾರು ಟೆಂಡರ್), ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ-418,22,896=00 ಇ.ಎಂ.ಡಿ ಮೊಬಲಗು ರೂ.ಶೇಕಡ 1.50 ರಂತೆ ಅಥವಾ ಕನಿಷ್ಠ (ಇ.ಪೇಮೆಂಟ್) 6,28,000=00 ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ (ಮಳೆಗಾಲ ಹೊರತು ಪಡಿಸಿ) 6 ತಿಂಗಳು, ಅರ್ಹ ಗುತ್ತಿಗೆದಾರರ ದರ್ಜೆ- ಕೆ.ಡಬ್ಲ್ಯು-4 ಕ್ಲಾಸ್-3 ರಲ್ಲಿ ಅರ್ಹರಿರುವ ಮತ್ತು ಲೋ.ಇ.ಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು, ಇ ಪ್ರೊಸಸಿಂಗ್ ಫೀ (ಇ.ಪೇಮೆಂಟ್)- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ :

1) ಪ್ರೀ ಬಿಡ್ ಮೀಟಿಂಗ್ ದಿನಾಂಕ: 06/04/2026, ಬೆಳಿಗ್ಗೆ: 11-00 ಘಂಟೆಗೆ,
2) ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ:13/04/2026 ಮತ್ತು ವೇಳೆ:ಮಧ್ಯಾಹ್ನ 4.00 ಗಂಟೆಗೆ
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16/04/2026 ಮತ್ತು ವೇಳೆ : ಬೆಳಿಗ್ಗೆ 11-00 ಗಂಟೆಗೆ
4) ಆರ್ಥಿಕ ಬಿಡ್ ತೆರೆಯುವ ದಿನಾಂಕ:22/04/2026 ಮತ್ತು ವೇಳೆ : ಬೆಳಿಗ್ಗೆ 11-00 ಗಂಟೆಗೆ ನಂತರ

Tender documents may be downloaded from Government of Karnataka e-Procurement website
https://kppp.karnataka.gov.in/#/portal/portal-home under login for Contractors

ಟೆಂಡರುಗಳನ್ನು ತೆರೆಯುವ ಸ್ಥಳ : ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ,
ಪತ್ರ ವ್ಯವಹಾರದ ವಿಳಾಸ : ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ,

ಸಹಿ/- (ಬಿ. ಜಗದೀಶ್), ಕಾರ್ಯದರ್ಶಿ, ಕೃಉಮಾಸ, ಚಾಮರಾಜನಗರ

ಸಹಿ/- (ಗುರುಸ್ವಾಮಿ. ಎಂ. ಬಿ) ಅಧ್ಯಕ್ಷರು, ಕೃಉಮಾಸ ಚಾಮರಾಜನಗರ

ಸಂ: ವಾಸಾಸಂಇ:ಚಾ.ನಗರ:789:2025-26

ತೃತೀಯಲಿಂಗಿಯೊಬ್ಬರ ವಿರುದ್ಧ ಕಳ್ಳತನ ಆರೋಪ

ವಿಚಾರಣೆ ರದ್ದತಿಗೆ ಹೈಕೋರ್ಟ್ ನಿರಾಕರಣೆ



ಬೆಂಗಳೂರು: ಸರಗಳ್ಳತನ ಆರೋಪದ ಸಂಬಂಧ ತೃತೀಯ ಲಿಂಗಿಯೊಬ್ಬರ ವಿರುದ್ಧ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೂರು ದರೋಡೆ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣಾಧೀನ ನ್ಯಾಯಾಲಯದ ವಿಚಾರಣೆ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಅರ್ಜಿದಾರರ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಿದರೆ, ಸರಗಳ್ಳತನ ಆರೋಪದ ಪ್ರಕರಣಗಳಿಗೆ ಅನುಮತಿ ನೀಡಿದಂತಾಗುತ್ತದೆ ಎಂದು ಮೌಖಿಕವಾಗಿ ಹೇಳಿದೆ. ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದರೋಡೆ ಆರೋಪಕ್ಕೆ ಸಂಬಂಧಿಸಿದಂತೆ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಸಿಜೆಎಂ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಪಡಿಸುವಂತೆ ಕೋರಿ ಬೆಂಗಳೂರಿನ ವಿವೇಕ್ ನಗರದ ನಿವಾಸಿಯಾದ ತೃತೀಯ ಲಿಂಗಿ ಅಭಿಷೇಕ್ ಅಲಿಯಾಸ್ ಗೊಂಬಿ ಅಲಿಯಾಸ್ ಅನಾಮಿಕ ಸಲ್ಲಿಸಿದ್ದ ಮೂರು ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ವಜಾಗೊಳಿಸಿದೆ.

ಅರ್ಜಿದಾರರ ಪರ ವಕೀಲ ಧನಂಜಯ್ ಕುಮಾರ್ ಅವರು ಅರ್ಜಿದಾರರು ಮೂರು ಸರಗಳನ್ನು ಮೂರು ಪ್ರದೇಶಗಳಲ್ಲಿ ಕಳವು ಮಾಡಿದ್ದಾರೆ ಎಂಬ ಆರೋಪದ ಮೇಲೆ ಮೂವರು ದೂರುದಾರರು ಪ್ರತ್ಯೇಕವಾಗಿ ದೂರು ದಾಖಲಿಸಿದ್ದಾರೆ. ದೂರು ದಾಖಲಿಸುವಲ್ಲಿ ಮೂರರಿಂದ ಎಂಟು ತಿಂಗಳ ಕಾಲ ವಿಳಂಬವಾಗಿದೆ. ಟಿವಿಯಲ್ಲಿ ಬಂದ ಸುದ್ದಿ ನೋಡಿದ ನಂತರ ದೂರು ದಾಖಲಿಸಿದ್ದಾರೆ ಎಂದರು.

ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಮೊದಲ ಪ್ರಕರಣದಲ್ಲಿ ಅರ್ಜಿದಾರರನ್ನು ಬಂಧಿಸಲಾಗಿತ್ತು. ಆತನ ಸ್ವಹೇಳಿಕೆ ದಾಖಲಿಸಿಕೊಳ್ಳಲಾಯಿತು. ಅದರಲ್ಲಿ ಇತರೆ ಎರಡು ಸರಗಳ್ಳನ ಪ್ರಕರಣಗಳ ಬಗ್ಗೆ ಅರ್ಜಿದಾರನೇ ಹೇಳಿಕೆ ನೀಡಿದ್ದ. ತನಿಖೆ ವೇಳೆ ಕಳವು ಮಾಡಿದ್ದ ಸರಗಳನ್ನು ಜಪ್ತಿ ಮಾಡಲಾಗಿದೆ.

ಈ ಮಧ್ಯೆ ಇತರೆ ಇಬ್ಬರು ದೂರುದಾರರು ದೂರು ದಾಖಲಿಸಿದ್ದಾರೆ. ಅರ್ಜಿದಾರರ ವಿರುದ್ಧ ವಿಚಾರಣಾಧೀನ ನ್ಯಾಯಾಲಯ ದೋಷಾರೋಪ ಹೊರಿಸಿದೆ. ಈ ಹಂತದಲ್ಲಿ ಪ್ರಕರಣ ರದ್ದುಪಡಿಸಬಾರದು ಎಂದು ಕೋರಿದರು. ವಾದ-ಪ್ರತಿವಾದ ಆಲಿಸಿದ ಪೀಠವು ಅರ್ಜಿದಾರರು ವಿಚಾರಣಾ ನ್ಯಾಯಾಲಯ ವಿಚಾರಣೆ ಎದುರಿಸಲಿ ಎಂದು ತಿಳಿಸಿ ಅರ್ಜಿಗಳನ್ನು ವಜಾಗೊಳಿಸಿತು.

ಸಂಪದ ಮಹಿಳಾ ಸಿಎಗಳ ಸಮ್ಮೇಳನ

ಬೆಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯಿಂದ ಎಫ್‌ಕೆಸಿಸಿಐಯ ಸರ್ ಎಂ.ವಿ. ಆಡಿಟೋರಿಯಂನಲ್ಲಿ ಶನಿವಾರ ಸಂಪದ ಮಹಿಳಾ ಸಿಎಗಳ ಸಮ್ಮೇಳನ ಆಯೋಜಿಸಲಾಗಿತ್ತು.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿ ಬೆಂಗಳೂರು ಶಾಖೆಯ ನೂತನ ಅಧ್ಯಕ್ಷೆ ಸಿಎ ಕವಿತಾ ಪರಮೇಶ್, ಕಾರ್ಯದರ್ಶಿ ಶ್ರೀಪಾದ್ ಹುಳಿಗೋಳ್ ನಾರಾಯಣ್ ಮುಂತಾದವರು ಉಪಸ್ಥಿತರಿದ್ದರು.

ಭವಾನಿ ಜೋಯಿಸ್ ನೇತೃತ್ವದಲ್ಲಿ ಬ್ಯಾಲೆನ್ಸಿಂಗ್ ಬುಕ್ಸ್ ಹಾಗೂ ಬ್ರೇಕಿಂಗ್ ಬ್ಯಾರಿಯರ್ ಎಂಬ ವಿಷಯದಲ್ಲಿ ಚರ್ಚೆ ನಡೆಯಿತು, ದೀಪಾ ಕೃಷ್ಣಮೂರ್ತಿ ಇನ್ನರ್ ಬ್ಯಾಲೆನ್ಸ್, ಔಟರ್ ಬ್ರಿಲಿಯನ್ಸ್ ಕುರಿತು ಮಾತನಾಡಿದರು, ಟ್ಯಾಲಿ ಸಂಸ್ಥೆಯ ಬ್ರಾಂಡ್ ಸಲಹೆಗಾರ್ತಿ ಸಿಎಂಒ ಜಯತಿ ಸಿಂಗ್ ಅವರು ಉದ್ಯೋಗಕ್ಕಾಗಿ ನಿಮ್ಮನ್ನು ನೀವು ಬ್ರ್ಯಾಂಡ್ ಮಾಡುವುದು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.



ಪ್ರಶಸ್ತಿ ಪ್ರದಾನ



ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಕನ್ನಡ ಜನಶಕ್ತಿ ಕೇಂದ್ರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರಿಗೆ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಸಚಿವರಾದ ಎಚ್. ವಿಶ್ವನಾಥ್, ಮೋಟಮ್ಮ, ಕನ್ನಡ ಜನ ಶಕ್ತಿ ಕೇಂದ್ರದ ಅಧ್ಯಕ್ಷ ರಾಮೇಗೌಡ ಉಪಸ್ಥಿತರಿದ್ದರು.

ಕಿರುಸುದ್ದಿ

ಸಹಕಾರದಿಂದ ಶೈಕ್ಷಣಿಕ ಪ್ರಗತಿ



ಬೆಂಗಳೂರು: ಮೇವಾ ವ್ಯಾನ್ ಗಾರ್ಡ್ ಬಿಜಿನೆಸ್ ಸ್ಕೂಲ್‌ನೊಂದಿಗಿನ ಸಹಯೋಗವು ಶೈಕ್ಷಣಿಕ ಸಹಕಾರವನ್ನು ಬಲಪಡಿಸುವಲ್ಲಿ ಮತ್ತು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅವಕಾಶವನ್ನು ಹೆಚ್ಚಿಸುವಲ್ಲಿ ಪ್ರಮುಖ ಮೈಲಿಗಲ್ಲನ್ನು ಗುರುತಿಸುತ್ತದೆ ಎಂದು ಕೊಟ್ಟಾಯಂ ಐಐಐಟಿ ಸಂಸ್ಥೆ ಅಧ್ಯಕ್ಷೆ ಡಾ.ವಿಜಯಲಕ್ಷ್ಮಿ ದೇಶಮಾನೆ ಹೇಳಿದರು. ಶನಿವಾರ ಮೇವಾ ವ್ಯಾನ್ ಗಾರ್ಡ್ ಬಿಜಿನೆಸ್ ಸ್ಕೂಲ್‌ನಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಕೊಟ್ಟಾಯಂ ಹಾಗೂ ಮೇವಾ ವ್ಯಾನ್ ಗಾರ್ಡ್ ಬಿಜಿನೆಸ್ ಸ್ಕೂಲ್ ನಡುವೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕೆ ಮಾತನಾಡಿ, ಈ ಪಾಲುದಾರಿಕೆಯು ವಿದ್ಯಾರ್ಥಿಗಳಿಗೆ ಐಐಐಟಿ ಕೊಟ್ಟಾಯಂನೊಂದಿಗೆ ಸಂಯೋಜಿತವಾದ ಶೈಕ್ಷಣಿಕ ವಾತಾವರಣ, ಸುಧಾರಿತ ಕಲಿಕಾ ಸೌಲಭ್ಯಗಳು ಮತ್ತು ತಾಂತ್ರಿಕ ಪರಿಣತಿಯಿಂದ ಪ್ರಯೋಜನ ಪಡೆಯುವ ಅವಕಾಶವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ ಎಂದು ತಿಳಿಸಿದರು. ಈ ಸಹಯೋಗದ ಮೂಲಕ, ವಿದ್ಯಾರ್ಥಿಗಳು ಪ್ರಮುಖ ತಾಂತ್ರಿಕ ಸಂಸ್ಥೆಯ ಮಟ್ಟದಲ್ಲಿ ಉದ್ಯಮ- ಆಧಾರಿತ ಜ್ಞಾನ, ಸಂಶೋಧನಾ ಅವಕಾಶ ಮತ್ತು ಕೌಶಲ್ಯ ಅಭಿವೃದ್ಧಿ ಉಪಕ್ರಮಗಳಿಗೆ ಹೆಚ್ಚಿನ ಒಡ್ಡಿಕೊಳ್ಳುವಿಕೆಯನ್ನು ಪಡೆಯುತ್ತಾರೆ ಎಂದರು. ಎಂವಿಬಿಎಸ್ ಡೀನ್ ಡಾ.ಭಾರತೀಶ್ ರಾವ್ ,ಐಐಐಟಿ ಕೊಟ್ಟಾಯಂ ರಿಜಿಸ್ಟ್ರಾರ್ ಡಾ. ರಾಧಾಕೃಷ್ಣನ್ ಇದ್ದರು.

ಪ್ರಯಾಣಿಕರ ದಟ್ಟಣೆ: ವಿಶೇಷ ರೈಲು ಸಂಚಾರ

ಬೆಂಗಳೂರು: ಯುಗಾದಿ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು, ನೈರುತ್ಯ ರೈಲ್ವೆಯು ಯಶವಂತಪುರ ಮತ್ತು ಹೊಸಪೇಟೆ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲಿದೆ. ರೈಲು ಸಂಖ್ಯೆ 06533 ಯಶವಂತಪುರ-ಹೊಸಪೇಟೆ ವಿಶೇಷ ಎಕ್ಸ್‌ಪ್ರೆಸ್ ರೈಲು ಮಾ.18 ರಂದು ಸಂಜೆ 6:15ಕ್ಕೆ ಯಶವಂತಪುರದಿಂದ ಹೊರಟು, ಮರುದಿನ ಬೆಳಗ್ಗೆ 4 ಗಂಟೆಗೆ ಹೊಸಪೇಟೆ ತಲುಪಲಿದೆ. ರೈಲು ಸಂಖ್ಯೆ 06534 ಹೊಸಪೇಟೆ-ಯಶವಂತಪುರ ರೈಲು ಮಾ.19ರಂದು ಬೆಳಗ್ಗೆ 9ಗಂಟೆಗೆ ಹೊಸಪೇಟೆಯಿಂದ ಹೊರಟು, ಅದೇ ದಿನ ರಾತ್ರಿ 7:20ಕ್ಕೆ ಯಶವಂತಪುರ ತಲುಪಲಿದೆ.

ವಿವಿಧ ನಿಲ್ದಾಣದಲ್ಲಿ ತಾತ್ಕಾಲಿಕ ರೈಲು ನಿಲುಗಡೆ

ಬೆಂಗಳೂರು: ನೈಋತ್ಯ ರೈಲ್ವೆ ವಿವಿಧ ನಿಲ್ದಾಣಗಳಲ್ಲಿ ಕೆಲ ರೈಲುಗಳಿಗೆ ನೀಡಿರುವ ತಾತ್ಕಾಲಿಕ ನಿಲುಗಡೆಯನ್ನು ಜೂ.30 ರವರೆಗೆ ಮುಂದುವರೆಸಲಿದೆ. ರೈಲು ಸಂಖ್ಯೆ 56519/56520 ಕೆಎಸ್‌ಆರ್ ಬೆಂಗಳೂರು – ಹೊಸಪೇಟೆ ದೇವನೂರಿನಲ್ಲಿ ನಿಲುಗಡೆ. ರೈಲು ಸಂಖ್ಯೆ 20675/20676 ಬೆಳಗಾವಿ – ಮೈಸೂರು ಎಕ್ಸ್‌ಪ್ರೆಸ್‌ಗೆ ರಾಮಗಿರಿಯಲ್ಲಿ ನಿಲುಗಡೆ. ರೈಲು ಸಂಖ್ಯೆ 17391/17392 ಕೆಎಸ್‌ಆರ್ ಬೆಂಗಳೂರು – ಸಿಂಧನೂರು ಎಕ್ಸ್‌ಪ್ರೆಸ್‌ಗೆ ರಾಮಗಿರಿ ಮತ್ತು ಚಲಗೇರಿಯಲ್ಲಿ, ರೈಲು ಸಂಖ್ಯೆ 16239/16240 ಚಿಕ್ಕಮಗಳೂರು – ಯಶವಂತಪುರ – ಎಕ್ಸ್‌ಪ್ರೆಸ್‌ಗೆ ಅರಳಗುಪ್ಪೆ ಮತ್ತು ಸಂಪಿಗೆ ರೋಡ್ ನಿಲ್ದಾಣದಲ್ಲಿ ನಿಲುಗಡೆ. ರೈಲು ಸಂಖ್ಯೆ 16579/16580 ಯಶವಂತಪುರ – ಶಿವಮೊಗ್ಗ ಟೌನ್ – ಯಶವಂತಪುರ ಎಕ್ಸ್‌ಪ್ರೆಸ್‌ಗೆ ಚಿಕ್ಕಬಾಣಾವರದಲ್ಲಿ, ರೈಲು ಸಂಖ್ಯೆ 16595/16596 ಕೆ.ಎಸ್.ಆರ್ ಬೆಂಗಳೂರು – ಕಾರವಾರ ಎಕ್ಸ್‌ಪ್ರೆಸ್‌ಗೆ ಕುಣಿಗಲ್‌ನಲ್ಲಿ ನಿಲುಗಡೆ.

ಕೇಂದ್ರ ನಗರಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಶೇಷ ಅಭಿಯಾನ | ರಸ್ತೆ ಬದಿ ಸಂಗ್ರಹವಾದ 41 ಲೋಡ್ ತ್ಯಾಜ್ಯ ತೆರವು

ಸ್ವಚ್ಛತೆಯಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ

ಬೆಂಗಳೂರು: ನಿರಂತರ ಸಾಮೂಹಿಕ ಸ್ವಚ್ಛತೆ ಕಾರ್ಯ ದಿಂದ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ಹಾಗೂ ಪಾದಚಾರಿ ಒತ್ತುವರಿ ತಡೆಗಟ್ಟಲು ಸಾಧ್ಯ ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಶೇಷ ಅಭಿಯಾನದ ಕುರಿತು ಮಾಹಿತಿ ನೀಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ ನಗರದ ಸ್ವಚ್ಛತೆ ಕಾಪಾಡುವ ಹಾಗೂ ನಾಗರಿಕರಿಗೆ ಆರೋಗ್ಯಕರ ಪರಿಸರ ಒದಗಿಸುವ ಉದ್ದೇಶದಿಂದ ವಿವಿಧ ಪ್ರದೇಶದಲ್ಲಿ ವಿಶೇಷ ಸ್ವಚ್ಛತಾ ಅಭಿಯಾನವನ್ನು ಕೈಗೊಳ್ಳಲಾಯಿತು.

ಆರು ವಿಧಾನಸಭಾ ಕ್ಷೇತ್ರಗಳಲ್ಲಿನ ವಿವಿಧ ಭಾಗಗಳಲ್ಲಿ ಕಸ ಸಂಗ್ರಹವಾಗುವ ಸ್ಥಳವನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸುವ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ನಿಯಮಿತ ಸ್ವಚ್ಛತಾ ಕಾರ್ಯಗಳ ಜೊತೆಗೆ ವಿಶೇಷ ಕಾರ್ಯಾಚರಣೆಗಳನ್ನು ರೂಪಿಸಿ ಜಾರಿಗೆ ತರಲಾಗಿದೆ. ನಗರದಲ್ಲಿ ಗುರುತಿಸಲ್ಪಟ್ಟ ಬ್ಲ್ಯಾಕ್ ಸ್ಪಾಟ್ ಪ್ರದೇಶಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವುದಕ್ಕೆ ನಗರ ಪಾಲಿಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ತಿಳಿಸಿದರು.

ಶುಕ್ರವಾರ ನಡೆದ ವಿಶೇಷ ಸ್ವಚ್ಛತಾ ಅಭಿಯಾನ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್ ಮಾರ್ಗದರ್ಶನದಲ್ಲಿ ನಡೆದಿದೆ. ಒಟ್ಟು 8.45 ಕಿ.ಮೀ. ವ್ಯಾಪ್ತಿಯಲ್ಲಿ ನಡೆದ ಈ ಕಾರ್ಯಾ ಚರಣೆಯಲ್ಲಿ 6 ಜೆಸಿಬಿ ಯಂತ್ರಗಳು ಮತ್ತು 31 ಟ್ರ್ಯಾಕ್ಟರ್‌ಗಳ ಬಳಕೆಯೊಂದಿಗೆ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ 41 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.



ಅಲ್ಲದೇ ವಿವಿಧ ಪ್ರದೇಶಗಳಲ್ಲಿ ಗುರುತಿಸಲ್ಪಟ್ಟಿದ್ದ 10 ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಯಿತು. ಈ ಕಾರ್ಯಾಚರಣೆಯಲ್ಲಿ 144 ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿ ಭಾಗವಹಿಸಿದ್ದರು. ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರದಿಂದ ಅಭಿಯಾನ ಪೂರ್ಣಗೊಂಡಿತು ಎಂದು ತಿಳಿಸಿದರು.

ರಸ್ತೆ ಕತ್ತರಿಸುವಿಕೆ ಅರ್ಜಿ ಪರಿಶೀಲಿಸಿ ಅನುಮತಿ ನೀಡಿ



ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರ್ಕ್ಸ್ ತಂತ್ರಾಂಶದಲ್ಲಿ ನೋಂದಾಯಿತ ರಸ್ತೆ ಕತ್ತರಿಸುವಿಕೆ ಅರ್ಜಿಗಳನ್ನು ಪರಿಶೀಲಿಸಿ ಕೂಡಲೇ ಅನುಮತಿ ನೀಡಿ ಎಂದು ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಅವರು, ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ವಿಶೇಷ ಮೂಲಸೌಕರ್ಯ ಯೋಜನೆಗೆ ಬಂಡವಾಳ ಬೆಂಬಲ ಅನುದಾನದಡಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ವಿವಿಧ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗೇಲ್‌ಕಂಪನಿಗೆ ಅನುಮತಿ ನೀಡಲು ನಿರ್ದೇಶನ

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೇಲ್ ಕಂಪನಿಯಿಂದ ರಸ್ತೆ ಕತ್ತರಿಸಲು ಅನುಮತಿ ಕೋರಿ ಒಟ್ಟು 51 ಅರ್ಜಿಗಳು ಸಲ್ಲಿಕೆಯಾಗಿದ್ದು, ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಈ ಕೂಡಲೇ ಮಾರ್ಕ್ಸ್ ತಂತ್ರಾಂಶದಲ್ಲಿ ನೋಂದಾಯಿತ ರಸ್ತೆ ಕತ್ತರಿಸುವ ಮನವಿಗಳನ್ನು ಪರಿಶೀಲಿಸಿ ನಗರದಲ್ಲಿ ಅನಿಲ ಪೈಪ್ ಲೈನ್ ಸಂಪರ್ಕ ಕಾಮಗಾರಿಗಳು ವಿಳಂಬವಾಗದಂತೆ ಎಲ್ಲಾ ಅರ್ಜಿಗಳನ್ನು ಆದ್ಯತೆಯ ಮೇರೆಗೆ ವಿಲೇವಾರಿ ಮಾಡುವಂತೆ ನಿರ್ದೇಶನ ನೀಡಿದರು.

ವಿಜ್ಞಾನಪುರ ಕೆರೆ ಸುತ್ತಮುತ್ತ ಅಕ್ರಮವಾಗಿ ಸುರಿದಿರುವ ಮಣ್ಣು ಮತ್ತು ಕಸದ ಅವಶೇಷಗಳನ್ನು ಕೂಡಲೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಜನಗಣತಿ 2027ಕ್ಕೆ ಸಂಬಂಧಿಸಿದಂತೆ ಮತಗಟ್ಟೆ ಪಟ್ಟಿವಾರು 150 ರಿಂದ 200 ಮನೆಗಳನ್ನು ಒಳಗೊಂಡಂತೆ ಮೂರು ಬ್ಲಾಕ್‌ಗಳ ಕಚ್ಚಾ ನಕ್ಷೆಯನ್ನು ಸಿದ್ಧಪಡಿಸಿಕೊಳ್ಳಲು ಚಾರ್ಜ್ ಅಧಿಕಾರಿಗಳಿಗೆ ತಿಳಿಸಿದರು.

ಕೃಷಿ ವಿವಿಯಿಂದ ವಿವಿಧ ಕೋರ್ಸ್‌ಗಳಿಗೆ ಆಹ್ವಾನ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆಯಲ್ಲಿ ಕೃಷಿಕರಿಗಾಗಿ ಕೃಷಿಯಲ್ಲಿ ದೂರ ಶಿಕ್ಷಣದ ಮೂಲಕ ನಡೆಸುವ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ರವರು 2026-27ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ಡಿಪ್ಲೊಮಾ ಮತ್ತು ನಾಲ್ಕು ಸರ್ಟಿಫಿಕೇಟ್ ಕೋರ್ಸ್ ಗಳಿಗೆ ಅರ್ಜಿಗಳನ್ನು ಆಹ್ವಾನಿಸಲು ಅಧಿಸೂಚನೆ ನೀಡಲಾಗಿದೆ. ಒಂದು ವರ್ಷದ ಡಿಪ್ಲೊಮಾ (ಕೃಷಿ) ಕೋರ್ಸ್‌ಗೆ ಶುಲ್ಕ ರೂ.10 ಸಾವಿರ ರೂ.ಗಳಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಒಂದು ವರ್ಷದ ಸ್ನಾತಕೋತ್ತರ ಕೃಷಿ ಡಿಪ್ಲೊಮಾ ಕೋರ್ಸ್‌ಗೆ ಕೋರ್ಸ್ ಶುಲ್ಕ ರೂ.12 ಸಾವಿರ. ಕೃಷಿ ಪದವೀಧರರು ಅರ್ಜಿ ಸಲ್ಲಿಸಬಹುದು. ಕೃಷಿಯಲ್ಲಿ ಬೀಜೋತ್ಪಾದನೆ ತಾಂತ್ರಿಕತೆಗ ಕೋರ್ಸ್‌ಗೆ ಕೋರ್ಸ್ ಶುಲ್ಕ 3000 ಸಾವಿರ ರೂ.ಗಳಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಕೃಷಿಯಲ್ಲಿ ಯಂತ್ರೋಪಕರಣಗಳ ನಿರ್ವಹಣೆ ಕೋರ್ಸ್‌ಗೆ ಕೋರ್ಸ್ ಶುಲ್ಕ 3000 ರೂ.ಗಳಿದ್ದು, 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಜೇನುಸಾಕಣೆ ಕೋರ್ಸ್‌ಗೆ ಕೋರ್ಸ್ ಶುಲ್ಕ 3000 ರೂ. , 7ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸಬಹುದು. ಕೃಷಿ ಕೋರ್ಸ್‌ಗೆ ಶುಲ್ಕ 1500 ರೂ 7ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸ ಬಹುದು. ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಏ.11 ರವರೆಗೆ ಪ್ರತಿ ಕೋರ್ಸ್‌ಗೆ ಅರ್ಜಿ ಶುಲ್ಕ ರೂ.100 ರಂತೆ ಪಾವತಿಸಿ ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು- 560065 , ಬೆಂಗಳೂರು ಕೃಷಿ ವಿವಿ ಕಾರ್ಯವ್ಯಾಪ್ತಿಯ ಕೃಷಿ ವಿಜ್ಞಾನ ಕೇಂದ್ರ ರಾಮನಗರ, ಚಿಕ್ಕಬಳ್ಳಾಪುರ, ಬೆಂ,ಗ್ರಾ,, ತುಮಕೂರು ಇಲ್ಲಿ ಅರ್ಜಿ ಪಡೆಯಬಹುದು ಅಥವಾ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಾಲತಾಣದಿಂದ www.uasbangalore.edu.in ಡೌನ್ಲೋಡ್ ಮಾಡಿಕೊಳ್ಳಬಹುದು.



ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನಿಂದ ಪಶುವೈದ್ಯಕೀಯ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯರ ಸನ್ಮಾನಿಸಲಾಯಿತು. ಪದ್ಮಶ್ರೀ ಡಾ.ಎಸ್.ಜಿ. ಸುಶೀಲಮ್ಮ, ಬೀದರ್ ಜಿಲ್ಲೆ ಸಮಾಜ ಸೇವಕಿ ಗುರಮ್ಮ ಸಿದ್ದಾರೆಡ್ಡಿ ಇತರರಿದ್ದರು.

ಗೃಹ ಬಳಕೆ ಸಿಲಿಂಡರ್ ವಾಣಿಜ್ಯಕ್ಕೆ ಬಳಸಿದರೆ ಕ್ರಮ: ಆಹಾರ ಇಲಾಖೆ ಎಚ್ಚರಿಕೆ

ವಿವಿಧೆಡೆ ಅಧಿಕಾರಿಗಳು ದಾಳಿ: ಸಿಲಿಂಡರ್ ವಶ

ಬೆಂಗಳೂರು: ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ವಾಣಿಜ್ಯ ಉದ್ದೇಶಗಳಿಗಾಗಿ ಅಕ್ರಮವಾಗಿ ಬಳಸುವರ ವಿರುದ್ಧ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು, ರಾಜ್ಯದ ವಿವಿಧೆಡೆ ದಾಳಿ ನಡೆಸಿ ನೂರಾರು ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು ಅಗತ್ಯ ವಸ್ತುಗಳ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಗೃಹಬಳಕೆ ಸಿಲಿಂಡರ್‌ಗಳ ದುರ್ಬಳಕೆ ತಡೆಯಲು ಸಚಿವರು ನೀಡಿದ ಕಟ್ಟುನಿಟ್ಟಿನ ಸೂಚನೆಯಂತೆ ಈ ಕಾರ್ಯಾಚರಣೆ ನಡೆದಿದೆ. ಬೆಂಗಳೂರಿನ ಪೀಣ್ಯದಲ್ಲಿ 45 ಹಾಗೂ ಚಿಕ್ಕಜಾಲದಲ್ಲಿ 209 ಸಿಲಿಂಡರ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಉಳಿದಂತೆ ಯಾದಗಿರಿಯಲ್ಲಿ 46, ದಾವಣಗೆರೆಯಲ್ಲಿ 13 ಮತ್ತು ಶಿವಮೊಗ್ಗದಲ್ಲಿ 3 ಸಿಲಿಂಡರ್‌ಗಳನ್ನು ಜಪ್ತಿ ಮಾಡಿ, 1955ರ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸ ಲಾಗಿದೆ. ಕೋಲಾರ ಜಿಲ್ಲೆಯ ಕೆಜಿಎಫ್‌ನಲ್ಲಿ ಅಕ್ರಮ ವಾಗಿ ರೀಫಿಲ್ಲಿಂಗ್ ನಡೆಸುತ್ತಿದ್ದ ಗ್ಯಾಸ್ ಏಜೆನ್ಸಿ ಅಂಗಡಿಯ ಮೇಲೆ ದಾಳಿ ಮಾಡಿ ಕಾನೂನು ಕ್ರಮ ಜರುಗಿಸಲಾಗಿದೆ.

ವಾಣಿಜ್ಯ ಸಿಲಿಂಡರ್ ವಿತರಣೆಗೆ ಆದ್ಯತೆ: ಕೇಂದ್ರ ಸರ್ಕಾರದ ಮಾರ್ಗಸೂಚನೆಯಂತೆ ವಾಣಿಜ್ಯ ಬಳಕೆಯ ಒಟ್ಟು ಸಿಲಿಂಡರ್‌ಗಳ ಪೈಕಿ ಶೇ. 20ರಷ್ಟನ್ನು ಸಾರ್ವಜನಿಕಹಿತದೃಷ್ಟಿಯಿಂದ ಆದ್ಯತೆಯ ಮೇರೆಗೆ ವಿತರಿಸಲು ಸೂಚಿಸಲಾಗಿದೆ. ಆಸ್ಪತ್ರೆಗಳು, ಶಾಲೆಗಳು, ವಿಮಾನ ನಿಲ್ದಾಣ, ರೈಲು ಮತ್ತು ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳು, ಪ್ರಮುಖ ದೇವಸ್ಥಾನಗಳ ಪ್ರಸಾದ ವಿನಿಯೋಗ ಕೇಂದ್ರಗಳು, ವೃದ್ಧಾಶ್ರಮಗಳು ಹಾಗೂ ಸರ್ಕಾರಿ ಮತ್ತು ಪ್ರಮುಖ ಖಾಸಗಿ ಕಚೇರಿಗಳಿಗೆ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಆದ್ಯತೆ ನೀಡಲಾಗುವುದು ಎಂದು ಇಲಾಖೆ ತಿಳಿಸಿದೆ.

ಪೂರೈಕೆಯಲ್ಲಿ ವ್ಯತ್ಯಯವಿಲ್ಲ: ಶನಿವಾರ ರಾಜ್ಯಾದ್ಯಂತ 14.2 ಕೆ.ಜಿ.ಯ ಒಟ್ಟು 3,86,363 ಗೃಹ ಬಳಕೆಯ ಸಿಲಿಂಡರ್‌ಗಳು ಹಾಗೂ 6,371 ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ವಿತರಿಸಲಾಗಿದೆ. ಗೃಹ ಬಳಕೆದಾರರಿಗೆ ಯಾವುದೇ ರೀತಿಯಲ್ಲಿ ಸಿಲಿಂಡರ್ ಕೊರತೆಯಾಗದಂತೆ ಮತ್ತು ಅಕ್ರಮ ಬಳಕೆಯಿಂದ ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ಇಲಾಖೆ ಮುನ್ನೆಚ್ಚರಿಕೆ ವಹಿಸಿದೆಂದು ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಇಲಾಖೆ ತಿಳಿಸಿದೆ.

ಪೀಣ್ಯದಲ್ಲಿ ಹೊಸ ಸಮಗ್ರ ಮೋಷನ್ ಘಟಕಕ್ಕೆ ಭೂಮಿಪೂಜೆ

ಮೇಕ್ ಇನ್ ಇಂಡಿಯಾದಿಂದ ಬಲ

ಬೆಂಗಳೂರು: ಮೇಕ್ ಇನ್ ಇಂಡಿಯಾ ಮತ್ತು ರಾಜ್ಯದ ಉತ್ಪಾದನಾ ಕ್ಷೇತ್ರಕ್ಕೆ ಎಬಿಬಿ ಹೂಡಿಕೆಗಳು ಮತ್ತಷ್ಟು ಬಲ ತುಂಬಲಿವೆ ಎಂದು ಎಬಿಬಿ ಇಂಡಿಯಾದ ಕಂಟ್ರಿ ಹೆಡ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಸಂಜೀವ್ ಶರ್ಮಾ ಅಭಿಪ್ರಾಯಪಟ್ಟರು.

ಎಲೆಕ್ಟ್ರಿಫಿಕೇಶನ್ ಮತ್ತು ಆಟೋಮೇಷನ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ, ಜಾಗತಿಕ ತಂತ್ರಜ್ಞಾನ ನಾಯಕನಾಗಿರುವ ಎಬಿಬಿ ಸಂಸ್ಥೆಯು ಪೀಣ್ಯದಲ್ಲಿ ಆರಂಭಿಸುತ್ತಿರುವ ಹೊಸ ಸಮಗ್ರ ಮೋಷನ್ ಘಟಕಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಕಾರ್ಯ ವಿಸ್ತರಣೆಯು ಭಾರತದ ಮೇಲೆ ಎಬಿಬಿ ಹೊಂದಿರುವ ದೀರ್ಘಕಾಲೀನ ಬದ್ಧತೆ ಮತ್ತು ನಮ್ಮ ಲೋಕಲ್-ಫಾರ್-ಲೋಕಲ್ ತಂತ್ರವನ್ನು ಪ್ರತಿಬಿಂಬಿಸುತ್ತದೆ. ಕರ್ನಾಟಕದಲ್ಲಿ ನಮ್ಮ ಉತ್ಪಾದನಾ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಬಲಪಡಿಸುವ ಮೂಲಕ, ನಾವು ಸುಧಾರಿತ ತಂತ್ರಜ್ಞಾನವನ್ನು ಗ್ರಾಹಕರಿಗೆ ಹತ್ತಿರ ತರುತ್ತಿದ್ದೇವೆ. ಇದು ಕೈಗಾರಿಕೆಗಳ ಇಂಧನ ದಕ್ಷತೆಯನ್ನು ಸುಧಾರಿಸಲು, ಕಾರ್ಯಾಚರಣೆಯನ್ನು ಡಿಜಿಟಲೀಕರಣಗೊಳಿಸಲು ಮತ್ತು ಭಾರತದ ಮೂಲಸೌಕರ್ಯ ಬೆಳವಣಿಗೆಗೆ ಬೆಂಬಲ ನೀಡಲು ಸಹಾಯ ಮಾಡುತ್ತದೆ ಎಂದರು.

ಕರ್ನಾಟಕದಲ್ಲಿ ದೀರ್ಘಕಾಲದಿಂದ ಬಲವಾದ ಅಸ್ತಿತ್ವವನ್ನು ಹೊಂದಿರುವ ಎಬಿಬಿ ಸಂಸ್ಥೆಗೆ ಬೆಂಗಳೂರು ಭಾರತದ ಪ್ರಮುಖ ಉತ್ಪಾದನಾ ಮತ್ತು ತಾಂತ್ರಿಕ ಕೇಂದ್ರವಾಗಿದೆ. ಈ ಇತ್ತೀಚಿನ ಹೂಡಿಕೆಯ ಮೂಲಕ ಎಬಿಬಿ ರಾಜ್ಯದಲ್ಲಿ ಮೂರು ಪ್ರಮುಖ ಉತ್ಪಾದನಾ ಸ್ಥಳಗಳನ್ನು ಹೊಂದಲಿದೆ. ಇಲ್ಲಿನ ಉತ್ಪಾದನಾ ಚಟುವಟಿಕೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನರು ಉದ್ಯೋಗ ಪಡೆಯಲಿದ್ದಾರೆ. ಈ ಹೊಸ ಘಟಕಗಳು ಡೇಟಾ ಸೆಂಟರ್, ಮೆಟ್ರೊ ರೈಲು, ನವೀಕರಿಸಬಹುದಾದ ಇಂಧನ, ಮೂಲಸೌಕರ್ಯ ಮತ್ತು ಲೋಹದಂತಹ ಕ್ಷೇತ್ರಗಳಿಗೆ ಸೇವೆ ಒದಗಿಸಲಿದೆ.

ಮೂತ್ರಪಿಂಡ ಕಸಿ ತಜ್ಞ ಡಾ.ಅನಿಲ್ ಕುಮಾರ್ ಸಲಹೆ

ಮೂತ್ರಪಿಂಡ ಸಮಸ್ಯೆಗೆ ಜಾಗೃತಿ

ಕೆಂಗೇರಿ: ಮೂತ್ರಪಿಂಡ ಸಮಸ್ಯೆಯಿಂದ ಪಾರಾಗುವ ನಿಟ್ಟಿನಲ್ಲಿ ಮಧುಮೇಹ ಕಾಯಿಲೆ ಹೊಂದಿರುವ ವ್ಯಕ್ತಿಗಳು ನಿಯಮಿತ ತಪಾಸಣೆಗೆ ಒಳಗಾಗುವುದು ಅತ್ಯಂತ ಅವಶ್ಯ ಎಂದು ಬಿಜಿಎಸ್ ಗ್ಲೆನೀಗಲ್ಸ್ ಆಸ್ಪತ್ರೆಯ ಮೂತ್ರಪಿಂಡ ಕಸಿ ತಜ್ಞ ಡಾ.ಅನಿಲ್ ಕುಮಾರ್ ಹೇಳಿದರು.

ವಿಶ್ವ ಮೂತ್ರಪಿಂಡ ದಿನಾಚರಣೆ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಸ್ತು ರಹಿತ ಜೀವನ ಶೈಲಿ ಹಾಗೂ ನಗರ ಜೀವನದ ಜಂಜಾಟದಿಂದಾಗಿ ಬಹುತೇಕ ನಗರವಾಸಿಗಳು ಬಿಪಿ ಹಾಗೂ ಮಧುಮೇಹ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲಿ ಈ ಕಾಯಿಲೆಗಳು ಗುಣವಾಗದಿದ್ದಲ್ಲಿ ಕಿಡ್ನಿ ಸಮಸ್ಯೆ ಬಾಧಿಸುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಎಚ್ಚರಿಸಿದರು.

ಮೂತ್ರಪಿಂಡ ಸಮಸ್ಯೆ ಬಾಧಿತರಲ್ಲಿ ಬಹುತೇಕರು ಮಧುಮೇಹಿಗಳೇ ಆಗಿರುತ್ತಾರೆ. ಹೀಗಾಗಿ ಸಕಾಲಿಕ ತಪಾಸಣೆ ಹಾಗೂ ಚಿಕಿತ್ಸೆ ಅತ್ಯಂತ ಮುಖ್ಯವಾಗಿದೆ. ಮೂತ್ರಪಿಂಡ ಚಿಕಿತ್ಸೆಗೆ ಸರ್ಕಾರ ನೀಡುತ್ತಿರುವ ಸಹಾಯ ನಿಧಿ ಹೆಚ್ಚಾಗಬೇಕು. ತಮಿಳುನಾಡು ಹಾಗೂ ಗುಜರಾತ್ ಸರ್ಕಾರಗಳು ಬಡ ಜನರಿಗೆ ಸುಮಾರು ಆರು ಲಕ್ಷ ರೂ.ವೈದ್ಯಕೀಯ ನೆರವು ನೀಡುತ್ತಿದ್ದು, ರಾಜ್ಯ ಸರ್ಕಾರವೂ ಇದೇ ಮೊತ್ತ ನೀಡಿದರೆ ಬಡ ವರ್ಗದ ಜನಗಳ ಆರ್ಥಿಕ ಹೊರೆ ಇಳಿಯಲಿದೆ ಎಂದು ತಿಳಿಸಿದರು. ಡಾ.ನರೇಂದ್ರ ಮಾತನಾಡಿ, ಮೂತ್ರಪಿಂಡ ಕಸಿ ಪ್ರಕ್ರಿಯೆ ಪ್ರಸ್ತುತ ಸುಲಭ ಶಸ್ತ್ರ ಚಿಕಿತ್ಸೆಯಾಗಿದ್ದು, ಜನರು ಆತಂಕಪಡಬೇಕಿಲ್ಲ. ಬೇರೆ ರಕ್ತ ಗುಂಪಿನ ದಾನಿಗಳಿಂದಲೂ ಮೂತ್ರಪಿಂಡ ದಾನ ಪಡೆದು ಯಶಸ್ವಿಯಾಗಿ ಚಿಕಿತ್ಸೆ ಮಾಡಬಹುದಾಗಿದೆ ಎಂದು ತಿಳಿಸಿದರು.



ಚಾಲಾಕಿಗಳ ನಕಲಿ ನಾಟಕ ಬಯಲು

ಬೆಂಗಳೂರು: ಸೈಬರ್ ವಂಚಕರ ಜಾಲ ಈಗ ಮುಂದಿನ ಹಂತಕ್ಕೆ ತಲುಪಿದೆ. ಇಷ್ಟು ದಿನ ಬೇರೆ ರಾಜ್ಯದ ಪೊಲೀಸರ ಹೆಸರಿನಲ್ಲಿ ಜನರನ್ನು ಹೆದರಿಸುತ್ತಿದ್ದ ವಂಚಕರು, ಈಗ ಸ್ಥಳೀಯ ಪೊಲೀಸರ ಹೆಸರನ್ನೇ ಬಳಸಿಕೊಂಡು ಜನರನ್ನು ದಾರಿ ತಪ್ಪಿಸಲು ಮುಂದಾಗಿದ್ದಾರೆ. ನಗರದ ಮಹಿಳೆಯೊಬ್ಬರಿಗೆ ಬಂದ ಕರೆ ಮತ್ತು ಅವರು ತೋರಿದ ಸಮಯಪ್ರಜ್ಞೆ ಈ ಚಾಲಾಕಿಗಳ ನಕಲಿ ನಾಟಕವನ್ನು ಬಯಲಿಗೆಳೆದಿದೆ.

ಪೊಲೀಸರು ಯಾವತ್ತೂ ಡಿಜಿಟಲ್ ಅರೆಸ್ಟ್ ಮಾಡುವುದಿಲ್ಲ ಮತ್ತು ವಿಡಿಯೋ ಕಾಲ್ ಮೂಲಕ ತನಿಖೆ ನಡೆಸಿ ಹಣ ಕೇಳುವುದಿಲ್ಲ. ಸಾರ್ವಜನಿಕರು ನಕಲಿ ಆದೇಶ ಪತ್ರಗಳಿಗೆ ಮರುಳಾಗಬಾರದು , ಯಾವುದೇ ಅನುಮಾನ ಬಂದರೆ 1930 ಸಂಖ್ಯೆಗೆ ಕರೆ ಮಾಡಿ ದೂರು ನೀಡಬೇಕು.

ನಯನಾ ಪ್ರಕಾಶ್ ಎಂಬ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿದ್ದ ಖದೀಮರು ಬೆಂಗಳೂರಿನ ಮಹಿಳೆಯೊಬ್ಬರಿಗೆ ಮೊದಲು ಆಡಿಯೋ ಕಾಲ್ ಮಾಡಿ, ನಿಮ್ಮ ತಾಯಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಬೆದರಿಸಿದ್ದಾರೆ. ನಂತರ ಕರೆಯನ್ನು ವಿಡಿಯೋ ಕಾಲ್‌ಗೆ ವರ್ಗಾಯಿಸಿ ತನಿಖೆ ಮಾಡಬೇಕೆಂದು ದಬಾಯಿಸಿದ್ದಾರೆ.

ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರ ನಕಲಿ ಸೀಲ್ , ಸಹಿ ಬಳಸಿದ್ದಾರೆ. ಅಲ್ಲದೆ ಸಿಐಡಿ ಹೆಸರಿನಲ್ಲಿ ಅರೆಸ್ಟ್ ವಾರಂಟ್ ಸೃಷ್ಟಿಸಿ, ಸುಪ್ರೀಂ ಆದೇಶ ಎಂದು ನಕಲಿ ದಾಖಲೆಗಳನ್ನು ಕಳುಹಿಸಿ ಮಹಿಳೆಯನ್ನು ಆತಂಕಕ್ಕೆ ತಳ್ಳಿದ್ದರು. ನಕಲಿ ದಾಖಲೆ ನೋಡಿ ಅನುಮಾನಗೊಂಡ ಮಹಿಳೆ ಎದೆಗುಂದದೆ ಎಚ್ಚೆತ್ತುಕೊಂಡಿದ್ದಾರೆ. ಸೈಬರ್ ಕ್ರೈಂ ವಿಭಾಗದ ಅಧಿಕೃತ ಇ-ಮೇಲ್ ಐಡಿಗೆ ದೂರು ನೀಡಿದ್ದಲ್ಲದೆ, ಸೈಬರ್ ಕ್ರೈಂ ಪೋರ್ಟಲ್‌ನಲ್ಲಿ ದೂರನ್ನು ದಾಖಲಿಸಿದ್ದಾರೆ.

ಜಿ.ಎಸ್.ಎಸ್ ಕಾವ್ಯಾರ್ಥ ಚಿಂತನ ಕೃತಿ ಕುರಿತು ಉಪನ್ಯಾಸ

ಸೃಜನಶೀಲ ಚಿಂತನೆಗೆ ಎಐ ಮಾರಕ

ಬೆಂಗಳೂರು: ಸಾಹಿತ್ಯದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಯಿಂದ ಸಾಕಷ್ಟು ಅಪಾಯ ಎದುರಾಗುತ್ತವೆ. ಮನುಷ್ಯನ ಸೃಜನಶೀಲ ಚಿಂತನೆಗೆ ಎಐ ತಂತ್ರಜ್ಞಾನ ಮಾರಕವಾಗಲಿದೆ ಎಂದು ವಿಮರ್ಶಕ ಡಾ.ಓ.ಎಲ್. ನಾಗಭೂಷಣ ಸ್ವಾಮಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದೊಂದಿಗೆ ಜ್ಞಾನಭಾರತಿಯಲ್ಲಿರುವ ಜಿಎಸ್‌ಎಸ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮದಲ್ಲಿ ಜಿ.ಎಸ್ ಶಿವರುದ್ರಪ್ಪ ಅವರ ಕಾವ್ಯಾರ್ಥ ಚಿಂತನ ಕೃತಿಯನ್ನು ಕುರಿತು ಅವರು ಮಾತನಾಡಿ, ಕಾವ್ಯ ಮೀಮಾಂಸೆ ಹಾಗೂ ವಿಮರ್ಶೆಯ ಪರಿಭಾಷೆ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ ನಾವು ಇಂದಿಗೂ ಪಾಶ್ಚಾತ್ಯ ವಿಮರ್ಶೆಯ ಮಾದರಿಯನ್ನು ಇಟ್ಟುಕೊಂಡೆ ಸಾಹಿತ್ಯ ಕೃತಿಯೊಂದರ ತೌಲನಿಕ ಅಧ್ಯಯನ ಮಾಡುತ್ತೇವೆ. ಆದರೆ ಆಧುನಿಕ ಕಾಲ ಘಟ್ಟದಲ್ಲಿ ಇಂದಿನ ಮಾದರಿಗಳು ಬೇರೆಯದೆ ಆಗಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಮಾದರಿಯನ್ನು ಹಾಕಿಕೊಟ್ಟದ್ದು ಕುವೆಂಪು ಅವರು, ಕುವೆಂಪು ವಿಮರ್ಶೆಯ ಪರಿಭಾಷೆ ಸಿದ್ಧಾಂತ ಪರಿಕಲ್ಪನೆಗಳ ಬಗ್ಗೆ ಒಂದು ಸಿದ್ಧ ಮಾದರಿಯನ್ನು ತೋರಿಸಿಕೊಟ್ಟರು. ಆದರೆ ಅವು ಪಾಶ್ಚಾತ್ಯ ವಿಮರ್ಶೆಯ ದಟ್ಟ ಪ್ರಭಾವದಲ್ಲಿದ್ದವು, ಆ ದಾರಿಯಲ್ಲಿ ಮುಂದುವರೆದು ಕನ್ನಡದ ವಿಮರ್ಶೆಯೇ ಮತ್ತು ಪೌರಾಣಿಕತೆ ಹೇಗಿರಬೇಕು ಎಂದು ತೋರಿಸಿಕೊಟ್ಟವರು ಜಿ.ಎಸ್ ಶಿವರುದ್ರಪ್ಪ ಅವರು, ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೌಲಾನಿಕ ಅಧ್ಯಯನದ ಒಂದು ವಿಭಾಗವನ್ನೇ ಆರಂಭಿಸಿದರು ಅದರ ಸಂಪೂರ್ಣ ಶ್ರೇಯ ಜಿಎಸ್‌ಎಸ್ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.



ಸಮಾರಂಭದಲ್ಲಿ ಪ್ರಾಧಿಕಾರದ ಆಡಳಿತ ಅಧಿಕಾರಿ ಕೆ.ಬಿ ಕಿರಣ್ ಸಿಂಗ್, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಡೊಮಿನಿಕ್ ಡಾ.ಮುನಿಯಪ್ಪ ಹಾಗೂ ಡಾ.ವಡ್ಡೆ ಹೇಮಲತಾ ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ಗೋಮಾತೆಯ ಗೌರವದ ಅಭಿಯಾನ ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರ, ಸ್ಥಳ: ಹಿಂದು ಸಾದರ ಕ್ಷೇಮಾಭಿವೃದ್ಧಿ ಸಂಘ,ಮಂಡಿ ಹಿರಿಯಣ್ಣ ರಸ್ತೆ, ಮಹಾಲಕ್ಷ್ಮೀಪುರಂ, ಬೆಳಗ್ಗೆ 8
- ಬಂಡಾಯ ಸಾಹಿತ್ಯ -ಹೊಸ ತಲೆಮಾರು ವಿಚಾರ ಸಂಕಿರಣ. ಸ್ಥಳ: ಗಾಂಧಿ ಭವನ, ಬೆಳಗ್ಗೆ 10:30
- ರಾಜ್ಯ ಮಟ್ಟದ ಕವಿ ಸಮ್ಮೇಳನ. ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜ ಪೇಟೆ, ಬೆಳಗ್ಗೆ 10:30
- ಗೌಹರ್ ಜಾನ್ ಪುಸ್ತಕ ಲೋಕಾರ್ಪಣೆ. ಸ್ಥಳ: ಯುವ ಪಥ ಜಯನಗರ, ಸಂಜೆ 5:30
- ತುಳಸಿ ರಾಮಾಯಣ ಸುಂದರಕಾಂಡ ಉಪನ್ಯಾಸ, ಸ್ಥಳ: ರಾಗೀಗುಡ್ಡ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ, ಸಂಜೆ 6.30

ಗುರುಗ್ರಾಮ್‌ನಲ್ಲಿ ನಡೆದ ಕೂಟ: ಮೊದಲೆರಡೂ ಸ್ಥಾನದಲ್ಲಿ ಕನ್ನಡತಿಯರು | ಗಮನ ಸೆಳೆದ ಸ್ನಿಗ್ಧ | ಸೋಲಲ್ಲಿ ಗೆದ್ದ ಪದ್ಮಪ್ರಿಯಾ

ಅಂತಾರಾಷ್ಟ್ರೀಯ ಜೂ. ಟೆನಿಸ್‌ನಲ್ಲಿ ಕನ್ನಡಿಗರದ್ದೇ ದರ್ಬಾರ್!

• ಬೆಂಗಳೂರು: ಕರ್ನಾಟಕದ ಯುವ ಟೆನಿಸ್ ಆಟಗಾರ್ತಿ ಸ್ನಿಗ್ಧ ಕಾಂತಾ ಗುರುಗ್ರಾಮ್‌ನಲ್ಲಿ ಶನಿವಾರ ಮುಗಿದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಟ್ರೋಫಿ ಮುಡಿಗೇರಿಸಿಕೊಂಡರು. ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯನ್ನು ಗೆದ್ದು ಬೀಗಿದರು. ಫೈನಲ್‌ನಲ್ಲಿ ಅವರು ಮತ್ತೋರ್ವ ಕರ್ನಾಟಕ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಅವರನ್ನು 6-4, 6-4 ಅಂಕಗಳಿಂದ ಸೋಲಿಸಿದರು. ಇದರೊಂದಿಗೆ ಮೊದಲೆರಡೂ ಸ್ಥಾನಗಳನ್ನು ಕನ್ನಡಿಗರೇ ಗಳಿಸಿದ್ದು, ಟೆನಿಸ್ ಕರ್ನಾಟಕ ಪಾರುಪತ್ಯ ಮುಂದುವರಿದಂತಿದೆ. ಇಬ್ಬರ ರ‍್ಯಾಂಕಿಂಗ್‌ಗೂ ಬೂಸ್ಟರ್ ಕೂಟ ನೀಡಿದೆ.



ನಿಯಂತ್ರಿತ ಆಟಕ್ಕೆ ಸಿಕ್ಕ ಜಯ

ಎರಡನೇ ಶ್ರೇಯಾಂಕಿತ ಆಟಗಾರ್ತಿಯಾಗಿದ್ದ 16 ವರ್ಷದ ಸ್ನಿಗ್ಧ ಕಾಂತಾ, ಇಡೀ ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿ ಗೆಲುವಿನ ಫೇವರಿಟ್ ಆಗಿ ಮೆರೆದಿದ್ದರು. ಫೈನಲ್‌ನಲ್ಲಿ ಕೂಡ ನಿಯಂತ್ರಿತ ಆಟವಾಡಿದರು. ಎರಡು ಸೆಟ್‌ಗಳಲ್ಲೂ ಪ್ರಮುಖ ಅವಕಾಶಗಳನ್ನು ಬಳಸಿಕೊಂಡು ನೇರ ಸೆಟ್‌ಗಳಲ್ಲಿ ಜಯ ಸಾಧಿಸಿದರು. ಫೈನಲ್‌ನಲ್ಲಿ ಏಕ ಪಕ್ಷೀಯ ಗೆಲುವು ಸಾಧಿಸಿದರೂ ಅವರ ಪರಾಕ್ರಮ ಕೇವಲ ನಿರ್ಣಾಯಕ ಪಂದ್ಯಕ್ಕೆ ಸೀಮಿತವಾಗಿರಲಿಲ್ಲ. ಮೊದಲ ದಿನದಿಂದಲೂ ತಮ್ಮ ಅನುಭವದ ಜತೆಗೆ ನಿಯಂತ್ರಿತ ಪ್ರದರ್ಶನದೊಂದಿಗೆ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕಿತ ಆಟಗಾರ್ತಿ ದೀಪಶಿಖಾ ವಿನಾಯಗಮೂರ್ತಿ ಅವರನ್ನು 6-2, 3-6, 6-4 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು.

ರ‍್ಯಾಂಕಿಂಗ್‌ನಲ್ಲಿ ವೃದ್ಧಿ

ಈ ಜಯದಿಂದ ಸ್ನಿಗ್ಧ ಕಾಂತಾ ಅವರ ಜೂನಿಯರ್ ಅಂತರರಾಷ್ಟ್ರೀಯ ಟೆನಿಸ್ ಅಭಿಯಾನಕ್ಕೆ ಮಹತ್ವದ ಶ್ರೇಯಾಂಕ ಅಂಕಗಳು ಲಭಿಸಿವೆ. ಈ ಹಂಗಾಮಿನಲ್ಲಿ ಅವರು ತಮ್ಮ ವೃತ್ತಿಜೀವನದ ಅತ್ಯುತ್ತಮ 448ನೇ ಶ್ರೇಯಾಂಕಕ್ಕೂ ಏರಿದ್ದಾರೆ. 2025ರ ಮಾರ್ಚ್‌ನಲ್ಲಿ ರಾಯ್ಪುರದಲ್ಲಿ ನಡೆದ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲೂ ಗರ್ಲ್ಸ್ ಸಿಂಗಲ್ಸ್ ಪ್ರಶಸ್ತಿ ಗೆದ್ದು ಅವರು ಗಮನ ಸೆಳೆದಿದ್ದರು.

ಒಂದೂ ಸೆಟ್ ಸೋಲದೆ ಫೈನಲ್‌ಗೇರಿದ್ದ ಪದ್ಮಪ್ರಿಯಾ

ಇತ್ತ ರನ್ನರ್-ಅಪ್ ಆಗಿ ಹೊರಹೊಮ್ಮಿದ ಪದ್ಮಪ್ರಿಯಾ ರಮೇಶ್ ಕುಮಾರ್ ಕೂಡ ಕಮ್ಮಿಯೇನಿರಲಿಲ್ಲ. ಪಂದ್ಯಾವಳಿಯ ಪ್ರತಿಯೊಂದು ಪ್ರದರ್ಶನ ಅವರನ್ನು ಬಲಿಷ್ಠ ಆಟಗಾರ್ತಿ ಎಂಬುದನ್ನು ಸಾಬೀತುಪಡಿಸಿತು. ಗುರುಗ್ರಾಮ್ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಕೇವಲ 13 ವರ್ಷದ ಈ ಪ್ರತಿಭೆ ಫೈನಲ್‌ವರೆಗೆ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಬಂದಿದ್ದರು. ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತ ಆಟಗಾರ್ತಿ ಪ್ರಿಶಾ ನಿಖಿಲ್ ಶಿಂಡೆ ಅವರನ್ನು 6-4, 6-1 ಅಂಕಗಳಿಂದ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದ್ದರು. ಮೈಸೂರು ಮೂಲದ ಪದ್ಮಪ್ರಿಯಾ ಈಗಾಗಲೇ ಭಾರತದ ಯುವ ಟೆನಿಸ್ ಕ್ಷೇತ್ರದಲ್ಲಿ ಭರವಸೆಯ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ. ಅವರು ಹಲವು ವಾರಗಳ ಕಾಲ ಭಾರತದ 14 ವರ್ಷದೊಳಗಿನ ಮಹಿಳೆಯರ ಶ್ರೇಯಾಂಕದಲ್ಲಿ ಮೊದಲ ಸ್ಥಾನದಲ್ಲಿದ್ದು, ರಾಷ್ಟ್ರೀಯ 16 ವರ್ಷದೊಳಗಿನ ಶ್ರೇಯಾಂಕದ ಮೊದಲ 100 ಆಟಗಾರರ ಪಟ್ಟಿಗೂ ಪ್ರವೇಶಿಸಿದ್ದಾರೆ. ಜೊತೆಗೆ ಏಷ್ಯಾ ಮಟ್ಟದ 14 ವರ್ಷದೊಳಗಿನ ಟೆನಿಸ್ ಸ್ಪರ್ಧೆಯಲ್ಲಿ ಪದಕ ಗೆದ್ದು ಅಂತಾರಾಷ್ಟ್ರೀಯ ಮಟ್ಟದಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

> ಸ್ನಿಗ್ಧ ಅವರಿಗೆ ಪ್ರಶಸ್ತಿ ಜಯಕ್ಕೆ ಅಭಿನಂದನೆಗಳು ಮತ್ತು ಪದ್ಮಪ್ರಿಯಾ ಅವರಿಗೆ ಫೈನಲ್ ಪ್ರವೇಶಿಸಿದಕ್ಕಾಗಿ ಅಭಿನಂದನೆಗಳು. ಅಂತಾರಾಷ್ಟ್ರೀಯ ಜೂನಿಯರ್ ಟೆನಿಸ್ ಸ್ಪರ್ಧೆಯಲ್ಲಿ ಮೊದಲೆರಡು ಸ್ಥಾನಗಳನ್ನು ಕರ್ನಾಟಕದವರೇ ಪಡೆದಿರುವುದು ರಾಜ್ಯ ಟೆನಿಸ್ ಬೆಳವಣಿಗೆಯ ಉತ್ತಮ ಸಂಕೇತವಾಗಿದೆ.
>
> ■ **ಸುನಿಲ್ ಯಾಜಮಾನ್,** ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಸಂಯುಕ್ತ ಕಾರ್ಯದರ್ಶಿ

▸▸ ಜೂನಿಯರ್ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಲ್ಲಿ ಗಮನಸೆಳೆದ ಕನ್ನಡಿಗರು

ಕಿರುಸುದ್ದಿ

ದಿಲ್ಲಿ ಮೆಂಟರ್ ಪೀಟರ್ಸರ್ನ್ ರಾಜೀನಾಮೆ

• ಹೊಸದಿಲ್ಲಿ: ಇಂಗ್ಲೆಂಡಿನ ಮಾಜಿ ಕ್ರಿಕೆಟಿಗ ಕೆವಿನ್ ಪೀಟರ್ಸರ್ನ್ ಅವರು, ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸಿ ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಮಾರ್ಚ್ 28ರಿಂದ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ತಯಾರಿ ನಡೆಸುತ್ತಿವೆ. ಆಟಗಾರರು ಹಂತ-ಹಂತವಾಗಿ ತಂಡಗಳನ್ನು ಸೇರಿಕೊಳ್ಳುತ್ತಿದ್ದಾರೆ. ಈ ಮಧ್ಯೆ, ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್ ಆಗಿದ್ದ ಕೆವಿನ್ ಪೀಟರ್ಸರ್ನ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ವೊಂದರ ಮೂಲಕ ನಿರ್ಧಾರ ಪ್ರಕಟಿಸಿದ್ದಾರೆ. ನನಗೆ ಆ ಪೋಸ್ಟ್‌ನಲ್ಲಿ ಕೆಲಸ ಮಾಡುವುದಕ್ಕೆ ಸಮಯವಿಲ್ಲ. ಐಪಿಎಲ್‌ನಿಂದ ಹೊರಬೀಳಲಾರೆ, ದಿಲ್ಲಿ ಅಲ್ಲದೆ, ಭಾಗವಹಿಸುತ್ತಿರುವ ಎಲ್ಲಾ ಆಟಗಾರರೂ ಉತ್ತಮವಾಗಿ ಆಡಲಿ. ನಾನು ವೀಕ್ಷಣೆ ವಿವರಣೆಯಲ್ಲಿ ಎಲ್ಲರನ್ನೂ ಸಿಗುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಬಿನ್ನಿ, ದ್ರಾವಿಡ್, ಮಿಥಾಲಿಗೆ ಇಂದು ಪ್ರಶಸ್ತಿ

• ಹೊಸದಿಲ್ಲಿ: ಕನ್ನಡಿಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಹಾಗೂ ಭಾರತ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಜೀವಮಾನ ಸಾಧನೆ ಪ್ರಶಸ್ತಿ ಭಾನುವಾರ ನಡೆಯಲಿರುವ ನಮನ್ ಕಾರ್ಯಕ್ರಮದಲ್ಲಿ ನೀಡಲಿದೆ. ಪ್ರತಿ ವರ್ಷವೂ ನಡೆಯುವ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಭಾನುವಾರದಂದು ದಿಲ್ಲಿಯಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಪುರಸ್ಕೃತರಿಗೆ ಪ್ರಶಸ್ತಿ ಪ್ರದಾನ ಮಾಡುತ್ತೇವೆ ಎಂದು ಬಿಸಿಸಿಐ ತಿಳಿಸಿದ್ದು, ಪ್ರಶಸ್ತಿ ವಿಜೇತರ ಪಟ್ಟಿ ಬಿಡುಗಡೆ ಮಾಡಿದೆ. ಭಾರತ ತಂಡದ ಮಾಜಿ ಕ್ರಿಕೆಟಿಗ, ತರಬೇತುದಾರರಾದ ರಾಹುಲ್ ದ್ರಾವಿಡ್ ಮತ್ತು ಮಾಜಿ ಕ್ರಿಕೆಟಿಗ ಹಾಗೂ ಮಾಜಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರಿಗೆ ಕರ್ನಲ್ ಸಿ. ಕೆ ನಾಯ್ಡು ಜೀವಮಾನ ಪ್ರಶಸ್ತಿ ನೀಡಿದರೆ, ಮಹಿಳಾ ಕ್ರಿಕೆಟ್‌ನ ದಿಗ್ಗಜ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪ್ರಧಾನ ತರಬೇತುದಾರ ಗೌತಂ ಗಂಭೀರ್ ಅವರು ಶನಿವಾರದಂದು ಮುಂಬೈನ ಶ್ರೀ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಭೇಟಿ ನೀಡಿ ಆಶೀರ್ವಾದ ಪಡೆದರು.

ಪ್ಯಾರಾ ಅಥ್ಲೆಟಿಕ್ಸ್: ದಾಖಲೆ ಸಂಖ್ಯೆಯ ಪದಕ ಗೆದ್ದ ಭಾರತೀಯರು

208 ಪದಕ ಬಾಚಿದ ಭಾರತ



ಪ್ರೀತಿ ಪಾಲ್‌ಗೆ ಚಿನ್ನದ ಪದಕ

ಪ್ರೀತಿ ಪಾಲ್ ವೇಗಕ್ಕೆ ಪದಕ

ಮೀರಟ್ ಮೂಲದ 25 ವರ್ಷದ ಪ್ರೀತಿ ಪಾಲ್ ಮಹಿಳೆಯರ 200 ಮೀಟರ್ (ಟಿ-35/ಟಿ37 ವರ್ಗ) ಓಟವನ್ನು 30.26 ಸೆಕೆಂಡುಗಳಲ್ಲಿ ಮುಗಿಸಿ ಚಿನ್ನ ಗೆದ್ದರು. ರಷ್ಯಾದ ಕರೀನಾ ಮಚುಲ್ಸ್ಕಾಯಾ 32.22 ಸೆಕೆಂಡುಗಳಲ್ಲಿ ಬೆಳ್ಳಿ ಪದಕ ಪಡೆದುಕೊಂಡರೆ, ಭಾರತದ ಬಿನಾ ಶಂಭುಭಾ 32.35 ಸೆಕೆಂಡುಗಳಲ್ಲಿ ಕಂಚು ಗೆದ್ದರು. ಇದಕ್ಕೂ ಮುನ್ನ ಪ್ರೀತಿ ಪಾಲ್ ಮಹಿಳೆಯರ 100 ಮೀಟರ್ ಸ್ಪರ್ಧೆಯಲ್ಲೂ ಚಿನ್ನದ ಪದಕ ಗೆದ್ದಿದ್ದರು. ಗೆಲುವಿನ ಬಗ್ಗೆ ಮಾತನಾಡುತ್ತಾ ಅವರು, ನಾನು ಗುರಿ ಇಟ್ಟಿದ್ದ ಸಮಯವನ್ನು ಕೇವಲ ಅಲ್ಪ ಅಂತರದಲ್ಲಿ ತಪ್ಪಿಸಿಕೊಂಡಿದ್ದೇನೆ. ನನ್ನ ವೈಯಕ್ತಿಕ ಅತ್ಯುತ್ತಮ ಸಮಯ 30.03 ಸೆಕೆಂಡುಗಳು. ಅಭ್ಯಾಸದಲ್ಲಿ ಈಗಾಗಲೇ 29.6 ಸೆಕೆಂಡುಗಳು ಓಡಿದ್ದೇನೆ. ಅಂತಿಮ ಹಂತದಲ್ಲಿ ದಣಿವು ಕಾಣಿಸುತ್ತಿದೆ, ಅದನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇನೆ ಎಂದು ಪ್ರೀತಿ ಹೇಳಿದರು.

• ಹೊಸದಿಲ್ಲಿ: ಸತತ ಎರಡು ದಿನಗಳ ಮಟ್ಟಿಗೆ ಕೂಟದಲ್ಲಿ ಅಸಾಮಾನ್ಯ ಪ್ರದರ್ಶನ ನೀಡಿರುವ ಭಾರತದ ಪ್ಯಾರಾ ಅಥ್ಲಿಟ್‌ಗಳು ಮುಕ್ತಾಯಗೊಂಡ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರಾಂಡ್ ಪ್ರಿ ಸ್ಪರ್ಧೆಯಲ್ಲಿ ಬರೋಬ್ಬರಿ 208 ಪದಕ ಬಾಚಿಕೊಂಡರು.

ಪ್ಯಾರಿಸ್ 2024 ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಅಥ್ಲೀಟ್ ಪ್ರೀತಿ ಪಾಲ್ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರಾಂಡ್ ಪ್ರಿ ಸ್ಪರ್ಧೆಯಲ್ಲಿ ಮತ್ತೊಮ್ಮೆ ಅದ್ಭುತ ಪ್ರದರ್ಶನ ನೀಡಿದರು. ಮಹಿಳೆಯರ 200 ಮೀಟರ್ ಓಟದಲ್ಲಿ ಅವರು ಅಸಾಧಾರಣ ವೇಗದೊಂದಿಗೆ ಗೆಲುವು ಸಾಧಿಸಿ ಭಾರತಕ್ಕೆ ಮತ್ತೊಂದು ಚಿನ್ನದ ಪದಕ ತಂದರು.

ಈ ಗೆಲುವಿನ ನಂತರ ಸ್ಪರ್ಧೆಯಲ್ಲಿ ಭಾರತ ಭರ್ಜರಿ ಪ್ರಾಬಲ್ಯ ತೋರಿತು. ಒಟ್ಟು 208 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿತು. ಇದರಲ್ಲಿ 75 ಚಿನ್ನ, 69 ಬೆಳ್ಳಿ ಮತ್ತು 64 ಕಂಚು ಪದಕಗಳು ಸೇರಿವೆ. ಕಡಿಮೆ ದೇಶಗಳು ಭಾಗವಹಿಸಿದ್ದರೂ ಭಾರತವು ಸಂಪೂರ್ಣ ಮೇಲುಗೈ ಸಾಧಿಸಿತು.

ಪುರುಷರ ಶಾಟ್‌ಪುಟ್‌ನಲ್ಲಿ ಭಾರತೀಯರಾಟ:

ಪುರುಷರ ಶಾಟ್‌ಪುಟ್ 57 ವರ್ಗದಲ್ಲಿ ಭಾರತ ಮೂರುಪದಕಗಳನ್ನುಗೆದ್ದಿತು. ಶುಭಮ್ ಜುಯಾಲ್ 14.45 ಮೀಟರ್ ತೂರಾಟದೊಂದಿಗೆ ಚಿನ್ನ, ಭಗತ್ ಸಿಂಗ್ 13.29 ಮೀಟರ್ ತೂರಾಟದೊಂದಿಗೆ ಬೆಳ್ಳಿ ಹಾಗೂ ಪ್ರಿಯಾಂಶ್ ಕುಮಾರ್ 13.07 ಮೀಟರ್ ತೂರಾಟದೊಂದಿಗೆ ಕಂಚು ಪಡೆದರು.

ಓಟದಲ್ಲಿ: ಪುರುಷರ 200 ಮೀಟರ್ (35 ವರ್ಗ) ಓಟದಲ್ಲಿ ವಿನಯ 28.18 ಸೆಕೆಂಡುಗಳಲ್ಲಿ ಚಿನ್ನ ಗೆದ್ದರು. ಅನುಭವ್ ಚೌಧರಿ 29.49 ಸೆಕೆಂಡುಗಳಲ್ಲಿ ಬೆಳ್ಳಿ ಪಡೆದರೆ, ಹಾಂಗ್ ಕಾಂಗ್‌ನ ಚುಯಿ ಯಿಯು ಬಾವೋ ಕಂಚು ಗೆದ್ದರು. ಇನ್ನು 200 ಮೀಟರ್ (ಟಿ-37/ಟಿ44 ವರ್ಗ) ಓಟದಲ್ಲೂ ಭಾರತ ಮೂರು ಪದಕಗಳನ್ನು ಗೆದ್ದಿತು. ರಾಕೇಶ್ ಭಾಯ್ ಭಟ್ 25.20 ಸೆಕೆಂಡುಗಳಲ್ಲಿ ಚಿನ್ನ, ಸಿದ್ಧಾರ್ಥ ಮಂಜು ಬೆಳ್ಳಾರಿ 28.23 ಸೆಕೆಂಡುಗಳಲ್ಲಿ ಬೆಳ್ಳಿ ಹಾಗೂ ರವಿಕಿರಣ ಆಸರೆಲ್ಲಿ 31.50 ಸೆಕೆಂಡುಗಳಲ್ಲಿ ಕಂಚು ಪಡೆದರು. ಪುರುಷರ 800 ಮೀಟರ್ (ಟಿ53/ಟಿ54 ವರ್ಗ) ಸ್ಪರ್ಧೆಯಲ್ಲೂ ಭಾರತ ಸಂಪೂರ್ಣ ಮೇಲುಗೈ ಸಾಧಿಸಿತು. ಮನೋಜ್ ಕುಮಾರ್ ಸಬಾಪತಿ 1:57.41 ಸಮಯದಲ್ಲಿ ಚಿನ್ನ ಗೆದ್ದರು. ಮಣಿಕಂದನ್ ಜೋತಿ 2:11.14 ಸಮಯದಲ್ಲಿ ಬೆಳ್ಳಿ ಹಾಗೂ ಕಮಲಕಾಂತ ನಾಯಕ 2:20.83 ಸಮಯದಲ್ಲಿ ಕಂಚು ಪಡೆದರು.

ಹಾಕಿ: ಫೈನಲ್‌ನಲ್ಲಿ ಭಾರತ ಪರಾಭವ



▸▸ ವಿಶ್ವಕಪ್ ಅರ್ಹತಾ ಸುತ್ತು
▸▸ ಇಂಗ್ಲೆಂಡ್‌ಗೆ 2-0ರ ಗೆಲುವು

• ಹೈದರಾಬಾದ್: ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಮಹಿಳೆಯರ ವಿಶ್ವಕಪ್‌ನಲ್ಲಿ ಅರ್ಹತೆ ಗಿಟ್ಟಿಸಿಕೊಂಡ ನಂತರ ಫೈನಲ್ ಪಂದ್ಯದಲ್ಲಿ ಭಾರತ ಇಂಗ್ಲೆಂಡ್ ವಿರುದ್ಧ ಪರಾಭವಗೊಂಡಿತು.

ದೀರ್ಘಕಾಲದ ಪೈಪೋಟಿಯಲ್ಲಿ ಮಿಂಚಿದರೂ ಎದುರಾಳಿಗಳ ಕಮಾಲ್ ಮುಂದೆ ಭಾರತ ಕೂಟದಲ್ಲೇ ಮೊದಲ ಪಂದ್ಯ ಸೋತಿತು. ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಅಚ್ಚಳಿಯದ ಪ್ರದರ್ಶನ ನೀಡಿದ್ದ ಭಾರತ ಕೊನೆಯ ಪಂದ್ಯದಲ್ಲಿ ಸಿಕ್ಕ ಐದೂ ಅವಕಾಶಗಳನ್ನು ಕಳೆದುಕೊಂಡ ನಂತರ ಇಂಗ್ಲೆಂಡ್ 2-0ರಿಂದ ಪಂದ್ಯವನ್ನು ಗೆದ್ದು ಅರ್ಹತಾ ಸುತ್ತಿನ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಶನಿವಾರದ ಪಂದ್ಯದಲ್ಲಿ ಆರಂಭ ದಿಂದಲೂ ಉಭಯ ತಂಡಗಳು ಸಮಯೋಚಿತ ಆಟವಾಡಿದವು. ಪಂದ್ಯದ 23ನೇ ಸೆಕೆಂಡಿನಲ್ಲೇ ಎದುರಾಳಿ ಆಟಗಾರ್ತಿ ಥಾಂಪ್ಸನ್ ಹಸಿರು ಕಾರ್ಡ್ ಪಡೆದರು. 1.12 ನೇ ನಿಮಿಷದಲ್ಲೇ ಪೆನಾಲ್ಟಿ ಕಾರ್ನರ್ ಪಡೆದ ಭಾರತ ಗೋಲು ಗಳಿಸಲಿಲ್ಲ, ಡಿಫೆನ್ಸ್‌ನಲ್ಲಿ ಮಿಂಚಿದ ಇಂಗ್ಲೆಂಡ್ 12.51 ನೇ ನಿಮಿಷದಲ್ಲಿ ಗೋಲು ದಾಖಲಿಸಿ ಮುನ್ನಡೆ ಪಡೆದುಕೊಂಡಿತು. ಗ್ರೇಸ್ ಖಾತೆ ತೆರೆದರು. ಎರಡನೇ ಕ್ವಾರ್ಟರ್ ಆರಂಭದಲ್ಲೇ ಮತ್ತೊಮ್ಮೆ ಒತ್ತಡ ಹೇರಿದ ಭಾರತ 22.51ನೇ ನಿಮಿಷದ ವೇಳೆ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡಿತು. ಆದಾಗ್ಯೂ ಖಾಲಿ ಕೈಯಲ್ಲೇ ಆಟ ಮುಂದುವರಿಸಿತು. 35ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಪಡೆದುಕೊಂಡರೂ ಗೋಲು ಗಳಿಸಲಿಲ್ಲ ಭಾರತ. ಮೂರನೇ ಕ್ವಾರ್ಟರ್‌ಗೂ ಮುನ್ನ ಇಂಗ್ಲೆಂಡ್ ಗೋಲಿನ ಅಂತರ 2ಕ್ಕೆ ಹಿಗ್ಗಿಸಿಕೊಂಡಿತು. 43ನೇ ನಿಮಿಷದಲ್ಲಿ ನೀಲ್ ಎಲ್ಜಿಬೆತ್ ಗೋಲು ಬಾರಿಸಿ ಭಾರತೀಯರ ಮೇಲೆ ಭಾರೀ ಒತ್ತಡ ಹಾಕಿದರು. 59ನೇ ನಿಮಿಷದ ವೇಳೆ ಗೋಲು ಪೆನಾಲ್ಟಿ ಕಾರ್ನರ್ ಪಡೆದರೂ ಭಾರತ ಯಾವುದೇ ಗೋಲು ಗಳಿಸದೆ, ಖಾಲಿ ಕೈಯಲ್ಲೇ ಪಂದ್ಯ ಮುಗಿಸಿತು.

ಫುಟ್ಬಾಲ್: ಜೂ. ತಂಡಕ್ಕೆ 2ನೇ ಜಯ

• ಹೊಸದಿಲ್ಲಿ: ಮ್ಯಾನ್ಮಾರ್‌ನ ತುವುನ್ನಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಅಂತಾರಾಷ್ಟ್ರೀಯ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತದ 17 ವರ್ಷದೊಳಗಿನ ಮಹಿಳಾ ಫುಟ್ಬಾಲ್ ತಂಡ ರೋಚಕ ಹೋರಾಟದಲ್ಲಿ ಮ್ಯಾನ್ಮಾರ್ ತಂಡವನ್ನು 3-2 ಗೋಲುಗಳಿಂದ ಸೋಲಿಸಿ ಗಮನಸೆಳೆದಿದೆ. ಪಂದ್ಯ ಅಂತಿಮ ಕ್ಷಣಗಳಲ್ಲಿ ತಿರುವು ಪಡೆದಿದ್ದು, ಬದಲಾಯಿತ ಆಟಗಾರ್ತಿಯರ ಗೋಲುಗಳಿಂದ ಭಾರತ ಅದ್ಭುತ ಗೆಲುವು ದಾಖಲಿಸಿತು.

ಮೊದಲಾರ್ಧದಲ್ಲಿ ಮ್ಯಾನ್ಮಾರ್ ಉತ್ತಮ ಆರಂಭ ಕಂಡಿತು. 12ನೇ ನಿಮಿಷದಲ್ಲಿ ಹ್ನಿನ್ ವಿಂಟ್ ವಾರ ಕ್ಯಾಂಗ್ ಗೋಲು ಗಳಿಸಿ ಆತಿಥೇಯರಿಗೆ ಮುನ್ನಡೆ ತಂದರು. ಭಾರತ ತಂಡ 33ನೇ ನಿಮಿಷದಲ್ಲಿ ಅಲ್ವಾ ದೇವಿ ಸೆಂಜಾಮ್ ಅವರ ಗೋಲಿನ ಮೂಲಕ ಸಮಬಲ ಸಾಧಿಸಿತು. ರೆಡಿಮಾ ದೇವಿ ನೀಡಿದ ನಿಖರ ಪಾಸ್ ಅನ್ನು ನಿಯಂತ್ರಿಸಿಕೊಂಡ ಅಲ್ವಾ ದೇವಿ ಎಡ ಕಾಲಿನಿಂದ ಬಲಿಷ್ಠ ಶಾಟ್ ಹೊಡೆದು ಗೋಲು ದಾಖಲಿಸಿದರು. ಇದು 15 ವರ್ಷದ ಅಲ್ವಾ ದೇವಿ ಅವರ ಮೊದಲ ಯುವ ಅಂತಾರಾಷ್ಟ್ರೀಯ ಗೋಲಾಗಿದೆ.

ಆದರೆ ಮೊದಲಾರ್ಧದ ಅಂತ್ಯದ ಕ್ಷಣದಲ್ಲಿ ಮ್ಯಾನ್ಮಾರ್ ಮತ್ತೆ ಮುನ್ನಡೆ ಪಡೆದಿತು. 45ನೇ ನಿಮಿಷದಲ್ಲಿ ಸೌಂಗ್ ತಾಜಿನ್ ಊ ನೀಡಿದ ಕಾರ್ನರ್ ಕಿಕ್ ಅನ್ನು ಮಿನ್ ಹ್ಟೋನ್ ಮೇ ಜಿಟಾರ್ ತಲೆಯಿಂದ ಜಾಲದಲ್ಲಿ ಸೇರಿಸಿದರು. ಇದರಿಂದ ವಿರಾಮದ ವೇಳೆಗೆ ಮ್ಯಾನ್ಮಾರ್ 2-1 ಮುನ್ನಡೆ ಹೊಂದಿತ್ತು.



ಎರಡನೇ ಕ್ವಾರ್ಟರ್: ಎರಡನೇ ಕ್ವಾರ್ಟರ್‌ನಲ್ಲಿ ಎರಡು ತಂಡಗಳ ಮಧ್ಯೆ ಕಠಿಣ ಪೈಪೋಟಿ ನಡೆಯಿತು. ಮಧ್ಯಮೈದಾನದಲ್ಲಿ ಹೋರಾಟ ಹೆಚ್ಚಾಗಿದ್ದು, ಸ್ಪಷ್ಟ ಅವಕಾಶಗಳು ಕಡಿಮೆಯಾದವು. ಆದರೆ ಅಂತಿಮ ಕ್ಷಣಗಳಲ್ಲಿ ಭಾರತ ಪಂದ್ಯವನ್ನು ತಿರುಗಿಸಿತು. 88ನೇ ನಿಮಿಷದಲ್ಲಿ ಬದಲಾಯಿತ ಆಟಗಾರ್ತಿ ಅನುಷ್ಕಾ ಕುಮಾರಿ ಸಮಬಲದ ಗೋಲು ದಾಖಲಿಸಿದರು. ಸಹ ಆಟಗಾರ್ತಿ ಬೋನಿಫಿಲಿಯಾ ಶುಲ್ಲೈ ನೀಡಿದ ಪಾಸ್ ಅನ್ನು ಪಡೆದುಕೊಂಡ ಅನುಷ್ಕಾ ಸುಮಾರು 25 ಗಜ ದೂರದಿಂದ ಹೊಡೆದ ಶಾಟ್ ನೇರವಾಗಿ ಜಾಲ ಸೇರಿತು.

ಇದರಿಂದ ಉತ್ಸಾಹಗೊಂಡ ಭಾರತ ಕೊನೆಯ ಕ್ಷಣದಲ್ಲಿ ಜಯದ ಗೋಲು ದಾಖಲಿಸಿತು. ಹೆಚ್ಚುವರಿ ಸಮಯದ 91ನೇ ನಿಮಿಷದಲ್ಲಿ ಎಲಿಜಬೆತ್ ಲಕ್ರಾ ದೂರದಿಂದ ಚೆಂಡು ಕಳುಹಿಸಿದರು. ಮ್ಯಾನ್ಮಾರ್ ರಕ್ಷಣಾ ಆಟಗಾರ್ತಿ ಫಿನ್ ಮ್ಯಿಂಟ್ ಯಾನ್ ತಲೆ ಹೊಡೆತದಲ್ಲಿ ತಪ್ಪು ಮಾಡಿದ ಪರಿಣಾಮ ಚೆಂಡು ಜೋಯಾ ಕೈಗೆ ಸಿಕ್ಕಿತು. ಅವಕಾಶವನ್ನು ಬಳಸಿಕೊಂಡ ಜೋಯಾ ಎಡ ಕಾಲಿನಿಂದ ಚೆಂಡನ್ನು ಜಾಲದಲ್ಲಿ ಸೇರಿಸಿ ಭಾರತಕ್ಕೆ 3-2 ಗೆಲುವು ತಂದುಕೊಟ್ಟರು.

ಈ ಪಂದ್ಯ ಮುಂದಿನ ಮೇ 1ರಿಂದ 17ರವರೆಗೆ ಚೀನಾದ ಸುಝೌ ನಗರದಲ್ಲಿ ನಡೆಯಲಿರುವ ಏಷ್ಯಾ ಮಟ್ಟದ 17 ವರ್ಷದೊಳಗಿನ ಮಹಿಳಾ ಕಪ್ ಫುಟ್ಬಾಲ್ ಟೂರ್ನಿಗೆ ಭಾರತ ತಂಡದ ಸಿದ್ಧತೆಯ ಭಾಗವಾಗಿತ್ತು. ಗುರುವಾರ ನಡೆದ ಮೊದಲ ಸ್ನೇಹಪೂರ್ಣ ಪಂದ್ಯದಲ್ಲೂ ಭಾರತ 2-0 ಗೋಲುಗಳಿಂದ ಜಯ ಸಾಧಿಸಿತ್ತು

ಪಿಎಸ್‌ಎಲ್ ತ್ಯಜಿಸಿ ಐಪಿಎಲ್‌ಗೆ ಬ್ಲೆಸ್ಸಿಂಗ್?

• ಹೊಸದಿಲ್ಲಿ: ಪಾಕಿಸ್ತಾನ, ಬಾಂಗ್ಲಾದೇಶ ಆಟಗಾರರನ್ನು ಬಿಸಿಸಿಐ ಧಿಕ್ಕರಿಸಿದಂತೆ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯನ್ನು ಸಲೀಸಾಗಿ ಧಿಕ್ಕರಿಸಿದ ಜಿಂಬಾಬ್ವೆ ವೇಗಿ ಬ್ಲೆಸ್ಸಿಂಗ್ ಮಝುರ್ಬಾನಿ ಶೀಘ್ರದಲ್ಲೇ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಸೇರಿಕೊಳ್ಳಲಿದ್ದಾರೆ.



ಬಾಂಗ್ಲಾದೇಶ ಆಟಗಾರ ಮುಸ್ತಾಫಿಜುರ್ ರೆಹಮಾನ್ ಖರೀದಿಸಿದ್ದಕ್ಕಾಗಿ ಕೆಕೆಆರ್ ತಂಡ ಭಾರೀ ಹಿನ್ನಡೆ ಅನುಭವಿಸಿತ್ತು. ಸಂಘಟನೆಗಳ ತೀವ್ರ ಪ್ರತಿಭಟನೆ ಬೆನ್ನಲ್ಲೇ ಬಿಸಿಸಿಐ ಪಾಕ್ ಆಟಗಾರರಂತೆ ಬಾಂಗ್ಲಾದವರಿಗೂ ಗೇಟ್‌ಪಾಸ್ ನೀಡಿತ್ತು. ಕೆಕೆಆರ್ ತಂಡದಿಂದ ರೆಹಮಾನ್ ಹೊರಬಿದ್ದಿದ್ದರು. ಈ ನಿಟ್ಟಿನಲ್ಲಿ ಅವರ ಬದಲಿ ಆಟಗಾರರಾಗಿ ಕೆಕೆಆರ್‌ನಿಂದ ಬುಲಾವ್ ಬಂದಿದ್ದು, ಪಿಎಸ್‌ಎಲ್‌ನ ಇಸ್ಲಾಮಾಬಾದ್ ಯುನೈಟೆಡ್ ತಂಡಕ್ಕೆ ಆಯ್ಕೆಯಾಗಿದ್ದ ಅವರು ಆಡದಿರಲು ಹೇಳಿದ್ದಾರೆ ಎಂದು ಕ್ರಿಕ್ ಇನ್ಫೋ ವರದಿ ಮಾಡಿದೆ. ಈ ಹಿಂದೆ ಕೂಡ ಪಿಎಸ್ ಎಲ್ ತಂಡಕ್ಕೆ ಆಯ್ಕೆಯಾಗಿದ್ದ ಬ್ಲೆಸ್ಸಿಂಗ್ ಈ ಬಾರಿ ಅಲ್ಲೂ ಕೂಡ ಅನ್‌ಸೋಲ್ಡ್ ಆಗಿದ್ದರು. ಆದರೆ ಇಸ್ಲಾಮಾಬಾದ್ ನೇರ ಖರೀದಿ ಮಾಡಿತ್ತು. 26ರಿಂದ ಶುರುವಾಗಲಿರುವ ಈ ಕೂಟಕ್ಕೂ ಮುನ್ನವೇ ಬ್ಲೆಸ್ಸಿಂಗ್ ಫ್ರಾಂಚೈಸಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಬಾಕ್ಸಿಂಗ್: ಫೈನಲ್‌ಗೇರಿದ ನಾಲ್ವರು

• ಬ್ಯಾಂಕಾಕ್: ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಫ್ಯೂಚರ್ ಕಪ್ ಸ್ಪರ್ಧೆಯಲ್ಲಿ ಭಾರತದ ಬಾಕ್ಸರ್‌ಗಳು ಶನಿವಾರ ನಡೆದ ಸೆಮಿಫೈನಲ್ ಪೈಪೋಟಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ನಾಲ್ವರು ಆಟಗಾರರು ಅಂತಿಮ ಸುತ್ತಿಗೆ ಪ್ರವೇಶಿಸಿದ್ದಾರೆ.

ಚಂದ್ರಿಕಾ, ಗುಂಜನ್, ಜಾಯ್‌ಶ್ರೀ ದೇವಿ ಮತ್ತು ಅಂಬೇಕರ್ ಮೀತೈ ತಮ್ಮ ತಮ್ಮ ವಿಭಾಗಗಳಲ್ಲಿ ವಿಶ್ವಾಸಾರ್ಹ ಜಯಗಳಿಸಿ ಪದಕದತ್ತ ಮತ್ತೊಂದು ಹೆಜ್ಜೆ ಇಟ್ಟಿದ್ದಾರೆ. ಮಹಿಳೆಯರ 51 ಕೆಜಿ ವಿಭಾಗದಲ್ಲಿ ಚಂದ್ರಿಕಾ ಅದ್ಭುತ ಪ್ರದರ್ಶನ ನೀಡಿ ಮೊರಾಕ್ಕೊದ ರಿಹಾಬ್ ಹಮ್ದೌನ್ ವಿರುದ್ಧ ಎರಡನೇ ಸುತ್ತಿನಲ್ಲಿ ನಿರ್ಣಾಯಕ ಜಯ ಸಾಧಿಸಿದರು. ರೆಫರಿ ಸ್ಪರ್ಧೆಯನ್ನು ನಿಲ್ಲಿಸಿದ ಪರಿಣಾಮ ಚಂದ್ರಿಕಾ ಸುಲಭವಾಗಿ ಅಂತಿಮ ಸುತ್ತಿಗೆ ಪ್ರವೇಶಿಸಿದರು.

ಮಹಿಳೆಯರ 48 ಕೆಜಿ ವಿಭಾಗದಲ್ಲಿ ಗುಂಜನ್ ಉತ್ತರ ಕೊರಿಯಾದ ಯು ಗ್ಯೊಂಗ್ ಕಿಮ್ ವಿರುದ್ಧ 50 ಏಕಮತ ತೀರ್ಪಿನ ಮೂಲಕ ಗೆಲುವು



ಸಾಧಿಸಿದರು. ಆರಂಭದಿಂದಲೇ ದಿಟ್ಟವಾಗಿ ಹೋರಾಡಿದ ಗುಂಜನ್ ಸ್ಪರ್ಧೆಯಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿ ಅಂತಿಮ ಸುತ್ತಿನ ಟಿಕೆಟ್ ಪಡೆದುಕೊಂಡರು.

ಮಹಿಳೆಯರ 54 ಕೆಜಿ ವಿಭಾಗದಲ್ಲಿ ಜಾಯ್ ಶ್ರೀ ದೇವಿ ಮತ್ತೊಂದು ಪ್ರಭಾವಿ ಪ್ರದರ್ಶನ ನೀಡಿದರು. ಮೆಕ್ಸಿಕೊದ ಸೋಫಿಯಾ ರಾಮಿರೆಜ್ ವಿರುದ್ಧ ನಡೆದ ಅರ್ಧ ಅಂತಿಮ ಪೈಪೋಟಿಯಲ್ಲಿ ಅವರು ಮೊದಲನೇ ಸುತ್ತಿನಲ್ಲೇ ರೆಫರಿ ಸ್ಪರ್ಧೆಯನ್ನು ನಿಲ್ಲಿಸುವಂತೆ ಮಾಡಿದರು. ಇದರಿಂದ ಜಾಯ್ ಶ್ರೀ ದೇವಿ ಸುಲಭವಾಗಿ ಅಂತಿಮ ಹಂತಕ್ಕೆ ಮುನ್ನಡೆದರು.

ಪುರುಷರಲ್ಲಿ: ಪುರುಷರ 50 ಕೆಜಿ ವಿಭಾಗದಲ್ಲಿ ಅಂಬೇಕರ್ ಮೀತೈ ಉಜ್ಬೇಕಿಸ್ತಾನದ ಅಬ್ದುಗನಿ ಯಾರ್ಕಿಂಜೊನೊವ್ ವಿರುದ್ಧ 50 ಏಕಮತ ತೀರ್ಪಿನಿಂದ ಜಯಗಳಿಸಿ ಅಂತಿಮ ಸುತ್ತಿಗೆ ಪ್ರವೇಶಿಸಿದರು. ಉತ್ತಮ ತಂತ್ರ ಮತ್ತು ವೇಗದ ಮೂಲಕ ಅವರು ಪೈಪೋಟಿಯನ್ನು ಸಂಪೂರ್ಣ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು. ಇನ್ನೊಂದೆಡೆ ಮಹಿಳೆಯರ 57 ಕೆಜಿ ವಿಭಾಗದಲ್ಲಿ ರಾಧಾಮಣಿ ಲಾಂಗ್ಜಾಮ್ ಕಠಿಣ ಪೈಪೋಟಿ ನಡೆಸಿದರೂ ಅಂತಿಮವಾಗಿ ಸೋಲು ಅನುಭವಿಸಿದರು. ಉಕ್ರೇನ್‌ನ ಯೆವಾಂಹೆಲಿನಾ ಪೆತ್ರುಕ್ ವಿರುದ್ಧ ನಡೆದ ಪಂದ್ಯದಲ್ಲಿ ಅವರು 2-3 ಅಂತರದಲ್ಲಿ ಸೋತರು. ಇದರಿಂದ ರಾಧಾಮಣಿ ಕಂಚಿನ ಪದಕದೊಂದಿಗೆ ತಮ್ಮ ಅಭಿಯಾನವನ್ನು ಮುಗಿಸಿದರು.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5924

ಎಡದಿಂದ ಬಲಕ್ಕೆ
2.ಮನಸಿನಿಂದ ಮಾಡಿದ ವಂದನೆ (3)
5.ಬಗೆ-ರೀತಿಗಳಿಲ್ಲಿ ತಿರುಗಿವೆ (2)
7.ದಕ್ಷವ್ಯಕ್ತಿಯ ಕರದಲ್ಲಿರುವ ಪಗಡೆಯ ದಾಳ (2)
8.ತರವಲ್ಲ ಎಂದದ್ದು ಈ ತಂತಿವಾದ್ಯದ ಸ್ವರವನ್ನು (3)
9.ಹದಗೊಳಿಸುವಿಕೆ-ಸ್ವಚ್ಛಗೊಳಿಸುವಿಕೆ (3)
10.ಮಾವನ ಪಕ್ಕದಲ್ಲಿ ಕಂಡ ಕುಳ್ಳವ್ಯಕ್ತಿ (3)
12.ಆಸಕ್ತಿಯಿಲ್ಲದಿರುವಿಕೆ-ಬೇಜಾರು (3)
13. ಇದು ಮನಸ್ಸಿನ ವ್ಯಥೆ-ವಿಷಾದ (2)
14.ಖರೀದಿಸಲು ಬೇಕಾದ ಮಾಧ್ಯಮ ತಿರುಗಿದೆ (2)
16.ಹೊಳೆಯುವ ಗಟ್ಟಿ ಬೆಲೆಬಾಳುವ ಕಲ್ಲು (3)

ಮೇಲಿನಿಂದ ಕೆಳಕ್ಕೆ
1.ಕೋಪದಿಂದ ವಿವೇಕ ಕಳೆದುಕೊಂಡವನು (3)
2.ಪ್ರಹ್ಲಾದನನ್ನು ರಕ್ಷಿಸಿದ ವಿಷ್ಣುವಿನ ರೂಪ (4)
3.ಒಂಬತ್ತು ಬಗೆಯ ಆಕಾಶ ಕಾಯಗಳು (4)
4.ಮುಂದೆ-ಎದುರುಗಡೆಯಿದು (3)
6.ಇದು ತರ್ಕವಿಲ್ಲದ ಚರ್ಚೆ (5)
7.ಇತರರು ಹೇಳಿದಂತೆ ನುಡಿಯುವುದು (5)
11.ಮಾರುತಿಯಿಲ್ಲಿ ತಲೆಕೆಳಗಾಗಿದ್ದಾನೆ (4)
12.ರೋಗಕ್ಕೆ ತುತ್ತಾಗು-ಕಾಯಿಲೆ ಬರು (4)
13.ಆಕಾಶದಲ್ಲಿ ಸಂಚರಿಸುವಂಥಾದ್ದು (3)
15.ಮರ-ಲೋಹದ ತೆಳುವಾದ ಸೀಳು (3)

5923 ಉತ್ತರ

ಎಡದಿಂದ ಬಲಕ್ಕೆ:
2.ಮನಸು 5.ಜ್ಞಾನಪೀಠ
6.ಮದಕರಿ 7.ಗಾಯ
8.ದಯ 10.ತಿದಿ
12.ದುಂಬಿ 13.ಆಚಮನ
15.ಹಾಡುಗಾರ
16.ದಿರಸು

ಮೇಲಿನಿಂದ ಕೆಳಕ್ಕೆ:
1.ಅನನ್ವಯ 2.ಮಠ
3.ಸುಮ 4.ಮಕರಂದ
7.ಗಾಣತಿ 9.ಬಿಳಿಯ
11.ದಿನಚರಿ
12.ದುಂದುಗಾರ 14.ನದಿ
15.ಹಾಸು



ಸರ್ನೇ ನಿನ್ನ ಸೆರಗಾ ಕೆಡಿ ಮತ್ತೊಂದು ಹಾಡು

ಜೋಗಿ ಪ್ರೇಮ್ ಅವರ ನಿರ್ದೇಶನದ ಹಾಗೂ ಆಕ್ಷನ್‌ಪ್ರಿನ್ಸ್ ಧ್ರುವ ಸರ್ಜಾ ನಾಯಕನಾಗಿ ಅಭಿನಯಿಸಿದ ಪ್ಯಾನ್ ಇಂಡಿಯಾ ಚಿತ್ರ ಕೆಡಿ. ಈ ವರ್ಷದ ಬಹು ನಿರೀಕ್ಷಿತ ಚಿತ್ರಗಳಲ್ಲಿ ಒಂದಾದ ಕೆಡಿ ಸಿನಿಮಾದ ನಾಲ್ಕನೇ ಹಾಡು ಸರ್ನೆ ಸರ್ನೆ ನಿನ್ನ ಸೆರಗಾ ಸರಿಸೇ ಎಂಬ ಡಾನ್ಸ್ ನಂಬರ್ ಹಾಡಿನ ಲಿರಿಕಲ್



ವಿಡಿಯೋ ಬಿಡುಗಡೆ ಕಾರ್ಯಕ್ರಮ ಶನಿವಾರ ಸಂಜೆ ನಡೆಯಿತು. ಈಗಾಗಲೇ ಬಿಡುಗಡೆಯಾಗಿರುವ ಈ ಚಿತ್ರದ ಮೂರು ಹಾಡುಗಳೂ ಸಹ ಸೂಪರ್‌ಹಿಟ್ ಆಗಿವೆ. ಕೆ.ವಿ.ಎನ್. ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ವೆಂಕಟ್ ಕೆ. ನಾರಾಯಣ್ ಅವರ ನಿರ್ಮಾಣದ ಬಹುನಿರೀಕ್ಷಿತ ಚಿತ್ರ ಇದಾಗಿದೆ. ವೇದಿಕೆಯಲ್ಲಿ ನಟಿ ನೋರಾ ಫತೇಹಿ, ನಿರ್ದೇಶಕ ಪ್ರೇಮ್, ನಟಿ ರಕ್ಷಿತಾ, ನಾಯಕ ಧ್ರುವ ಸರ್ಜಾ, ನಾಯಕಿ ರೀಶ್ಮಾ ನಾಣಯ್ಯ, ಕಾರ್ಯಕಾರಿ ನಿರ್ಮಾಪಕ ಸುಪ್ರೀತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಾಯಕನಟ ಧ್ರುವ ಸರ್ಜಾ ಮಾತನಾಡಿ ಇದು ನಮ್ಮ ಚಿತ್ರದ 4ನೇ ಹಾಡು, ಈ ಹಿಂದೆ ರಿಲೀಸಾದ ಮೂರು ಹಾಡುಗಳೂ ಬೇರೆ ಬೇರೆ ಜಾನರ್ ಆಗಿದ್ದು, ಹಿಟ್ ಆಗಿವೆ. ಈ ಎಲ್ಲಾ ಹಾಡುಗಳುಗೆ ಅರ್ಜುನ್ ಜನ್ಯ ಅವರು ಲಂಡನ್‌ನಲ್ಲಿ ಲೈವ್ ಮ್ಯೂಸಿಕ್ ಮಾಡಿಸಿದ್ದಾರೆ, ಈ ಆಲ್ಬಂ ಇಷ್ಟು ಚೆನ್ನಾಗಿ ಆಗಿದೆ ಎಂದರೆ ಅದಕ್ಕೆ ಜನ್ಯ ಅವರೇ ಕಾರಣ. ನನ್ನ ಅದ್ದೂರಿ ಚಿತ್ರದಿಂದ ಈ ಚಿತ್ರದವರಗೆ ಎಲ್ಲ ಹಾಡುಗಳನ್ನು ಆನಂದ್ ಆಡಿಯೋದವರೇ ತೆಗೆದುಕೊಂಡಿದ್ದಾರೆ ಎಂದರು,

ನಿರ್ದೇಶಕ ಪ್ರೇಮ್ ಮಾತನಾಡುತ್ತ ಈಗಾಗಲೇ ಮೂರು ಹಾಡುಗಳನ್ನು ಹಿಟ್ ಮಾಡಿದ್ದೀರಿ, ನಾಲ್ಕನೇ ಸಾಂಗ್‌ನ್ನು ರಕ್ಷಿತಾ ಪ್ರೇಮ್ ಬಿಡುಗಡೆ ಮಾಡಿದರು. ಮೊದಲ ಗೀತೆಯನ್ನು ಸಹ ಅವರೇ ರಿಲೀಸ್ ಮಾಡಿದ್ದರು, ಚಿತ್ರ ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ ಎಂದರು,

ಚಿತ್ರದ ನಾಯಕಿ ರೀಷ್ಮಾ ನಾಣಯ್ಯ ಮಾತನಾಡಿ ನೋರಾ ಫತೇಹಿ ಅವರು ಎಕ್ಸ್ಟ್ರಾರ್ಡಿನರಿ ಡ್ಯಾನ್ಸರ್, ಅವರಜತೆ ಕೆಲಸ ಮಾಡಿದ್ದು ತುಂಬಾ ಖುಷಿಯಾಗಿದೆ, ಈ ಚಿತ್ರದ ನಿಜವಾದ ಹೀರೋ ನಿರ್ದೇಶಕ ಪ್ರೇಮ್ ಅವರು ಎಂದರು.

ರಕ್ಷಿತಾ ಪ್ರೇಮ್ ಮಾತನಾಡುತ್ತ ನಾನು ಚಿತ್ರರಂಗಕ್ಕೆ ಬಂದು 24 ವರ್ಷ ಆಯ್ತು. ಈ ಜರ್ನಿ ನೀವು ಇಲ್ಲದಿದ್ದರೆ ಕಂಪ್ಲೀಟ್ ಆಗ್ತಾ ಇರಲಿಲ್ಲ. ಕೆಡಿ ಬಗ್ಗೆ ಹೇಳುವುದಾದರೆ, ಸುಪ್ರೀತ್, ಅರ್ಜುನ್ ಜನ್ಯ, ಪ್ರೇಮ್ ಈ ಮೂವರ ಕಾಂಬಿನೇಷನ್ ಹಿಟ್ ಆಗ್ತಾನೇ ಬಂದಿದೆ. ಏಪ್ರಿಲ್ 30ಕ್ಕೆ ಸಿನಿಮಾ ರಿಲೀಸ್ ಆಗುತ್ತಿದೆ. ಇದರಲ್ಲಿ ಪ್ರತಿ ಹಾಡು ಹಿಟ್ ಆಗಿದ್ದು, ಸಿನಿಮಾ ಕೂಡ ಹಿಟ್ ಆಗುವ ಭರವಸೆ ಇದೆ ಎಂದರು. ಬಾಲಿವುಡ್ ನಟ ನೋರಾ ಫತೇಹಿ ಮಾತನಾಡಿ ನಾನು ಈ ಹಾಡಿಗೆ ಹೆಜ್ಜೆ ಹಾಕಿದ್ದೇನೆ. ಕೊನೆಯ ಕ್ಷಣದಲ್ಲಿ ನಾನೀ ಚಿತ್ರತಂಡವನ್ನು ಸೇರಿದೆ. ಈ ಸಾಂಗ್‌ನಲ್ಲಿ ನನ್ನ ಡ್ಯಾನ್ಸನ್ನು ಸಿನಿಮಾದಲ್ಲಿ ನೋಡಿ ಎಂದರು.

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ ಇದು ಪ್ರೇಮ್ ಅವರ ಜೊತೆ ನಾಲ್ಕನೇ ಚಿತ್ರ. ಇಡೀ ಸಿನಿಮಾ ರೆಟ್ರೋ ಶೈಲಿಯಲ್ಲಿರುತ್ತದೆ. ಅದೇ ಸ್ಟೈಲ್‌ನಲ್ಲಿ ಸಂಗೀತ ಮಾಡಿದ್ದೇನೆ ಎಂದರು.

ಆನಂದ್ ಆಡಿಯೋ ಶಾಮ್ ಮಾತನಾಡಿ ನಿರ್ಮಾಪಕರಿಗೆ ಈ ಸಿನಿಮಾ ಮೇಲೆ ತುಂಬಾ ನಿರೀಕ್ಷೆ ಇದೆ. ಈಗಾಗಲೇ ಮೂರು ಹಾಡುಗಳು ಹಿಟ್ ಆಗಿದ್ದು, ಇನ್ನೂ ಮೂರು ಅದ್ಭುತವಾದ ಹಾಡುಗಳಿವೆ. ಪ್ರೇಮ್ ಅವರ ಹಿಂದಿನ ರೆಕಾರ್ಡ್ ಈ ಸಿನಿಮಾ ಮುರಿಯುವ ನಿರೀಕ್ಷೆ ಇದೆ ಎಂದರು.



ಜೋಗಿ ಪ್ರೇಮ್ ನಿರ್ದೇಶನದ ಚಿತ್ರಗಳಲ್ಲಿ ಹಾಡುಗಳೇ ಹೈಲೈಟ್ ಆಗಿರುತ್ತವೆ, ಅದೇರೀತಿ ಕೆಡಿ ಚಿತ್ರದಲ್ಲೂ ಸಹ ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು, ಅರ್ಜುನ್ ಜನ್ಯ ಇಡೀ ಚಿತ್ರದ ಮ್ಯೂಸಿಕ್‌ನಲ್ಲಿ ಮ್ಯಾಜಿಕ್ಕನ್ನೇ ಮಾಡಿದ್ದಾರೆ, 1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್ ಸ್ಟರ್ ಕಥೆ ಕೆಡಿ ಚಿತ್ರದಲ್ಲಿದೆ, ಇನ್ನು ಈ ಚಿತ್ರಕ್ಕೆ ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಅವರ ಕ್ಯಾಮೆರಾ ವರ್ಕ್ ಇದೆ. ಹಿರಿಯನಟ ಸಂಜಯ್ ದತ್ ಅಲ್ಲದೆ ಶಿಲ್ಪಾ ಶೆಟ್ಟಿ, ನೋರಾ ಫತೇಹಿ ಸೇರಿದಂತೆ ಬಾಲಿವುಡ್‌ನ ಅನೇಕ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಜೊತೆಗೆ ಕ್ರೇಜಿಸ್ಟಾರ್ ರವಿಚಂದ್ರನ್, ನಟ ರಮೇಶ್ ಅರವಿಂದ್ ಹೀಗೆ ಹೆಸರಾಂತ ಕಲಾವಿದರ ದಂಡೇ ಈ ಚಿತ್ರದಲ್ಲಿದೆ.

ಪೊಲೀಸ್ ಕಂಪ್ಲೇಂಟ್ ಟೀಸರ್ ನಟಿ ಪ್ರೇಮಾ ಬಿಡುಗಡೆ

ಹತ್ತು ವರ್ಷಗಳ ಹಿಂದೆ ಪೂಜಾಗಾಂಧಿ ಅಭಿನಯದ ಅನು, ದಂಡು, ಆಪ್ತ ಮುಂತಾದ ಚಿತ್ರಗಳನ್ನು ನಿರ್ದೇಶನ ಮಾಡಿದ್ದ ಸಂಜೀವ್ ಮೆಗೋಟಿ ಅವರು ಬಹಳ ವರ್ಷಗಳ ನಂತರ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ, ನಟಿ ರಾಗಿಣಿ ದ್ವಿವೇದಿ, ಕೃಷ್ಣಸಾಯಿ ಅಭಿನಯದ ಪೊಲೀಸ್ ಕಂಪ್ಲೇಂಟ್ ಎಂಬ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರನ್ನು ನಟಿ ಪ್ರೇಮಾ ಅವರು ಬಿಡುಗಡೆ ಮಾಡಿದರು, ರಾಗಿಣಿ ದ್ವಿವೇದಿ, ಕೃಷ್ಣಸಾಯಿ, ನವೀನ್ ಚಂದ್ರ, ವರಲಕ್ಷ್ಮಿ ಶರತ್ ಕುಮಾರ್, ರವಿಶಂಕರ್, ಶರತ್ ಲೋಹಿತಾಶ್ವ. ಮುಂತಾದವರು ಚಿತ್ರದ ಪ್ರಮುಖ ತಾರಾಗಣದಲ್ಲಿದ್ದಾರೆ,

ಈ ಸಂದರ್ಭದಲ್ಲಿ ಮಾತನಾಡಿದ ನಿರ್ಮಾಪಕ ಕಂ ನಾಯಕ ಕೃಷ್ಣಸಾಯಿ ತಾಯಿ ಸೆಂಟಿಮೆಂಟ್ ಜತೆಗೆ ಆಕ್ಷನ್, ಥ್ರಿಲ್ಲರ್ ಕಂಟೆಂಟ್ ಕೂಡ ಚಿತ್ರದಲ್ಲಿದೆ. ನಿರ್ದೇಶಕರು ತುಂಬಾ ಹಾಡ್ ವರ್ಕ್ ಹಾಕಿ ಸಿನಿಮಾ ಮಾಡಿದ್ದಾರೆ, ರವಿಶಂಕರ್ ಸೇರಿದಂತೆ ಹಲವಾರು ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ, ನಾಯಕನಾಗಿ ಇದು ನನ್ನ ನಾಲ್ಕನೇ ಚಿತ್ರ. ಕನ್ನಡದಲ್ಲಿ ಮೊದಲ ಚಿತ್ರ. ನಾನೊಬ್ಬ ಸಾಫ್ಟವೇರ್ ಎಂಜಿನಿಯರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದರು.



ಏಪ್ರಿಲ್‌ನಲ್ಲಿ ಕನ್ನಡ, ತೆಲುಗು ಭಾಷೆಯಲ್ಲಿ ತೆರೆಗೆ

ನಾಯಕಿ ರಾಗಿಣಿ ದ್ವಿವೇದಿ ಮಾತನಾಡಿ ನನಗ ಈ ಚಿತ್ರದ ಜೊತೆ ಒಂದು ವರ್ಷದ ಜರ್ನಿ ಇದೆ. ಇದೊಂದು ಒಳ್ಳೆಯ ಕಥೆಯಿರುವ ಚಿತ್ರ. ಶೀರ್ಷಿಕೆ ಸಿಂಪಲ್ ಆಗಿದ್ದರೂ, ಕಂಟೆಂಟ್ ಸ್ಟ್ರಾಂಗ್ ಆಗಿದೆ. ಈ ಚಿತ್ರದಲ್ಲಿ ನನ್ನ ಪಾತ್ರಕ್ಕೆ ಎರಡು ಶೇಡ್ ಇದೆ. ಆಕ್ಷನ್ ದೃಶ್ಯಗಳು ಚೆನ್ನಾಗಿ ಮೂಡಿಬಂದಿವೆ. ನಿರ್ಮಾಪಕರು ಪ್ಯಾಶನೇಟ್ ಆಗಿ ಸಿನಿಮಾ ಮಾಡಿದ್ದಾರೆ. ಈ ಚಿತ್ರವು ಕನ್ನಡ ಹಾಗೂ ತೆಲುಗು ಭಾಷೆಯಲ್ಲೂ ಸಹ ರಿಲೀಸಾಗಲಿದೆ. ಜತೆಗೆ ಈ ವರ್ಷ ನನ್ನ ಅಭಿನಯದ 3-4 ಸಿನಿಮಾಗಳು ರಿಲೀಸಾಗಲಿವೆ ಎಂದರು,

ನಿರ್ದೇಶಕ ಸಂಜೀವ್ ಮೇಗೋಟಿ ಮಾತನಾಡಿ 10 ವರ್ಷದ ಹಿಂದೆ ಕನ್ನಡ ಸಿನಿಮಾ ನಿರ್ದೇಶನ ಮಾಡಿದ್ದೆ. ನಂತರ ದಂಡು, ಆಪ್ತ ಮುಂತಾದ ಚಿತ್ರಗಳನ್ನು ನಿರ್ದೇಶಿಸಿ ಹೈದರಾಬಾದ್‌ನಲ್ಲಿ 40 ಸೀರಿಯಲ್‌ಗಳಿಗೆ ಸಾಹಿತ್ಯ ಬರೆದಿದ್ದು, ಈಗ 10 ವರ್ಷದ ನಂತರ ತೆಲುಗಿನಲ್ಲಿ ರಾಘವರೆಡ್ಡಿ, ಆದಿಪರ್ವ ಚಿತ್ರಗಳನ್ನು ನಿರ್ದೇಶಿಸಿದ್ದೆ. ಇದೀಗ ಕನ್ನಡ, ತೆಲುಗು ಭಾಷೆಯಲ್ಲಿ ಪೊಲೀಸ್ ಕಂಪ್ಲೇಂಟ್ ಚಿತ್ರವನ್ನು ನಿರ್ದೇಶಿಸಿದ್ದೇನೆ, ನಾನು ಮೂಲತ ರಾಯಚೂರಿನವನು. ನಟಿ ರಾಗಿಣಿ ಅವರು ಸಾರಾ ಎಂಬ ಪಾತ್ರವನ್ನು ಮಾಡಿದ್ದಾರೆ. ಈ ಚಿತ್ರದಲ್ಲಿ 52 ಜನ ಕಲಾವಿದರು ನಟಿಸಿದ್ದು, ಇದೊಂದು ಆಕ್ಷನ್ ಥ್ರಿಲ್ಲರ್ ಚಿತ್ರ. ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ 45 ದಿನಗಳ ಕಾಲ ಈ ಚಿತ್ರದ ಶೂಟಿಂಗ್ ನಡೆಸಿದ್ದೇವೆ. ಕೃಷ್ಣಸಾಯಿ ಅವರ ನಿರ್ಮಾಣದ ಮೂರನೇ ಚಿತ್ರವಿದು. ಕರ್ಮಫಲದ ಮೇಲೆ ಚಿತ್ರದ ಕಥೆ ಸಾಗುತ್ತದೆ. ಆತ್ಮದ ಸೆಂಟಿಮೆಂಟ್ ಇದೆ, ವರಲಕ್ಷ್ಮೀ ಶರತ್‌ಕುಮಾರ್ ಅವರು ಪೊಲೀಸ್ ಪಾತ್ರ ಮಾಡಿದ್ದಾರೆ. ಕನ್ನಡದಲ್ಲಿ ಏಪ್ರಿಲ್ ವೇಳೆಗೆ ರಿಲೀಸ್ ಮಾಡುವ ಪ್ಲಾನ್ ಇದೆ ಎಂದರು. ಸಂಗೀತ ನಿರ್ದೇಶಕ ಆರೋಹಣ ಸುಧೀಂದ್ರ ಮಾತನಾಡಿ ಚಿತ್ರದಲ್ಲಿ ಐದು ಹಾಡುಗಳಿವೆ. ಎರಡು ಹಾಡುಗಳಿಗೆ ನಾನೇ ಸಂಗೀತ ಸಂಯೋಜನೆ ಮಾಡಿದ್ದೇನೆ. ನನ್ನ ಸಂಗೀತದ ತಾಯಿ ಹಾಡನ್ನು ಬಿ.ಆರ್. ಛಾಯಾ ಅವರು ಹಾಡಿದ್ದಾರೆ ಎಂದರು.







ಬಲರಾಮನ ದಿನಗಳಲ್ಲಿದೆ ರೆಟ್ರೋ ಕಥೆ

ಪದ್ಮಾವತಿ ಜಯರಾಮ್ ಮತ್ತು ಶ್ರೇಯಸ್ ಅವರು ಈ ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಾಣ ಮಾಡಿದ್ದಾರೆ, ಚಿತ್ರದಲ್ಲಿ ಟೈಗರ್ ವಿನೋದ್ ಪ್ರಭಾಕರ್ ಅವರ ಜತೆ ನಟಿ ಪ್ರಿಯಾ ಆನಂದ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ವಿನೋದ್ ಪ್ರಭಾಕರ ಅಭಿನಯದ 25ನೇ ಚಿತ್ರ ಇದಾಗಿರುವುದು ಈ ಚಿತ್ರದ ಮತ್ತೊಂದು ವಿಶೇಷ.

ಇತ್ತೀಚಿನ ದಿನಗಳಲ್ಲಿ ರೆಟ್ರೋ ಶೈಲಿಯ ಕಥಾಹಂದರ ಒಳಗೊಂಡ ಚಲನ ಚಿತ್ರಗಳು ಹೆಚ್ಚು ಹೆಚ್ಚು ತೆರೆಗೆ ಬರುತ್ತಿವೆ, ಅದೇ ಜಾನರ್‌ನಲ್ಲಿ ನಿರ್ಮಾಣವಾಗಿರುವ ಮತ್ತೊಂದು ಚಿತ್ರ ಬಲರಾಮನ ದಿನಗಳು, ಈಗಾಗಲೇ ತನ್ನ ಮೇಕಿಂಗ್, ಹಾಡುಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ಕುತೂಹಲವನ್ನು ಹುಟ್ಟು ಹಾಕಿರುವ ಈ ಚಿತ್ರದಲ್ಲಿ ಟೈಗರ್ ವಿನೋದ್ ಪ್ರಭಾಕರ್ ಅವರು ನಾಯಕನಾಗಿ ನಟಿಸಿದ್ದಾರೆ, ಆ ದಿನಗಳು, ಆಟಗಾರ, ಅಮ್ಮಾ ಐ ಲವ್ ಯು, ಆದ್ಯ, ಅಬ್ಬಬ್ಬಾ ಖ್ಯಾತಿಯ ನಿರ್ದೇಶಕ ಕೆ.ಎಂ.ಚೈತನ್ಯ ಅವರು ಈ ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ, ಈಗಾಗಲೇ ತನ್ನ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನೆಲ್ಲ ಮುಗಿಸಿಕೊಂಡು ಸದ್ಯದಲ್ಲೇ ಬಿಡುಗಡೆಯಾಗಲು ಸಿದ್ದವಾಗಿರುವ ಈ ಚಿತ್ರದಲ್ಲಿ ಆಕ್ಷನ್ ಸೆಂಟಿಮೆಂಟ್ ಹಾಗೂ ಹೃದಯ ತಟ್ಟುವಂಥ ಕಥೆಯನ್ನು ನಿರ್ದೇಶಕ ಚೈತನ್ಯ ಅವರು ಹೆಣೆದಿದ್ದಾರೆ, ಟಿ ಸೀರೀಸ್ ಸಂಸ್ಥೆ ಈ ಚಿತ್ರದ ಆಡಿಯೋ ಹಕ್ಕನ್ನು ಉತ್ತಮ ಮೊತ್ತ ನೀಡಿ ಖರೀದಿಸಿದೆ,

ಪದ್ಮಾವತಿ ಜಯರಾಮ್ ಮತ್ತು ಶ್ರೇಯಸ್ ಅವರು ಈ ಚಿತ್ರವನ್ನು ಬಿಗ್ ಬಜೆಟ್‌ನಲ್ಲಿ ನಿರ್ಮಾಣ ಮಾಡಿದ್ದಾರೆ, ಚಿತ್ರದಲ್ಲಿ ಟೈಗರ್ ವಿನೋದ್ ಪ್ರಭಾಕರ್ ಅವರ ಜತೆ ನಟಿ ಪ್ರಿಯಾ ಆನಂದ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ವಿನೋದ್ ಪ್ರಭಾಕರ ಅಭಿನಯದ 25ನೇ ಚಿತ್ರ ಇದಾಗಿರುವುದು ಈ ಚಿತ್ರದ ಮತ್ತೊಂದು ವಿಶೇಷ.

ಈ ಚಿತ್ರದ ಟಾಟಾ ಟಾಟಾ ಎಂಬ ಹಾಡು ಎಲ್ಲ ಕಡೆ ಸಖತ್ ವೈರಲ್ ಆಗಿದೆ. ಈ ಹಾಡಿಗೆ ತಮಿಳಿನ ಸಂತೋಷ್ ನಾರಾಯಣನ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅಲ್ಲದೆ ಅವರೇ ಹಾಡಿಗೆ ದನಿಯಾಗಿದ್ದಾರೆ ಕೂಡ, ಡಾ.ವಿ. ನಾಗೇಂದ್ರ ಪ್ರಸಾದ್ ಅವರು ಸಾಹಿತ್ಯ ರಚಿಸಿರುವ ಈ ಹಾಡಿಗೆ ಭೂಷಣ್ ಮಾಸ್ಟರ್ ಅವರು ನೃತ್ಯ ಸಂಯೋಜನೆ ಮಾಡಿದ್ದಾರೆ. ಎರಡೇ ದಿನದಲ್ಲಿ ಟಾಟಾ ಟಾಟಾ ಹಾಡು 2 ಮಿಲಿಯನ್‌ಗೂ ಹೆಚ್ಚು ವೀಕ್ಷಣೆಯಾಗುವ ಮೂಲಕ ವೈರಲ್ ಆಗಿದೆ.


ನಿರ್ದೇಶಕ ಕೆ.ಎಂ. ಚೈತನ್ಯ ಅವರು ಸಿನಿಮಾ ಕುರಿತಂತೆ ಮಾತನಾಡಿ ಇದು ಆ ದಿನಗಳು ಚಿತ್ರದ ಮತ್ತೊಂದು ಅಧ್ಯಾಯ ಎನ್ನಬಹುದು. ಎಂಭತ್ತರ ದಶಕದ ಕಲ್ಟ್ ಕ್ಲಾಸಿಕ್ ಕಥೆಯನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ, ಬಲರಾಮನ ದಿನಗಳು ಒಂದು ಕಾಲ್ಪನಿಕ ಕಥೆಯಾಗಿದ್ದು, ನನ್ನ ಕಲ್ಪನೆಯ ನಾಯಕನ ಪಾತ್ರವನ್ನು ವಿನೋದ್ ಪ್ರಭಾಕರ್ ಅವರು ತುಂಬಾ ಚೆನ್ನಾಗಿ ನಿಭಾಯಿಸಿದ್ದಾರೆ, ಚಿತ್ರವೀಗ ಬಿಡುಗಡೆಗೆ ಸಿದ್ದವಾಗಿದೆ, ರಾಜ್ಯದೆಲ್ಲಡೆ ಈಗಾಗಲೇ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿದ್ದೇವೆ, ಛಾಯಾಗ್ರಾಹಕ ಹೆಚ್‌ಸಿ. ವೇಣು ಅವರು ಆಗಿನ ಕಾಲದ ರೆಟ್ರೋ ಸನ್ನಿವೇಶಗಳನ್ನು ಸೆರೆಹಿಡಿದಿದ್ದಾರೆ. ನಿರ್ಮಾಪಕರು ತುಂಬಾ ಆಸೆಪಟ್ಟು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ಚಿತ್ರ ಗೆದ್ದರೆ ಇನ್ನೂ ಹತ್ತಾರು ಸಿನಿಮಾಗಳನ್ನು ಮಾಡುವ ಗುರಿ ಇಟ್ಟುಕೊಂಡಿದ್ದಾರೆ ಎಂದವರು ಹೇಳಿದರು.

ನಾಯಕ ನಟ ವಿನೋದ್ ಪ್ರಭಾಕರ್ ತನ್ನ ಪಾತ್ರದ ಬಗ್ಗೆ ಮಾತನಾಡುತ್ತ ಸಿನಿ ಜೀವನದ 25ನೇ ಚಿತ್ರ ನಿಜಕ್ಕೂ ವಿಶೇಷವೇ ಆಗಿದೆ, ನಾನು ಈವರೆಗೂ ಈ ಥರದ ಪಾತ್ರವನ್ನು ಮಾಡಿದ್ದಿಲ್ಲ, ಬಲರಾಮನ ಜೀವನದಲ್ಲಿ ನಡೆಯುವ ದಾಖಲೆಯಾಗುವ ದಿನಗಳು ಈ ಚಿತ್ರದಲ್ಲಿವೆ, ನನ್ನದು ಬಲರಾಮನ ಪಾತ್ರ. ಸಿನಿಮಾ ನಿಜಕ್ಕೂ ಅದ್ಭುತವಾಗಿ ಮೂಡಿ ಬಂದಿದೆ ಎಂದರು. ನಿರ್ಮಾಪಕಿ ಪದ್ಮಾವತಿ ಜಯರಾಮ್ ಮಾತನಾಡಿ ಇಂಥ ಒಳ್ಳೆ ಸಿನಿಮಾ ಮಾಡಿರುವುದಕ್ಕೆ ತುಂಬಾ ಖುಷಿ ಇದೆ. ನಮ್ಮ ಸಂಸ್ಥೆಯಿಂದ ಮುಂದಿನ ದಿನಗಳಲ್ಲಿ ಇನ್ನೂ ಹಲವಾರು ಸಿನಿಮಾಗಳನ್ನು ನಿರ್ಮಾಣ ಮಾಡುವ ಉದ್ದೇಶವಿದೆ. ಇಡೀ ಕುಟುಂಬದ ಜೊತೆ ಕುಳಿತು ನೋಡುವಂಥ ಚಿತ್ರವನ್ನು ಮಾಡಿದ್ದೇವೆ ಎಂದರು. ವಿನಯ್ ಗೌಡ, ಅರುಣ್, ಅಭಯ್ ಪುನೀತ್, ಅವಿನಾಶ್, ಅತುಲ್ ಕುಲಕರ್ಣಿ, ಆಶಿಶ್ ವಿದ್ಯಾರ್ಥಿ ಸೇರಿದಂತೆ ಹಲವಾರು ಕಲಾವಿದರು ಈ ಚಿತ್ರದಲ್ಲಿದ್ದಾರೆ.

ಕಿರಾತಕ-2 ಚಿತ್ರಕ್ಕೆ ಗಿಲ್ಲಿ ನಟ ನಾಯಕ



ಈ ವರ್ಷದ ಬಿಗ್ಬಾಸ್ ವಿಜೇತ ಗಿಲ್ಲಿನಟನಿಗೆ ಕನ್ನಡ ಚಿತ್ರರಂಗದಿಂದ ಸಾಕಷ್ಟು ಅವಕಾಶಗಳು ಹುಡುಕಿಕೊಂಡು ಬರುತ್ತಿವೆ, ಗಿಲ್ಲಿನಟ ಬಿಗ್ ಬಾಸ್ ಮನೆಯಲ್ಲಿದ್ದಾಲೇ ರಿಲೀಸಾಗಿದ್ದ ಡೆವಿಲ್ ಚಿತ್ರದಲ್ಲಿ ಅವರಿಗೆ ದೊಡ್ಡ ಪಾತ್ರವೇ ಸಿಕ್ಕಿತ್ತು. ಚಿತ್ರದಲ್ಲಿ ನಾಯಕನಟ ದರ್ಶನ್ ಅವರ ಸ್ನೇಹಿತನಾಗಿ ಚಿತ್ರದುದ್ದಕ್ಕೂ ಅವರ ಪಾತ್ರ ಕ್ಯಾರಿ ಆಗಿತ್ತು, ಇದೀಗ ಗಿಲ್ಲಿ ನಟ ಅವರಿಗೆ ಮತ್ತೊಂದು ಬಿಗ್ ಅವಕಾಶ ಲಭಿಸುವ ಕಾಲ ಸನ್ನಿಹಿತವಾಗಿದೆ, ಅವರ ಅಭಿನಯದ ಹೊಸ ಸಿನಿಮಾ ಮೂಡಿಬರುವ ಸಮಯ ಸನ್ನಿಹಿತವಾಗಿದೆ. ಇದೀಗ ಖುದ್ದು ನಟ ರಾಕಿಂಗ್ ಸ್ಟಾರ್ ಯಶ್ ಅವರೇ ಗಿಲ್ಲಿ ನಟನ ಬೆಂಬಲಕ್ಕೆ ನಿಂತಿದ್ದಾರೆ ಎಂದು ವರದಿಯಾಗಿದೆ. ಆ ಚಿತ್ರ ಬೇರಾವುದೂ ಅಲ್ಲ ಕಿರಾತಕ-2, ಈ ಹಿಂದೆ ಯಶ್ ಅವರೇ ಈ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸುತ್ತಿದ್ದರು, ಒಂದೆರಡು ದಿನಗಳ ಶೂಟಿಂಗ್ ಕೂಡ ನಡೆದಿತ್ತು, ಆದರೆ ಕಾರಣಾಂತರಗಳಿಂದ ಆ ಚಿತ್ರ ಮುಂದುವರಿಯಲಿಲ್ಲ, ಇದೀಗ ದಕ್ಷಿಣ ಭಾರತದ ಹೆಸರಾಂತ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ಸ್ ಈ ಚಿತ್ರವನ್ನು ಕೈಗೆತ್ತಿಕೊಂಡು ನಿರ್ಮಾಣ ಮಾಡುತ್ತಿದೆ ಎನ್ನಲಾಗಿದ್ದು, ಈಗಾಗಲೇ ಗಿಲ್ಲಿ ನನಟನಿಗೆ ಅಡ್ವಾನ್ಸ್ ಕೂಡ ಮಾಡಲಾಗಿದೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ, ಎಲ್ಲವೂ ಅಂದುಕೊಂಡಂತೆಯೇ ಆದರೆ ಗಿಲ್ಲಿ ನಟ ನಾಯಕನಾಗಿ ಅಭಿನಯಿಸಲಿರುವ 'ಕಿರಾತಕ-2' ಸಿನಿಮಾ ಇದೇ ವರ್ಷ ಸೆಟ್ಟೇರಲಿದೆ. ಈ ಚಿತ್ರದ ಶೀರ್ಷಿಕೆ ಬೇರೆ ಸಂಸ್ಥೆಯ ಅಡಿಯಲ್ಲಿ ನೋಂದಣಿ ಆಗಿರುವುದರಿಂದ ಅದೇ ಶೀರ್ಷಿಕೆ ಲಭ್ಯವಾಗುವುದೋ ಇಲ್ಲವೋ ಎಂಬುದು ಇನ್ನಷ್ಟೇ ತಿಳಿಯಬೇಕಾಗಿದೆ. ಚಿತ್ರಕ್ಕೆ ನಟ ಯಶ್ ಅವರ ಬೆಂಬಲ ಇರುವುದರಿಂದ 'ಕಿರಾತಕ -2 ಶೀರ್ಷಿಕೆ ದೊರೆಯಬಹುದು ಎಂಬ ವಿಶ್ವಾಸ ಚಿತ್ರತಂಡಕ್ಕಿದೆ.




ಗಿಲ್ಲಿ ನಟ ತುಂಬಾ ಶ್ರಮಪಟ್ಟು ಮೇಲೆ ಬಂದಿರುವುದರಿಂದ ಮತ್ತು ಮಂಡ್ಯ ಹಿನ್ನೆಲೆಯ ಚಿತ್ರಕಥೆ ಇದಾಗಿರುವುದರಿಂದ ಈ ಚಿತ್ರದ ಬಗ್ಗೆ ಯಶ್ ವಿಶೇಷ ಆಸಕ್ತಿ ವಹಿಸಿದ್ದಾರೆ ಎನ್ನಲಾಗಿದೆ. ಅಲ್ಲದೆ ಹೊಸ ತಲೆಮಾರಿನ ನಾಯಕ ನಟರನ್ನು ಹುಟ್ಟುಹಾಕುವ ಉದ್ದೇಶವೂ ಯಶ್ ಅವರಿಗಿದೆ ಎನ್ನಲಾಗಿದೆ. ಅದಕ್ಕಾಗಿಯೇ ಅವರು ಗಿಲ್ಲಿ ನಟನನ್ನು ಕಿರಾತಕ-2 ಚಿತ್ರದಲ್ಲಿ ನಾಯಕನನ್ನಾಗಿಸಲು ಪರೋಕ್ಷವಾಗಿ ಬೆಂಬಲ ನೀಡುತ್ತಿದ್ದಾರೆ ಎನ್ನಲಾಗಿದೆ,

ಗಿಲ್ಲಿ ನಟನ ಈ ಹೊಸ ಚಿತ್ರವು ಹಳ್ಳಿ ಹಿನ್ನೆಲೆಯಲ್ಲಿ ನಡೆಯುವ ಕಥಾಹಂದರವನ್ನು ಹೊಂದಿದ್ದು, ಗ್ರಾಮೀಣ ಪರಿಸರದಲ್ಲಿ ನಡೆಯುವ ಹಾಸ್ಯಮಯ ಪ್ರೇಮಕಥೆಯನ್ನು ಈ ಚಿತ್ರ ಹೊಂದಿದೆ. ಸಿನಿಮಾ ಕುರಿತಂತೆ ಹೆಚ್ಚಿನ ಮಾಹಿತಿ ಮುಂದಿನ ದಿನಗಳಲ್ಲಿ ಹೊರಬೀಳಲಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಹೊಸ ದಿಗಂತ
ಮೈಸೂರು
ಭಾನುವಾರ 15 ಮಾರ್ಚ್ 2026
ಗರಿಷ್ಠ 34° ಕನಿಷ್ಠ 21°

ತಪಾಸಣಾ ಶಿಬಿರ...



ಬನ್ನೂರಿನಲ್ಲಿ ರೋಟರಿ ಸಂಸ್ಥೆ, ಕಾನ್‌ಸಿಂಗ್‌ಜೀ ರಾಜ್‌ಪುರೋಹಿತ್, ಶ್ರೀ ಗೌರಿದೇವಿ, ಲಯನ್ಸ್ ಕ್ಲಬ್ ಆಫ್ ಈರೋಡ್ ಕಾವೇರಿ ಟ್ರಸ್ಟ್, ಕೊಯಮತ್ತೂರು ಕಣ್ಣಿನ ಆಸ್ಪತ್ರೆ ವತಿಯಿಂದ ಶನಿವಾರ ಕಣ್ಣಿನ ಉಚಿತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಲೋಕ್ ಅದಾಲತ್ ಸದ್ಬಳಕೆಗೆ ಕರೆ | ೨ ಯುವಜನತೆಗೆ ಖೇಲೋ ಇಂಡಿಯಾ ಸ್ಫೂರ್ತಿ | ೩ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ | ೪

ಕಿರುಸುದ್ದಿ

ಮಾ.17ರಿಂದ ರಂಗ ತರಬೇತಿ ಶಿಬಿರ

ಮೈಸೂರು: ನಗರದ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕಳೆದ 20 ದಿನಗಳಿಂದ ಆಯೋಜಿಸಿದ್ದ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಮಾ.17 ಮತ್ತು 18ರಂದು ರಂಗಾಯಣದ ಕಿರುರಂಗ ಮಂದಿರದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಮುಖ್ಯಸ್ಥ ಕೃಷ್ಣ ಜನಮನ ತಿಳಿಸಿದರು. ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.17ರಂದು ಸಂಜೆ 6.30ಕ್ಕೆ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಜವಾಬ್ದಾರಿಯುತ ನಾಗರಿಕ ವೇದಿಕೆ ಅಧ್ಯಕ್ಷ ಎಂ.ಎಫ್. ಕಲೀಂ, ಚಿಂತಕ ಮೀನಾ ಮೈಸೂರು, ಕವಿ ಡಾ.ಬಿ.ಎಸ್. ದಿನಮಣಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಅಂದಿನ ಸಭಾ ಕಾರ್ಯಕ್ರಮದ ನಂತರ ತಾವೇ ಭಿನ್ನ ಶೈಲಿಯಲ್ಲಿ ರಚಿಸಿ ನಿರ್ದೇಶಿಸಿ ರುವ ಟಿಪ್ಪು ಸುಲ್ತಾನ್ ಕುರಿತ 1 ಗಂಟೆ 10 ನಿಮಿಷ ಅವಧಿಯ ವೀರ ಸೇನಾನಿ ನಾಟಕ ಪ್ರದರ್ಶನಗೊಳ್ಳಲಿದೆ. ಇದು ಮೈಸೂರು ಹುಲಿ ಟಿಪ್ಪು ಸುಲ್ತಾನರ ಹೊಸ ಒಳಹುಗಳುಳ್ಳ, ಮುಚ್ಚಿ ಹೋಗಿರುವ ಬೆಚ್ಚನೆಯ ವಿಚಾರ ಗಳನ್ನು ಅನಾವರಣ ಗೊಳಿಸುವ ತಿಳಿಸಿದರು. ನಾಟಕವಾಗಿದೆ ಎಂದು ಹೇಳಿದರು. ಮಾ.18ರಂದು ಸಂಜೆ 6.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಹಿರಿ ವಕೀಲ ಬಾಬುರಾಜ್ ಪಲ್ಲದನ್ ಅವರು ಸಮಾರೋಪ ನುಡಿಗಳನ್ನಾಡಲಿದ್ದಾರೆ. ನಾ.ದಿವಾಕರ, ಮಧುರಾಣಿ ಮುಖ್ಯ ಅತಿಥಿಗಳಾಗಿರುವರು. ಬಳಿಕ ಬಾಬು ರಾಜ್ ಪಲ್ಲದನ್ ಅವರು ರಚಿಸಿ ಕನ್ನಡಕ್ಕೆ ಮಧುರಾಣಿ ಅವರು ಅನುವಾದಿಸಿರುವ ಮೇರಾ ಭಾರತ್ ಮಹಾನ್ ಎಂಬ ವಿಶೇಷ ನಾಟಕ ಪ್ರದರ್ಶನವಿರಲಿದೆ. ಹೆಚ್ಚಿನ ಮಾಹಿತಿಗಾಗಿ ತಮ್ಮನ್ನು ಕೃಷ್ಣ ಜನಮನ, ಮೊ. ಸಂ.: 701944 15509 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಎಸ್.ದಿನಮಣಿ ಕಲೀಂ ಹಾಜರಿದ್ದರು.

ಪ್ರತ್ಯೇಕ ರಸ್ತೆ ಅಪಘಾತ: ಇಬ್ಬರ ಮೃತು

ಮೈಸೂರು: ಎರಡು ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣಗಳಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ಮೈಸೂರು ತಾಲೂಕಿನಲ್ಲಿ ನಡೆದಿದೆ. ಎರಡು ಬೈಕ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಮೈಸೂರಿನ ದೇವಯ್ಯನಹುಂಡಿಯ ನಿವಾಸಿ, ಬಡಗಿ ವೃತ್ತಿ ಮಾಡುತ್ತಿದ್ದ ಪ್ರಸನ್ನಕುಮಾರ್ (31) ಎಂಬವರು ಮೃತಪಟ್ಟಿದ್ದಾರೆ. ಇವರು ಸಾಲುಂಡಿ ಗ್ರಾಮದಲ್ಲಿ ನಡೆದ ಹಬ್ಬದಲ್ಲಿ ಪಾಲ್ಗೊಂಡು ವಾಪಸ್ ಮನೆಗೆ ಬರುವಾಗ ರಾತ್ರಿ 11.30ರ ವೇಳೆಯಲ್ಲಿ ಎಚ್.ಡಿ.ಕೋಟೆ ರಸ್ತೆಯ ಮೈಸೂರು ಪಬ್ಲಿಕ್ ಶಾಲೆಯ ಬಳಿ ಅವರ ಬೈಕ್‌ಗೆ ಎದುರಿನಿಂದ ಬಂದ ಬೈಕ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೆಮೃತಪಟ್ಟಿದ್ದಾರೆ. ಎರಡನೇ ಪ್ರಕರಣದಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ, ವಾಜಮಂಗಲದ ನಿವಾಸಿ ಆನಂದ್ ಎಂಬವರು ಮೃತಪಟ್ಟಿದ್ದಾರೆ. ಇವರು ಮಾದಯ್ಯನಹುಂಡಿ ಗ್ರಾಮದಲ್ಲಿ ನಡೆದ ಹಬ್ಬ ಮುಗಿಸಿ ವಾಪಸ್ ಬರುವ ವೇಳೆ ಅವರ ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಎರಡೂ ಪ್ರಕರಣಗಳು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ: ವಿದ್ಯಾರ್ಥಿ ಸಾವು

ಮೈಸೂರು: ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ವಿದ್ಯಾರ್ಥಿಯೊಬ್ಬ ಸ್ಥಳದಲ್ಲೇ ಸಾವಿಗೀಡಾಗಿ ಮತ್ತೊಬ್ಬ ತೀವ್ರವಾಗಿ ಗಾಯ ಗೊಂಡಿರುವ ಘಟನೆ ಮಂಚದೇವನಹಳ್ಳಿ ಸಮೀಪ ಬಿ.ಎಂ. ರಸ್ತೆಯಲ್ಲಿ ನಡೆದಿದೆ. ನವಿಲೂರು ಗ್ರಾಮದ ಶ್ರೀನಿವಾಸ್ ಎಂಬುವರ ಪುತ್ರ ಸುಮಂತ್ (18) ಮೃತಪಟ್ಟ ವಿದ್ಯಾರ್ಥಿಯಾಗಿದ್ದು, ಟಿಬೆಟಿಯನ್ ಗುಳ್ಳೆದಹಳ್ಳ ಕ್ಯಾಂಪ್‌ನ ತೆಶಿತೆರಿಂಗ್ (70) ಗಾಯಗೊಂಡವರು. ಪಿರಿಯಾಪಟ್ಟಣ ತಾಲ್ಲೂಕಿನ ನವಿಲೂರು ಗ್ರಾಮದ ಸುಮಂತ್, ಸ್ಟೆಂಡರ್ ಪ್ಲಸ್ ಬೈಕ್‌ನಲ್ಲಿ ಕುಶಾಲನಗರದ ಸರ್ಕಾರಿ ಪಿಯು ಕಾಲೇಜಿಗೆ ಪರೀಕ್ಷೆ ಬರೆಯಲು ತೆರಳುತ್ತಿದ್ದಾಗ, ಪಿರಿಯಾಪಟ್ಟಣದಿಂದ ಕುಶಾಲನಗರ ಕಡೆಗೆ ಬರುತ್ತಿದ್ದ ಟಿಬೆಟಿಯನ್‌ರಾದ ತೆಶಿತೆರಿಂಗ್‌ರ ಸ್ಕೂಟರ್ ನಡುವೆ ಡಿಕ್ಕಿಯಾಗಿದೆ. ತೀವ್ರವಾಗಿ ಗಾಯಗೊಂಡ ಸುಮಂತ್ ಸ್ಥಳದಲ್ಲೇ ಸಾವಿಗೀಡಾದರೆ, ತೆಶಿತೆರಿಂಗ್‌ರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತನ ತಂದೆ ಬೈಲಕುಪ್ಪೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪಿಎಸ್‌ಐ ರವಿಕುಮಾರ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಡತೊರೆ ಬಳಿ ವಾಮಾಚಾರ ದಿಂದ ಕಾವೇರಿ ಕಲುಷಿತ | ಜನಾಕ್ರೋಶ

ನದಿ ಸ್ವಚ್ಛಗೊಳಿಸಿ, ಸಂರಕ್ಷಿಸಿ

ಶಿಲ್ಪ ಶ್ರೀನಿವಾಸ್

ಕೆ.ಆರ್.ನಗರ: ನದಿಗಳ ಸಂರಕ್ಷಣೆಗಾಗಿ ಹಲವು ರೀತಿಯಲ್ಲಿ ಅಭಿಯಾನಗಳು ಈಗಾಗಲೇ ಆರಂಭವಾಗಿವೆ. ನದಿಗಳ ಸ್ವಚ್ಛತೆಗಾಗಿ ಜನ ಜಾಗೃತಿ ನಡೆಯುತ್ತಿರುವ ಈ ಹೊತ್ತಿನಲ್ಲಿ ಪಟ್ಟಣದ ಹೊರ ವಲಯ ಹಳೇ ಎಡತೊರೆಯಲ್ಲಿ ಹರಿಯುವ ಕಾವೇರಿ ನದಿಗಳದಲ್ಲಿ ಮಾಟ, ಮಂತ್ರದಂತಹ ವಾಮಾಚಾರ ವಿಜೃಂಭಿಸುತ್ತಿದ್ದರೂ ಪುರಸಭೆ ಮತ್ತು ತಾಲೂಕು ಆಡಳಿತ ಇತ್ತ ಗಮನಿಸದೆ ಇರುವುದು ಅಚ್ಚರಿಯ ಸಂಗತಿಯಾಗಿದೆ.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ಅವಳಿ ತಾಲೂಕಿನಲ್ಲಿ ಹಾದು ಹೋಗಿರುವ. ಕಾವೇರಿ ನದಿ ನೀರಿನ ಮೇಲೆ ಹೆಚ್ಚು ಜನ ಅವಲಂಬಿತರಾಗಿದ್ದಾರೆ. ಕೃಷಿಗೂ ಬಳಕೆಯಾಗುತ್ತಿದೆ. ಇಂತಹ ನದಿಯ ಸ್ಥಿತಿಯನ್ನು ಒಮ್ಮೆ ನೋಡಿದರೆ ಜನ ಸಾಮಾನ್ಯರು ಬೇಸರಗೊಳ್ಳದೆ ಇರರು. ಪಟ್ಟಣದ ಹೊರ ವಲಯ ಹಳೇ ಎಡತೊರೆಯಲ್ಲಿ ಹರಿಯುವ ಕಾವೇರಿ ನದಿ ದಂಡೆಯಲ್ಲಿ ನದಿಯ ಉದ್ದಗಲಕ್ಕೂ ವಾಮಾಚಾರಕ್ಕೆ ಬಳಸುವ ಮಡಕೆ, ಕುಡಕೆ, ನಿಂಬೆಹಣ್ಣು, ಬಣ್ಣ, ಬಣ್ಣದ ಕುಂಕುಮ, ರಾಶಿ, ರಾಶಿ ಹೂ ಇತ್ಯಾದಿ ಪರಿಕರಗಳು ರಾರಾಜಿಸುತ್ತಿವೆ.

ನಮ್ಮಲ್ಲಿ ಆಧುನಿಕತೆ ಎಷ್ಟೇ ಬೆಳೆದರೂ ವಾಮಾಚಾರದಂತಹ ಕೃತ್ಯಗಳು ಮೌಢ್ಯಕ್ಕೆ ಇಂದಿಗೂ ಸಾಕ್ಷಿ ಎನ್ನುವಂತಿದೆ. ಹಳೇ ಎಡತೊರೆ ಕಾವೇರಿ ನದಿಯ ದಂಡೆಯಲ್ಲಿ ಶ್ರೀ ಮೀನಾಕ್ಷಿ ಸಮೇತ



ಅರ್ಕೇಶ್ವರ ಸ್ವಾಮಿ ದೇವಾಲಯ ಇದೆ. ನದಿಗೆ ಹೊಂದಿ ಕೊಂಡಂತೆ ಇರುವ ಕಲ್ಲಿನ ಕಂಬಗಳಿಂದ ನಿರ್ಮಾಣವಾಗಿರುವ ಮಂಟಪಗಳಲ್ಲಿ ಹಾಗೂ ಸೋಪಾನಕಟ್ಟೆ ಸೇರಿದಂತೆ ಸೇತುವೆ ಕೆಳ ಭಾಗದಲ್ಲಿ ಮಾಟ ಮಂತ್ರಕ್ಕೆ ಬಳಸುವ ನಿಂಬೆಕಾಯಿ, ಕುಂಕುಮ, ಕರ್ಪೂರ, ದೇವರ ಫೋಟೋ, ದಾರ, ಅರಿಶಿನ, ರವಿಕೆ, ತೆಂಗಿನಕಾಯಿ, ಮೆಣಸಿನಕಾಯಿಗಳೇ ರಾರಾಜಿಸುತ್ತಿವೆ. ನದಿ ಪಕ್ಕದ ಕಲ್ಲುಗಳ ಮೇಲೆ ವಿಚಿತ್ರ ಪೂಜೆಗಳು ನಡೆದಿರುವ ಕುರುಹುಗಳು ದಿನೇದಿನೆ



> ವಾಮಚಾರಕ್ಕೆ ಬಳಸುವ ಕುಡಿಕೆ, ಬಟ್ಟೆಗಳು ಸೇರಿದಂತೆ ದೇವರ ಗಾಜಿನ ಫೋಟೋಗಳನ್ನು ನದಿಗೆ ಎಸೆಯುತ್ತಿರುವುದರಿಂದ ನೀರಿನಲ್ಲಿ ಗಾಜಿನ ಚೂರುಗಳೇ ಕಾಣಸಿಗುತ್ತವೆ. ಇದೇ ರೀತಿ ಮುಂದುವರಿದರೆ ಕಾವೇರಿ ನದಿ ಕೂಡ ಕಲುಷಿತವಾಗುತ್ತದೆ. ಪುರಸಭೆ ಅಥವಾ ತಾಲೂಕು ಆಡಳಿತ ಎಚ್ಚೆತ್ತು ಗಮನ ಹರಿಸಿ.
> ■ ಜನಾರ್ಧನ್ (ಜಾನಿ), ಮುಖ್ಯ ಶಿಕ್ಷಕ

ಹೆಚ್ಚುತ್ತಿವೆ. ಪೂಜೆಗೆ ಬಳಸುವ ಸಾಮಾನುಗಳನ್ನು ನದಿಗೆ ಎಸೆಯುತ್ತಿರುವುದರಿಂದ ನದಿಯೊಡಲು ಕಲುಷಿತಗೊಂಡಿದೆ.

ಕಾವೇರಿ ನದಿಗೆ ಅಡ್ಡಲಾಗಿ ಹಾಸನ- ಮೈಸೂರು ರಸ್ತೆಗೆ ಸೇತುವೆ ನಿರ್ಮಿಸಲಾಗಿದ್ದು ಸೇತುವೆ ಕೆಳಗೆ ಕಾಣಸುತ್ತಿರುವ ವಾಮಾಚಾರದ ಸಾಮಗ್ರಿಗಳ ಸಂಖ್ಯೆ ಹೆಚ್ಚುತ್ತಿದೆ. ಪ್ರತಿದಿನ ರಾತ್ರಿ ಕತ್ತಲಾಗುತ್ತಿದ್ದಂತೆ ಬರುವ ಜನರು ಮಾಟ ಮಂತ್ರದ ಸರಕುಗಳನ್ನು ಅಲ್ಲಿ ಎಸೆಯುತ್ತಿದ್ದಾರೆ. ಕೆ.ಆರ್.ಎಸ್ ಜಲಾಶಯದಲ್ಲಿ ನೀರು ಇರುವುದರಿಂದ ಹಳೆ ಎಡತೊರೆವರಗೆ ಹಿನ್ನೀರಿನ ಸಂಗ್ರಹವಿದೆ.

ಸಮಾಜದ ಅಭಿವೃದ್ಧಿಗೆ ಹಕ್ಕುಗಳ ಅರಿವು ಅಗತ್ಯ

ಮೈಸೂರು: ಮಹಿಳೆಯರು ತಮ್ಮ ಹಕ್ಕುಗಳ ಅರಿವು ಹೊಂದುವುದು



ಕೇವಲ ಅಗತ್ಯವಲ್ಲ, ಅದು ಸಮಾಜದ ಸಮಗ್ರ ಅಭಿವೃದ್ಧಿಗೆ ಅನಿವಾರ್ಯವಾಗಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಹೇಳಿದರು.

ಶನಿವಾರ ಮೈಸೂರಿನ ಪುರಭನದಲ್ಲಿ ರಾಜ್ಯ ವಾನವ ಹಕ್ಕುಗಳ ರಕ್ಷಣಾ ಸಮಿತಿಯಿಂದ ಅಂತಾರಾಷ್ಟ್ರೀ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಏರ್ಪಡಿಸಿದ್ದ ಹುತಾತ್ಮ ಯೋಧರ ತಾಯಿಂದಿರು ಮತ್ತು ಮಡದಿಯರಿಗೆ ಅಭಿನಂದನಾ ಸವಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಹಿಳೆಯರು ಸಂಘಟಿತರಾಗಿ ತಮ್ಮ ಹಕ್ಕು ಪಡೆದುಕೊಳ್ಳಬೇಕು. ನಮ್ಮಂತಹ ಮಹಿಳೆಯರಿಗೆ ನಿಜವಾದ ಶಕ್ತಿ ಕೊಟ್ಟವರು ಅಂಬೇಡ್ಕರ್. ನಾವೆಲ್ಲರೂ ಅವರ ಮಕ್ಕಳು. ಅನ್ಯಾಯದ ವಿರುದ್ಧ ಧ್ವನಿ ಎತ್ತದಿದ್ದರೆ ಜೈ ಭೀಮ್ ಎನ್ನುವ ಪದಕ್ಕೆ ಅರ್ಥ ಇರುವುದಿಲ್ಲ ಎಂದರು.

ನಿಮ್ಮ ಹಕ್ಕು ತಿಳಿದುಕೊಳ್ಳದ ಮಹಿಳೆ ಸಾವಿಗೆ ಸವಾನ. ಒಬ್ಬ ಮಹಿಳೆಗೆ ಗಂಡ ಇಲ್ಲದೆ, ಮಕ್ಕಳು 18 ವರ್ಷಕ್ಕಿಂತ ಕಡಿಮೆ ಇದ್ದರೆ ಅವರಿಗೆ 'ಪೋಷಕತ್ವ ಯೋಜನೆ' ಇದೆ. ಸರ್ಕಾರದಿಂದ ಪೋಷಣೆಗೆ ಪ್ರತಿ ತಿಂಗಳು 4000 ಸಾವಿರ ನೀಡುತ್ತದೆ. ಇದರ ಸೌಲಭ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಪಡೆಯಬಹುದು. ಅದರಂತೆ ಜನನಿ ಶಿಶು ಸುರಕ್ಷಾ ಯೋಜನೆಯಲ್ಲಿ ಗರ್ಭಿಣಿಯರು ಮತ್ತು ನವಜಾತ ಶಿಶುಗಳಿಗೆ ಸಂಪೂರ್ಣ ಉಚಿತ ನಗದು ರಹಿತ ಚಿಕಿತ್ಸೆ (ಔಷಧಿ, ಆಹಾರ, ಸಾರಿಗೆ) ನೀಡುತ್ತದೆ ಎಂದು ತಿಳಿಸಿದರು.

ವಿಧಾನ ಪರಿಸತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಗಂಡು- ಹೆಣ್ಣು ಇಬ್ಬರೂ ಸಮಾನ. ಒಬ್ಬರಿಗೊಬ್ಬರು ಇಲ್ಲದೆ ಅಪೂರ್ಣ.

> ಅರಿವು ಬದುಕು. ಅಜ್ಞಾನ ಸಾವು. ಅರಿವು ಹೊಂದಿರುವ ಮಹಿಳೆ ಸಮಾಜದಲ್ಲಿ ಸಶಕ್ತಳಾಗುತ್ತಾಳೆ. ಕಾನೂನುಬದ್ಧ ಹಕ್ಕುಗಳ ಬಗ್ಗೆ ಜಾಗೃತಿ ಇದ್ದಾಗ ,ಮಾತ್ರ ಮಹಿಳೆಯರು ಶೋಷಣೆಯಿಂದ ಮುಕ್ತರಾಗಿ, ಸಮಾನತೆ ಸಾಧಿಸಲು ಸಾಧ್ಯ.
> ■ ನಾಗಲಕ್ಷ್ಮಿ ಚೌಧರಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

ಸಮಾಜದಲ್ಲಿ ಹಲವು ವಿಷಯದಲ್ಲಿ ಹೆಣ್ಣನ್ನು ದಮನ ಮಾಡುವ, ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಅದು ಸರಿಯಲ್ಲ ಎಂದು ಹೇಳಿದರು.

ಪ್ರತಿಯೊಬ್ಬರೂಮಹಿಳೆಯರಿಗೆಗೌರವ ನೀಡಬೇಕು. ಸಮಾಜಕ್ಕೆ ಕೊಡುಗೆ ನೀಡುವಲ್ಲಿ ಇಂದು ಪ್ರಮುಖ ಪಾತ್ರ ವಹಿಸುತ್ತಿದ್ದಾಳೆ. ಅವಳಿಗೆ ಅವಕಾಶ ಒದಗಿಸಬೇಕು. ಬೆಂಬಲ, ಸಹಕಾರ ನೀಡಬೇಕು ಎಂದರು. ಮಹಿಳೆ ತನ್ನದೆ ಆಸೆ, ಆಕಾಂಕ್ಷೆ ಹೊಂದಿರುತ್ತಾರೆ. ಅವರನ್ನು ಕುಟುಂಬಕ್ಕೆ ಮಾತ್ರ ಸೀಮಿತಗೊಳಿಸಬಾರದು. ಇದು ನಿಜವಾಗಲೂ ದೌರ್ಜನ್ಯ. ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಂಡು ಕುಟುಂಬ ನಿರ್ವಹಣೆ ಮಾಡುವ ಮೂಲಕ ತನ್ನ ಜವಾಬ್ದಾರಿ ನಿಭಾಯಿಸುತ್ತಿದ್ದಾಳೆ. ಇಂತಹ ಮಹಿಳೆಯರು ತಮ್ಮ ಹಕ್ಕು ಪಡೆದು ಕೊಳ್ಳಲು ಮುಂದಾಗಬೇಕು.

ಸಮಾರಂಭದಲ್ಲಿ ಹುತಾತ್ಮ ಯೋಧರ ತಾಯಿಂದಿರು ಮತ್ತು ಮಡದಿಯರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಆಶಾಕಾರ್ಯಕರ್ತೆಯರು,ಪೌರಕಾರ್ಮಿಕರಿಗೆ ಸೀರೆಯನ್ನು ಕೊಡುಗೆಗಿಯಾಗಿ ನೀಡಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲಾ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್ ಇದ್ದರು.

ಕೆಂಪೇಗೌಡ ವೃತ್ತ ಕಾಮಗಾರಿ ಪರಿಶೀಲಿಸಿದ ಯದುವೀರ್

ಮೈಸೂರು: ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಶ್ರೀಕಂಠ ಚಾಮರಾಜ ದತ್ತ ಒಡೆಯರ್ ಅವರು ಇಂದು ಕೆಂಪೇಗೌಡ ವೃತ್ತ (ಮಣಿಪಾಲ್ ಜಂಕ್ಷನ್) ನಲ್ಲಿ ನ್ಯಾಷನಲ್ ಹೈವೇ ಅಥರಟಿ ಆಫ್ ಇಂಡಿಯಾ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಈ ಕಾಮಗಾರಿಗೆ ಸಂಬಂಧಿಸಿದ ಅನುಮೋದನೆ 2026ರ ಜನವರಿ 19ರಂದು ನವದೆಹಲಿಯಲ್ಲಿ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಂತರ ನೀಡಲಾಗಿತ್ತು. ಅದರ ಅನ್ವಯವಾಗಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು. ಬಳಿಕ ಮಾತನಾಡಿ, ಕಾಮಗಾರಿಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಎನ್‌ಎಚ್‌ಎಐ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕಾಮಗಾರಿಗಳಿಂದ



ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಬೇಕು. ವಾರಾಂತ್ಯಗಳಲ್ಲಿ ಹೆಚ್ಚಿನ ವಾಹನ ಸಂಚಾರ ಇರುವುದರಿಂದ ಹೆಚ್ಚುವರಿ ಟ್ರಾಫಿಕ್ ಪೊಲೀಸರನ್ನು ನಿಯೋಜಿಸುವ ಬಗ್ಗೆ ಟ್ರಾಫಿಕ್ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆ. ಜತೆಗೆ ಕಾಮಗಾರಿಗಳು ಅತ್ಯುತ್ತಮ ಗುಣಮಟ್ಟದಲ್ಲಿ ನಡೆಯಬೇಕು ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದು ಹೇಳಿದರು.

ಈ ಯೋಜನೆಯಿಂದ ಈ ಜಂಕ್ಷನ್‌ನಲ್ಲಿರುವ ಟ್ರಾಫಿಕ್ ಬಾಟಲ್‌ನೇಕ್ ಸಮಸ್ಯೆ ನಿವಾರಣೆಯಾಗಲಿದೆ. ಜೊತೆಗೆ ಮೈಸೂರು?ಬೆಂಗಳೂರು ರಸ್ತೆಯ ಪ್ರವೇಶ ಹಾಗೂ ನಿರ್ಗಮನ ವ್ಯವಸ್ಥೆಯನ್ನೂ ಈ ಯೋಜನೆಯಡಿ ಸುಧಾರಿಸಲಾಗುತ್ತದೆ. ಇದರಿಂದ ಈ ರಸ್ತೆಯನ್ನು ಬಳಸುವ ಎಲ್ಲಾ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

ಎನ್‌ಎಚ್‌ಎಐ ಯೋಜನಾ ನಿರ್ದೇಶಕರು, ಮಹಾನಗರ ಪಾಲಿಕೆಯ ಇಂಜಿನಿಯರ್ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳು ಉಪಸ್ಥಿತರಿದ್ದರು.

ಸಾಲದ ಆಮಿಷ: 25 ಲಕ್ಷ ರೂ. ವಂಚನೆ

ಮೈಸೂರು: ಸಾಲವಾಗಿ ನಿಮಗೆ 25 ಕೋಟಿ ರೂ. ನೀಡುತ್ತೇವೆ ಎಂದು ವ್ಯಕ್ತಿಯೊಬ್ಬರನ್ನು ನಂಬಿಸಿದ ಖದೀಮರು, ಅವರಿಂದ ಛಾಪಾ ಕಾಗದದ ಶುಲ್ಕವೆಂದು 25 ಲಕ್ಷ ರೂ. ಪಡೆದು ವಂಚಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಹುಬ್ಬಳ್ಳಿಯ ಹರ್ಷ ವಂಚನೆಗೆ ಒಳಗಾದವರು. ಈ ಸಂಬಂಧ ಅವರು ಮೈಸೂರು ತಾಲ್ಲೂಕಿನ ಕೊಪ್ಪಲೂರು ಬಳಿಯ ಲೇಕ್ ವ್ಯೂ ಬಡಾವಣೆ ನಿವಾಸಿ ನಾರಾಯಣಶೆಟ್ಟಿ, ಕಾರ್ತಿಕ್, ಯಶವಂತಶೆಟ್ಟಿ, ಪ್ರವೀಣ್, ದೀಪಕ್ ಎಂಬವರ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ. ಧಾರವಾಡದ ಹೋಟೆಲ್ ಮೊಂದರಲ್ಲಿ ಹರ್ಷ ಅವರಿಗೆ ಯಶ ವಂತಶೆಟ್ಟಿ ಹಾಗೂ ಪ್ರವೀಣ್ ಎಂಬವರು, ನಾವು ಕಡಿಮೆ ಬಡ್ಡಿ ದರದಲ್ಲಿ ಕೈ ಸಾಲ ಕೊಡಿಸುವವರು ಎಂದು ಪರಿಚಯಿಸಿಕೊಂಡಿದ್ದಾರೆ.

ನಂತರ ನೀವು ಮೈಸೂರಿಗೆ ಬಂದರೆ, ಹಣಕಾಸಿನ ವಿಚಾರ ಮಾತನಾಡಬಹುದು ಎಂದು ಹೇಳಿದ್ದಾರೆ. ಅವರ ಮಾತನ್ನು ನಂಬಿದ ಹರ್ಷ, ಮೈಸೂರಿನ ಖಾಸಗಿ ಹೋಟೆಲ್ ಮೊಂದಕ್ಕೆ ಬಂದು ಉಳಿದುಕೊಂಡಿದ್ದಾರೆ. ಈ ವೇಳೆ ಅಲ್ಲಿಗೆ ಬಂದ ಯಶವಂತ್ ಹಾಗೂ ಪ್ರವೀಣ್ , ಹರ್ಷರನ್ನು ಕೊಪ್ಪಲೂರಿನ ಲೇಕ್ ವ್ಯೂ ಬಡಾವಣೆಯ ಮನೆಯೊಂದಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಇದ್ದ ನಾರಾಯಣ ಶೆಟ್ಟಿಗೆ ಪರಿಚಯ ಮಾಡಿಕೊಟ್ಟಿ ದ್ದಾರೆ. ನಂತರ 25 ಕೋಟಿ ರೂ. ಹಣವನ್ನು ಸಾಲವಾಗಿ ನೀಡಲು ಒಪ್ಪಿದ್ದಾರೆ. ಈ ಸಂಬಂಧ ಪತ್ರ ಮಾಡಿಸಬೇಕು ಎಂದು ಹೇಳಿ ಒಂದು ಕೋಟಿ ರೂ.ಗೆ, ಒಂದು ಲಕ್ಷ ರೂ. ಛಾಪಾ ಕಾಗದ ಖರೀದಿಸಬೇಕು ಎಂದು ಹೇಳಿದ್ದಾರೆ. ಅವರ ಮಾತನ್ನು ನಂಬಿದ ಹರ್ಷ 25 ಕೋಟಿ ರೂ. ಸಾಲ ಪಡೆಯಬಹುದು ಎಂಬ ಆಸೆಯಿಂದ 25 ಲಕ್ಷ ರೂ. ನೀಡಿದ್ದಾರೆ. ನಂತರ ಆರೋಪಿಗಳು ತಾವು ಕೊಡಬೇಕಾದ ಹಣವನ್ನು ನಿಮ್ಮ ಮನೆಗೆ ತಲುಪಿಸುತ್ತೇವೆ ಎಂದು ಹೇಳಿ ಹರ್ಷ ಅವರನ್ನು ವಾಪಸ್ ಕಳುಹಿಸಿದ್ದಾರೆ. ಆದರೆ, ಸುಮಾರು ಒಂದು ತಿಂಗಳಾದರೂ ಹಣ ಮಾತ್ರ ಹರ್ಷ ಕೈ ಸೇರಲಿಲ್ಲ. ಹೀಗಾಗಿ ಅವರು ಮೈಸೂರಿಗೆ ಬಂದು ನಾರಾಯಣಶೆಟ್ಟಿ ಮನೆಗೆ ತೆರಳಿದ್ದಾರೆ. ಆದರೆ, ಆರೋಪಿಗಳೆಲ್ಲರೂ ಮನೆಯನ್ನು ಖಾಲಿ ಮಾಡಿದ್ದರು. ಇದರಿಂದ ಹರ್ಷ ಅವರಿಗೆ ತಾವು ಮೋಸ ಹೋಗಿರುವುದು ಗೊತ್ತಾಗಿ. ಅವರು ಕೂಡಲೇ ದಕ್ಷಿಣ ಗ್ರಾಮಾಂತರ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಥಮ ಚಿಕಿತ್ಸೆ ವೈದ್ಯಕೀಯ ಸೀಮಿತವಲ್ಲ: ಡಾ.ರಶ್ಮಿ

ಮೈಸೂರು: ಪ್ರಥಮ ಚಿಕಿತ್ಸೆ ನೀಡುವ ಜವಾಬ್ದಾರಿ ವೈದ್ಯಕೀಯ ವೃತ್ತಿಪರರಿಗೆ ಮಾತ್ರ ಸೀಮಿತವಲ್ಲ ಎಂದು ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ರಶ್ಮಿ ಪಿ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ವತಿಯಿಂದ ವಿದ್ಯಾರ್ಥಿನಿಯರಿಗೆ ಆಯೋಜಿಸಲಾಗಿದ್ದ ಒಂದು ದಿನದ ಪ್ರಥಮ ಚಿಕಿತ್ಸೆ ಪ್ರಾಯೋಗಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಪ್ರಥಮ ಚಿಕಿತ್ಸೆಯ ಜವಾಬ್ದಾರಿ ಕೇವಲ ವೈದ್ಯಕೀಯ ಕ್ಷೇತ್ರದವರಿಗೆ ಮಾತ್ರ ಸೀಮಿತವಲ್ಲ, ಪ್ರತಿಯೊಬ್ಬ ನಾಗರಿಕರು ಪ್ರಥಮ ಚಿಕಿತ್ಸಾ ಪ್ರಕ್ರಿಯೆಯನ್ನು ತಿಳಿದುಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳೇ ಸಮಾಜಕ್ಕೆ ಮಾದರಿಯಾಗಿ



ಸಾಲಿಗ್ರಾಮ: ಹಲವುದಾನಿಗಳು ಮತ್ತು ಹಿರಿಯರ ಶ್ರಮದಿಂದ ನಿರ್ಮಾಣವಾಗಿ ಉತ್ತಮ ಹೆಸರುಗಳಿಸಿರುವ ಮಿಥಿಲಾ ವಿದ್ಯಾಸಂಸ್ಥೆಯಲ್ಲಿ ಉತ್ತಮ ವ್ಯಾಸಂಗಮಾಡಿ ಉನ್ನತದರ್ಜೆಯಲ್ಲಿ ತೇರ್ಗಡೆಯಾಗಿ ಸಮಾಜದಲ್ಲಿ ಉನ್ನತಸ್ಥಾನಕ್ಕೆ ಏರಿ ನೀವು ಸಹ ಇಲ್ಲದವರಿಗೆ ಒಂದಷ್ಟು ದಾನ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗಿ ಬದುಕು ನಡೆಸುವಂತೆ ಮಿರ್ಲೆಯ ಮಿಥಿಲಾ ವಿದ್ಯಾಸಂಸ್ಥೆ ಕಾರ್ಯದರ್ಶಿ ಎಂ.ಬಿ.ಲೋಕ್‌ನಾಥ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮಿರ್ಲೆಯಲ್ಲಿರುವ ಸಂಸ್ಥೆ ಆವರಣದಲ್ಲಿ ಏರ್ಪಡಿಸಲಾಗಿದ್ದ ಮಿಥಿಲಾಫೆಸ್ಟ್ ಹಾಗೂ ಶಾರದಾಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಹಿತವಚನಗಳನ್ನು ನುಡಿದರು. ಸಂಸ್ಥೆಯು ಆಂಗ್ಲ ಮತ್ತು ಕನ್ನಡಮಾದ್ಯಮದಲ್ಲಿ ಪ್ರತಿವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಶೇ100% ಸಾಧನೆ ಮಾಡುವಮೂಲಕ ಈ ಭಾಗದಲ್ಲಿ ಸಂಸ್ಥೆ ಉತ್ತಮ ಹೆಸರುಗಳಿಸಿದ್ದು ಸಂಸ್ಥೆಯ ಆಡಳಿತಮಂಡಳಿ ಹಿರಿಯರು ಹಾಕಿಕೊಟ್ಟಮಾರ್ಗದಲ್ಲಿ ಕೆಲಸ ಮಾಡುತ್ತಿರುವುದರಿಂದ ಹಾಗೂ ಸಂಸ್ಥೆಯ ಶಿಕ್ಷಕ-ಶಿಕ್ಷಕಿಯರ ಶ್ರಮದಿಂದ ವ್ಯಾಸಂಗದಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕದೊಂದಿಗೆ ಯಶಸಾಧಿಸಲು ಸಾಧ್ಯವಾಗಿದೆ ಎಂದರು.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಉತ್ತಮಸಂಸ್ಕಾರ ಕಲಿಯುವಂತೆ ಸಲಹೆನೀಡಿದ ಲೋಕ್‌ನಾಥ್ ಶಿಕ್ಷಣ ಎಷ್ಟುಮುಖ್ಯವೋ ಸಂಸ್ಕಾರಮೂ ಸಹ ಅಷ್ಟೆಮುಖ್ಯವಾಗಿದ್ದು ಶಿಕ್ಷಕರು ಕಲಿಸಿದ ಪಾಠದೊಂದಿಗೆ ಅವರ ನಡೆನುಡಿಗಳನ್ನು ಅಳವಡಿಸಿಕೊಂಡು ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಗುರಿ ತಲುಪುವಂತೆ ಕಿವಿಮಾತು ಹೇಳಿದರು.

ಮುಖ್ಯಶಿಕ್ಷಕಿ ಎಂ.ಎನ್.ಅಭಿಲಾಷ, ಮಂಜುನಾಥಕಮತಳ್ಳಿ, ಎಲ್.ಸೀಮಾ ಮಾತನಾಡಿ, ವಿದ್ಯಾರ್ಥಿಗಳಿಗೆ ಮನೆಯೆ ಮೊದಲ ಪಾಠಶಾಲೆ ಎನಿಸಿದರೂ ಹೆಚ್ಚಿನ ಸಮಯ ಶಾಲೆಯಲ್ಲಿಯೆ ಕಳೆಯುವುದರಿಂದ ಪೋಷಕರ ಸಲಹೆಯೊಂದಿಗೆ ಶಿಕ್ಷಕರ ಮಾರ್ಗದರ್ಶನದಲ್ಲಿ ಇಷ್ಟಪಟ್ಟು ವ್ಯಾಸಂಗಮಾಡಿದಲ್ಲಿ ಎಸ್‌ಎಸ್‌ಎಲ್‌ಸಿಯಿಂದ ಹಿಡಿದು ಯಾವುದೆಪದವಿಯ ವ್ಯಾಸಂಗ ಕಬ್ಬಿಣದ ಕಡಲೆ ಏನಲ್ಲ ಎಂದು ಹೇಳಿದರು.

ಮಿಥಿಲಾಸಂಸ್ಥೆಯ ಅಧ್ಯಕ್ಷ ಎಂ.ಕೆ.ಜಯರಾ, ಉಪಾಧ್ಯಕ್ಷ ಎಂ.ವಿ.ವೆಕಟೇಶ್ ಮತ್ತಿತರರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಸಂಸ್ಥೆಯ ನಿರ್ದೇಶಕ ನಟಶೇಖರಾಚಾರ್ ಹಾಗೂ ಶಾಲಾ ಶಿಕ್ಷಕ-ಶಿಕ್ಷಕಿಯರು ಸಿಬ್ಬಂದಿ ವರ್ಗ, ಪೋಷಕರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಇದೇ ಸಂಧರ್ಭದಲ್ಲಿ ಶಾಲಾಮಕ್ಕಳಿಂದ ಸಾಂಸ್ಕೃತಿಕ ಮತ್ತು ಮನರಂಜನೆ ವಿವಿಧ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ರಾಜ್ಯಮಟ್ಟದ ಸಂಗೀತ ಸ್ಪರ್ಧೆ

ಸಹಪಠ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ

ಮೈಸೂರು: ವಿದ್ಯಾರ್ಥಿಗಳು ಕೇವಲ ಪಠ್ಯಕಷ್ಟೇ ಸೀಮಿತವಾಗದೆ ಸಹಪಠ್ಯ ಚಟುವಟಿಕೆಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಅರಸು ವಂಶಸ್ಥ ಹರೀಶ್ ಕಾಂತರಾಜ್ ಅರಸ್ ಹೇಳಿದರು.

ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಶೀಮತಿ ಎಂ. ಜಯಲಕ್ಷ್ಮಮ್ಮಣಿ ಸ್ಮಾರಕ ರಾಜ್ಯಮಟ್ಟದ ಅಂತರ ಕಾಲೇಜು ಸಂಗೀತ ಸ್ಪರ್ಧೆ ಮತ್ತು ಶ್ರೀ ಸಣ್ಣೇಗೌಡ ಸ್ಮಾರಕ ಜಿಲ್ಲಾಮಟ್ಟದ ಕನ್ನಡ ಚರ್ಚಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಅಂತಾರಾಷ್ಟ್ರೀಯ ಗಾಯಕಿ ಅರ್ಪಿತ ವೇಣು ಮಾತನಾಡಿ, ಕಾಲೇಜು ಹಂತದಲ್ಲಿ ನಾವು ಸ್ಪರ್ಧಿಸುವ ಇಂತಹ ಒಂದೊಂದು ಸ್ಪರ್ಧೆಗಳೇ ನಮ್ಮ ಸಾಧನೆಯ ಮೆಟ್ಟಿಲುಗಳು ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾ ನುಡಿಗಳನ್ನಾಡಿದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಸಾಂಸ್ಕೃತಿಕ ವೇದಿಕೆಯ ಸಂಚಾಲಕ ಡಾ. ಭಾಸ್ಕರ್ ಕೆ ಎಸ್, ಜಯಲಕ್ಷ್ಮಮ್ಮಣ್ಣಿ ಸಂಗೀತ ಸ್ಪರ್ಧೆ ಹಾಗೂ ದಿವಂಗತ ಸಣ್ಣೇಗೌಡ ಕನ್ನಡ ಚರ್ಚಾಸ್ಪರ್ಧೆ ನಡೆದು ಬಂದ ಇತಿಹಾಸವನ್ನು ತಿಳಿಸಿ, ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಂಡು ವಿದ್ಯಾರ್ಥಿಗಳು



ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಇದು ಸೂಕ್ತವಾದ ವೇದಿಕೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಅನಿತಾ ಕಾಲೇಜಿನ ಸಾಧನೆಯ ಹಾದಿಯನ್ನು ಸ್ಮರಿ ಸುತ್ತಾ, ವಿದ್ಯಾರ್ಥಿನಿಯರು ಸರ್ವತೋಮುಖ ಅಭಿವೃದ್ಧಿಗಾಗಿ ಹೇಗೆ ಶ್ರಮಿಸಬೇಕು, ಪಠ್ಯದ ಜೊತೆಗೆ ಪಠ್ಯೇತರ ಟುವಟಿಕೆಗಳಲ್ಲಿ ತಮ್ಮನ್ನು ತಾವು ಹೇಗೆ ತೊಡಗಿಸಿಕೊಳ್ಳುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿವರಾಂಪೇಟೆ ಎಸ್‌ಬಿಐ ಶಾಖೆಯ ವ್ಯವಸ್ಥಾಪಕಸಿ.ಆರ್.ಹೇಮಂತ್‌ಕುಮಾರ್, ಖಜಾಂಚಿ ಡಾ.ನಾಗವೇಣಿ ಟಿ, ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ವೆಂಕಟೇಶ್ ಕೆ, ವಿದುಷಿ ಕೆ ಎನ್ ಶಾರದಾಂಬ, ಚಲನಚಿತ್ರ ನಟ ಹಾಗೂ ನಿರ್ದೇಶಕ ಅನಿಶ್, ಪ್ರೊ. ರಾಘವೇಂದ್ರ ಬ್ರ್ಜೆ, ಡಾ. ನಂಜುಂಡಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕಾಲೇಜಿನ ಎಲ್ಲಾ ಅಧ್ಯಾಪಕರು ಆಡಳಿತ ವಿಭಾಗದವರು ಉಪನ್ಯಾಸಕರು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದರು. ಸ್ಪರ್ಧೆಗಳಲ್ಲಿ ರಾಜ್ಯದ 23 ಕಾಲೇಜುಗಳ ಸುಮಾರು 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ಮಹೇಶ್ ಎನ್ ಅರಸ್, ಇವರು ಸಮಾರೋಪ ಸಮಾರಂಭದಲ್ಲಿ ಮುಖ್ಯ

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ರಂಗಪ್ಪ ಅಭಿಪ್ರಾಯ

ಕೆಂಗಲ್ ಹನುಮಂತಯ್ಯ ನಿಷ್ಠವಂತ ರಾಜಕಾರಣಿ

ಮೈಸೂರು: ಮಾಜಿ ಮುಖ್ಯಮಂತ್ರಿ, ಕೆಂಗಲ್ ಹನುಮಂತಯ್ಯ ಅವರು ರಾಷ್ಟ್ರ, ರಾಜ್ಯ ಕಂಡ ಅಪರೂಪದ ಪ್ರಾಮಾಣಿಕ, ನಿಷ್ಠಾವಂತ, ಸರಳ ವ್ಯಕ್ತಿತ್ವದ ರಾಜಕಾರಣಿಯಾಗಿದ್ದರು ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ ಹೇಳಿದರು.

ಶನಿವಾರ ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಕರ್ನಾಟಕ ಸೇನಾ ಪಡೆ ವತಿಯಿಂದ ಏರ್ಪಡಿಸಿದ್ದ ಕೆಂಗಲ್ ಹನುಮಂತಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಖಂಡ ಕರ್ನಾಟಕ ರಚನೆ ಮಾಡುವುದರಲ್ಲಿ ಇವರ ಪಾತ್ರ ಪ್ರಮುಖವಾದದ್ದು. ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಮದ್ರಾಸ್ ಕರ್ನಾಟಕ ಎಲ್ಲವನ್ನು ಮೈಸೂರು ಪ್ರಾಂತ್ಯಕ್ಕೆ ಒಗ್ಗೂಡಿಸಿ, ಇತಿಹಾಸ ನಿರ್ಮಿಸಿದರು. ಕೆಂಗಲ್ ಹನುಮಂತಯ್ಯ ರವರ ತತ್ವ ಆದರ್ಶಗಳನ್ನು ನಾವು ಗಳೆಲ್ಲರೂ ಅಳವಡಿಸಿಕೊಳ್ಳಬೇಕು. ಇವರ ಜಯಂತಿಯನ್ನು ಸರ್ಕಾರ ಜಿಲ್ಲಾಡಳಿತದ ವತಿಯಿಂದ ಆಚರಣೆ ಮಾಡಬೇಕು ಎಂದರು.



ಕಾರ್ಯಕ್ರಮದಲ್ಲಿ ಒಂಬತ್ತು ವಿವಿಧ ಕ್ಷೇತ್ರಗಳ ಸಾಧಕರಿಗೆ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಅವರು ಶ್ರೀ ಕೆಂಗಲ್ ಹನುಮಂತಯ್ಯ ರವರ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಿದರು.

ನಂತರ ಆಶೀರ್ವಚನ ನೀಡಿದ ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಮಾತನಾಡಿ, ದೇಶದಲ್ಲೇ ಎಲ್ಲೂ ಇಲ್ಲದ ಭವ್ಯ ವಿಧಾನ ಸೌಧವನ್ನು ನಿರ್ಮಿಸಿರುವ ಕೆಂಗಲ್ ಹನುಮಂತಯ್ಯನವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಸಿಜಿ ಗಂಗಾಧರ್, ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ ರಂ ಶ್ರೀನಿವಾಸ ಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೆ ಎನ್ ನಾಗೇಗೌಡ, ಪ್ರಭುಶಂಕರ, ಕೃಷ್ಣಪ್ಪ, ಪ್ರಜೀಶ್, ಹನುಮಂತಯ್ಯ, ನೇಹಾ, ಭಾಗ್ಯಮ್ಮ, ಅಂಬಾ ಅರಸ್, ಸುಜಾತಾ, ಕೆಪಿ ನಾಗಣ್ಣ, ರಾಧಾಕೃಷ್ಣ, ಪ್ರಭಾಕರ್, ಶಿವರಾಂ, ನಾರಾಯಣ ಗೌಡ, ತ್ಯಾಗರಾಜ್ ಉಪಸ್ಥಿತರಿದ್ದರು.

ಕಿರುಸುದ್ದಿ

ಚಾಮುಂಡೇಶ್ವರಿದರ್ಶನ ಪಡೆದ ಒಡಿಶಾ ಶಾಸಕರ

ಮೈಸೂರು: ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಪರೇಷನ್ ಕಮಲದ ಭೀತಿಯಿಂದ ಕರ್ನಾಟಕಕ್ಕೆ ಆಗಮಿಸಿ ಬಿಡದಿಯ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ಕಾಂಗ್ರೆಸ್ ಶಾಸಕರು ಶನಿವಾರ ನಾಡ ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು, ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆಯನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. ಬಿಡದಿಯಿಂದ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮೈಸೂರಿಗೆ ಆಗಮಿಸಿದ ಒಡಿಶಾದ ಕಾಂಗ್ರೆಸ್ ಶಾಸಕರು, ಮೊದಲು ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಯ ದರ್ಶನ ಪಡೆದರು. ಬಳಿಕ ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆಯನ್ನು ವೀಕ್ಷಿಸಿ, ಅದರ ಸೊಬಗನ್ನು ಕಣ್ತುಂಬಿಕೊಂಡರು.
ಈ ಸಂದರ್ಭದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಒಡಿಶಾದ ಕಾಂಗ್ರೆಸ್ ಶಾಸಕರೊಬ್ಬರು, ನಾವು ಅರಮನೆ ನೋಡಲು ಮಾತ್ರ ಬಂದಿದ್ದೇವೆ ಎಂದು ತಿಳಿಸಿದರು.

ಸಿಇಟಿಗೆ ಉಚಿತ ತರಬೇತಿ ಕಾರ್ಯಕ್ರಮ

ಮೈಸೂರು: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ) ಮೈಸೂರು ವಿಭಾಗದ ವತಿಯಿಂದ ಮೈಸೂರಿನ ಸುಣ್ಣದಕೇರಿಯಲ್ಲಿರುವ ಸಂಸ್ಕೃತಿ ಎಬಿವಿಪಿ ಕಾರ್ಯಾಲಯದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಾಗಿ ಉಚಿತ ಸಿ.ಇ.ಟಿ ತರಬೇತಿ ಆಯೋಜಿಸಲಾಗಿದೆ. ಈ ತರಬೇತಿ ಕಾರ್ಯಕ್ರಮವು ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದ ಹಾಗೂ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಿ.ಇ.ಟಿ ಪರೀಕ್ಷೆಗೆ ಸಮರ್ಪಕವಾಗಿ ಸಿದ್ಧರಾಗಲು ಸಹಾಯ ಮಾಡುವ ಉದ್ದೇಶದಿಂದ ನಡೆಸಲಾಗುತ್ತಿದೆ. ಇಂದಿನ ಸ್ಪರ್ಧಾತ್ಮಕ ಶಿಕ್ಷಣ ವ್ಯವಸ್ಥೆಯಲ್ಲಿ ಅನೇಕ ವಿದ್ಯಾರ್ಥಿಗಳು ಆರ್ಥಿಕ ಸಮಸ್ಯೆಗಳ ಕಾರಣದಿಂದ ಉತ್ತಮ ತರಬೇತಿ ಪಡೆಯಲು ಸಾಧ್ಯವಾಗದೆ ಹಿಂದುಳಿಯುತ್ತಿದ್ದಾರೆ. ಇಂತಹ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಒದಗಿಸಲು ಈ ಉಚಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
ಈ ತರಬೇತಿಯ ಮೂಲಕ ವಿದ್ಯಾರ್ಥಿಗಳಿಗೆ ಸಿ.ಇ.ಟಿ. ಪರೀಕ್ಷೆಗೆ ಅಗತ್ಯವಾದ ವಿಷಯವಾರು ಮಾರ್ಗದರ್ಶನ, ಪರೀಕ್ಷಾ ತಯಾರಿ ವಿಧಾನಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಸಮಗ್ರ ಮಾಹಿತಿ ನೀಡಲಾಗುತ್ತದೆ. ಅನುಭವ ಹೊಂದಿದ ಉನ್ನತ ಶ್ರೇಣಿಯ ಪ್ರಾಧ್ಯಾಪಕರು ಹಾಗೂ ವಿಷಯ ತಜ್ಞರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ ಎಂದು ಎಬಿವಿಪಿಯ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ನಂ 8088068711, 9606962515, 7975116531, 8431626898ನ್ನು ಸಂಪರ್ಕಿಸಬೇಕೆಂದು ತಿಳಿಸಲಾಗಿದೆ.

ಮಾ.18ರಂದು ಆಯವ್ಯಯ ಸಭೆ

ಚಾಮರಾಜನಗರ: ಚಾಮರಾಜನಗರ ನಗರಸಭೆಯ 2025-26ನೇ ಸಾಲಿನ ಪರಿಷ್ಕೃತ ಹಾಗೂ 2026-27ನೇ ಸಾಲಿನ ಅಂದಾಜು ಆಯ-ವ್ಯಯ ಸಭೆಯನ್ನು ಜಿಲ್ಲಾಧಿಕಾರಿ ಹಾಗೂ ನಗರಸಭೆಯ ಆಡಳಿತಾಧಿಕಾರಿಗಳಾದ ಶ್ರೀರೂಪ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 18ರಂದು ಮಧ್ಯಾಹ್ನ 2 ಗಂಟೆಗೆ ನಗರಸಭೆ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪೌರಾಯುಕ್ತರಾದ ಪರಶುರಾಮ್ ಛಲವಾದಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಬಾಕಿಗೆ ಬೆಂಬಲ ಬೆಲೆ ಘೋಷಿಸಲು ಒತ್ತಾಯ

ಮೈಸೂರು: ಜಿಲ್ಲೆಯಲ್ಲಿ ತಂಬಾಕು ಬೆಳೆಗಾರರು ಸಂಕಷ್ಟಕ್ಕೀಡಾಗಿರುವುರಿಂದ ರಾಜ್ಯಸರ್ಕಾರ ಪ್ರತಿ ಕೆಜಿಗೆ 30ರಿಂದ 40ರೂಪಾಯಿ ಬೆಂಬಲ ಘೋಷಿಸಲು ಮುಂದಾಗಬೇಕು ಎಂದು ಜೆಡಿಎಸ್ ಕಾರ್ಯಾಧ್ಯಕ್ಷರಾದ ಮಾಜಿ ಸಚಿವ ಸಾ.ರಾ.ಮಹೇಶ್,ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು .
ಶನಿವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಣಸೂರು,ಪಿರಿಯಾಪಟ್ಟಣ, ಕೆ.ಆರ್.ನಗರ,ಎಚ್.ಡಿ.ಕೋಟೆ,ಅರಕಲಗೂಡು ತಾಲ್ಲೂಕುಗಳಲ್ಲಿ ತಂಬಾಕು ಬೆಳೆದರೂ ಹುಣಸೂರು,ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಅತಿ ಹೆಚ್ಚು ತಂಬಾಕು ಬೆಳೆಯಲಾಗುತ್ತಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ನೇಹಿತರು ಐಟಿಸಿ ಕಂಪನಿಗೆ ಮುತ್ತಿಗೆ ಹಾಕಿ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಮಾತನಾಡಿದ್ದಾರೆ. ರಾಜ್ಯದಲ್ಲಿ ನೀರಾವರಿ,ರೈತರ ಸಮಸ್ಯೆ,ತಂಬಾಕು ಬೆಳೆಗಾರರ ಸಮಸ್ಯೆ ಉಂಟಾದರೆ ಪ್ರತಿಬಾರಿಯೂ ಸ್ಪಂದಿಸುವುದು ಎಚ್.ಡಿ.ದೇವೇಗೌಡರ ಕುಟುಂಬ ಎನ್ನುವುದನ್ನು ಮರೆಯಬಾರದು ಎಂದು ತಿರುಗೇಟು ನೀಡಿದರು. ಮೈಸೂರು ಭಾಗದಲ್ಲಿ ಬೆಳೆಯುವ ತಂಬಾಕು ಬೇರೆ ಕಡೆ ಸಿಗಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ಅವಕಾಶ ನೀಡಿದರೆ ಬೆಲೆ ಹೆಚ್ಚಳವಾಗಲಿದೆ. ಕೇಂದ್ರಸಚಿವರು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ಕ್ರಮವಹಿಸಿದಷ್ಟು ಬೆಲೆ ಜಾಸ್ತಿ ಸಿಗಲಿದೆ ಎಂದರು. ಸಮಸ್ಯೆ ನಿವಾರಣೆಗೆ ಕೇಂದ್ರಸರ್ಕಾರ ಎಲ್ಲಾ ರೀತಿಯ ಕ್ರಮಕೈಗೊಳ್ಳುತ್ತಿರುವುದನ್ನು ಎಲ್ಲರೂ ನೋಡುತ್ತಿದ್ದಾರೆ.



ಕೊಳ್ಳೇಗಾಲ ತಾಲೂಕಿನ ಕಂಚಗಳ್ಳಿ ಗ್ರಾಮದಲ್ಲಿ ಶನಿವಾರ ಪೈಪ್ ಲೈನ್ ಅಳವಡಿಸುವುದು, ಕಾಲುವೆ ಅಭಿವೃದ್ಧಿ ಕಾಮಗಾರಿಗೆ ಹನೂರು ಶಾಸಕ ಎಂ.ಆರ್.ಮಂಜುನಾಥ್ ಚಾಲನೆ ನೀಡಿದರು.

ಸಿದ್ದಪ್ಪಾಜಿ ಕೊಂಡೋತ್ಸವ

ಗುಂಡ್ಲುಪೇಟೆ: ಪರಂಪರೆಯ ಪವಾಡ ಪುರುಷ ಜನನಿಲ್ಲಿ ಸಿದ್ದಪ್ಪಾಜಿಯವರ ಕೊಂಡೋತ್ಸವ ಬಹಳ ವೈಭವದಿಂದ ಜರಗಿತು.
ಕರ್ನಾಟಕದ ಅನೇಕ ತಾಲೂಕುಗಳಿಂದ ಅದರಲ್ಲೂ ಹೆಚ್ಚಾಗಿ ಚಾಮರಾಜನಗರ ಜಿಲ್ಲೆಯ ಅನೇಕ ತಾಲೂಕುಗಳಿಂದ ತಮಿಳುನಾಡಿನ ನೀಲಗಿರಿ ಜಿಲ್ಲೆಯ ಗೂಡಲೂರು ತಾಲೂಕಿನ ಅವನ್ ಡೀಲ್ ಎಸ್ಟೇಟ್ ನಲ್ಲಿ ನೆಲೆಸಿರುವ ಕನ್ನಡಿಗರು ಬಹಳ ವಿಜೃಂಭಣೆಯಿಂದ ಘನನೀಲಿ ಸಿದ್ದಪ್ಪಾಜಿಯವರ ಕೊಂಡೋತ್ಸವವನ್ನು ನೆರವೇರಿಸಿದರು.
ಹೆಸರಿಗಷ್ಟೇ ತಮಿಳುನಾಡು ಎಂದರೆ ಅಲ್ಲಿರುವ ಕನ್ನಡಿಗರೇ ಈ ಹಬ್ಬವನ್ನು ವಿಜೃಂಭಣೆಯಿಂದ ನಡೆಸಿದರು ಹಬ್ಬಕ್ಕೆ ಹನೂರು ತಾಲೂಕಿನ ಲೋಕನಹಳ್ಳಿ ಗ್ರಾಮದ ಬಹಳಷ್ಟು ಮಂದಿ ತೆರಳಿದ್ದರು. ಈ ವೇಳೆ ಅವನ್ಡೀಲ್ ಸ್ಟೇಟ್ ನಲ್ಲಿ ಜರುಗಿದ ಸಿದ್ದಪ್ಪಾಜಿ ಕೊಂಡೋತ್ಸ ವಕ್ಕೆ ವಿಶೇಷವಾಗಿ ಮುಸ್ಲಿಂ ಬಾಂಧವರು, ಕ್ರೈಸ್ತ ಬಾಂಧವರು ಸೇರಿದಂತೆ ಅನೇಕ ಧರ್ಮದ ಜನರು ಪಾಲ್ಗೊಂಡದಿದ್ದು ವಿಶೇಷವಾಗಿತ್ತು. ಮೂರು ದಿನಗಳ ಕಾಲ ನಡೆದ ಈ ಸಿದ್ದಪ್ಪಾಜಿ ಕೊಂಡೋತ್ಸ ವ ಕಾರ್ಯಕ್ರಮದಲ್ಲಿ ಬರುವ ಎಲ್ಲಾ ಸಮುದಾಯದ ಸಮಸ್ತರಿಗೂ ಊಟೋಪಚಾರದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.
ಸುಮಾರು ಆರು ಅಡಿ ಎತ್ತರದ ಕೊಂಡವನ್ನು ನಿರ್ಮಿಸಿ, ಸಕಲ ಪೂಜೆಗಳನ್ನು ಸಲ್ಲಿಸಿ, ರಾತ್ರಿ ಹಿಡಿ ಬೆಂಕಿ ಹೊತ್ತಿಸಿ,ಅದನ್ನು ರಾತ್ರಿಯಿಡೀ ಉರಿಸಿ ಮುಂಜಾನೆ ವೇಳೆಗೆ ಕಂಡಾಯ ಹೊತ್ತ ನೀಲಗಾರರು ಕೊಂಡ ಹಾಯಿದು ನೆರೆದಿದ್ದ ಜನರ ಕಣ್ಮನ ಸೆಳೆದರು.



ಗುಂಡ್ಲುಪೇಟೆ ತಾಲೂಕಿನ ಪರಂಪರೆಯ ಪವಾಡ ಪುರುಷ ಸಿದ್ದಪ್ಪಾಜಿ ಕೊಂಡೋತ್ಸವ ವೈಭವದಿಂದ ಜರಗಿತು.

ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ಡಾ. ಮನ್ಮಥರಾವ್

ಲೋಕ್ ಅದಾಲತ್ ಸದ್ಬಳಕೆಗೆ ಕರೆ

ಚಾಮರಾಜನಗರ: ರಾಜಿ ಸಂಧಾನದ ಪ್ರಕರಣಗಳ ತ್ವರಿತ ಇತ್ಯರ್ಥಕ್ಕಾಗಿ ಲೋಕ್‌ಅದಾಲತ್ ಅನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶರಾದ ಡಾ. ಕೆ. ಮನ್ಮಥರಾವ್ ಸಲಹೆ ನೀಡಿದರು.
ನಗರದ ಜಿಲ್ಲಾ ನ್ಯಾಯಾಲಯದ ಅವರಣದಲ್ಲಿಂದು ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಜಿಲ್ಲಾ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ 2026ನೇ ಸಾಲಿನ ಮೊದಲ ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯಾವುದೇ ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾದ ನಂತರಒಂದೆರಡು ದಿನಗಳಲ್ಲಿ ಇತ್ಯರ್ಥವಾಗುವುದಿಲ್ಲ. ಪ್ರಕರಣಗಳ ಫಲಿತಾಂಶದ ವಿಳಂಬದಿಂದಾಗಿ ಜನರಿಗೆ ಸಾಕಷ್ಟು ಸಮಯ, ಹಣ ವ್ಯರ್ಥವಾಗಲಿದೆ. ನ್ಯಾಯಾಲಯಗಳಿಗೂ ಒತ್ತಡ ಎದುರಾಗಲಿದೆ. ಇದನ್ನು ಮನಗಂಡಿರುವ ಸುಪ್ರೀಂ ಕೋರ್ಟ್ ನ್ಯಾಯಾಲಯಗಳಲ್ಲಿ ರಾಜಿಯಾಗಬಹುದಾದ ಪ್ರಕರಣಗಳನ್ನು ಪಟ್ಟಿ ಮಾಡಿ ವರ್ಷದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಲೋಕ್ ಅದಾಲತ್ ನಡೆಸಿ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥಪಡಿಸಲು ಆದೇಶಿಸಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕು ಎಂದರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಮಾತನಾಡಿ ಲೋಕ್ ಅದಾಲತ್ ಪ್ರಕ್ರಿಯೆಯು ಪ್ರತಿಯೊಬ್ಬ ಸಾಮಾನ್ಯ ನಾಗರಿಕನಿಗೂ ಸುಲಭವಾಗಿ ಕೈಗೆಟುಕುವ ಮತ್ತು ತ್ವರಿತ ನ್ಯಾಯವನ್ನು ಖಚಿತಪಡಿಸುವುದೇ ಆಗಿದೆ. ಈ ಪರಿಕಲ್ಪನೆಯು ನಮ್ಮ ಸಂವಿಧಾನದ ಆಶಯಗಳ ನಿಜವಾದ ಸ್ವರೂಪವನ್ನು ಪ್ರತಿಬಿಂಬಿಸಲಿದೆ. ನ್ಯಾಯವು ವಿಳಂಬ ಹಾಗೂ ಸಂಕೀರ್ಣವಾಗಬಾರದು ಮತ್ತು ಸಾಮಾನ್ಯ ವ್ಯಕ್ತಿಯ ವ್ಯಾಪ್ತಿಯಿಂದ ಹೊರಗಿರಬಾರದು. ಪ್ರಕರಣಗಳು ಇತ್ಯರ್ಥಕ್ಕಾಗಿ ಸೌಹಾರ್ದತೆ, ಸಾಮರಸ್ಯ, ರಾಜಿ ಸಂಧಾನ ಹಾಗೂ ಪರಸ್ಪರ ತಿಳಿವಳಿಕೆಯನ್ನು ಉತ್ತೇಜಿಸುತ್ತದೆ ಎಂದರು. ಸಂಘರ್ಷದ ಬದಲಾಗಿ ಸಹಕಾರ, ಒಮ್ಮತದ ಮೂಲಕ ಪ್ರಕರಣಗಳ ಇತ್ಯರ್ಥಕ್ಕೆ ಅದಾಲತ್ ಉತ್ತಮ ವೇದಿಕೆಯಾಗಿದೆ. ಇದರಿಂದ ಕಕ್ಷಿದಾರರ ಅಮೂಲ್ಯ ಸಮಯ, ಸಂಪನ್ಮೂಲ ಉಳಿತಾಯವಾಗಿ ಮಾನಸಿಕ ಒತ್ತಡವು ಕಡಿಮೆಯಾಗಲಿದೆ. ಪ್ರಕರಣಗಳ ಅನಿಶ್ಚಿತತೆ ದೂರಮಾಡಿ ಉಭಯ ಪಕ್ಷಾಕಾರರಕಲ್ಲಿ ಭಾಂಧವ್ಯ ವೃದ್ಧಿಸಲಿದೆ. ನ್ಯಾಯ ಎಂದರೆ ನ್ಯಾಯಲಯಗಳಲ್ಲಿ ನೀಡುವ ತೀರ್ಪು ಮಾತ್ರವಲ್ಲ, ಬದಲಾಗಿ ಪರಸ್ಪರ ಗೌರವ, ತಿಳಿವಳಿಕೆಯಿಂದ ಬಗೆಹರಿಸುವುದು ಸಹ ನ್ಯಾಯವೇ ಆಗಿದೆ. ಪರ್ಯಾಯ ಇತ್ಯರ್ಥ ವಿಧಾನಗಳನ್ನು ಬಲಪಡಿಸಿ ಸಾಮರಸ್ಯದ ಸಂಸ್ಕೃತಿ ಬೆಳೆಸಲು ನಾವೆಲ್ಲರೂ ಸಂಕಲ್ಪ ಮಾಡೋಣ ಎಂದು ತಿಳಿಸಿದರು. ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಎಸ್.ಜೆ. ಕೃಷ್ಣ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ನುಡಿನಮನ ಕಾರ್ಯಕ್ರಮ ನಾಳೆ

ಚಾಮರಾಜನಗರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ವತಿಯಿಂದ ಮಾ.17 ರಂದು ನಗರದಲ್ಲಿ ಜಿಲ್ಲೆಯ ಲಿಂಗೈಕ್ಯ ಪರಮ ಪೂಜ್ಯರ ಸಂಸ್ಕರಣೋತ್ಸವ, ಇತ್ತೀಚೆಗೆ ನಿಧನರಾದ ಶಾಮನೂರು ಶಿವಶಂಕರಪ್ಪ, ಭೀಮಣ್ಣ ಖಂಡ್ರೆ ತಿಪ್ಪಣ್ಣನವರಿಗೆ ನುಡಿ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಹಾಸಭಾದ ಜಿಲ್ಲಾ ನಿರ್ದೇಶಕ ಪ್ರಭುಸ್ವಾಮಿ ಹೇಳಿದರು.
ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆ ನಗರದ ಸತ್ತಿ ರಸ್ತೆಯಲ್ಲಿರುವ ಶ್ರೀ ಶಿವಕುಮಾರಸ್ವಾಮಿ ಭವನದಲ್ಲಿ ನಡೆಯುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮೀಜಿ ವಹಿಸಲಿದ್ದು, ಹರವೆ ಮಠದ ಶ್ರೀ ಸರ್ಪಭೂಷಣಸ್ವಾಮೀಜಿ, ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಮಲ್ಲನಮೂಲೆ ಮಠದ ಶ್ರೀ ಇಮ್ಮಡಿ ಸಿದ್ದಲಿಂಗಸ್ವಾಮೀಜಿ, ನಗರ ವಿರಕ್ತ ಮಠದ ಶ್ರೀಚನ್ನಬಸವಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರಸ್ವಾಮೀಜಿ ದಿವ್ಯ ಸಮ್ಮುಖ ವಹಿಸಲಿದ್ದಾರೆ ಎಂದರು. ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಸಚಿವ ಈಶ್ವರ್ ಖಂಡ್ರೆ, ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ರಾಜ್ಯಾಧ್ಯಕ್ಷ ಶಂಕರ್ ಬಿದರಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಪರಿಮಳಾ ನಾಗಪ್ಪ, ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಸಿ.ಎಸ್. ನಿರಂಜನ ಕುಮಾರ್, ಕೆಐಎಡಿಬಿ ಮುಖ್ಯ ಅಭಿಯಂತರಡಿ.ಆರ್.ವೀರಭದ್ರಯ್ಯ ಮಹಾಸಭಾದ ಅಧ್ಯಕ್ಷ ಎಸ್.ಎಸ್.ಗಣೇಶ್, ನಿವೃತ್ತ ಐಎಎಸ್ ಅಧಿಕಾರಿ ಜಿ.ಎನ್. ಮೂರ್ತಿ ಭಾಗವಹಿಸಲಿದ್ದಾರೆ.
ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ನಿರಂಜನ್‌ಮೂರ್ತಿ, ಉಮೇಶ್ ಇದ್ದರು.



ಯೋಗಾಸನ ಕಾರ್ಯಕ್ರಮ

ಮೈಸೂರು: ನೂರಾರು ಮಹಿಳೆಯರು, ಹೆಣ್ಣು ಮಕ್ಕಳು, ಮಹಿಳೆಯರ ಕಳ್ಳ ಸಾಗಾಣೆ, ಲೈಂಗಿಕ ಶೋಷಣೆ, ಯುದ್ಧದ ವಿರುದ್ಧವಾಗಿ 'ಒಡನಾಡಿ ಯೋಗ ಸ್ಟಾಪ್ ಟ್ರಾಫಿಕಿಂಗ್' ಎಂಬ ಧ್ಯೇಯೊದ್ದೇಶದಿಂದ ಯೋಗಾಸನ ಕಾರ್ಯಕ್ರಮ ನಡೆಸಲಾಯಿತು.
ಶನಿವಾರ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾದಲ್ಲಿ ಒಡನಾಡಿ ಸೇವಾ ಸಂಸ್ಥೆ ಆಯೋಜಿಸಿದ್ದ 18ನೇ ಅಂತಾರಾಷ್ಟ್ರೀಯ ಯೋಗ ಕಾರ್ಯಕ್ರಮ 'ಯೋಗ ಸ್ಟಾಪ್ ಟ್ರಾಫಿಕಿಂಗ್' ಮಾನವೀಯ ಸಮತೆಗಾಗಿ ಒಂದು ದಿನ- ಒಂದು ಧ್ವನಿ, ಜಾಗೃತಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಯೋಗಾಸನ ಮಾಡುವ ಮೂಲಕ ಜನಾಂದೋಲನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮಹಿಳೆಯ ಮೇಲೆ ಸಮಾಜದಲ್ಲಿ ಸಾಕಷ್ಟು ಶೋಷಣೆಗಳು ನಡೆಯುತ್ತಿದ್ದು, ಮಾನವ ಕಳ್ಳ ಸಾಗಾಣೆ ನಡೆಯುತ್ತಿದೆ. ಇದರ ವಿರುದ್ಧ ಹೋರಾಡುವುದು ಸಮಾಜದ ಹಾಗೂ ಪ್ರತಿಯೊಬ್ಬರ ಜವಬ್ದಾರಿ ಮತ್ತು ಬದ್ಧತೆ ಈ ನಿಟ್ಟಿನಲ್ಲಿ ಒಡನಾಡಿ ಸಂಸ್ಥೆ ಸಾಕಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ ಎಂದರು.
ಸಮಾಜದಲ್ಲಿ ಮಹಿಳೆಯರನ್ನು ಸಮಾನರಾಗಿ ಕಾಣದ ಕಾಲಗಟ್ಟದಲ್ಲಿ ಮೈಸೂರು ಸಂಸ್ಥಾನ ಮಹಿಳೆಗೆ ವಿಶೇಷ ಸ್ಥಾನಮಾನ ನೀಡಿ, ಸಮಾನತೆ, ಶಿಕ್ಷಣ, ಗೌರವ, ನಾಯಕತ್ವವನ್ನು ನೀಡಿದ್ದರು. ಅದಕ್ಕಾಗಿ ಸಾಕಷ್ಟು ಹೋರಾಟಗಳನ್ನು ನಡೆಸಿದ್ದಾರೆ. ಇದೆಲ್ಲವನ್ನು ನಮ್ಮ ಸೌಭಾಗ್ಯ ಎಂದರು. ಕಳೆದ18 ವರ್ಷಗಳಿಂದ ಯೋಗಸ್ಟಾಪ್ ಟ್ರಾಫಿಕಿಂಗ್ ಎಂಬ ಆಶಯದಲ್ಲಿ ಯೋಗವನ್ನು ಅಸ್ತ್ರವನ್ನಾಗಿಟ್ಟುಕೊಂಡು, ಸಾತ್ವಿಕವಾದ ಪ್ರತಿರೋಧ, ಪ್ರತಿಭಟನೆ ನಡೆಸುತ್ತಿದ್ದೇವೆ. ಮಾನವೀಯ ಮೌಲ್ಯವನ್ನು ಕ್ರೋಢಿಕರಿಸಿ, ಸಮಾಜದಕ್ಕೆ ಸಂದೇಶವನ್ನು ರವಾನಿಸಿ, ಸಮಾನರತೆಗಾಗಿ ಹೋರಾಡುವ ಅವಶ್ಯಕತೆಯಿದೆ ಎಂದರು. 500ಕ್ಕೂ ಹೆಚ್ಚು ಜನ ಭಾವಹಿಸಿದ್ದರು.
ಮೈಸೂರು ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾಯದರ್ಶಿ ಹೊಸಕೋಟೆ ಬಸವರಾಜು, ಯೋಗಾ ಒಕ್ಕೂಟದ ಪ್ರತಿನಿಧಿ ಡಾ.ಮೂರ್ತಿ, ಸಮತ ವೇದಿಕೆ ಪ್ರೊ. ಲತಾಬಿದ್ದಪ್ಪ, ಒಡನಾಡಿಯ ಹೆಣ್ಣು ಮಕ್ಕಳ ಪ್ರತಿನಿಧಿ ಲಲಿತಾ ಮತ್ತಿತರರಿದ್ದರು.



ವಿಜ್ಞಾನ ಮಾದರಿ ವಸ್ತುಗಳ ಪ್ರದರ್ಶನ

ಚಾಮರಾಜನಗರ: ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ಮತ್ತು ಗಣಿತಶಾಸ್ತ್ರ ವಿಭಾಗ, ರೆಡ್‌ಕ್ರಾಸ್ ಘಟಕ ಹಾಗೂ ಐಕ್ಯೂಎಸಿ ಇವರ ಸಂಯುಕ್ತ ಆಶ್ರಯದಲ್ಲಿ ವಿಜ್ಞಾನ ಮಾದರಿ ಪ್ರದರ್ಶನ ಕಾರ್ಯಕ್ರಮವನ್ನು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.
ಬಿಎಸ್ಸಿ ವಿದ್ಯಾರ್ಥಿಗಳು ವಿವಿಧ ವಿಷಯಗಳ ಕುರಿತಾಗಿ ಸೃಜನಾತ್ಮಕ ಮತ್ತು ಮನಮುಟ್ಟುವಂತಹ ವಿಜ್ಞಾನ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸಿದರು. ಈ ಮಾದರಿಗಳು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಗಮನ ಸೆಳೆಯುವ ಮೂಲಕ ವಿಜ್ಞಾನ ವಿಷಯದ ಬಗ್ಗೆ ಆಸಕ್ತಿ ಮತ್ತು ಕುತೂಹಲವನ್ನು ಹೆಚ್ಚಿಸಿತು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ಅಶ್ವಿನಿ ಆರ್. ಎಸ್. ವಹಿಸಿದ್ದರು. ಬಿಎಸ್ಸಿ ಪ್ರಥಮ ವರ್ಷದ ವಿದ್ಯಾರ್ಥಿನಿ ಅಮೂಲ್ಯ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮವು ದಿವ್ಯಶ್ರೀ ಮತ್ತು ಭೂಮಿಕಾ ಅವರಿಂದ ಹಾಡಲಾದ ಪ್ರಾರ್ಥನಾ ಗೀತೆಯಿಂದ ಆರಂಭವಾಯಿತು.
ಈ ಸಂದರ್ಭದಲ್ಲಿ ವಿವಿಧ ವಿಭಾಗಗಳ ಅಧ್ಯಾಪಕರುಗಳಾದ ಡಾ. ಚಿನ್ಮಯ್ ಭಟ್, ಡಾ. ಶಿವಪ್ರಸಾದ್ ಎನ್. ಜಿ., ಶ್ರೀ ಚಂದ್ರಶೇಖರ್, ಲೋಕೇಶ್, ಡಾ. ಮಲ್ಲೇಶ್, ಡಾ. ನೀಲಕಂಠಸ್ವಾಮಿ, ನಾರಾಯಣ, ದೀಪಿತಾ ಹಾಗೂ ಮಹಾದೇವ ಉಪಸ್ಥಿತರಿದ್ದು ವಿದ್ಯಾರ್ಥಿಗಳ ವಿಜ್ಞಾನಾತ್ಮಕ ಚಿಂತನೆ ಹಾಗೂ ಸೃಜನಶೀಲತೆಯನ್ನು ಪ್ರಶಂಸಿಸಿದರು.



ಕ್ರೀಡೆಯಿಂದ ದೈಹಿಕ, ಮಾನಸಿಕವಾಗಿ ಸದೃಢ

ಕೊಳ್ಳೇಗಾಲ: ಕ್ರೀಡೆಯಲ್ಲಿ ಆಸಕ್ತಿವುಳ್ಳವರು ಯಾವುದಾದರೂ ಒಂದು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು. ಪ್ರತಿಯೊಬ್ಬರು ಸಾಧನೆ ಮಾಡಬೇಕು ಎಂದರೆ ಮುಂದೆ ಗುರಿ ಹಿಂದೆ ಗುರು ಇರಬೇಕು. ಕ್ರೀಡೆಯಿಂದ ಸಾಕಷ್ಟು ಅನುಕೂಲವಾಗಿದೆ. ಆದಷ್ಟು ಹೆಣ್ಣು ಮಕ್ಕಳು ಕ್ರೀಡೆಯಲ್ಲಿ ಹೆಚ್ಚು ಭಾಗವಹಿಸುವ ಮೂಲಕ ಸಾಧನೆ ಮಾಡಬೇಕು ಎಂದು ರಾಷ್ಟ್ರೀಯ ಖೋಖೋ ಆಟಗಾರ್ತಿ ಚೈತಾ.ಬಿ ಎಂದರು.
ಶ್ರೀ ವಾಸವಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ವಾರ್ಷಿಕ ಕ್ರೀಡಾಕೂಟ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಕ್ರೀಡೆಯಲ್ಲಿ ತೊಡಗಿಸಿಕೊಂಡು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬೇಕೆಂದು ಕಿವಿ ಮಾತು ಹೇಳಿದರು. ರಾಷ್ಟ್ರೀಯ ಖೋಖೋ ಆಟಗಾರ್ತಿಯರಿಗೆ ವಾಸವಿ ಪ್ರಥಮ ದರ್ಜೆ ಕಾಲೇಜುವತಿಯಿಂದಸನ್ಮಾನಿಸಿ ಅಭಿನಂದಿಸಿದರು. ಬಳಿಕ ಚಾ.ನಗರ ವಿಶ್ವವಿದ್ಯಾಲಯ ದಿಂದ ಅಂತರ ವಿಶ್ವವಿದ್ಯಾಲಯಕ್ಕೆ ಆಯ್ಕೆಯಾದ ವಾಸವಿ ಕಾಲೇಜಿನ ಐವರು ಖೊಖೋ ಆಟಗಾರ್ತಿಯರಿಗೆ ಸಂಸ್ಥೆಯ ವತಿಯಿಂದ ಜರ್ಸಿಯನ್ನು ವಿತರಿಸಿದರು.
ಖೋಖೋ ಆಟಗಾರ್ತಿ ಮೇಘನಾ, ಸಂಸ್ಥೆಯ ಜಂಟಿ ಕಾರ್ಯದರ್ಶಿ ನಾಗರಾಜು ಬಾಬು, ವಾಸವಿ ಮಹಿಳಾ ಸಂಘ ಅಧ್ಯಕ್ಷರು ಶಾಲಿನಿ ಸಚಿನ್, ವಾಸವಿ ಇಲೈಟ್ ಕ್ಲಬ್ ಅಧ್ಯಕ್ಷರು ಶಾಲಿನಿ ಮುರುಳಿ, ವಾಸವಿ ಶಿಕ್ಷಣ ಸಂಸ್ಥೆ ಸಂಯೋಜಕರು ಅನಿತಾ ಗಿರೀಶ್, ಭಾವನಾ ಶಶಿಧರ್, ವಾಸವಿ ಪಿಯು ಕಾಲೇಜು ಪ್ರಾಂಶುಪಾಲರು ವಾಸವಾಂಬ ಇದ್ದರು.



ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಯುದ್ಧ ನೀತಿಗೆ ಖಂಡನೆ

ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

ಮೈಸೂರು: ಇರಾನ್ ಮೇಲೆ ಅಮೇರಿಕಾ -ಇಸ್ರೇಲ್ ಯುದ್ದಕೋರ ನೀತಿ ಖಂಡಿಸಿ, ಯುದ್ದ ಬೇಡ, ಶಾಂತಿ ಸ್ಥಾಪಿಸಿ ಎಂದು ಒತ್ತಾಯಿಸಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಸಿಪಿಐ) ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳಿಂದ ಶನಿವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.
ನಗರದ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕೆಲಕಾಲ ಅಮೇರಿಕಾ -ಇಸ್ರೇಲ್ ಯುದ್ದಕೋರ ನೀತಿ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.
ಶ್ರೀಮಂತ ಬಂಡವಾಳಶಾಹಿ ದೇಶಗಳಿಂದು ಬಿಕ್ಕಟ್ಟಿನಲ್ಲಿವೆ. ಈ ಬಿಕ್ಕಟ್ಟಿನಿಂದ ಹೊರಬರಲು ಇತರ ರಾಷ್ಟಗಳ ಮೇಲೆ ದಾಳಿ ನಡೆಸಿ ಅಲ್ಲಿನ ತೈಲ ಸೇರಿದಂತೆ ಇತರ ಸಂಪತ್ತನ್ನು ಲೂಟಿ ವಾಡಲಾಗುತ್ತಿದೆ. ಅದರ ಭಾಗವಾಗಿ ಪ್ರಜಾಪ್ರಭುತ್ವ ಸ್ಥಾಪನೆ ಹೆಸರಿನಲ್ಲಿ, ಅಣುಶಕ್ತಿ ನೆಪದಲ್ಲಿ ತಮ್ಮ ವಾತುಗಳನ್ನು ಕೇಳದ ಸಾರ್ವಭೌಮ ದೇಶಗಳ ಮೇಲೆ ದಾಳಿ ವಾಡಲಾಗುತ್ತಿದೆ. ಅಲ್ಲದೇ ಶಾಲೆ-ಆಸ್ಪತ್ರೆಗಳ ಮೇಲೆ, ನಾಗರಿಕರ ಮೇಲೆ ದಾಳಿವಾಡಿ ಕೊಲ್ಲಲಾಗುತ್ತಿದೆ ಎಂದು ಖಂಡಿಸಿದರು. ಈ ಯುದ್ದಗಳಿಂದ ಮೊದಲು ಬಲಿಯಾಗುವುದು ಮಕ್ಕಳು, ಮಹಿಳೆಯರು ಹಾಗೂ ತೊಂದರೆಗಳಗಾಗುವವರು ರೈತ- ಕಾರ್ಮಿಕ, ಸಾಮಾನ್ಯ ಜನರು. ಆದ್ದರಿಂದ ಈ ಯುದ್ದ ಕೂಡಲೇ ನಿಲ್ಲಬೇಕು, ವಿಶ್ವ ಸಂಸ್ಥೆ, ಅಂತರಾಷ್ಟ್ರೀಯ ನ್ಯಾಯಾಲಯ ಮಧ್ಯಪ್ರದೇಶ ಮಾಡಬೇಕೆಂದು ಒತ್ತಾಯಿಸಿದರು.
ಪ್ರತಿಭಟನೆಯಲ್ಲಿ ಸಿಪಿಐ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸಿಪಿಐ ಕಾರ್ಯದರ್ಶಿ ರಾಮಕೃಷ್ಣ, ಸಿಪಿಎಂಲ್ ಕಾರ್ಯದರ್ಶಿ ಜವರ್ಯಯು, ಎಸ್‌ಯುಸಿಐ ಕಾರ್ಯದರ್ಶಿ ರವಿ, ಪ್ರಗತಿಪರರಾದ ಟಿ.ಗುರುರಾಜ್, ಸವಿತಾ ಮಲ್ಲೇಶ್, ಒಡನಾಡಿ ಸ್ಟ್ಯಾನ್ಲಿ, ಲಕ್ಷ್ಮಣ್ ಹೊಸಕೋಟೆ, ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜ್, ಕಾಳಚನ್ನೇಗೌಡ, ಕೆ.ಬಸವರಾಜ್, ಎನ್.ವಿಜ್‌ಕುವಾರ್, ಜುಂರಾಂ, ನೆಲೆ ಗೋಪಾಲ್ ಕೃಷ್ಣ, ಶಾಕುಂತಲ, ಬಾಲಾಜಿರಾವ್, ಪ್ರಭಾಕರ್, ಯಶೋಧರ, ಸೋಮರಾಜೇ ಅರಸ್, ರಾಜೇಂದ್ರ ಇದ್ದರು.



ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ: ಶಾಸಕ ಗಣೇಶ ಪ್ರಸಾದ್

1.50 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿಗೆ ಚಾಲನೆ

ಚಾಮರಾಜನಗರ: ತಾಲೂಕಿನ ಹರವೆ ಭಾಗದ ಗ್ರಾಮ ಸಂಪರ್ಕಗಳ ರಸ್ತೆಯ ಅಭಿವೃದ್ಧಿ ವಿಶೇಷ ಆದ್ಯತೆ ನೀಡಲಾಗಿದೆ ಎಂದು ಗುಂಡ್ಲುಪೇಟೆ ಕ್ಷೇತ್ರದ ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಹೇಳಿದರು.
ಗುಂಡ್ಲುಪೇಟೆ ಕ್ಷೇತ್ರದ ಮಲೆಯೂರು ಗ್ರಾಮದ ಶ್ರೀ ಸೋಮೇಶ್ವರ ದೇವಸ್ಥಾನದ ಬಳಿ ಹರವೆ ಮಾರ್ಗದ ರಸ್ತೆಯಿಂದ 1 ಕಿ.ಮೀ ಅಭಿವೃದ್ಧಿ 1.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.
ಗುಂಡ್ಲುಪೇಟೆ ಕ್ಷೇತ್ರ ವ್ಯಾಪ್ತಿಗೆ ಹರವೆ ಹೋಬಳಿ 5 ಪಂಚಾಯತಿಗಳು ಸೇರ್ಪಡೆಯಾದ ಬಳಿಕ ನಮ್ಮ ತಂದೆ ಮಾಜಿ ಸಚಿವರಾದ ದಿವಂಗತ ಹೆಚ್.ಎಸ್.ಮಹದೇವಪ್ರಸಾದ್ ಅವರು ವಿಶೇಷ ಆಸಕ್ತಿ ವಹಿಸಿ ಈ ಭಾಗದ ಮೂಲಭೂತ ಸೌಲಭ್ಯಗಳಾದ ರಸ್ತೆ, ಕುಡಿಯುವ ನೀರು, ಶಾಲಾ-ಕಾಲೇಜು ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ, ಸಮುದಾಯ ಆಧಾರಿತ ಕಾರ್ಯಕ್ರಮಗಳ ಹೆಚ್ಚು ಒತ್ತು ನೀಡಿದರು. ನಂತರ ನಮ್ಮ ತಾಯಿ ಮಾಜಿ ಸಚಿವರಾದ ಗೀತಾಮಹದೇವಪ್ರಸಾದ್ ಅವರು ಈಗ ನಾನು ಶಾಸಕನಾಗಿ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ ಭಾಗದ ರಸ್ತೆಗಳ ಅಭಿವೃದ್ಧಿ 10 ಕೋಟಿ ಹೆಚ್ಚು ವೆಚ್ಚ ಮಾಡಲಾಗಿದೆ ಎಂದರು. ಮಲೆಯೂರಿನಿಂದ ಹರವೆ ಮಾರ್ಗದ ರಸ್ತೆಯು ಶಿಥಿಲಗೊಂಡಿದ್ದು, ಪಿಡಬ್ಲ್ಯೂಡಿ ಇಲಾಖೆಯಿಂದ ಮೊದಲ ಹಂತ ಮಲೆಯೂರಿನಿಂದ 1 ಕಿ.ಮೀ. ರಸ್ತೆ ಅಭಿವೃದ್ಧಿ ಹಾಗೂ ಎರಡನೇಯ ಹಂತದಲ್ಲಿ 1 ಕೋಟಿ ವೆಚ್ಚದಲ್ಲಿ ಹರವೆ ಗುಂಡ್ಲು ರಸ್ತೆ ಅಭಿವೃದ್ಧಿ ಗೆ ಅಭಿವೃದ್ಧಿ ಪಡಿಸಲಾಗುವುದು. ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ಕಳೆದ ವರ್ಷದ 25 ಕೋಟಿ ರೂ. ಗಳ ಪೈಕಿ ಹರವೆ ಭಾಗಕ್ಕೆ 3.50 ಕೋಟಿ ರೂ. ಈ ಬಾರಿ 50 ಕೋಟಿ ರೂ. ನೀಡಿದ್ದು, 6.50 ಕೋಟಿ ರೂ.ಗಳನ್ನು ಈ ಭಾಗದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಲಾಗಿದೆ ಎಂದರು.
ಜಿ.ಪಂ.ಮಾಜಿ ಸದಸ್ಯ ನವೀನ್ ಕೆರೆಹಳ್ಳಿ, ಮುಖಂಡರಾದ ಮೂಡ್ನಾಕೂಡು ಕುಮಾರ್, ಗುರುಸಿದ್ದೇಗೌಡ, ಮಲೆಯೂರು ಗಿರೀಶ್, ಮಲೆಯೂರು ಆನಂದ್, ರಾಜಪ್ಪ, ನಾಗಪ್ಪ, ಎಂ.ಬಿ.ರೇವಣ್ಣ, ಹರವೆ ರಂಗಸ್ವಾಮಿ, ನಾಗೇಶ್, ಮಹದೇವಸ್ವಾಮಿ, ಸಿ.ಸಿದ್ದರಾಜು ಹಾಜರಿದ್ದರು.



ಕಿರುಸುದ್ದಿ

ಎಲ್‌ಪಿಜಿ ಸಮಸ್ಯೆ ಪರಿಹರಿಸಿ

ಪಾಂಡವಪುರ: ಎಲ್ ಪಿಜಿ ಮತ್ತು ಇಂಧನ ಸಮಸ್ಯೆ ಪರಿಹರಿಸುವಂತೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯನವರು ಪ್ರಧಾನಿ ನರೇಂದ್ರಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಇರಾನ್ – ಇಸ್ರೇಲ್ ಮತ್ತು ಅಮೆರಿಕ ನಡುವಿನ ಯುದ್ದದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ದೇಶದ ನಾಗರಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯನವರು ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ. ದೇಶದ ಮಹಾನಗರಗಳಲ್ಲಿ ಹೊಟೇಲ್, ಗ್ರಾಹಕರು ಮತ್ತು ಹೊಟೇಲ್ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳತ್ತ ದೇಶದ ಪ್ರಧಾನಿ ನರೇಂದ್ರ ಮೋದಿಯವರ ಗಮನಸೆಳೆದಿರುವ ಅವರು, ತತ್ ಕ್ಷಣದ ಕ್ರಮವಾಗಿ ಇಂಧನ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದಾರೆ. ಜೊತೆಗೆ, ದೀರ್ಘ ಕಾಲೀಕವಾಗಿ ಭಾರತ ಇಂಧನ ಸ್ವಾವಲಂಬಿಯಾಗುವಂತೆ ಸೌರ ಮತ್ತು ಪವನ ವಿದ್ಯುತ್ ಉತ್ಪಾದನೆಗೆ ಕ್ರಮ ಕೈಗೊಳ್ಳುವಂತೆಯೂ ಅವರು ಪ್ರಧಾನಿ ಅವರಲ್ಲಿ ಮನವಿ ಮಾಡಿದ್ದಾರೆ.

ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಕುರಿತು ಮಾಹಿತಿ

ಪಾಂಡವಪುರ: ಪಾಂಡವಪುರ ಪುರಸಭಾ ವ್ಯಾಪ್ತಿಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ವಿದ್ಯಾರ್ಥಿ/ವಿದ್ಯಾರ್ಥಿನಿಯರು ಮತ್ತು ಶಿಕ್ಷಕ/ಶಿಕ್ಷಕಿಯರು ಪಾಂಡವಪುರ ಪಟ್ಟಣದ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಹಾಗೂ ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಕುರಿತು ಮಾಹಿತಿ ಪಡೆದುಕೊಂಡರು. ಶಾಲೆಯಲ್ಲಿ ಇಕೋಕ್ಲಬ್ ಸ್ಥಾಪಿಸಲಾಗಿದ್ದು, ವಿಧ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದು ಕೊಳ್ಳುತ್ತಿರುವುದು ಕಂಡು ಬಂದಿತು. ಈ ಸಂದರ್ಭದಲ್ಲಿ ಮಾತನಾಡಿದ ಪರಿಸರ ಇಂಜಿನಿಯರ್ ಎಂ.ಜಿ.ಶಫಿನಾಜ್, ಸದರಿ ಶಾಲೆಯ ಶಿಕ್ಷಕ, ಶಿಕ್ಷಕಿಯರು, ಸಿಬ್ಬಂದಿಗಳು ಸ್ವಚ್ಛ ಸರ್ವೇಕ್ಷಣೆ ,ಓಡಿಎಫ್, ಪ್ಲಾಸ್ಟಿಕ್ ನಿಷೇಧ ಒಳಗೊಂಡಂತೆ ಪರಿಸರ ಜಾಗೃತಿಯ ಯಾವುದೇ ಕಾರ್ಯಕ್ರಮವಿದ್ದರೂ ಅವಶ್ಯ ಸಹಕಾರ ನೀಡಿ ಅತ್ಯುತ್ಸಾಹದಿಂದ ವಿಧ್ಯಾರ್ಥಿಗಳೊಂದಿಗೆ ಪಾಲ್ಗೊತ್ತಾರೆ. ಮತ್ತು ತಮ್ಮ ಶಾಲೆಯಲ್ಲಿ, ಮನೆಗಳಲ್ಲಿ ಪುರಸಭೆಯ ಮಾರ್ಗದರ್ಶನವನ್ನು ಪಡೆದು ಅನುಷ್ಠಾನಕ್ಕೆ ತಂದಿರುವುದು ಶ್ಲಾಘನೀಯವೆಂದರು. ಮಕ್ಕಳು ಬಾಲ್ಯದಿಂದಲೇ ಪರಿಸರದ ಬಗ್ಗೆ ಅರಿವು ಮೂಡಿಸಿಕೊಳ್ಳುವುದು ಅತ್ಯಂತ ಅವಶ್ಯಕ ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಕಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಸಿಬ್ಬಂದಿ ಮಣಿ, ಜಾವಿದ್, ಮಧು, ಗಣೇಶ, ಕುಮಾರ ಇತರರಿದ್ದರು.

ಕೆರೆಯಲ್ಲಿ ಮುಳುಗಿ ಸಾವು

ಮಳವಳ್ಳಿ: ಪಟ್ಟಣದ ಸಮೀಪದ ದೊಡ್ಡಕೆರೆಯಲ್ಲಿ ಶನಿವಾರ ಮಧ್ಯಾಹ್ನ ಈಜಲು ಹೋಗಿದ್ದ ಬಾಲಕನೊಬ್ಬರು ಮೃತಪಟ್ಟಿದ್ದು, ಮತ್ತೊಬ್ಬ ಬಾಲಕ ಪ್ರಾಣಾಪಾಯದಿಂದ ಪರಾಗಿದ್ದಾನೆ. ಪಟ್ಟಣದ ಗಂಗಾಮತ ಬೀದಿಯ ಬಸಂತ ಕುಮಾರ್ ಎಂಬುವವರ ಪುತ್ರ ಕೇಶವ(12) ಮೃತಪಟ್ಟ ಬಾಲಕ. ಗಂಗಾಮತ ಬೀದಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮೃತ ಕೇಶವ ಶನಿವಾರ ಮಧ್ಯಾಹ್ನ ತರಗತಿ ಮುಗಿಸಿಕೊಂಡು ತನ್ನ ಐವರು ಸಹಪಾಠಿಗಳೊಂದಿಗೆ ದೊಡ್ಡಕೆರೆಯಲ್ಲಿ ಈಜಲು ಹೋಗಿದ್ದಾಗ ಘಟನೆ ನಡೆದಿದೆ. ಕೇಶವ ಮತ್ತು ಹನುಮಂತು ಎಂಬ ಬಾಲಕರು ಈಜುತ್ತಿದ್ದಾಗ ಕೆಸರಿನಲ್ಲಿ ಸಿಲುಕಿಕೊಂಡಿದ್ದರು. ಘಟನೆಯಿಂದ ಗಾಬರಿಗೊಂಡ ಇತರೆ ಸಹಪಾಠಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ ಎನ್ನಲಾಗಿದೆ. ಕಿರುಚಾಟ ಕೇಳಿಸಿಕೊಂಡ ಕೆರೆಯ ಸಮೀಪದ ಅಂಗಡಿಯೊಂದರ ಕೆಲಸಗಾರರು ಇಬ್ಬರು ಬಾಲಕರನ್ನು ರಕ್ಷಿಸಿಲು ಮುಂದಾಗಿ ಮೇಲುತ್ತಿದ್ದಾರೆ. ಇಬ್ಬರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಬರುವವಷ್ಟರಲ್ಲಿ ಕೇಶವ ಸಾವನ್ನಪ್ಪಿದ್ದು, ಮತ್ತೊಬ್ಬ ಬಾಲಕ ಹನುಮಂತು ಪ್ರಾಣಾಪಾಯದಿಂದ ಪರಾಗಿದ್ದಾನೆ. ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಇ.ಉಮಾ, ಕ್ಷೇತ್ರ ಸಮನ್ವಾಧಿಕಾರಿ ಎಂ.ಕೆ.ಶ್ರೀನಿವಾಸ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮಹದೇವು ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಮೃತ ಬಾಲಕನ ಪೋಷಕರ ಆಕ್ರಂದನ ಮುಗಿಲುಮುಟ್ಟಿತು. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ: ಚಾಲಕ ಸಾವು

ನಾಗಮಂಗಲ: ಆಟೋಗೆ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಂಚೆಚಿಟ್ಟನಹಳ್ಳಿ-ಕಾಚೇನಹಳ್ಳಿ ಮಧ್ಯೆ ನಡೆದಿದೆ. ತಾಲೂಕಿನ ನೇರಲಕೆರೆ ಸಮೀಪದ ಅಗಲಕೊಪ್ಪಲು ಗ್ರಾಮದ ಆಕಾಶ್ (23) ಎಂಬಾತನೇ ಮೃತಪಟ್ಟ ದುರ್ದೈವಿ. ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ ಆಕಾಶ್ ಹಬ್ಬಕ್ಕಾಗಿ ಗ್ರಾಮಕ್ಕೆ ಬಂದಿದ್ದ. ತನ್ನ ಅಕ್ಕನನ್ನು ಕರೆದುಕೊಂಡು ಬರಲು ಆಟೋದಲ್ಲಿ ಬೆಳ್ಳೂರು ಕ್ರಾಸ್‌ಗೆ ಹೋಗುತ್ತಿದ್ದ ವೇಳೆ ಎದುರಿನಿಂದ ಬಂದ ಲಾರಿ ಆಟೋಗೆ ಡಿಕ್ಕಿ ಹೊಡೆದ ಪರಿಣಾಮ ಈ ಘಟನೆ ನಡೆದಿದೆ.



ಮದ್ದೂರು ತಾಲೂಕಿನ ಕೆ. ಬೆಳ್ಳೂರು ಪ್ರಾಥಮಿಕ ಕೃಷಿ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ರಾಜಣ್ಣ ಹಾಗೂ ಉಪಾಧ್ಯಕ್ಷ ಸಿ.ಎಂ.ಶ್ರೀಧರ್ ಅವರನ್ನು ನಿರ್ದೇಶಕರು, ಸ್ಥಳೀಯ ಮುಖಂಡರು ಅಭಿನಂದಿಸಿದರು.

ನಾಲೆಗಳ ಅಭಿವೃದ್ಧಿಗೆ ಚಾಲನೆ

ಶ್ರೀರಂಗಪಟ್ಟಣ: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕದೇವರಾಯಸಾಗರ, ವಿರಿಜಾ, ದೇವರಾಯ ಸೇರಿದಂತೆ ವಿವಿಧ ನಾಲೆಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಇದುವರೆಗೆ ರೂ.300 ಕೋಟಿಗೂ ಹೆಚ್ಚು ಅನುದಾನ ಬಿಡುಗಡೆ ಮಾಡಿದೆ' ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು. ತಾಲ್ಲೂಕಿನ ಕರಪನಕೊಪ್ಪಲು ಬಳಿ, ಚಿಕ್ಕದೇವರಾಯಸಾಗರ ನಾಲೆಯ 62ನೇ ತೂಬಿನ ವಿತರಣಾ ನಾಲೆ ಅಭಿವೃದ್ಧಿಯ ರೂ.4.95 ಕೋಟಿ ವೆಚ್ಚದ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. 'ನಾಲೆಗಳ ಕಡೇ ಭಾಗದ ವರೆಗೆ ನೀರು ಹರಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಉದ್ದೇಶದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಮುಖ್ಯ ನಾಲೆ ಮತ್ತು ವಿತರಣಾ ನಾಲೆಗಳಿಗೆ ಕಾಯಕಲ್ಪ ನೀಡಲಾಗುತ್ತಿದೆ. ಈಗಾಗಲೇ ಶೇ 70ರಷ್ಟು ಕಾಮಗಾರಿ ಮುಗಿದಿದೆ. ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ತಿಳಿಸಲಾಗಿದೆ' ಎಂದು ಹೇಳಿದರು. ತಾ.ಪಂ. ಮಾಜಿ ಅಧ್ಯಕ್ಷ ಬಿ.ಎಸ್. ಸಂದೇಶ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಪ್ರಾಣೇಶ್, ಕಾವೇರಿ ನೀರಾವರಿ ನಿಗಮದ ಎಇಇ ಶಿವಪ್ರಸಾದ್, ಜೂನಿಯರ್ ಎಂಜಿನಿಯರ್ ಸಹನಾ, ಮುಖಂಡರಾದ ಶಂಕರ್, ಹನುಮಂತು, ಶ್ರೀಧರ್, ತಮ್ಮಣ್ಣ ಸರಿತಾ ಶಿವರಾಂ, ಕೆ.ಸಿ. ಮಾದೇಶ್, ನಾಗಣ್ಣ, ಜ್ಯೋತಿಕುಮಾರ್, ಪರಮೇಶ್, ಪುಟ್ಟರಾಜು, ನಾಗೇಂದ್ರು, ಆರ್‌ಎನ್. ಗುರುಪ್ರಸಾದ್, ರಾಂಪುರ ಮುರಳಿ, ನಯನಕುಮಾರ್ ಇದ್ದರು.



ಶ್ರೀರಂಗಪಟ್ಟಣ ತಾಲೂಕಿನ ಕರಪನಕೊಪ್ಪಲು ಬಳಿ, ಚಿಕ್ಕದೇವರಾಯಸಾಗರ ನಾಲೆಗೆ ಸೇರಿದ 62ನೇ ತೂಬಿನ ವಿತರಣಾ ನಾಲೆ ಅಭಿವೃದ್ಧಿಯ ರೂ.4. 95 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ರಮೇಶ ಬಂಡಿಸಿದ್ದೇಗೌಡ ಗುರುವಾರ ಭೂಮಿಪೂಜೆ ನೆರವೇರಿಸಿದರು.

14 ಕೋಟಿ ವೆಚ್ಚದಲ್ಲಿ ನೂತನ ಕ್ರೀಡಾಂಗಣ ಶಂಕುಸ್ಥಾಪನೆ | ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯ

ಯುವಜನತೆಗೆ ಖೇಲೋ ಇಂಡಿಯಾ ಸ್ಫೂರ್ತಿ



ಪ್ರಧಾನಿ ನರೇಂದ್ರ ಮೋದಿ ಅವರು 2017ರಲ್ಲಿ ಅಸ್ತಿತ್ವಕ್ಕೆ ತಂದ ಖೇಲೋ ಇಂಡಿಯಾದಿಂದ ಯುವಜನತೆಯಲ್ಲಿ ಸ್ಫೂರ್ತಿ ಬಂದಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಗಳಲ್ಲಿ ಭಾಗವಹಿಸುವ ಮೂಲಕ ಹೆಚ್ಚು ಹೆಚ್ಚು ಪದಕಗಳು ಬರಲು ಕಾರಣವಾಗಿದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಶ್ಲಾಘಿಸಿದರು.

ತಾಲ್ಲೂಕಿನ ವಿ.ಸಿ. ಫಾರಂನಲ್ಲಿ 14 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಬಹುಪಯೋಗಿ ನೂತನ ಕ್ರೀಡಾಂಗಣ ಶಂಕುಸ್ಥಾಪನೆ ಹಾಗೂ 388 ವಿಕಲಚೇತನರಿಗೆ ಎಲೆಕ್ಟ್ರಿಕ್ ವಾಹನಗಳ ನೀಡಿಕೆ, ಸರ್ಕಾರಿ ಶಾಲಾ-ಕಾಲೇಜುಗಳಿಗೆ ಕಂಪ್ಯೂಟರ್ ಮತ್ತು ಲ್ಯಾಪ್ ಟಾಪ್ ವಿತರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಇಡೀ ವಿಶ್ವದಲ್ಲೇ ಭಾರತದಲ್ಲಿ ಹೆಚ್ಚು ಯುವಜನತೆ ಇದ್ದು, ಅವರನ್ನು ಮಾನಸಿಕವಾಗಿ ಸದೃಢಗೊಳಿಸಲು ಕ್ರೀಡೆ ಅವಶ್ಯಕ. ಕ್ರೀಡೆ ಇಲ್ಲದಿದ್ದರೆ ಯುವಜನತೆ ಮಾನಸಿಕವಾಗಿ ಖಿನ್ನರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಫಲವಾಗಿ ಖೇಲೋ ಇಂಡಿಯಾ ಜಾರಿಗೆ ಬಂದಿತು ಎಂದರು. ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಯುವಜನತೆಗೆ ಉದ್ಯೋಗ ನೀಡುವ ದೃಷ್ಟಿಯಿಂದ 'ಸ್ಟಾರ್ಟ್ ಅಪ್'ನ್ನು ಜಾರಿಗೆ ತಂದರು. ಇದರಿಂದಾಗಿ ಯುವಜನತೆಗೆ ಸಾಕಷ್ಟು ಉದ್ಯೋಗ ಸಿಕ್ಕಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವಿಶೇಷಚೇತನರಿಗೆ ಶಕ್ತಿ ಮತ್ತು ಸ್ವಾತಂತ್ರ್ಯ ಕೊಡಲು ಆಧುನಿಕ ಯಂತ್ರಗಳ ಅವಶ್ಯಕತೆ ಇದೆ. ಇದನ್ನು ಮನಗಂಡ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಎಲೆಕ್ಟ್ರಿಕ್ ಸ್ಕೂಟರ್, ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡಿಸಿದ್ದಾರೆ. ಇಂದಿನ ಎಐ (ಕೃತಕ ಬುದ್ಧಿಮತ್ತೆ) ಯುಗದಲ್ಲಿ ಕಂಪ್ಯೂಟರ್ ಅವಶ್ಯಕತೆ ಬಹಳಷ್ಟಿದ್ದು, ಇದಕ್ಕಾಗಿ ಕುಮಾರಸ್ವಾಮಿ ಅವರು ಈ ಯೋಜನೆಗೆ ರೂಪಿಸಿದ್ದಾರೆ ಎಂದು ಶ್ಲಾಘಿಸಿದರು. ಎಚ್.ಡಿ. ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿಜ್ಞಾನ ಕಾಲೇಜುಗಳನ್ನು ತೆರೆದರು. ಇದರಿಂದಾಗಿ ಗ್ರಾಮೀಣ ಮಕ್ಕಳು ವಿಜ್ಞಾನ ಶಿಕ್ಷಣ ಪಡೆದು ಅವರೂ ನಗರ ಪ್ರದೇಶದ ಮಕ್ಕಳಂತೆ ಸಾಧನೆ ಮಾಡಲು ಸಾಧ್ಯವಾಯಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮಾಂಡವ್ಯ ಋಷಿಗಳಿಂದಾಗಿ ಮಂಡ್ಯ ಎಂದು ನಾಮಕರಣವಾಯಿತು. ಅದೇ ಮಂಡ್ಯಕ್ಕೆ ಮಾಂಡವೀಯ ಎಂಬ ಹೆಸರಿನ ಕ್ರೀಡಾ ಸಚಿವರೇ ಬಂದಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ವಿವಿಧ ಕಂಪನಿಗಳ ಸಿಇಓಗಳನ್ನು ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕಲಾತಂಡಗಳೊಂದಿಗೆ ಮೆರವಣಿಗೆ

ಒಳಾಂಗಣ ಕ್ರೀಡಾಂಗಣಕ್ಕೆ ಭೂಮಿ ಪೂಜೆ ನೆರವೇರಿಸಿದ ನಂತರ ಕೇಂದ್ರ ಸಚಿವರಾದ ಮನ್ಸುಖ್ ಮಾಂಡವೀಯ ಹಾಗೂ ಎಚ್ .ಡಿ. ಕುಮಾರಸ್ವಾಮಿ ಅವರು ವೇದಿಕೆಯ ಕಾರ್ಯಕ್ರಮಕ್ಕೆ ತೆರೆದ ವಾಹನದಲ್ಲಿ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ಕರೆತರಲಾಯಿತು. ಈ ಸಂದರ್ಭದಲ್ಲಿ ವಿ.ಸಿ. ಫಾರಂ ಗೇಟ್‌ನಲ್ಲಿ ಅಭಿಮಾನಿಗಳು ಬೃಹತ್ ಬೆಲ್ಲದ ಹಾರವನ್ನು ಹಾಕಿ ಸ್ವಾಗತಿಸಿದರು. ಇಷ್ಟೊಂದು ದೊಡ್ಡ ಪ್ರಮಾಣದ ಬೆಲ್ಲದ ಹಾರದ ಮೂಲಕ ಸಿಕ್ಕಿದ ಸ್ವಾಗತವನ್ನು ಕಂಡು ಮಾಂಡವೀಯ ಅವರು ಚಕಿತರಾದರು. ಮಂಡ್ಯದ ಬೆಲ್ಲದ ಶ್ರೇಷ್ಠತೆಯ ಬಗ್ಗೆ ಕುಮಾರಸ್ವಾಮಿ ಅವರು ಮಾಂಡವೀಯ ಅವರಿಗೆ ವಿವರಿಸಿದರು.ಇಬ್ಬರು ಸಚಿವರಿದ್ದ ವಾಹನವನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಚಾಲನೆ ಮಾಡಿಕೊಂಡು ವೇದಿಕೆಗೆ ಕರೆತಂದದ್ದು ವಿಶೇಷವಾಗಿತ್ತು.



ವಿಶಿಷ್ಟಚೇತನರಿಗೆ ವಾಹನ ವಿತರಣೆ

ವೇದಿಕೆಯ ಸಭೆಯ ನಂತರ 388 ಮಂದಿ ವಿಕಲಚೇತನರಿಗೆ ಟಿಸಿಎಸ್ ಕಂಪನಿ ಮತ್ತು ಭಾರತೀಯ ಉಕ್ಕು ಪ್ರಾಧಿಕಾರ ತಮ್ಮ ಸಿಎಸ್ ಆರ್ ನಿಧಿಯಲ್ಲಿ ನೀಡಿರುವ ಎಲೆಕ್ಟ್ರಿಕ್ ವಾಹನಗಳನ್ನು ವಿತರಣೆ ಮಾಡಲಾಯಿತು. ತದನಂತರ ಇನ್ಫೋಸಿಸ್ ಕಂಪನಿ ನೀಡಿರುವ 500 ಕಂಪ್ಯೂಟರ್‌ಗಳು, 100 ಲ್ಯಾಪ್‌ಟಾಪ್ ಗಳನ್ನು ಸರ್ಕಾರಿ ಶಾಲೆಗಳಿಗೆ ಹಸ್ತಾಂತರ ಮಾಡಲಾಯಿತು. ಹಿಂದುಜಾ ಕಂಪನಿ ನೀಡಿದ ಅತ್ಯಾಧುನಿಕ ಆಂಬ್ಯುಲೆನ್ಸ್‌ನ್ನು ಮಂಡ್ಯದ ಮಿಮ್ಸ್ ಸಂಸ್ಥೆಗೆ ನೀಡಲಾಯಿತು.

ಭಾವುಕರಾದ ಎಚ್‌ಡಿಕೆ

ವಿಶಿಷ್ಟಚೇತನರಿಗೆ ಎಲೆಕ್ಟ್ರಿಕ್ ವಾಹನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಸಚಿವ ಕುಮಾರಸ್ವಾಮಿ ಅವರು ಭಾವೋದ್ವೇಗಕ್ಕೆ ಒಳಗಾದರು. ವಾಹನಗಳನ್ನು ಸ್ವೀಕರಿಸುತ್ತಿದ್ದ ವಿಕಲಚೇತನರು ತಮಗೇ ಕೃತಜ್ಞತೆ ಹೇಳುವಾಗ ಕಣ್ಣಲ್ಲಿ ನೀರು ತಂಬಿಕೊಂಡ ಸಚಿವರು, ಇಷ್ಟು ದೂರ ಬಂದು ವಾಹನಗಳನ್ನು ಸ್ವೀಕರಿದ್ದಕ್ಕಾಗಿ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ರಸ್ತೆ ಕಾಮಗಾರಿಗೆ ಶಾಸಕ ಚಾಲನೆ



ಮದ್ದೂರು ತಾಲೂಕಿನ ಕದಲೂರು ಗ್ರಾಮದಲ್ಲಿ 1.30 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಎಂ.ಉದಯ ಗುದ್ದಲಿಪೂಜೆ ನೆರವೇರಿಸಿದರು.

ಮದ್ದೂರು: ಗ್ರಾಮೀಣ ಭಾಗದ ರಸ್ತೆಗಳನ್ನು ಆಧುನೀಕರಣಗೊಳಿಸಿ ಸ್ಥಳೀಯ ನಿವಾಸಿಗಳಿಗೆ ಅನುಕೂಲ ಕಲ್ಪಿಸಬೇಕೆಂಬ ನಿಟ್ಟಿನಲ್ಲಿ ಸಂಬಂಧಿಸಿದ ಸಚಿವರೊಟ್ಟಿಗೆ ಚರ್ಚಿಸಿ ಅನುದಾನವನ್ನು ಬಿಡುಗಡೆಗೊಳಿಸುವ ಮೂಲಕ ನೆನೆಗುದಿಗೆ ಬಿದ್ದಿರುವ ರಸ್ತೆಗಳ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಿರುವುದಾಗಿ ಶಾಸಕ ಕೆ.ಎಂ. ಉದಯ ತಿಳಿಸಿದರು.

ತಾಲೂಕಿನ ಕದಲೂರು ಗ್ರಾಮದಲ್ಲಿ ಸುಮಾರು 1.30 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ತಾಲೂಕಿನ ಸೋಮನಹಳ್ಳಿ, ಕದಲೂರು, ಇನ್ನಿತರ ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಿದ್ದು ಈ ಭಾಗದ ಬಹುದಿನದ ಬೇಡಿಕೆಯನ್ನು ಈಡೇರಿಸಿರುವುದಾಗಿ ಹೇಳಿದರು.

ತಾವು ಪ್ರಥಮ ಬಾರಿಗೆ ಶಾಸಕರಾಗಲು ಕಾರಣರಾದ ಕ್ಷೇತ್ರದ ಜನರ ಋಣ ತೀರಿಸಬೇಕೆಂಬ ಉದ್ದೇಶದಿಂದ ಸಂಬಂಧಿಸಿದ ಸಚಿವರನ್ನು ಮತ್ತು ಅಧಿಕಾರಿಗಳನ್ನು ಸಂಪರ್ಕಿಸಿ ನಿರೀಕ್ಷೆಗೂ ಮೀರಿ ಅನುದಾನವನ್ನು ಬಿಡುಗಡೆಗೊಳಿಸುವ ಮೂಲಕ ಹಲವು ಗ್ರಾಮಗಳಲ್ಲಿ ಶಾಶ್ವತ ಯೋಜನೆಯನ್ನು ರೂಪಿಸಲು ಮುಂದಾಗಿರುವುದಾಗಿ ಹೇಳಿದರು.

ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಸುಮಾರು ಎರಡು ಸಾವಿರ ಕೋಟಿ ರೂ.ಗಳ ಅನುದಾನ ತಂದು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದು ಕೆಲ ವಿರೋಧ ಪಕ್ಷದ ನಾಯಕರು ತಮ್ಮ ಅಭಿವೃದ್ಧಿಯನ್ನು ಸಹಿಸದೆ ಇಲ್ಲಸಲ್ಲದ ಹೇಳಿಕೆಗಳನ್ನು ನೀಡುತ್ತಿದ್ದು ಇದಕ್ಕೆ ತಾವು ಯಾವುದೇ ರೀತಿಯ ಸೊಪ್ಪು ಹಾಕುವುದಿಲ್ಲವೆಂದ ಅವರು ತಾವು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇ ಸಾಕ್ಷಿಗುಡ್ಡೆಯಾಗಿ ನಿಂತಿವೆ ಎಂದರು.

ಈ ವೇಳೆ ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ತಾ.ಪಂ. ಮಾಜಿ ಸದಸ್ಯ ಕೆ.ಆರ್.ಮಹೇಶ್, ಗ್ರಾ.ಪಂ. ಮಾಜಿ ಅಧ್ಯಕ್ಷ ತಿಮ್ಮೇಗೌಡ, ಲೋಕೇಶ್, ಪ್ರಕಾಶ್ ಇತರರಿದ್ದರು.

ಜನರಿಗೆ ಅಗತ್ಯ ಸೇವೆ ಒದಗಿಸಿ: ಚಲುವರಾಯಸ್ವಾಮಿ

ಮಂಡ್ಯ: ಕಂದಾಯ ಇಲಾಖೆ ನೌಕರರು ಕರ್ತವ್ಯ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಅಗತ್ಯ ಸೇವೆ ಒದಗಿಸಬೇಕು ಎಂದು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘ (ರಿ)ಬೆಂಗಳೂರು ಕಂದಾಯ ನೌಕರರ ಸಂಘದ ಭವನ ಕಟ್ಟಡ ಹಾಗೂ ಜಿಲ್ಲಾ ಕಂದಾಯ ಇಲಾಖೆ ನೌಕರರ ಮತ್ತು ನಿವೃತ್ತ ನೌಕರರ ಗೃಹ ನಿರ್ಮಾಣ ಕಚೇರಿ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಂದಾಯ ನೌಕರರ ಸಂಘದ ನಿವೃತ್ತ ನೌಕರರ ಗೃಹ ನಿರ್ಮಾಣ ಕಟ್ಟಡ ಬೃಹತ್ ಕಟ್ಟಡವಾಗಿ ನಿರ್ಮಾಣವಾಗಿದ್ದು,



ಕಂದಾಯ ಇಲಾಖೆ ನೌಕರರ ಸಮಸ್ಯೆಯನ್ನು ಬಗೆಹರಿಸಲು ಒಳ್ಳೆಯ ಕಟ್ಟಡವಾಗಿದ್ದು ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕಿವಿಮಾತು ಹೇಳಿದರು.

ಅಪರ ಜಿಲ್ಲಾಧಿಕಾರಿ ಬಿ. ಸಿ ಶಿವಾನಂದಮೂರ್ತಿ ಮಾತನಾಡಿ, ನೌಕರರ ಪರಿಶ್ರಮದಿಂದ ಈ ಕಟ್ಟಡ ನಿರ್ಮಾಣವಾಗಿದೆ. ನಿವೃತ್ತಿ ಹೊಂದಿರುವ ನೌಕರರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಟ್ಟಡ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಎಲ್ಲಾ ಕಂದಾಯ ಇಲಾಖೆಯ ನೌಕರರು ನಿಷ್ಠೆಯಿಂದ ಕೆಲಸ ಮಾಡಬೇಕು ಜಿಲ್ಲೆಯ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕೆಂಗೇರಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು ಶ್ರೀ ನಿಶ್ಚಲಾನಂದನಾಥಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಪಾಂಡವಪುರ ಉಪ ವಿಭಾಗಾಧಿಕಾರಿ ಶ್ರೀನಿವಾಸ್, ಕರ್ನಾಟಕ ರಾಜ್ಯ ಸಹಕಾರಿ ಕಂದಾಯ ಇಲಾಖೆ ನೌಕರ ಸಂಘದ ಜಿಲ್ಲಾಧ್ಯಕ್ಷ ಡಿ. ತಮ್ಮಣ್ಣಗೌಡ ಉಪಸ್ಥಿತರಿದ್ದರು.

ಬೃಹತ್ ಆರೋಗ್ಯ ತಪಾಸಣೆ, ಚಿಕಿತ್ಸೆ ಇಂದು

ಮದ್ದೂರು: ಮದ್ದೂರು ಲಯನ್ಸ್, ಕದಂಬ ಲಯನ್ಸ್ ಸಂಸ್ಥೆ, ಮಾನಸ ಎಜುಕೇಷನ್ ಟ್ರಸ್ಟ್, ಮದ್ದೂರು ಕ್ರೀಡಾ ಬಳಗ, ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ, ಒಕ್ಕಲಿಗರ ಸಂಘ, ದಂತ ವೈದ್ಯಕೀಯ ಮಹಾವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಬೃಹತ್ ಆರೋಗ್ಯ ತಪಾಸಣೆ, ದಂತ ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಆಯೋಜಿಸಿರುವುದಾಗಿ ಮದ್ದೂರು ಕ್ರೀಡಾ ಬಳಗದ ಕಾರ್ಯದರ್ಶಿ ಪ್ರೊ. ಬಿ.ಎಸ್ .ಬೋರೇಗೌಡ ತಿಳಿಸಿದರು.

ಪಟ್ಟಣದ ಎಂ.ಕೆ.ಬಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿ ವೇಳೆ ಮಾತನಾಡಿ, ಮಾ. 15ರ ಭಾನುವಾರ ತಾಲೂಕಿನ ಬೆಸಗರಹಳ್ಳಿ ಮಾನಸ ವಿದ್ಯಾಸಂಸ್ಥೆಯ ಆವರಣದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಬೃಹತ್ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ, ರಕ್ತದಾನ ಶಿಬಿರವನ್ನು ಆಯೋಜಿಸಿರುವುದಾಗಿ ವಿವರಿಸಿದರು.

ಮಾನಸ ವಿದ್ಯಾಸಂಸ್ಥೆಯ ಅಧ್ಯಕ್ಷವಿ.ಕೆ.ಜಗದೀಶ್ ರವರ ಹುಟ್ಟುಹಬ್ಬದ ಅಂಗವಾಗಿ ಆರೋಗ್ಯ ತಪಾಸಣೆ ಹಾಗೂ ವಿವಿಧ ಸಮಾಜಮುಖಿ ಸೇವಾ ಕಾರ್ಯಗಳಿಗೆ ಮುಂದಾಗಿದ್ದು ಗ್ರಾಮೀಣ ಭಾಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇದರ ಸದುಪಯೋಗಕ್ಕೆ ಮುಂದಾಗುವಂತೆ ಕೋರಿದ್ದಾರೆ.

ಮೂಳೆ ಸಮಸ್ಯೆಗೆ ಪರಿಹಾರ, ಚರ್ಮರೋಗ, ಸ್ತ್ರೀರೋಗ ಚಿಕಿತ್ಸೆ, ರಕ್ತಪರೀಕ್ಷೆ, ಕಣ್ಣು ತಪಾಸಣೆ, ಕಿವಿ, ಮೂಗು, ಗಂಟಲು ಚಿಕಿತ್ಸೆ , ಮಕ್ಕಳ ಆರೋಗ್ಯ ತಪಾಸಣೆ, ಹೃದಯ ಸಮಸ್ಯೆ, ದಂತ ತಪಾಸಣೆ ಹಾಗೂ ಬಾಯಿ ಕ್ಯಾನ್ಸರ್ ಸಮಸ್ಯೆ ಸೇರಿದಂತೆ ಇನ್ನಿತರ ರೋಗಗಳ ಬಗ್ಗೆ ತಪಾಸಣೆ ಕೈಗೊಂಡು ಅಗತ್ಯ ಮಾಹಿತಿ ಮತ್ತು ಚಿಕಿತ್ಸೆ ನೀಡಲಿರುವುದಾಗಿ ಹೇಳಿದರು.

ಮಾಜಿ ಜಿಲ್ಲಾ ರಾಜ್ಯಪಾಲ ಕೆ.ದೇವೇಗೌಡ ಹಾಗೂ ಬಿ.ಐ.ಟಿ ಕಾಲೇಜು ಛೇರ್ಮನ್ ಅಶೋಕ್. ಎಸ್.ಡಿ.ಜಯರಾಂ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು ಕ್ರೀಡಾ ಬಳಗದ ಅಧ್ಯಕ್ಷ ವಿ.ಕೆ.ಜಗದೀಶ್ ಅಧ್ಯಕ್ಷತೆವಹಿಸಲಿರುವಕಾರ್ಯಕ್ರಮದಲ್ಲಿಎರಡನೇ ಜಿಲ್ಲಾ ರಾಜ್ಯಪಾಲ ಟಿ.ನಾರಾಯಣಸ್ವಾಮಿ, ಮಾಜಿ ಜಿಲ್ಲಾ ರಾಜ್ಯಪಾಲ ಜಿ.ಎ.ರಮೇಶ್, ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್, ಕಾರ್ಯದರ್ಶಿ ಸಿ.ಜಿ.ಗಂಗಾಧರ್, ನಲ್ಲಿಗೆರೆ ಬಾಲಕೃಷ್ಣ, ಮೂಡ್ಯ ಚಂದ್ರಶೇಖರ್, ಎಂ.ಆರ್.ರಾಘವೇಂದ್ರ, ಹಾಪ್ ಕಾಮ್ಸ್ ದೇವರಾಜು ಭಾಗವಹಿಸಲಿದ್ದಾರೆ.

ವಿಧಾನ ಪರಿಷತ್ ಸದಸ್ಯ, ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ದಿನೇಶ್ ಗೂಳಿಗೌಡ

ಪತ್ರಕರ್ತರ ಕ್ಷೇಮಾಭಿವೃದ್ಧಿ ಸೌಲಭ್ಯಕ್ಕೆ ಕ್ರಮ

ಮದ್ದೂರು: ರಾಜ್ಯ ಸರಕಾರ ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಹತ್ತು ಹಲವು ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಿರುವ ಜತೆಗೆ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದೆ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದರು.

ಪಟ್ಟಣದ ಹಳೆ ಬಸ್ ನಿಲ್ದಾಣದ ಬಳಿಯಿರುವ ಶ್ರೀ ವೆಂಕಟೇಶ್ವರ ಕನ್‌ವೆನ್ಷನ್ ಹಾಲ್‌ನಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ತಾಲೂಕು ಘಟಕ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದ ವೇಳೆ ನೂತನ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರ ನೆರವೇರಿಸಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ರಕರ್ತರ ಹಲವು ಯೋಜನೆಗಳನ್ನು ಜಾರಿಗೊಳಿಸುವ ಜತೆಗೆ ಗ್ರಾಮೀಣ ಭಾಗದ ಪತ್ರಕರ್ತರಿಗೆ ಉಚಿತ ಬಸ್ ಸೌಲಭ್ಯ ಕಲ್ಪಿಸಲು ಮುಂದಾಗಿದ್ದು ಈಗಾಗಲೇ ನೋಂದಣಿ ಪ್ರಕ್ರಿಯೆ ಜಾಲ್ತಿಯಲ್ಲಿದ್ದು ನಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಪತ್ರಕರ್ತರ ಮಾಸಾಶನವನ್ನು 10 ಸಾವಿರದಿಂದ 15 ಸಾವಿರ ರೂ.ಗಳನ್ನು ಹೆಚ್ಚಳ ಮಾಡಿರುವುದಾಗಿ ಹೇಳಿದರು.



ಶಾಸಕ ಕೆ.ಎಂ.ಉದಯ ಮಾತನಾಡಿ, ಪತ್ರಕರ್ತರು ಯಾವಾಗಲೂ ರಾಜಕಾರಣಿ ಮತ್ತು ಅಧಿಕಾರಿಗಳನ್ನು ಬಡಿದೆಬ್ಬಿಸುವ ಮೂಲಕ ಸಮಾಜದ ಅಭ್ಯುದ್ಯಯಕ್ಕೆ ನಿರಂತರವಾಗಿ ಶ್ರಮಿಸಬೇಕಾಗಿದ್ದು ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಸೇರಿದಂತೆ ನಾಲ್ಕನೇ ಅಂಗವಾದ ಪತ್ರಿಕಾ ರಂಗಕ್ಕೂ ತಮ್ಮದೇ ಆದ ಮೌಲ್ಯವಿದ್ದು ಮೌಲ್ಯಕ್ಕೆ ಚ್ಯುತಿ ಬಾರದಂತೆ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕೆಂದರು.

ಪದಾಧಿಕಾರಿಗಳಾದ ಶಿವನಂಜಯ್ಯ(ಅಧ್ಯಕ್ಷ), ಸಿ.ಹರೀಶ್(ಉಪಾಧ್ಯಕ್ಷ), ಎಂ.ಆರ್.ಚಕ್ರಪಾಣಿ (ಪ್ರಧಾನ ಕಾರ್ಯದರ್ಶಿ), ಪಿ.ನಂದೀಶ್ (ಖಜಾಂಚಿ) ಹಾಗೂ ಎಂ.ಪಿ.ವೆಂಕಟೇಶ್(ಕಾರ್ಯದರ್ಶಿ) ರವರುಗಳಿಗೆ ನಿರ್ಗಮಿತ ಅಧ್ಯಕ್ಷ ಎಂ.ಆರ್.ಚಕ್ರಪಾಣಿ ರವರಿಂದ ಶಾಸಕ ದಿನೇಶ್ ಗೂಳೀಗೌಡ ಅಧಿಕಾರ ಹಸ್ತಾಂತರಿಸಿದರು. ಈ ವೇಳೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಸಿ.ಎನ್.ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷರಾದ ಕೆ.ಸಿ.ಮಂಜುನಾಥ್, ರವಿಸಾವಂದಿಪುರ,ಪ್ರಧಾನಕಾರ್ಯದರ್ಶಿ ಶಶಿಧರ್, ರಾಷ್ಟ್ರೀಯ ಸಮಿತಿ ಸದಸ್ಯ ಎಂ.ಎನ್.ಶಿವಪ್ರಕಾಶ್, ಜಿಲ್ಲಾ ನಿರ್ದೇಶಕ ಪುಟ್ಟಸ್ವಾಮಿ, ಎಸ್.ಕೆ.ಸುಂದರ್ ರಾಜ್, ಎಚ್.ಜಿ.ರವಿಕುಮಾರ್, ಸತೀಶ್, ಎಂ.ಆರ್. ಅಶೋಕ್‌ಕುಮಾರ್, ನಾಗರಾಜು, ವಿ.ಎಸ್.ಪ್ರಭು, ಕೆ.ಎಸ್.ಸುನೀಲ್‌ಕುಮಾರ್, ಕೃಷ್ಣ ಇತರರಿದ್ದರು.

ವಿಧಿ ವಿಧಾನಗಳೊಂದಿಗೆ ಉತ್ಸವ ಮೂರ್ತಿಗೆ ಪೂಜೆ, ಹೋಮ

ಮಾಯಮ್ಮ, ಲಕ್ಷ್ಮೀದೇವಿ ಮೂರ್ತಿ ಪ್ರತಿಷ್ಠಾಪನೆ

ಕೃಷ್ಣರಾಜಪೇಟೆ: ತಾಲೂಕಿನ ಕಸಬಾ ಹೋಬಳಿಯ ಚಿಲ್ಲದಹಳ್ಳಿ ಗ್ರಾಮ ದೇವತೆ ಶ್ರೀ ಮಾಯಮ್ಮ ಮತ್ತು ಶ್ರೀ ಲಕ್ಷ್ಮೀದೇವಿ ಅಮ್ಮನವರ ಉತ್ಸವ ಮೂರ್ತಿಯ ಪ್ರತಿಷ್ಠಾಪನೆ ಮತ್ತು ಪೂಜಾ ಮಹೋತ್ಸವವು ಪವಿತ್ರ ಹೇಮಾವತಿ ನದಿ ದಂಡೆಯ ಹೇಮಗಿರಿ ಶ್ರೀ ಕ್ಷೇತ್ರದಲ್ಲಿ ಹೋಮ-ಹವನ ಹಾಗೂ ಪೂಜಾ ವಿಧಿ ವಿಧಾನಗಳೊಂದಿಗೆ ಉತ್ಸವ ಮೂರ್ತಿಯ ದೇವತೆಗಳ ವಿಗ್ರಹಕ್ಕೆ ವೈದಿಕ ಮಂತ್ರಗಳ ಮೂಲಕ ಜೀವಶಕ್ತಿ ಅವಾಹನೆ ಮಾಡಿ ಪ್ರಾಣ ಪ್ರತಿಷ್ಠಾಪನೆ ಮಾಡಿಸಲಾಯಿತು.

ಕಳೆದ ಎರಡು ವರ್ಷಗಳ ಹಿಂದೆ ಚಿಲ್ಲದಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ಹಾಗೂ ದಾನಿಗಳ ನೆರವಿನಿಂದ ಶ್ರೀ ಮಾಯಮ್ಮ ಮತ್ತು ಶ್ರೀ ಲಕ್ಷ್ಮೀದೇವಿ ಅಮ್ಮನವರ ದೇವಾಲಯವನ್ನು ನಿರ್ಮಾಣ ಮಾಡಿ ಲೋಕಾರ್ಪಣೆ ಮಾಡಲಾಗಿತ್ತು. ಆದರೆ ಹಬ್ಬ ಹರಿದಿನಗಳಲ್ಲಿ, ಹಾಗೂ ವಿಶೇಷ ದಿನಗಳಲ್ಲಿ ಗ್ರಾಮದಲ್ಲಿ ದೇವರನ್ನು ಮೆರವಣಿಗೆ ಮಾಡಲು ಇಚ್ಚಿಸುವವರಿಗೆ ಉತ್ಸವ ಮೂರ್ತಿ ಇರಲಿಲ್ಲ, ಇದರಿಂದಾಗಿ ಗ್ರಾಮ ದೇವತೆಗೆ ಉತ್ಸವ ಮೂರ್ತಿಯನ್ನು ನಿರ್ಮಿಸುವ ಬಗ್ಗೆ ಗ್ರಾಮಸ್ಥರು ಒಮ್ಮತದ ತೀರ್ಮಾನ ಕೈಗೊಂಡು



ಎಲ್ಲರ ಸಹಕಾರದಿಂದ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಯಿತು. ಶ್ರೀ ಮಾಯಮ್ಮ ಮತ್ತು ಶ್ರೀ ಲಕ್ಷ್ಮೀದೇವಿ ಅಮ್ಮನವರ ಎರಡೂ ಮೂರ್ತಿಗಳನ್ನು ಒಂದೇ ಉತ್ಸವ ಅಡ್ಡಪಲ್ಲಕ್ಕಿಯಲ್ಲಿ ಪ್ರತಿಷ್ಠಾಪನೆ ಮಾಡುವ ಕಾರ್ಯಗಳು ನಡೆದವು. ಉತ್ಸವ ಮೂರ್ತಿಯ ಪ್ರತಿಷ್ಠಾಪನೆಯ ಅಂಗವಾಗಿ ಪವಿತ್ರ ಹೇಮಾವತಿ ನದಿಯಲ್ಲಿ ಮೂರ್ತಿಯನ್ನು ಪವಿತ್ರಗೊಳಿಸಿ, ಶ್ರೀ ಮಾಯಮ್ಮ ಮತ್ತು ಶ್ರೀ ಲಕ್ಷ್ಮೀದೇವಿ ದೇವತೆಗಳನ್ನು ಮೂರ್ತಿಯಲ್ಲಿ ನೆಲೆಸಲು ಪುರೋಹತರ ತಂಡವು ಮೂರ್ತಿಯ ವಿವಿಧ ಭಾಗಗಳನ್ನು ಸ್ಪರ್ಶಿಸಿ ದೈವಿಕ ಶಕ್ತಿಯನ್ನು ಮೂರ್ತಿಗೆ ಬೆಸೆಯುವ ಕಾರ್ಯಕ್ರಮಗಳು ನಡೆದವು. ಚಿನ್ನದ ಸೂಜಿ ಹಾಗೂ ದರ್ಬೆಯಿಂದ ಮೂರ್ತಿಯ ಕಣ್ಣುಗಳನ್ನು ತೆರೆಯುವ ಮೂಲಕ ಉತ್ಸವ ಮೂರ್ತಿಗೆ ದೃಷ್ಟಿ ನೀಡಲಾಯಿತು. ನಂತರ ಮೂರ್ತಿಯನ್ನು ಗಂಗಾಜಲ, ಕ್ಷೀರ, ಧಾನ್ಯ, ಮತ್ತು ತೈಲದಲ್ಲಿ ಇರಿಸಿ ಪವಿತ್ರಗೊಳಿಸಲಾಯಿತು. ಉತ್ಸವ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆಯ ನಂತರ ಭಕ್ತಾಧಿಗಳಿಗೆ ದೇವರ ದರ್ಶನ ಪಡೆಯಲು ಅವಕಾಶ ನೀಡಲಾಯಿತು. ಉತ್ಸವ ಮೂರ್ತಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಅನ್ನಪ್ರಸಾದವನ್ನು ಗ್ರಾಮಸ್ಥರ ವತಿಯಿಂದ ಆಯೋಜಿಸಲಾಗಿತ್ತು.

ಉತ್ಸವ ಮೂರ್ತಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಚಿಲ್ಲದಹಳ್ಳಿ ಗ್ರಾಮದ ಎಲ್ಲಾ ಮುಖಂಡರು ಹಾಗೂ ಶ್ರೀ ಮಾಯಮ್ಮ-ಶ್ರೀ ಲಕ್ಷ್ಮೀದೇವಿಯ ಯುವಕರ ಬಳಗದ ಸದಸ್ಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಆರೋಗ್ಯ ಉಚಿತ ತಪಾಸಣೆ ಇಂದು

◆ **ಬೇಲೂರು:** ಪಟ್ಟಣದ ಕಾವೇರಿ ಕ್ಲಿನಿಕ್ ಮುಂಭಾಗ ಮಾರ್ಚ್ 15ರಂದು ಭಾನುವಾರ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಕಾವೇರಿ ಕ್ಲಿನಿಕ್,ಲಯನ್ಸ್ ಕ್ಲಬ್, ಕೆಆರ್‌ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಚಿಕ್ಕ ಮಗಳೂರು ಹಾಗೂ ಎಂ ಎಂ ಎಂ ಆಸ್ಪತ್ರೆ, ಹಾಸನ ಇವರ ಸಂಯುಕ್ತಾಶ್ರಯ ದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆ ಯವರೆಗೆ ಈ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಮಧುಮೇಹ (ಶುಗರ್), ರಕ್ತದೊತ್ತಡ, ಹೃದಯರೋಗ, ಮಕ್ಕಳ ಆರೋಗ್ಯ ತಪಾಸಣೆ, ಮೂಳೆ ಮತ್ತು ಕೀಲು ರೋಗಗಳು, ಸ್ತ್ರೀರೋಗ, ನರ ರೋಗ ಹಾಗೂ ಕಣ್ಣಿನ ತೊಂದರೆಗಳ ತಪಾಸಣೆ ನಡೆಸಲಾಗುತ್ತದೆ. ಈ ಆರೋಗ್ಯ ಶಿಬಿರದಲ್ಲಿ ಡಾ. ಗುರುಪ್ರಸಾದ್ ಬಾಣೂರು, ಡಾ. ಎಂ. ಉಮೇಶ್, ಡಾ. ಎಸ್.ಕೆ. ಅವಿನಾಶ್, ಡಾ. ಜಿ.ಆರ್. ಲೀಲಾ, ಡಾ. ಚಂದ್ರಮೌಳಿ, ಡಾ. ಬಿ.ಕೆ. ಮನೋಜ್ ಕುಮಾರ್ ಹಾಗೂ ಆಫ್ತಾಲ್ಮಿಕ್ ಅಧಿಕಾರಿ ಕೆ.ಒ. ಆದರ್ಶ ಅವರು ಭಾಗವಹಿಸಿ ಸಾರ್ವಜನಿ ಕರಿಗೆ ತಪಾಸಣೆ ಹಾಗೂ ಸಲಹೆ ನೀಡಲಿದ್ದಾರೆ. ಪಟ್ಟಣದ ಸಾರ್ವಜನಿ ಕರು ಈ ಉಚಿತ ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಡಾ. ಚಂದ್ರಮೌಳಿ ತಿಳಿಸಿದ್ದಾರೆ.



ಹೊಳೆನರಸೀಪುರ ತಾಲೂಕಿನ ಹಳ್ಳಿ ಮೈಸೂರು ಗ್ರಾಮದ ಅಧಿದೇವತೆ ಶ್ರೀ ಸೀಗೆತಾಳಮ್ಮನವರ ಜಾತ್ರಾ ಮಹೋತ್ಸವವು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಅತ್ಯಂತ ಸಡಗರ, ವೈಭವದಿಂದ ನೆರವೇರಿತು.

ಸೀಗೆತಾಳಮ್ಮ ಜಾತ್ರಾ ಮಹೋತ್ಸವ

◆ **ಹೊಳೆನರಸೀಪುರ:** ತಾಲೂಕಿನ ಹಳ್ಳಿ ಮೈಸೂರು ಗ್ರಾಮದ ಅಧಿದೇವತೆ ಶ್ರೀ ಸೀಗೆತಾಳಮ್ಮನವರ ಜಾತ್ರಾ ಮಹೋತ್ಸವವು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಅತ್ಯಂತ ಸಡಗರ ಮತ್ತು ವೈಭವದಿಂದ ನೆರವೇರಿತು. ಮೂರು ವರ್ಷಕ್ಕೊಮ್ಮೆ ಜರುಗುವ ಈ ವಿಶೇಷ ಜಾತ್ರೆಯನ್ನು ಕಣ್ತುಂಬಿಕೊಳ್ಳಲು ಸುತ್ತಮುತ್ತಲ ಗ್ರಾಮಸ್ಥರು ಅಪಾರ ಸಂಖ್ಯೆಯ ಜನಸ್ತೋಮ ಆಗಮಿಸಿತ್ತು.

ಶುಕ್ರವಾರ ಮುಂಜಾನೆಯಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಆರಂಭವಾಗಿದ್ದು, ದೇವಿಗೆ ವಿಶೇಷ ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿಸುವ ಮೂಲಕ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಸಂಜೆ ವೇಳೆ ರಥ ಬೀದಿಯಲ್ಲಿ ಜಮಾಯಿಸಿದ ಗ್ರಾಮಸ್ಥರು ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ರಾತ್ರಿ ಸುಮಾರು 10.30ರ ವೇಳೆಗೆ ವಾಡಿಕೆಯಂತೆ ಗೋಹಳ್ಳಿ ಗ್ರಾಮಸ್ಥರು ತೇರು ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಮಂಗಳವಾದ್ಯ, ತಮಟೆ ನಗಾರಿಗಳ ಶಬ್ದ ಹಾಗೂ ಭಕ್ತರ ಜಯಘೋಷಗಳ ನಡುವೆ ಸಾಗಿದ ರಥೋತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಮೂರು ವರ್ಷಗಳ ಕಾಯುವಿಕೆಯ ನಂತರ ನಡೆದ ಈ ಜಾತ್ರೆಯಲ್ಲಿ ಗ್ರಾಮಸ್ಥರು ಹಾಗೂ ಭಕ್ತರು ಪರಸ್ಪರ ಹಣ್ಣು-ಜವನ ಎಸೆದು ಸಡಗರ ಹಂಚಿಕೊಂಡರು. ಇಡೀ ಗ್ರಾಮವು ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದು, ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.



ಹೊಳೆನರಸೀಪುರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಅರ್ಹ ಫಲಾನುಭವಿಗಳಿಗೆ ಉಚಿತ ಹೊಲಿಗೆ ಯಂತ್ರಗಳನ್ನು ಶಾಸಕ ಎಚ್.ಡಿ. ರೇವಣ್ಣ ವಿತರಿಸಲಾಯಿತು.

ಗ್ಯಾಸ್ ಬುಕಿಂಗ್ ನಂಬರ್‌ಗಳು ಕಾರ್ಯನಿರ್ವಹಿಸದೆ ಸಾರ್ವಜನಿಕರಲ್ಲಿ ಗೊಂದಲ

ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ

▸ ಮೂರ್ತಿ ಬೆಳ್ಳಾವರ

ದಿಗಂತ ವಿಶೇಷ

◆ **ಹಾಸನ:** ಅಮೇರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಹಿನ್ನೆಲೆ ಹಾಸನ ಜಿಲ್ಲೆಯಲ್ಲಿ ವಿವಿಧೆಡೆ ಕಳೆದ ನಾಲ್ಕು ದಿನಗಳಿಂದ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಇದರಿಂದ ಹೋಟೆಲ್‌ಗಳಿಗೆ, ವಸತಿ ನಿಲಯ, ಸೇರಿದಂತೆ ರೆಸಾರ್ಟ್‌ಗಳಿಗೂ ಸಮಸ್ಯೆ ಎದುರಾಗಿದೆ.

ಮಧ್ಯಪ್ರಾಚ್ಯದ ರಾಷ್ಟ್ರಗಳ ನಡುವಿನ ಯುದ್ಧವು ಹಾಸನ ನಗರ ಸೇರಿದಂತೆ ಬೇಲೂರು, ಸಕಲೇಶಪುರ ಭಾಗದಲ್ಲಿ ವಾಣಿಜ್ಯ ಅಡುಗೆ ಅನಿಲ ಪೂರೈಕೆಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಹೋಟೆಲ್‌ಗಳು, ದೇವ ಸ್ಥಾನದ ದಾಸೋಹ ಭವನಗಳ ವಸತಿ ನಿಲಯ, ಸೇರಿದಂತೆ ರೆಸಾರ್ಟ್‌ಗಳು ಸಹ ತೀವ್ರ ಸಂಕಷ್ಟ ಎದುರಿಸುತ್ತಿವೆ. ಜಿಲ್ಲೆಯ ಹೋಟೆಲ್‌ಗಳು ಗ್ಯಾಸ್ ಇಲ್ಲದೆ ಬಂದ್ ಆಗಿವೆ ಮತ್ತು ಮೆನುವನ್ನು ಕಡಿತಗೊಳಿಸಿವೆ. ಮತ್ತೊಂದೆಡೆ ಗ್ಯಾಸ್ ಏಜೆನ್ಸಿಗಳಲ್ಲಿ ಗ್ಯಾಸ್ ಬುಕಿಂಗ್ ನಂಬರ್‌ಗಳು ಕಾರ್ಯನಿರ್ವಹಿಸದೆ (ಸರ್ವರ್ ಇಲ್ಲದ ಕಾರಣ) ಸಾರ್ವಜನಿಕರಲ್ಲಿ ಗೊಂದಲ ಮತ್ತು ಆತಂಕ ನಿರ್ಮಾಣವಾಗಿದೆ.

ಹೋಟೆಲ್ ಉದ್ಯಮಕ್ಕೆ ಹೊಡೆತ, ಹೋಟೆಲ್ ಬಂದ್: ಸಕಲೇಶಪುರ ತಾಲೂಕಿನ, ಬಾಳ್ಳುಪೇಟೆಯಲ್ಲಿರುವ ಮೈತ್ರಿ, ಹೊಟೆಲ್, ಕರ್ನಾಟಕ ಹೊಟೆಲ್‌ಗಳು ಸೇರಿದಂತೆ ಇನ್ನಿತರೆ ಈ ಭಾಗದ ಹೋಟೆಲ್‌ಗಳು ಕಳೆದ ಮೂರು ದಿನದಿಂದ ಸಿಲಿಂಡರ್ ಪೂರೈಕೆ ಆಗದೆ ಬಂದ್ ಮಾಡಲಾಗಿದೆ. ಹೊಟೆಲ್ ಬಂದ್‌ನಿಂದ ಹತ್ತಾರು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ವಾರಾಂತ್ಯದಲ್ಲಿ ಸಾಕಷ್ಟು ಗ್ರಾಹಕರು ಬಂದು ಹೋಗುವ ರಾಷ್ಟ್ರೀಯ ಹೆದ್ದಾರಿ 75 ರ ಬಾಳ್ಳುಪೇಟೆ ಮಾರ್ಗದಲ್ಲಿರುವ ಮೈತ್ರಿ, ಹೊಟೆಲ್, ಕರ್ನಾಟಕ ಹೊಟೆಲ್‌ಗಳು ಬಂದ್ ಮಾಡಲಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿರುವ ಹಲವು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಸಹಸ್ರಾರು ಪ್ರವಾಸಿಗರನ್ನು ನಂಬಿ ಹೋಟೆಲ್ ನಡೆಸುವ ಮಾಲೀಕರಿಗೆ ಇದು ವಾಣಿಜ್ಯ ಸಿಲಿಂಡರ್ ವ್ಯತ್ಯಾಯದಿಂದ ಭಾರಿ ಸಂಕಷ್ಟ ಎದುರಿಸುವಂತಾಗಿದೆ.

ಧಾರ್ಮಿಕ ಸಂಸ್ಥೆಗಳ ದಾಸೋಹಕ್ಕೂ ಯುದ್ಧದ ಬಿಸಿ: ವಿಶ್ವ ಪ್ರಸಿದ್ಧಿ ಶ್ರೀ ಬೇಲೂರು ಚನ್ನಕೇಶವ ಸ್ವಾಮಿ ದೇವಸ್ಥಾನದಲ್ಲಿ ಪ್ರತಿ ದಿನ ನಡೆಯುವ ಅನ್ನದಾಸೋಹ ತಯಾರಿಕೆಗೂ ಅಡಚಣೆ ಉಂಟಾಗಿದೆ. ವಾಣಿಜ್ಯ ಸಿಲಿಂಡರ್ ವ್ಯತ್ಯಾಯದಿಂದ ದೇವಾಲಯದಲ್ಲಿ ಮಾ.13 ರಂದು ಮಧ್ಯಾಹ್ನದ ಅನ್ನದಾಸೋಹ ಸ್ಥಗಿತಗೊಂಡಿತ್ತು. ಸದ್ಯ ಶನಿವಾರ ತುರ್ತು ಕ್ರಮ ಕೈಗೊಂಡ ತಹಸೀಲ್ದಾರ್ ಶ್ರೀಧರ್ ಕಂಕನವಾಡಿ ಹಾಗೂ ಸ್ಥಳೀಯ ಶಾಸಕ ಹೆಚ್.ಕೆ ಸುರೇಶ್ ಅವರು ಆರು ಸಿಲಿಂಡರ್‌ಗಳ ವ್ಯವಸ್ಥೆ ಮಾಡಿ ಮತ್ತೆ ಅನ್ನದಾಸೋಹ ಆರಂಭಿಸಿದ್ದಾರೆ.

ಐತಿಹಾಸಿಕ ಶ್ರೀ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ಅನ್ನದಾಸ ಮುಂದೆಯು ಸ್ಥಗಿತಗೊಳ್ಳಬಾರದು ಎಂಬ ಕಾರಣಕ್ಕೆ ಶಾಸಕ ಎಚ್.ಕೆ.ಸುರೇಶ್ ಒಂದು ಲೋಡ್ ಸೌದೆಗಳನ್ನು ವ್ಯವಸ್ಥೆ ಮಾಡಿದ್ದಾರೆ. ತಹಸೀಲ್ದಾರ್ ಶ್ರೀಧರ್ ಕಂಕನವಾಡಿ ಅವರು ಸಿಲಿಂಡರ್, ಸೌದೆ ಜೊತೆಗೆ ಕೆಟ್ಟು ಹೋಗಿದ್ದ ಬಾಯ್ಲರ್ ರಿಪೇರಿ ಮಾಡಿಸಿ ಶನಿವಾರ ಮಧ್ಯಾಹ್ನದಿಂದಲೇ ಅನ್ನ ದಾಸೋಹ ಆರಂಭಿಸಿದ್ದಾರೆ. ಅನ್ನದಾಸೋಹ ಆರಂಭದಿಂದ ಪ್ರವಾಸಿಗರು ಹಾಗೂ ಭಕ್ತರು ಮೆಚುಗೆ ವ್ಯಕ್ತಪಡಿಸಿದ್ದಾರೆ.



ಮೆನುವಿನಲ್ಲೂ ಬದಲಾವಣೆ

ಸಕಲೇಶಪುರ ತಾಲ್ಲೂಕಿನ ಕೆಲ ರೆಸಾರ್ಟ್‌ಗಳಿಗೆ ವಾಣಿಜ್ಯ ಸಿಲಿಂಡರ್‌ಗಳು ಸರಿಯಾಗಿ ಪೋರೈಗೆ ಆಗದ ಕಾರಣ ರೆಸಾರ್ಟ್ ಮಾಲೀಕರು ತಮ್ಮ ವಹಿವಾಟನ್ನೇ ಬದಲಿಸಿಕೊಂಡಿದ್ದಾರೆ. ರೆಸಾರ್ಟ್‌ಗಳು ಬುಕಿಂಗ್‌ನಲ್ಲಿ 50% ಕಡಿತಗೊಳಿಸಿಕೊಳ್ಳಲಾಗಿದೆ ಮತ್ತು ಮುಖ್ಯವಾಗಿ ಫುಡ್ ಮೆನುವಿನಲ್ಲೂ ಬದಲಾವಣೆ ಮಾಡಿಕೊಂಡಿದ್ದಾರೆ. ಕೆಲ ರೆಸಾರ್ಟ್ ಮಾಲೀಕರು ಗ್ಯಾಸ್ ಇಲ್ಲದೇ ಸೌದೆ ಒಲೆಯಲ್ಲಿ ಅಡುಗೆ ಮಾಡಲು ಮುಂದಾಗಿದ್ದಾರೆ.

ಬುಕ್ ಮಾಡಲು ಜನರ ಪರದಾಟ

ಗೃಹಬಳಕೆಯ ಸಿಲಿಂಡರ್‌ಗಳ ಕೊರತೆಯಿಲ್ಲ ಎಂದು ಕರ್ನಾಟಕ ಸರ್ಕಾರ ಅಧಿಕೃತವಾಗಿ ತಿಳಿಸಿದರು ಜಿಲ್ಲೆಯಲ್ಲಿ ಹಾಸನ ನಗರ ಸೇರಿದಂತೆ ಸಕಲೇಶಪುರ ಗ್ಯಾಸ್ ಏಜೆನ್ಸಿ ಗಳಲ್ಲಿ ಗ್ಯಾಸ್ ಬುಕಿಂಗ್ ನಂಬರ್‌ಗಳು ಕಾರ್ಯನಿರ್ವಹಿಸದೆ(ಸರ್ವರ್ ಇಲ್ಲದ ಕಾರಣ ಸಾರ್ವಜನಿಕರಲ್ಲಿ ಗೊಂದಲ ಮತ್ತು ಆತಂಕ ನಿರ್ಮಾಣವಾಗಿದೆ. ಸಕಲೇಶಪುರ ಪಟ್ಟಣದಲ್ಲಿರುವ ಸಿದ್ದಿವಿನಾಯಕ ಗ್ಯಾಸ್ ಏಜೆನ್ಸಿ ಎದುರು ಬೆಳಿಗ್ಗೆಯಿಂದ ಅಡುಗೆ ಅನಿಲ ಪಡೆಯಲು ಹಾಗೂ ಬುಕ್ ಮಾಡಲು ನೂರಾರು ಮಂದಿ ಸಾಲುಗಟ್ಟಿ ನಿಂತಿದ್ದಾರೆ. ಆನ್‌ಲೈನ್ ಬುಕ್ಕಿಂಗ್ ಆಗದ ಹಿನ್ನಲೆಯಲ್ಲಿ ಸಕಲೇಶಪುರ ಪಟ್ಟಣ ಹಾಗೂ ತಾಲ್ಲೂಕಿನ ಹಲವು ಗ್ರಾಮಗಳಿಂದ ನೇರವಾಗಿ ಏಜೆನ್ಸಿ ಗೆ ಬಂದಿರುವ ನೂರಾರು ಜನರು ಬಿಸಿಲನ್ನು ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತ್ಯ ಗಂಟೆಗಟ್ಟಲೆ ಕಾಯ್ದು ಸಿಲಿಂಡರ್ ಬುಕ್ ಮಾಡುತ್ತಿದ್ದಾರೆ. ಸರ್ವರ್ ಸಮಸ್ಯೆಯಿಂದ ಗ್ಯಾಸ್ ಬುಕ್ಕಿಂಗ್ ಪ್ರಕ್ರಿಯೆ ನಿಧಾನವಾಗುತ್ತಿರುವುದರಿಂದ ಗ್ಯಾಸ್ ಬುಕ್ ಮಾಡಲು ಆಗದೆ ಜನರ ಪರದಾಡುವಂತಾಗಿದೆ.

ಹೆಣ್ಣು ಮಕ್ಕಳು ಅಡುಗೆ ಮನೆಗಷ್ಟೇ ಸೀಮಿತವಲ್ಲ

◆ **ಚನ್ನರಾಯಪಟ್ಟಣ:** ಕುಟುಂಬದ ಜವಾಬ್ದಾರಿ ಹಾಗೂ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದು ಸಂಪನ್ಮೂಲ ವ್ಯಕ್ತಿ ಡಾ. ಭಾರತಿ ರವೀಂದ್ರನಾಥ್ ಹೇಳಿದರು. ಪಟ್ಟಣದಲ್ಲಿ ಬದುಕು ಫೌಂಡೇಶನ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಹೆಣ್ಣು ಮಕ್ಕಳು ಎಂದರೆ ಅಡುಗೆ ಮನೆಗಷ್ಟೇ ಸೀಮಿತವಲ್ಲ ಎಂದರು. ರಾಜಕೀಯ, ಹೈನುಗಾರಿಕೆ, ಶಿಕ್ಷಣ, ವಿಜ್ಞಾನ, ಕೃಷಿ ಹಾಗೂ ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಕಾರ್ಯವೈಖರಿ ಶ್ಲಾಘನೀಯವಾದದ್ದು. ಕುಟುಂಬ ನಿರ್ವಹಣೆ ಅಷ್ಟೇ ಅಲ್ಲದೆ ಮನೆಯಿಂದ ಹೊರ ಜಗತ್ತಿನಲ್ಲಿಯೂ ಸಾಧಿಸಬಲ್ಲಳು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬದುಕು ಫೌಂಡೇಶನ್ ಟ್ರಸ್ಟಿ ನಾಗರಾಜ ಗೌಡ ಮಾತನಾಡಿ, ಮಹಿಳೆಯರು ದುಡಿಮೆ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುವ ಮೂಲಕ ಸಮಾಜದ ನಡುವೆ ನಿಲ್ಲಬೇಕು. ಪ್ರಸಕ್ತ ದಿನಗಳಲ್ಲಿ ಹೆಣ್ಣಿಗೆ ಶಿಕ್ಷಣ ಅತಿ ಮುಖ್ಯ ಎಂದರು.

ತಿರುಮಲ ರಂಗನಾಥಸ್ವಾಮಿ, ಉಡುಸಲಮ್ಮ ರಥೋತ್ಸವ

◆ **ಆಲೂರು:** ಮರಸು ಗ್ರಾಮದ ಶ್ರೀ ತಿರುಮಲ ರಂಗನಾಥಸ್ವಾಮಿ, ಉಡುಸಲಮ್ಮ ದೇವಿಯವರ ಜಾತ್ರೆ ಅತ್ಯಂತ ವೈಭವದಿಂದ ನಡೆಯಿತು.

ಶುಕ್ರವಾರ ರಾತ್ರಿ ತಿರುಮಲ ರಂಗನಾಥಸ್ವಾಮಿ ಮತ್ತು ಉಡುಸಲಮ್ಮ ದೇವಿಯವರ ಅಡ್ಡೆ ದೇವರು ದೇವಸ್ಥಾನದಿಂದ ಗ್ರಾಮದ ದೊಡ್ಡಕೆರೆ ಗೌರಿ ಕಡಲು ಗಂಗಾಸ್ಥಾನಕ್ಕೆ ರಾತ್ರಿ 2 ಗಂಟೆಗೆ ತಲುಪಿದವು. ಗಂಗಾಸ್ಥಾನದಿಂದ ಮಡಿವಾಳ ವಂಶಸ್ತರಾದ ವೀರೇಶ ರವರು ಉಡುಸಲಮ್ಮ ಕಳಸವನ್ನು ಹೊತ್ತು ನಡೆಮುಡಿಯಲ್ಲಿ ವಾದ್ಯ, ಗೋಷ್ಠಿ, ಪಟಾಕಿ ಸಿಡಿತ, ಹೊಗಳಿಕೆ ಹಾಡಿನೊಂದಿಗೆ ಶನಿವಾರ ಬೆಳಗ್ಗೆ 7 ಕ್ಕೆ ದೇವಸ್ಥಾನದ ಬಳಿ ತಲು ಪಿತು. ಗ್ರಾಮದ ಗಂಗಣ್ಣ ಹೊಗಳಿಕೆ ಹಾಡು ಹೇಳಿದರು. ಪೂಜಾ ಕೈಂಕರ್ಯದ ನಂತರ ಕೆಂಡೋತ್ಸವ ನಡೆಯಿತು.

ಸಾವಿರಾರು ಭಕ್ತರು ಕೆಂಡ ಹಾಯ್ದು ಪುನೀತ ರಾದರು. ಇದೆ ಸಂದರ್ಭದಲ್ಲಿ ಉಡುಸಲಮ್ಮ ದೇವಿಗೆ 101 ಎಡೆ ಸಮರ್ಪಣೆ ಮಾಡಲಾಯಿತು. ಪುರಾತನ ಕಾಲದಿಂದ ನಡೆದು ಬಂದಿರುವಂತೆ ಮರಸು ಗ್ರಾಮದ ಸುತ್ತಮುತ್ತಲಿನ ಗ್ರಾಮದೇವತೆ ಗಳು, ಕೂಡುನಾಡು, ಗ್ರಾಮದ ಮುಖಂಡರು, ಅಡ್ಡೆ ಹೊರುವವರು, ಚಪ್ಪರ ಹಾಕಿದವರು, ದೀವಟಿಗೆ ಸೇರಿದಂತೆ ಜಾತ್ರೆಗೆ ಸಾಕ್ಷಿಯಾದ ಎಲ್ಲ ಗ್ರಾಮದ, ದೇವಸ್ಥಾನದ ಮುಖಂಡರಿಗೆ ಎಡೆ ಸಮರ್ಪಣೆ ಮಾಡಲಾಯಿತು.



ಜಾತ್ರೆ ಅಂಗವಾಗಿ ದೇವಸ್ಥಾನದಲ್ಲಿ ಶ್ರೀ ರಂಗನಾಥಸ್ವಾಮಿ, ಶ್ರೀ ಉಡುಸಲಮ್ಮ ದೇವರಿಗೆ ಬೆಳ್ಳಿ ಅಲಂಕಾರ ಮಾಡಲಾಗಿತ್ತು. ಮದ್ಯಾಹ್ನ ಮಹಾ ಮಂಗಳಾರತಿ ನಂತರ ಭಕ್ತರು ದರ್ಶನ ಪಡೆದರು.

ಮಾ. 15 ಭಾನುವಾರ ಸಂಜೆ 8 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಶ್ರೀ ಹರಿಭಕ್ತ ಮಹಾಂದಾತ ಅಥವಾ ಶ್ರೀ ಲಕ್ಷ್ಮೀ, ಶ್ರೀ ಶನಿದೇವರ ಪಂತ ಎಂಬ ಪೌರಾಣಿಕ ನಾಟಕ ನಡೆಯಲಿದೆ. ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಸಿಮೆಂಟ್ ಮಂಜು, ಸೂರಜ್ ರೇವಣ್ಣ, ಮಾಜಿ ಸಚಿತ ಎಚ್. ಕೆ. ಕುಮಾರಸ್ವಾಮಿ, ತಹಶೀಲ್ದಾರ್ ಮಲ್ಲಿಕಾರ್ಜುನ, ಎಂ. ಮುರಳಿ ಮೋಹನ್ ಭಾಗವಹಿಸಲಿದ್ದಾರೆ.

ರಾತ್ರಿ ನಡೆದ ನಡೆಮುಡಿ ಉತ್ಸವದ ಸಂದರ್ಭದಲ್ಲಿ ಯಾವುದೆ ಅಹಿತಕರ ಘಟನೆಗಳು ಸಂಭವಿಸ ದಂತೆ ಗ್ರಾಮ ಆಡಳಿತ ಅಧಿಕಾರಿ ರವಿನಾಯ್ಕ, ಗ್ರಾಮದ ಮು ಖಂಡರು, ಪೊಲೀಸ್ ಸಿಬ್ಬಂದಿ ಗಳಾದ ಎಎಸ್ಐ ಚಂದ್ರಶೇಖರ್, ಸಂಗಮ್, ಮಂಜುನಾಥ್ ಭಾಗವಹಿಸಿದ್ದರು.

ತಂಬಾಕು ಬೆಲೆ ಕುಸಿತ: ಸಂಸದರಿಂದ ಮನವಿ



◆ **ಹಾಸನ:** ಅರಕಲಗೂಡಿನ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರ ಸಮಸ್ಯೆಗಳನ್ನು ಸಂಸದ ಶ್ರೇಯಸ್ ಎಂ. ಪಟೇಲ್ ಆಲಿಸಿದರು. ಮಾರುಕಟ್ಟೆಗೆ ಭೇಟಿ ನೀಡಿ ರೈತರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿದ ಅವರು, ತಂಬಾಕು ಬೇಲ್‌ಗಳ ದರ ನಿಗದಿಯಲ್ಲಿನ ತಾರತಮ್ಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ಹೊರೆಯಿಂದ ಬೆಲೆ ಕುಸಿತ ಉಂಟಾಗಿರುವ ಕುರಿತು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವುದಾಗಿ ತಿಳಿಸಿದರು.

ಸರಸ್ವತಿ ಪೂಜೆ, ಬೀಳ್ಕೊಡುಗೆ

◆ **ಕೊಣನೂರು:** ಹತ್ತನೇ ತರಗತಿ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿದ್ದು ವಿದ್ಯಾರ್ಥಿಗಳು ತಮ್ಮ ಮುಂದಿನ ಜೀವನ ರೂಪಿಸಿಕೊಳ್ಳಲು ಉತ್ತಮ ಶಿಕ್ಷಣ ಪಡೆದುಕೊಳ್ಳುವಂತೆ ಹಾಗೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಂತೆ ಪೋಷಕರಿಗೆ ಮನವಿ ಮಾಡಿ, ವಿದ್ಯೆಯಿಂದ ಮಾತ್ರ ಬದಲಾವಣೆ ಸಾಧ್ಯ ಎಂದು ಶಾಸಕ ಎ.ಮಂಜು ತಿಳಿಸಿದರು.

ಬಿವಿಎಂ ಅನುದಾನಿತ ಬಾಲಿಕಾ ಪ್ರೌಢಶಾಲೆಯಲ್ಲಿ ವಾರ್ಷಿಕೋತ್ಸವ, ಸರಸ್ವತಿ ಪೂಜೆ ಹಾಗೂ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಪೋಷಕರು ಗಮನ ಹರಿಸಬೇಕು. ಬದುಕು, ಸಮಾಜ ಹಾಗೂ ದೇಶದಲ್ಲಿ ಬದಲಾವಣೆ ಕಾಣಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ತಿಳಿಸಿ ಪರೀಕ್ಷೆ ಎದುರಿಸುತ್ತಿರುವ ಎಲ್ಲಾ ಮಕ್ಕಳಿಗೆ ಶುಭ ಕೋರಿದರು. ಶಾಲಾ ವಾರ್ಷಿಕೋತ್ಸವದ ಅಂಗವಾಗಿ ವಿದ್ಯಾರ್ಥಿನಿಯರು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನಸೂರೆಗೊಂಡವು. ಇದೇ ಸಂದರ್ಭದಲ್ಲಿ ಕಳೆದ ಸಾಲಿನಲ್ಲಿ ಹತ್ತನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು ಹಾಗೂ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಆಡಳಿತ ಮಂಡಳಿ ಉಪಾಧ್ಯಕ್ಷ ಕಬ್ಬಳಿಗೆರೆ ಪುಟ್ಟರಾಜೇಗೌಡ, ಕಾರ್ಯದರ್ಶಿ ಕೆ.ಎನ್. ಚಂದ್ರಶೇಖರ್ ಶೆಟ್ಟಿ, ನಿರ್ದೇಶಕರುಗಳಾದ ಕೆ.ಕೆ. ನಾಗರಾಜ್, ಅಮರನಾಥಶೆಟ್ಟಿ, ಕೆ.ಆರ್. ಸೋಮಶೇಖರ್ ಇದ್ದರು.

ಮಹಿಳೆಯರು ಗಟ್ಟಿತನ ಕಾಪಾಡಿಕೊಳ್ಳಿ



◆ **ಹೊಳೆನರಸೀಪುರ:** ಜೀವನದ ಹಲವು ಹಂತಗಳಲ್ಲಿ ಮಹಿಳೆಯರಿಗೆ ಮಾನಸಿಕ ಧೃಡತೆ ಯನ್ನು ಕೆಡಿಸುವಂತ ಸನ್ನಿವೇಶಗಳು ಬರುತ್ತವೆ. ಅಂತಹ ಸಂದರ್ಭಗಳಲ್ಲಿ ಮಹಿಳೆಯರು ಭಯಪಡದೆ ಮಾನಸಿಕ ಧೃಡತೆಯನ್ನು ಕಾಪಾಡಿ ಕೊಳ್ಳಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಾ. ಎಸ್ ಸೀಮಾ ಹೇಳಿದರು.


ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ವೇದಿಕೆ, ಸಾಂಸ್ಕೃತಿಕ ವೇದಿಕೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯರಲ್ಲಿ ಧೈರ್ಯವೊಂದಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ನಾನೇ ಉತ್ತಮ ಸಾಕ್ಷಿ ಎಂದು ತಮ್ಮ ಜೀವನದಲ್ಲಿ ನಡೆದ ಕಹಿ ಘಟನೆ ಹಾಗೂ ಆ ಸಮಸ್ಯೆಯಿಂದ ಹೊರಬಂದಂತ ಸನ್ನಿವೇಶವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದಾ ಡಾ. ರಕ್ಷಿತ, ತಿಪ್ಪೇಸ್ವಾಮಿ ಎನ್, ಡಾ.ಎಂ. ಕುಸುಮ, ಚಂದ್ರಕಲಾ,ಡಾ. ಗುರುರಾಜು, ಕೆ. ವಿದ್ಯಾ, ವಿದ್ಯಾರ್ಥಿಗಳಾದ ಶ್ವೇತ, ಅನುಷಾ ಇದ್ದರು.

ಗರಿಷ್ಠ 33° | ಕನಿಷ್ಠ 19°

ಹೊಸ ದಿಗಂತ

ಭಾನುವಾರ
15 ಮಾರ್ಚ್ 2026

ತುಮಕೂರು



ಲೋಕ ಅದಾಲತ್ ವಿವಾಹ ವಿಚ್ಛೇದನದ ಪ್ರಕರಣವೊಂದರಲ್ಲಿ ದಂಪತಿ ಮನವೊಲಿಸಿ ರಾಜಿ ಮಾಡಿಸಿ ಸತಿಪತಿಗಳನ್ನು ಚಿಕ್ಕನಾಯಕನಹಳ್ಳಿ ಪಟ್ಟಣದ ನ್ಯಾಯಾಲಯದ ಲೋಕ ಅದಾಲತ್‌ನಲ್ಲಿ ಒಂದುಗೂಡಿಸಲಾಯಿತು. ವಕೀಲರಾದ ಎಂ.ಬಿ. ನಾಗರಾಜ್, ರಮೇಶ್ ಬಾಬು, ಟಿ.ರವೀಂದ್ರಕುಮಾರ್, ಗುರು, ಮಂಜುನಾಥ್, ರಾಜಶೇಖರ್ ಉಪಸ್ಥಿತರಿದ್ದರು.

ಗ್ಯಾಸ್ ಕೊರತೆಗೆ ವಾಟಾಳ್ ಪಕ್ಷ ಆಕ್ರೋಶ | ೨
ಪರಿಸರ ರಕ್ಷಣೆಗೆ ಒತ್ತು ನೀಡಲಿ | ೩
ಗ್ಯಾಸ್ ಗ್ರಾಹಕರಲ್ಲಿ ಆತಂಕ ಬೇಡ: ಡಿಸಿ | ೪

ಕಿರುಸುದ್ದಿ

ಗ್ಯಾಸ್ ಸಿಲಿಂಡರ್‌ಗಾಗಿ ಗ್ರಾಹಕರ ಪರದಾಟ



ಕೊಡಿಗೇನಹಳ್ಳಿ: ಅಮೆರಿಕ ಇರಾನ್ ಇಸ್ರೇಲ್ ಯುದ್ಧ ಹಿನ್ನೆಲೆ ಸಿಲೆಂಡರ್ ಗಳು ಕಾಲ ಕಾಲಕ್ಕೆ ಸಿಗದೇ ಜನ ಗ್ಯಾಸ್ ಸಿಲಿಂಡರ್ ಗಾಗಿ ಗ್ಯಾಸ್ ಕಂಪನಿಗಳ ಮುಂದೆ ಕಾದು ಕಾದು ಬರಿಗೈಲಿ ವಾಪಸ್ ಆಗುತ್ತಿದ್ದಾರೆ. ಐ.ಡಿ. ಹಳ್ಳಿಯ ಇಂಡೇನ್ ವಿತರಕರಾದ ಶ್ರೀಧರ್ ಗ್ಯಾಸ್ ಏಜೆನ್ಸಿ ಕೊಡಿಗೇನಹಳ್ಳಿಗೆ 25 ಕಿಲೋಮೀಟರ್ ದೂರದಲ್ಲಿದ್ದು ಹೋಬಳಿಯಲ್ಲಿ ಅತಿ ಹೆಚ್ಚು ಗ್ರಾಹಕರಿದ್ದು ಇಂಡಿಯನ್ ವಿತರಕರು ಇತ್ತ ಕಡೆ ಬರುವುದೇ ಅಪರೂಪವಾಗಿದೆ ಅಲ್ಲದೆ ವಾರಕ್ಕೊಂದು ಬಾರಿ ಇತ್ತ ಬರುತ್ತಿದ್ದು, ಜನ ಇಂಡಿಯನ್ ಗ್ಯಾಸ್ ಗಾಗಿ ಪರದಾಡುತ್ತಿದ್ದಾರೆ ಎಂದು ಇಂಡಿಯನ್ ಗ್ರಾಹಕ ಲಕ್ಷ್ಮಮ್ಮ ತಿಳಿಸಿದ್ದಾರೆ. ಕೊಡಿಗೇನಹಳ್ಳಿಯಲ್ಲಿಯೇ ಇರುವ ಹಿಂದೂಸ್ಥಾನ್ ಪೆಟ್ರೋಲಿಯಂ ಗ್ರಾಮೀಣ ವಿತರಕ್ ಗ್ಯಾಸ್ ಏಜೆನ್ಸಿ ಈ ಎಲ್ಲಾ ಭಾಗದ ಗ್ರಾಹಕರಿಗೆ ಅಚ್ಚುಕಟ್ಟಾಗಿ ಕಾಲ ಕಾಲಕ್ಕೆ ಗ್ಯಾಸ್ ವಿತರಿಸುತ್ತಿದ್ದು, ಗ್ರಾಹಕರಿಗೆ ಉತ್ತಮವಾಗಿ ಸ್ಪಂದನೆ ನೀಡಿ ಕೆಲಸ ಮಾಡುತ್ತಿದ್ದಾರೆ ಗ್ರಾಹಕ ಎನ್. ಸಿದ್ದೇಶ್ವರ ತಿಳಿಸಿದ್ದಾರೆ. ಕೊಡಿಗೇನಹಳ್ಳಿ ಸೇರಿದಂತೆ ಇನ್ನೂ ಅನೇಕ ಗ್ರಾಮಗಳಲ್ಲಿ ಊರ ಹಬ್ಬದ ಕಾರಣ ಎಲ್ಲಾ ಗ್ಯಾಸ್ ಖಾಲಿಯಾಗಿದ್ದು ಸೋಮವಾರ ಬುಕಿಂಗ್ ಮಾಡಿರುವ ಪ್ರತಿಯೊಬ್ಬರಿಗೂ ಗ್ಯಾಸ್ ವಿತರಿಸಲಾಗುವುದು ಎಂದು ಹೆಚ್ ಪಿ ಗ್ಯಾಸ್ ಮಾಲೀಕ ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸಿಂಡಿಕೇಟ್ ಸದಸ್ಯರ ನಾಮನಿರ್ದೇಶನ

ಮಧುಗಿರಿ: ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಕುಮಾರ್ ಕೆ.ಎಸ್. ಪ್ರಾಂಶುಪಾಲರ ಸೇವಾ ಜೇಷ್ಠತೆಯಲ್ಲಿ ಹಿರಿಯರ ಕೋಟಾದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಹಾಗೂ ವಿದ್ಯಾವಿಷಯಕ ಪರಿಷತ್‌ನ ಸದಸ್ಯರಾಗಿ ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಗಳಿಂದ ನಾಮನಿರ್ದೇಶನ ಗೊಂಡಿದ್ದಾರೆ. ನಾಮನಿರ್ದೇಶನಗೊಂಡ ಪ್ರೊ. ಕುಮಾರ್ ಕೆ.ಎಸ್ ರವರಿಗೆ ಕಾಲೇಜು ಅಭಿವೃದ್ಧಿ ಸಮಿತಿ, ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.



ಆಕಸ್ಮಿಕ ಬೆಂಕಿ ಅವಘಡ: ತೆಂಗಿನತೋಟ ನಾಶ

ಚಿಕ್ಕನಾಯಕನಹಳ್ಳಿ: ತಾಲೂಕಿನ ಹಂದನಕೆರೆ ಹೋಬಳಿ ಮತಿಘಟ್ಟದ ಬಳಿ ಆಕಸ್ಮಿಕ ಬೆಂಕಿ ಅವಘಡದಲ್ಲಿ ನೂರಾರು ತೆಂಗಿನಮರಗಳು ಸುಟ್ಟುಹೋದ ಘಟನೆ ನಡೆದಿದೆ. ಹಂದನಕೆರೆ ಹೋಬಳಿ ಮತಿಘಟ್ಟ ಗ್ರಾಮದ ಚನ್ನಯ್ಯ ಕಟ್ಟೆಯ ಸ.ನಂ.30-40 ರಲ್ಲಿ ಆಕಸ್ಮಿಕ ಬೆಂಕಿ ಅವಘಡದಲ್ಲಿ ಸಿದ್ದೇಗೌಡ ಹಾಗೂ ಉಮಾಪತಿ ಎಂಬವರಿಗೆ ಸೇರಿದ ತೋಟದಲ್ಲಿದ್ದ ನೂರಾರು ತೆಂಗಿನಮರಗಳು ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಸುಟ್ಟುಹೋಗಿದೆ. ಅಗ್ನಿಶಾಮಕದಳಕ್ಕೆ ದೂರವಾಣಿ ಮಾಡಿದರೂ ವಾಜನದ ಲಭ್ಯತೆಯಿಲ್ಲ ಎಂಬ ಉತ್ತರ ಬಂದ ಕಾರಣ ಸುತ್ತಮುತ್ತಲಿನ ಜನರೇ ಸೇರಿ, ಕೊಳವೆ ಬಾವಿಯಲ್ಲಿನ ನೀರಿನ ಸಹಾಯದಿಂದ ಬೆಂಕಿಯನ್ನು ನಂದಿಸಿ ಹೆಚ್ಚಿನ ಹಾನಿಯನ್ನು ತಪ್ಪಿಸಿದರು. ಈ ಭಾಗದಲ್ಲಿ ಪದೇಪದೇ ಬೇಸಿಗೆಯಲ್ಲಿ ಬೆಂಕಿ ಪ್ರಕರಣ ನಡೆಯುತ್ತಲೇ ಇರುವುದರಿಂದ ಮತಿಘಟ್ಟ ಕೇಂದ್ರದಲ್ಲಿ ಅಗ್ನಿಶಾಮಕ ಘಟಕ ಸ್ಥಾಪನೆಗೆ ಈ ಭಾಗದ ಜನರು ಒತ್ತಾಯಿಸಿದ್ದಾರೆ.

ವೀರಶೈವ ಮಹಾಸಭಾದಿಂದ ಮಹಿಳಾ ದಿನಾಚರಣೆ ,ಗೌರವಾರ್ಪಣೆ

ಮಹಿಳೆಯರು ಸಶಕ್ತರಾಗಲಿ

ತುಮಕೂರು: ಭಾರತದಲ್ಲಿ ಹೆಣ್ಣಿಗೆ ದೊಡ್ಡ ಗೌರವವಿದೆ. ಸ್ತ್ರೀಶಕ್ತಿಯು ಇಚ್ಛಾಶಕ್ತಿಯಾಗಿ ರೂಪುಗೊಂಡು ಮಹಿಳೆಯರು ಸಮಾಜ ಪರಿವರ್ತನೆಗೆ ನೆರವಾಗಬೇಕು. ನಮ್ಮ ಸಂಸ್ಕೃತಿ, ಪರಂಪರೆ, ಆಚಾರ, ವಿಚಾರಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವಲ್ಲಿ ಮಹಿಳೆಯರ ಜವಾಬ್ದಾರಿ ಹೆಚ್ಚಾಗಿದೆ ಎಂದು ಹಿರೇಮಠದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕ, ಜಿಲ್ಲಾ ಮಹಿಳಾ ಘಟಕ ಹಾಗೂ ವಿವಿಧ ಘಟಕಗಳ ಆಶ್ರಯದಲ್ಲಿ ಶನಿವಾರ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಹೆಣ್ಣನ್ನು ಗೌರವಿಸುವ ಶ್ರೇಷ್ಠ ಸಂಸ್ಕೃತಿ ನಮ್ಮದು ಎಂದರು.

ಬೆಳ್ಳಾವಿ ಕಾರದೇಶ್ವರ ಮಠದ ಕಾರದ ವೀರಬಸವ ಸ್ವಾಮೀಜಿ ಮಾತನಾಡಿ, ಲಿಂಗ ತಾರತಮ್ಯ ನಿವಾರಣೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಸಮಾನ ಅವಕಾಶ ದೊರೆಯಬೇಕು ಎಂಬ ಉದ್ದೇಶದಿಂದ ಆರಂಭವಾದ ಮಹಿಳಾ ದಿನಾಚರಣೆ ಇಂದು ಸಾಮಾಜಿಕ ಜಾಗೃತಿಗೂ ಕಾರಣವಾಗಿದೆ. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಶಕ್ತವಾಗಿ ತೊಡಗಿಕೊಂಡು ಯಶಸ್ವಿಯಾಗುತ್ತಿದ್ದಾರೆ ಎಂದು ಹೇಳಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್ ಮಾತನಾಡಿ, ಮಹಿಳೆಯರಿಗೆ ಮತದಾನದ ಹಕ್ಕು ಇಲ್ಲದ ಹಕ್ಕು ಇಲ್ಲದ ಸಂದರ್ಭದಲ್ಲಿ ಹಕ್ಕು, ಸಮಾನತೆಗಾಗಿ ರೂಪುಗೊಂಡ ಹೋರಾಟವನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ. ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಾಧನೆಗಳನ್ನು ಸಂಭ್ರಮಿಸುವ ಆಚರಣೆಯಾಗಿದೆ ಎಂದರು.

ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿದ್ದಾರೆ. ಎಲ್ಲೆಡೆ ಸಮರ್ಥವಾಗಿ ತೊಡಗಿಕೊಂಡಿದ್ದಾರೆ. ಅನೇಕ ದೊಡ್ಡ ಕಂಪನಿಗಳಲ್ಲಿ ಉನ್ನತಸ್ಥಾನಅಲಂಕರಿಸಿಸಂಸ್ಥೆನಿಭಾಯಿಸುತ್ತಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ರಾಜಕೀಯ ಕ್ಷೇತ್ರದಲ್ಲೂ ಮಹಿಳೆಯರ ಪ್ರಾಬಲ್ಯ ಹೆಚ್ಚಬೇಕು ಎಂದು ಪ್ರಧಾನಿ ನರೇಂದ್ರ ಮೋದಿಯವರ ಇಂಗಿತವಾಗಿದ್ದು, ಲೋಕಸಭೆಯಲ್ಲಿಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡಬೇಕೆಂಬ ಮಸೂದೆ ಜಾರಿಯಾಗಲಿದೆ ಎಂದು ಹೇಳಿದರು.

ಕಾಲೇಜು ಪ್ರಾಂಶುಪಾಲರಾದ ಡಾ. ಪ್ರೇಮಾ ಸಿದ್ದರಾಜು ಅವರು ಮಹಿಳಾ ಸಬಲೀಕರಣದ ಸವಾಲುಗಳು ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸಾಗರನಹಳ್ಳಿ ನಟರಾಜ್ ಮಾತನಾಡಿ, 12ನೇ ಶತಮಾನದಲ್ಲೇ ಮಹಿಳೆಯರಿಗೆ ಸಮಾನತೆ, ಸ್ವಾತಂತ್ರ್ಯದ ಜಾಗೃತಿ ಮೂಡಿತ್ತು. ಈಗ ನಮ್ಮಲ್ಲಿ ಸಮಾನತೆ, ಸ್ವಾತಂತ್ರವಿದ್ದರೂ ನಮ್ಮ ಸಂಸ್ಕಾರ ಕಣ್ಮರೆಯಾಗುತ್ತಿದೆ. ಇಂದಿನ ಯುವಜನರು ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಮರೆಯುತ್ತಿರುವುದು ಕಳವಳಕಾರಿ ಎಂದು ಹೇಳಿದರು.

ಮಹಾಸಭಾ ಮಹಿಳಾ ಘಟಕ ರಾಜ್ಯಾಧ್ಯಕ್ಷೆ ಮುಕ್ತಾಂಬ, ಮಹಾಸಭಾದ ಜಿಲ್ಲಾಧ್ಯಕ್ಷ ಡಾ.ಎಸ್. ಪರಮೇಶ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಮಮತಾ ದಿವಾಕರ್, ಪ್ರಧಾನ ಕಾರ್ಯದರ್ಶಿ ಶಿಲ್ಪ ನವೀನ್ ಹಿರೇಮಠ್ ಹಾಗೂ ಪದಾಧಿಕಾರಿಗಳು, ಮಹಾಸಭಾ ಯುವ ಘಟಕ ಜಿಲ್ಲಾಧ್ಯಕ್ಷ ಡಾ.ದರ್ಶನ್ ಕೆ.ಎಲ್, ಮಹಾಸಭಾ ಜಿಲ್ಲಾ ಕಾರ್ಯದರ್ಶಿ ತಳವಾರನಹಳ್ಳಿ ವಿಜಯಕುಮಾರ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



> ಮಹಿಳಾ ದಿನಾಚರಣೆ ಎಂಬುದು ಸ್ತ್ರೀಶಕ್ತಿ ಸಮಾವೇಶ, ಇಚ್ಛಾಶಕ್ತಿಯ ಸಮಾವೇಶದಂತೆ ಕಾಣುತ್ತಿದೆ. ಈ ಮೂಲಕ ಮಹಿಳೆಯರ ಜಾಗೃತಿ, ಸಾಮಾಜಿಕ ಪ್ರಜ್ಞೆ ಹೆಚ್ಚಾಗುತ್ತದೆ. ಪುರುಷ-ಮಹಿಳೆಯರ ನಡುವಿನ ಅಂತರ ನಿವಾರಣೆಯಾಗಿ ಸಮಾನತೆ ಮೂಡಲು ಕಾರಣವಾಗುತ್ತದೆ. ವೀರಶೈವ ಸಮಾಜದಲ್ಲಿ ಮಹಿಳೆಯರನ್ನು ಯಾವುದೇ ಬೇಧವಿಲ್ಲದೆ ಸಮಾನವಾಗಿ ನೋಡಲಾಗುತ್ತದೆ.
>
> ■ **ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಹಿರೇಮಠ**

ಶಿವ ವಿವಿಧೋದ್ದೇಶ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನೆ

ತಿಪಟೂರು: ಹಿಂದಿನ ಕಾಲದಲ್ಲಿ ಇನ್ನೊಬ್ಬರ ಋಣದಲ್ಲಿ ಸಾಯಬಾರದು ಎಂಬ ನೈತಿಕ ಮೌಲ್ಯಗಳನ್ನು ಜನರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇಂದಿನ ಕಾಲದಲ್ಲಿ ಧರ್ಮಪ್ರಜ್ಞೆಯನ್ನು ಮೀರಿಸುವ ರೀತಿಯಲ್ಲಿ ಸ್ವಾರ್ಥದ ಮನೋಭಾವ ಹೆಚ್ಚುತ್ತಿರುವುದು ವಿಷಾದಕರ ಸಂಗತಿ ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದದರು. ನಗರದ ಕೆ.ಆರ್.ಬಡಾವಣೆ, ಗೋವಿನಪುರ ವೃತ್ತದಲ್ಲಿ ನಿರ್ಮಿಸಲಾದ ಶಿವ ವಿವಿಧೋದ್ದೇಶ ಸಹಕಾರ ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು. ಕಲಿಯುಗದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆದರೆ ಸ್ವಾರ್ಥಕ್ಕೆ ಒಳಗಾದ ಮನುಷ್ಯ ಯಾವುದಕ್ಕೂ ಹಿಂದೆ ಮುಂದೆ ನೋಡದೆ ನಡೆದುಕೊಳ್ಳುವ ಪರಿಸ್ಥಿತಿ ಸಮಾಜದಲ್ಲಿ ಕಂಡುಬರುತ್ತಿದೆ.

ಹಿಂದೆ ಆಸ್ತಿಗೆ ಒಬ್ಬ ಮಗ, ಆಸರೆಗೆ ಒಬ್ಬ ಮಗಳು ಎಂಬ ಮಾತು ಪ್ರಚಲಿತದಲ್ಲಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೆಲ ಹೆಣ್ಣುಮಕ್ಕಳು ತಂದೆಯ ಆಸ್ತಿಗಾಗಿ ನ್ಯಾಯಾಲಯದ ಮೊರೆ ಹೋಗುತ್ತಿರುವುದು ಸಂಬಂಧಗಳ ಮೌಲ್ಯಗಳನ್ನು ಕುಗ್ಗಿಸುವ ಕ್ರೌರ್ಯ ಹಾಗೂ ಅಮಾನವೀಯತೆಯಾಗಿದೆ ಇಂತಹ ಘಟನೆಗಳಿಂದ ಕುಟುಂಬ ಸಂಬಂಧ ಗಳಲ್ಲಿ ಬಿರುಕುಗಳು ಮೂಡಿ, ಬಂಧಗಳು ದೂರವಾಗುತ್ತಿರುವುದು ದುಃಖಕರ ಸಂಗತಿ. ತಂದೆ ತಾಯಿ ಮತ್ತು ಮಕ್ಕಳ ನಡುವಿನ ಸಂಬಂಧವು ಬಹಳ ಅಮೂಲ್ಯವಾದದ್ದು. ಅಂತಹ ಸಂದರ್ಭಗಳಲ್ಲಿ ನ್ಯಾಯಾಲಯದಮೊರೆಹೋಗುವುದಕ್ಕಿಂತಪರಸ್ಪರ ಕುಳಿತು ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಉತ್ತಮ ಎಂದು ಹೇಳಿದರು.

ತಾಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಪಿ.ಬಿ.ನಂಜುಡಪ್ಪ, ಶಿವ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಜಗದೀಶ್, ನಿರ್ದೇಶಕರಾದ ಈಶ್ವರಪ್ಪ ಬೈರನಾಯಕನಹಳ್ಳಿ, ಗಿರೀಶ್ ಮತ್ತಿಹಳ್ಳಿ, ನವೀನ್ ಕುಮಾರ್ ಹಾಲ್ಕುರಿಕೆ, ಈಶ್ವರಪ್ಪ.ಎಮ್.ಸಿ ಮತ್ತಿಹಳ್ಳಿ, ಬಸವರಾಜು ಪತ್ರೇಹಳ್ಳಿ, ಭವ್ಯ ಸೂರಗೊಂಡನಹಳ್ಳಿ, ಲೋಲಾಕ್ಷಮ್ಮ,ಓಂಕಾರಮೂರ್ತಿ ಕರೀಕೆರೆ, ಕಾರ್ಯದರ್ಶಿ ದಿವಾಕರ್,ಸಿಬ್ಬಂದಿಗಳಾದಟಿ.ಆರ್. ರಮೇಶ್, ಪುಟ್ಟೇಗೌಡ, ಮಾಜಿ ಅಧ್ಯಕ್ಷರಾದ ರಾಜಶೇಖರ್, ಸೋಮಶೇಖರ್, ರೇಣುಕಮ್ಮ, ಲಿಂಗರಾಜು, ದಿನೇಶ್, ನಾಗರಾಜು, ಗಂಗಾಧರ್, ನಗರಸಭಾ ಮಾಜಿ ಸದಸ್ಯ ಪ್ರಸನ್ನಕುಮಾರ್, ಯೋಗೀಶ್, ಮನೋಹರ್, ವಿಜಯ್, ಹರೀಶ್, ನಂಜುಡಪ್ಪ ಭಾಗವಹಿಸಿದ್ದರು.



ತಂಬಾಕುಮುಕ್ತ ಯುವ ಅಭಿಯಾನ

ಹುಳಿಯಾರು: ಜಿಲ್ಲಾ ತಂಬಾಕು ನಿಯಂತ್ರಣ ಕೋಶತುಮಕೂರುಹಾಗೂತಾಲೂಕುತಂಬಾಕು ನಿಯಂತ್ರಣ ಕೋಶ ಚಿಕ್ಕನಾಯಕನಹಳ್ಳಿ, ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ತಾಲೂಕಿನ ವಿವಿಧ ಪ್ರೌಢಶಾಲೆಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ತಂಬಾಕು ಮುಕ್ತ ಯುವ ಅಭಿಯಾನ 3.0 ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಅಭಿಯಾನದ ಅಂಗವಾಗಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದ್ದು, ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳ ಜೊತೆಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಪ್ರಬಂಧ ಸ್ಪರ್ಧೆ ನಡೆಸಿದ ಶಾಲೆಗಳಿಗೆ 'ತಂಬಾಕುಮುಕ್ತಶಾಲೆ' ಎಂಬನಾಮಫಲಕಗಳನ್ನು ವಿತರಿಸಿ ಶಾಲಾ ಆವರಣದಲ್ಲಿ ತಂಬಾಕು ಬಳಕೆಗೆ ವಿರೋಧವಾಗಿ ಜಾಗೃತಿ ಮೂಡಿಸಲಾಯಿತು.



ವೈದ್ಯರ ಪಾತ್ರ ಅತ್ಯಂತ ಮಹತ್ವದ್ದು: ಜಪಾನಂದ ಶ್ರೀ

ಮಧುಗಿರಿ: ಮಾನವ ಜೀವನದಲ್ಲಿ ವೈದ್ಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ರೋಗದಿಂದ ಬಳಲುತ್ತಿರುವ ಜನರನ್ನು ಗುಣಪಡಿಸುವ ಮೂಲಕ ಅವರ ಜೀವನಕ್ಕೆ ಹೊಸ ಆಶೆಯನ್ನು ನೀಡುತ್ತಿದ್ದಾರೆ ಎಂದು ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಅಧ್ಯಕ್ಷ ಜಪಾನಂದಾ ಮಹರಾಜ್ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ರಸ್ತೆಯಲ್ಲಿರುವ ಶ್ರೀ ಸಿದ್ದಗಂಗಾ ಹಾಸ್ಪಿಟಲ್ ಡಯಾಲಿಸಿಸ್ ಸೆಂಟರ್ , ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ , ಬೆಂಗಳೂರಿನ ಡಾ.ಎಸ್.ಆರ್.ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆ ವತಿಯಿಂದ ಶನಿವಾರ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರ , ಹೃದ್ರೋಗ ತಪಾಸಣಾ ಶಿಬಿರ ಹಾಗೂ ಶ್ರವಣ ದೋಷವುಳ್ಳ ಬಡವರಿಗೆ ಉಚಿತವಾಗಿ ಶ್ರವಣ ಸಾಧನವನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು,

ಸಮಾಜದಲ್ಲಿ ಆರೋಗ್ಯಕರ ಜೀವನ ನಿರ್ಮಾಣವಾಗಲು ವೈದ್ಯರ ಸೇವೆ ಅತ್ಯಗತ್ಯ. ಆಸ್ಪತ್ರೆಗಳಲ್ಲಿ ಮಾತ್ರವಲ್ಲದೇ ಗ್ರಾಮೀಣ ಪ್ರದೇಶಗಳಲ್ಲಿಯೂ ವೈದ್ಯರುಜನರಿಗೆಸೇವೆಸಲ್ಲಿಸುತ್ತಿದ್ದಾರೆ.ಪಟ್ಟಣದಸಿದ್ದಗಂಗಾ ಡಯಾಲಿಸಿಸ್ ಕೇಂದ್ರದಲ್ಲಿ 1500 ಡಯಾಲಿಸಿಸ್ ಪೂರ್ಣಗೊಂಡಿರುವುದು ಸಂತಸ ತಂದಿದೆ. ಈ ಕೇಂದ್ರದಲ್ಲಿ ಕಣ್ಣಿನ ತಪಾಸಣೆ , ಚರ್ಮರೋಗ ತಪಾಸಣೆ ಹಾಗೂ ಡಯಾಲಿಸಿಸ್ ನಿರಂತರವಾಗಿ ನಡೆಯುತ್ತಿದೆ ಎಂದು ತಿಳಿಸಿ, ಮತ್ತಷ್ಟು ಸ್ಥಳ ದೊರೆತರೆ ಉಚಿತವಾಗಿ ತಪಾಸಣೆ ಹಾಗೂ ಚಿಕಿತ್ಸೆ ನೀಡಲು ನಾನು ಬದ್ದನಾಗಿದ್ದೇನೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಸಹನಾ, ಸಿದ್ದಗಂಗಾ ಹಾಸ್ಪಿಟಲ್ ಡಯಾಲಿಸಿಸ್ ಸೆಂಟರ್ ಕೇಂದ್ರದ ಅನುರಾಧ, ಅಕ್ಷಯ್, ಮಹಿಳಾ ಸಮಾಜದ ಗೌರವಾಧ್ಯಕ್ಷೆ ಪುಷ್ಪಾವತಮ್ಮ, ವೈದ್ಯರಾದ ಅರುಣ್, ಶರತ್ , ನಟರಾಜ್,ಶ್ರೀನಿವಾಸ್, ಸ್ವಾತಿ, ಅಭಿಷೇಕ, ಸಿದ್ದಗಂಗಾ ಮೆಡಿಕಲ್ ಕಾಲೇಜಿನ ಎಂ.ಎನ್. ಸಂಜೀವ್ ಕುಮಾರ್, ಇನ್ಫೋಸಿಸ್ ಮಹೇಶ್, ಶಿಕ್ಷಕ ಶಶಿಕುಮಾರ್ ಇದ್ದರು.



ಸವಿತಾ ಸಮಾಜದ ಅಸಂಘಟಿತ ಕಾರ್ಮಿಕರಿಗೆ ಕಾರ್ಡ್ ವಿತರಣೆ

ತುರುವೇಕೆರೆ: ತಾಲೂಕಿನ ಕಾರ್ಮಿಕ ಇಲಾಖೆ ತಾಲೂಕಿನ ಸವಿತಾ ಸಮಾಜದ ಅಸಂಘಟಿತ ಕಾರ್ಮಿಕರಿಗೆ ನೀಡಿರುವ ಕಾರ್ಡ್ ಗಳನ್ನು ತಾಲೂಕು ಸವಿತಾ ಸಮಾಜದ ವತಿಯಿಂದ ಎಲ್ಲಾ ಕಾರ್ಮಿಕರಿಗೆ ನೀಡಲಾಯಿತು. ಗ್ರಾಮದೇವತೆ ಉಡುಸಲಮ್ಮ ದೇವಾಲಯದ ಮುಂಭಾಗ ಜಮಾವಣೆಗೊಂಡಿದ್ದ ಸವಿತಾ ಸಮಾಜದ ಕಾರ್ಮಿಕರಿಗೆ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ತಾವರೇಕೆರೆ ಧನಂಜಯ, ಗೌರವಾಧ್ಯಕ್ಷ ನಟರಾಜು ವಿತರಿಸಿದರು. ತಾಲೂಕು ಅಧ್ಯಕ್ಷ ಧನಂಜಯ ಮಾತನಾಡಿ ಸದ್ಯಕ್ಕೆ 180 ಕಾರ್ಡ್ ಗಳನ್ನು ಕಾರ್ಮಿಕ ಇಲಾಖೆಯವರು ನೀಡಿದ್ದಾರೆ. ಇದರಲ್ಲಿ ಸುಮಾರು 30 ಕಾರ್ಡ್ ಗಳಲ್ಲಿ ಸರಿಯಾದ ವಿಳಾಸ ಇಲ್ಲದಿರುವುದರಿಂದ ಅದರ ವಿತರಣೆ ಅಸಾಧ್ಯವಾಗಿದೆ ಎಂದರು. ಸಂಘದ ಉಪಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಶ್ರೀನಿವಾಸ್, ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಕುಮಾರ್, ಹೋಬಳಿಗಳ ಅಧ್ಯಕ್ಷರು ಭಾಗವಹಿಸಿದ್ದರು.



ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆ ನಮಗೆ ಸ್ಫೂರ್ತಿ

ಕುಣಿಗಲ್: ಮಹಿಳೆಯರನ್ನು ಶೋಷಿಸುತ್ತಿದ್ದ ಕಾಲದಲ್ಲೇ ಸಾವಿತ್ರಿಬಾಯಿ ಫುಲೆ ಅಂತಹ ದಿಟ್ಟ ಮಹಿಳೆ ಶಾಲೆ ತೆರೆದು ಮಹಿಳೆಯ ರಿಗೆ ಶಿಕ್ಷಣ ನೀಡಿ ಜಾಗೃತಿಗೊಳಿಸಿದ ಅಕ್ಷರದ ಅವ್ವ ನಮಗೆ ಸ್ಫೂರ್ತಿ ಎಂದು ಪ್ರಭಾರ ಬಿ ಇ ಒ ಮಮತಾ ಮಣಿ ತಿಳಿಸಿದರು.

ಪಟ್ಟಣದ ಕಸಾಪ ಭವನದಲ್ಲಿ ಕರ್ನಾಟಕ ಸಾವಿತ್ರಿ ಬಾಯಿ ಫುಲೆ ಶಿಕ್ಷಕಿಯರ ಸಂಘ ತಾಲೂಕು ಘಟಕದ ವತಿಯಿಂದ ಶನಿವಾರ ಹಮ್ಮಿ ಕೊಳ್ಳಲಾಗಿದ್ದ ವಿಶ್ವ ಮಹಿಳಾ ದಿನಾಚರಣೆಕಾರ್ಯಕ್ರಮಉದ್ಘಾಟಿಸಿಮಾತನಾಡಿಮಹಿಳೆಮನೆಯಲ್ಲಿ ತೊಟ್ಟಿಲು ತೂಗಲು ಸಿದ್ದ, ದೇಶವನ್ನ ಆಳಲು ಸಿದ್ದ ಎಂಬುದನ್ನು ಸಾರಿ ಸಾರಿ ಹೇಳಿದ್ದಾಳೆ. ಆದರೂ ಇಂದಿಗೂ ಮಹಿಳೆಯರನ್ನ ಅವಮಾನಿಸುವುದುತಪ್ಪಿಲ್ಲ, ಅಸಮಾನತೆ ತುಂಬಿ ತುಳುಕುತ್ತಿದೆ, ಮಹಿಳೆ ಎಲ್ಲರಿಗೂ ಸರಿ ಸಮಾನಳು ಎಂಬ ಹಕ್ಕನ್ನ ಕೇಳುತ್ತಿದ್ದಾಳೆ, ಎಲ್ಲರಲ್ಲೂ ಸಹಕಾರದ ಭಾವನೆಗಳು ಬರಬೇಕು ಎಂದರು.

ಹೆಣ್ಣುಗಂಡಸರಿಗೆಸೀಮಿತವಾಗಿರುವಕ್ಷೇತ್ರದಲ್ಲೂ ಪುರುಷರ ಸಮಾನವಾಗಿ ಕೆಲಸ ಮಾಡುತ್ತಿದ್ದಾಳೆ, ಅವಳು ಮನೆಯ ಕೆಲಸದ ಜೊತೆಗೆ ಹೊರಗಿನ ಸಮಾಜದಲ್ಲೂ ದುಡಿಯುತ್ತಿದ್ದಾಳೆ, ಬಾಬಾಸಾಹೇಬ್ ಅಂಬೇಡ್ಕರ್‌ರವರುಮಹಿಳಾ ಸಮಾನತೆಗೆ ಶ್ರಮಿಸಿದ್ದಾರೆ ಎಂದರು.

ನಂಜುಂಡಪ್ಪ ಆಸ್ಪತ್ರೆಯ ಶ್ರೀ ರೋಗತಜ್ಞೆ ಡಾ.ರಕ್ಷಾ ಮಾತನಾಡಿ ಮನೆ ಮತ್ತು ಮನೆಯ ಹೊರಗಡೆ ದುಡಿಯುವ ಮಹಿಳೆಯರು ಮಾನಸಿಕವಾಗಿ, ದೈಹಿಕವಾಗಿ ಸದೃಢ ರಾಗಿ ಇರಬೇಕು, ಸಣ್ಣ ಪುಟ್ಟ ಕಾಯಿಲೆಗಳು ಬಂದಾಗ ಉದಾಸೀನ ಮಾಡದೆ ವೈದ್ಯರ ಬಳಿ ಚಿಕಿತ್ಸೆ ಪಡೆಯಬೇಕು ಎಂದರು.

ಸಂಘದ ಅಧ್ಯಕ್ಷೆ ಎಸ್ ಎಚ್ ಜಯಲಕ್ಷ್ಮಿ, ಕಾರ್ಯದರ್ಶಿ ಕೆ ಎಸ್ ರೇಖಾ, ಕೋಶಧ್ಯಕ್ಷೆ ಎಚ್.ಎನ್. ಭವಾನಿ, ಸಂಘದ ಪದಾಧಿಕಾರಿಗಳು, ನಿರ್ದೇಶಕರು, ವಿವಿಧ ಶಿಕ್ಷಕರ ಸಂಘದ ಪದಾಧಿಕಾರಿಗಳು, ನಿರ್ದೇಶಕರು ಇದ್ದರು.



ಜೀತ ವಿಮೋಚನಾ ತಾಲೂಕು ಸಂಘ ಉದ್ಘಾಟಿಸಿದ ರಾಜೇಂದ್ರ ಹೇಳಿಕೆ

ಜೀತಪದ್ಧತಿ ನಿರ್ಮೂಲನೆಗೆ ಅರಿವು ಮೂಡಿಸಿ

ಮಧುಗಿರಿ: ಜೀತಪದ್ಧತಿಯನ್ನು ನಿರ್ಮೂಲನೆ ಮಾಡಲು ಜನರಲ್ಲಿ ಅರಿವು ಮೂಡಿಸುವ ಜತೆಗೆ ಜೀತ ಪದ್ಧತಿಯಿಂದ ವಿಮುಕ್ತಿ ಹೊಂದಿರುವ ಕುಟುಂಬಗಳಿಗೆ ಶಿಕ್ಷಣ ಉದ್ಯೋಗಾವಕಾಶಗಳು ದೊರೆಯುವಂತೆ ಮಾಡುವುದೇ ಜೀತ ವಿಮೋಚನ ಸಂಘದ ಉದ್ದೇಶಗಳು ಎಂದು ಐಜೆಎಂ ಸಂಸ್ಥೆಯ ಕರ್ನಾಟಕ ಉಸ್ತುವಾರಿ ರಾಜೇಂದ್ರ ತಿಳಿಸಿದರು.

ಪಟ್ಟಣದಲ್ಲಿ ಜೀತ ವಿಮೋಚನಾ ತಾಲೂಕು ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು ಜೀತ ವಿಮೋಚನಾ ಸಂಘದ ಉದ್ದೇಶಗಳು, ಜವಾಬ್ದಾರಿಗಳು ಹೇಗೆಂದರೆ ಜೀತಪದ್ಧತಿಯಿಂದ ವಿಮುಕ್ತಿ ಹೊಂದಿರುವವರಿಗೆ ಪುನರ್ವಸತಿ ಕಲ್ಪಿಸುವುದು ಜೀತಪದ್ಧತಿಯಿಂದ ಬಾಧಿತರಾದವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ ಜೀತಪದ್ಧತಿಯನ್ನು ನಿರ್ಮೂಲನೆ ಮಾಡಲು ಜನರಲ್ಲಿ ಅರಿವು ಮೂಡಿಸಿ ಜೀತವಿಮುಕ್ತಿ ಹೊಂದಿರುವವರಿಗೆ ಬಿಡುಗಡೆ ಪತ್ರ ನೀಡುವುದು ಬಾಧಿತರಾದವರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುವ ಜತೆಗೆ ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳಿಸಿಕೊಡುವ ಮೂಲಕ ನಮ್ಮ ಸಂಘ ಸಂಸ್ಥೆಗಳು ಸಂಪೂರ್ಣ ಜೀತ ವಿಮುಕ್ತರಿಗೆ ಜೀವನ ನಿರ್ವಹಣೆಗೆ ಮುಂದಾಗಬೇಕು ಎಂದರು.

ಐಜೆಎಂ ಸಂಸ್ಥೆಯ ಕರ್ನಾಟಕದ ಮುಖ್ಯಸ್ಥ ಶಶ್ಮಿತಾ ಮಾತನಾಡಿ ಜೀತ ವಿಮೋಚನ ಸಂಘದ ಸದಸ್ಯರು ಜೀತದಲ್ಲೇ ಇದ್ದು ಬಿಡುಗಡೆ ಹೊಂದಿ ಸ್ವತಂತ್ರವಾಗಿ ಸಂಘ ಸ್ಥಾಪಿಸಿಕೊಂಡರೆ ಅದರಿಂದ ಆಗುವ ಅನುಕೂಲಗಳು ಜೀತ ಪದ್ಧತಿಯಿಂದ ವಿಮುಕ್ತಿ ಹೊಂದಿರುವವರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸುವ ಜತೆಗೆ ಮೂಲಭೂತ ಸೌಕರ್ಯಗಳು ದೊರೆಯುತ್ತವೆ ಎಂದು ತಿಳಿಸಿದರು.

ಶಾಂತ ಜೀವಜ್ಯೋತಿ ಸಂಸ್ಥೆಯ ಮುಖ್ಯಸ್ಥರಾದ ಸುಂದರಂ ಷಣ್ಮುಗಂ ಮಾತನಾಡಿ ಜೀತಾ ವಿಮೋಚನ ಸಂಘದ ಸದಸ್ಯರು ಒಗ್ಗಟ್ಟಿನಿಂದ ಕೆಲಸ ಮಾಡಿದಾಗ, ಎಲ್ಲಾ ಜನರಿಗೂ ಶಿಕ್ಷಣ, ಸಮಾನತೆ, ಮತ್ತು ಸಾಮಾಜಿಕ ನ್ಯಾಯ ದೊರೆಯುತ್ತದೆ. ಎಂದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ರಾಮಣ್ಣ, ಜೀವಿಕ ಮಂಜು, ಜೀವಿಕ ಚಿಕ್ಕಮ್ಮ, ಸೌಮ್ಯ, ಗಂಗಾಧರ್, ಕೆ.ಸಿ. ಹನುಮಂತರಾಯಪ್ಪ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.



ರೆಸ್ಪಾನ್ಸಿವ್ ಕೇರ್ ಫೌಂಡೇಶನ್ ಸೇವೆಗೆ ಮಾಜಿ ಶಾಸಕ ರಫೀಕ್ ಶ್ಲಾಘನೆ

ಜಕಾತ್ ಹಣದಿಂದ ಬಡವರಿಗೆ ಉದ್ಯೋಗ

ತುಮಕೂರು: ಪವಿತ್ರ ರಂಜಾನ್ ಮಾಸದ ಅಂಗವಾಗಿ ಜಕಾತ್ ಹಣದ ಮೂಲಕ ನಿರ್ಗತಿಕರಿಗೆ ಸ್ವಯಂ ಉದ್ಯೋಗ ಸೃಷ್ಟಿಸುವ ಉದ್ದೇಶದಿಂದ ರೆಸ್ಪಾನ್ಸಿವ್ ಕೇರ್ ಫೌಂಡೇಶನ್ ವತಿಯಿಂದ ತರಕಾರಿ ಹಾಗೂ ಹಣ್ಣು ಹಂಪಲು ಮಾರಾಟಕ್ಕೆ ತಳ್ಳುವ ಗಾಡಿಗಳನ್ನು ವಿತರಿಸಲಾಯಿತು.

ನಗರದ ಶಾಂತಿನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ರಫೀಕ್ ಅಹಮದ್ ಅವರು ಫಲಾನುಭವಿಗಳಿಗೆ ಗಾಡಿಗಳನ್ನು ವಿತರಿಸಿ ಮಾತನಾಡಿ, ಕಳೆದ ಮೂರು ವರ್ಷಗಳಿಂದ ರೆಸ್ಪಾನ್ಸಿವ್ ಕೇರ್ ಫೌಂಡೇಶನ್ ಸಂಸ್ಥಾಪಕ ಮೊಯಿನುದ್ದೀನ್ ರಹಮಾನ್ ಹಾಗೂ ಪತ್ರಕರ್ತ ಸೈಯದ್ ಯೂಸುಫ್ ಉಲ್ಲಾ ಅವರು ಜಕಾತ್ ಹಣದ ಮೂಲಕ ಸಮುದಾಯದ ನಿರ್ಗತಿಕರಿಗೆ ಆರ್ಥಿಕ ಸಹಾಯ ನೀಡಿ ಸಣ್ಣ ಸಣ್ಣ ಉದ್ಯಮಗಳನ್ನು ಪ್ರಾರಂಭಿಸಲು ನೆರವಾಗುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಈ ಸಮಾಜಮುಖಿ ಕಾರ್ಯಗಳಿಗೆ ನಾನು ಸಹ ಕೈಜೋಡಿಸುವುದಾಗಿ ಭರವಸೆ ನೀಡಿದರು.

ರೆಸ್ಪಾನ್ಸಿವ್ ಕೇರ್ ಫೌಂಡೇಶನ್ ಸಂಸ್ಥಾಪಕ ಮೊಯಿನುದ್ದೀನ್ ರಹಮಾನ್ ಮಾತನಾಡಿ, ಜಕಾತ್ ಪರಿಕಲ್ಪನೆಯ ಮೂಲಕ ಸಮುದಾಯದ ಬಡ ಜನರಿಗೆ ಆರ್ಥಿಕವಾಗಿ ಬಲ ನೀಡುವುದು ನಮ್ಮ ಫೌಂಡೇಶನ್‌ನ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಕಳೆದ ಮೂರು ವರ್ಷಗಳಲ್ಲಿ ಫೌಂಡೇಶನ್ ವತಿಯಿಂದ ಸುಮಾರು 100ಕ್ಕೂ ಹೆಚ್ಚು ನಿರ್ಗತಿಕರಿಗೆ ಸ್ವಯಂ ಉದ್ಯೋಗ ಕಲ್ಪಿಸಲಾಗಿದೆ ಎಂದರು.

ಮಹಿಳೆಯರಿಗೆ ಬಟ್ಟೆ ಹೊಲೆಯುವ ಯಂತ್ರಗಳು, ತರಕಾರಿ ಮತ್ತು ಹಣ್ಣು ಹಂಪಲು ಮಾರಾಟಕ್ಕೆ ತಳ್ಳುವ ಗಾಡಿಗಳು, ಪೆಟ್ಟಿಗೆ ಅಂಗಡಿಗಳು ಸೇರಿದಂತೆ ವಿವಿಧ ಸಣ್ಣ ಉದ್ಯಮಗಳನ್ನು ಆರಂಭಿಸಲು ಸಹಾಯ ಮಾಡಲಾಗಿದೆ ಎಂದು ತಿಳಿಸಿದರು. ಫೌಂಡೇಶನ್ ಸದಸ್ಯರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.



ಕಿರುಸುದ್ದಿ

ಬೃಹತ್ ಜನಸಂಪರ್ಕ ಸಭೆ

ಚಿಕ್ಕನಾಯಕನಹಳ್ಳಿ: ಪಟ್ಟಣವೂ ಸೇರಿದಂತೆ ತಾಲೂಕಿನ ಮತಿಘಟ್ಟದಲ್ಲಿ ಮಾ.17ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೃಹತ್ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದೆ. ತಾಲೂಕಿನ ಹಂದನಕೆರೆ ಹೋಬಳಿ ಮತಿಘಟ್ಟ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಮಾ.17ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ಗಂಟೆಯವರೆಗೆ ಹಾಗೂ ಮಧ್ಯಾಹ್ನ 2.30ರಿಂದ ಸಂಜೆ 5.30ರವರೆಗೆ ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಲಿದ್ದು, ಮೂಲಸೌಕರ್ಯ ಹಾಗೂ ನಾಗರೀಕರ ಸಮಸ್ಯೆಗಳ ಪರಿಹಾರಕ್ಕಾಗಿ ಎಲ್ಲಾ ಸಾರ್ವಜನಿಕರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದ್ದು ಸಮಸ್ಯೆಗಳನ್ನು ಆಲಿಸಲು ಸಂಬಂಧಿಸಿದ ಅಧಿಕಾರಿಗಳ ತಂಡ ಈ ಸಭೆಗಲ್ಲಿ ಭಾಗವಹಿಸಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬಹುದಾಗಿದೆ.

ಗುರು ಸಮರ್ಪಣಾ ಕಾರ್ಯಕ್ರಮ

ಕನಕಪುರ: ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಹಾಸನ ಮತ್ತು ಕೊಡುಗು ಜಿಲ್ಲೆಯ ಕಾರ್ಯದರ್ಶಿ ಶ್ರೀ ಶಂಭುನಾಥ ಸ್ವಾಮೀಜಿಯ ಗುರು ಸಮರ್ಪಣಾ ಕಾರ್ಯಕ್ರಮ ಮಾ.15ರಂದು ಭಾನುವಾರ ಆಲ್ಕೊಳೇಶ್ವರ ಪುಣ್ಯ ಕ್ಷೇತ್ರದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಉಮೇಶ್ ತಿಳಿಸಿದರು.



ತಾಲೂಕಿನ ಉಯ್ಯಂಬಳ್ಳಿ ಹೋಬಳಿ ಆಲ್ಕುಳಿ ಗ್ರಾಮದ ಶ್ರೀಕ್ಷೇತ್ರದಲ್ಲಿ ಶ್ರೀ ಶಂಭುನಾಥ ಸ್ವಾಮೀಜಿ 47ನೇ ವರ್ಷದ ವರ್ಧಂತೋತ್ಸವ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೇತ್ರ, ಹೃದಯ, ಮಧುಮೇಹ, ರಕ್ತದೊತ್ತಡ ಸೇರಿದಂತೆ ಹಲವಾರು ವೈದ್ಯಕೀಯ ಪರೀಕ್ಷೆ ಹಾಗೂ ತಜ್ಞ ವೈದ್ಯರ ಸಲಹೆ ಮತ್ತು ಔಷಧಿಗಳು ಒದಗಿಸುವ ಈ ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿ ಶಿಬಿರದ ಸದುಪಯಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು. ಶಿವಗಿರಿ ಕ್ಷೇತ್ರದ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ, ಮಾಜಿ ಸಂಸದ ಡಿ.ಕೆ.ಸುರೇಶ್, ವಿಧಾನ ಪರಿಷತ್ ಸದಸ್ಯ ಎಸ್.ರವಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಲಕ್ಷ್ಮಣ್, ಬಾಳೆಪುರದೊಡ್ಡಿ ಸರ್ಕಲ್‌ಇನ್ಸ್‌ಪೆಕ್ಟರ್ ಬಿ.ಎಸ್.ಮಂಜುನಥ್ ಸೇರಿದಂತೆ ಅನೇಕರು ಭಕ್ತ ವೃಂದ ಭಾಗವಹಿಸಲಿದೆ ಎಂದರು.

ವಾಣಿಜ್ಯ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿ

ರಾಮನಗರ: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಜನವರಿ 2026ನೇ ಸಾಲಿನ ವಾಣಿಜ್ಯ ಪರೀಕ್ಷೆಯಲ್ಲಿ ನಗರದ ಶ್ರೀ ವೆಂಕಟೇಶ್ವರ ವಾಣಿಜ್ಯ ವಿದ್ಯಾ ಶಾಲೆಯ 20 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆಂದು ಪ್ರಾಂಶುಪಾಲ ಸಿ.ಕೆ. ಮುರಳಿಮೋಹನ್ ತಿಳಿಸಿದ್ದಾರೆ. ಸೀನಿಯರ್ ಇಂಗ್ಲಿಷ್ ಬೆರಳಚ್ಚುನಲ್ಲಿ ಮಾಧುರ್ಯ ಆರ್. ಎಂ.-ಶೇ.90.5. ಜೂನಿಯರ್ ಇಂಗ್ಲಿಷ್ ಬೆರಳಚ್ಚುನಲ್ಲಿ ಚಂದನ್ ಕೆ.-ಶೇ.94.5, ಕಾವ್ಯಬಾಯಿ ಆರ್.-ಶೇ.91, ಭೂಮಿಕಾ ಡಿ.ಎನ್-ಶೇ.90.5, ರಕ್ಷಿತಾ-ಶೇ.90.5, ಗಗನಶ್ರೀ ಎನ್.-ಶೇ.87.5, ಜವೇರಿಯಾ ಬಾನು-ಶೇ.87, ಸಬಾ ರೆಡ್ಡಿ ಎಂ.- ಶೇ.87, ವಿಜಯಲಕ್ಷ್ಮಿ ಆರ್ -ಶೇ.87, ಶ್ವೇತ ಜಿ.ಎಲ್.-ಶೇ.85 ಅಂಕಗಳನ್ನು ಪಡೆದಿದ್ದಾರೆ. ಸೀನಿಯರ್ ಕನ್ನಡ ಬೆರಳಚ್ಚುನಲ್ಲಿ ಸೇವಂತ್ ಕುಮಾರ್-ಶೇ.90, ನಿಶ್ಚಿತ ಹೆಚ್.ಎನ್.-ಶೇ-89.5, ಮಹೇಶ-ಶೇ-85.5 ಜೂನಿಯರ್ ಕನ್ನಡ ಬೆರಳಚ್ಚುನಲ್ಲಿ ರಂಜಿತಾ ಎಸ್.-ಶೇ.91.5, ಜಾನವಿ ಆರ್.-ಶೇ.90.5, ಕಾವ್ಯಬಾಯಿ ಆರ್.-ಶೇ.88, ಚಂದನ್ ಕೆ.-ಶೇ. 88, ಸನೋಫಿಯಾ ಹುಸೇನ್-ಶೇ. 87.5, ರಕ್ಷಿತಾ-ಶೇ.86.5, ಸಬಾ ರೆಡ್ಡಿ ಎಂ.-ಶೇ.85. ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ವರುಣನ ಕೃಪೆಗೆ ಮಕ್ಕಳ ಅಣಕು ಮದುವೆ

ಹುಳಿಯಾರು: ಬಿಸಿಲ ಝಳ ಹೆಚ್ಚಾಗಿದೆ. ಹವಮಾನ ಇಲಾಖೆಯವರು ಮಳೆ ಬರುವ ಮನ್ಸೂಚನೆ ಕೊಟ್ಟರೂ ವರುಣ ಮಾತ್ರ ಕೃಪೆ ತೋರುತ್ತಿಲ್ಲ. ಕೊಳವೆಬಾವಿಯಲ್ಲಿ ನೀರು ಬತ್ತುತ್ತಿದ್ದು ಒಣಗುತ್ತಿರುವ ತೋಟಹೊಲಗಳನ್ನು ಉಳಿಸುಕೊಳ್ಳಲು ರೈತ ಪರದಾಡುತ್ತಿದ್ದಾರೆ. ಪ್ರತಿ ವರ್ಷದಂತೆ ಈ ವರ್ಷವೂ ರೈತ ದೈವದ ಮೊರೆ ಹೋಗಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ, ಹುಳಿಯಾರು ಹೋಬಳಿಯ ಸಿಂಗಾಪುರದಲ್ಲಿ ಮಳೆರಾಯನನ್ನು ಒಲಿಸಿಕೊಳ್ಳಲು ಗ್ರಾಮಸ್ಥರು ಹಮ್ಮಿಕೊಂಡಿದ್ದ 'ಮಕ್ಕಳ ಅಣಕು ಮದುವೆ' ಎಲ್ಲರ ಗಮನ ಸೆಳೆಯಿತು. ಈ ವಿಶಿಷ್ಟ ವಿವಾಹದಲ್ಲಿ ಗ್ರಾಮದ ಇಬ್ಬರು ಬಾಲಕರೇ ಕೇಂದ್ರಬಿಂದುವಾಗಿದ್ದದ್ದು ವಿಶೇಷ.



ಕನಕಪುರ ಎಕ್ಸ್‌ಪ್ರೆಸ್ ಏಜೆನ್ಸಿ ಎಲ್‌ಪಿಜಿ ಆಟೋ ಬಂಕ್‌ನಲ್ಲಿ ಗ್ಯಾಸ್ ಪೂರೈಕೆಯಲ್ಲಿ ಅಕ್ರಮ ಮಾಡುತ್ತಿದ್ದಾರೆ ಎಂದು ಆಟೋ ಚಾಲಕರು ಬಂಕ್‌ನ ಮುಂದೆ ಪ್ರತಿಭಟನೆ ನಡೆಸಿದರು.

ನಾಳೆ ಕೆಂಗಲ್ ಹನುಮಂತಯ್ಯ ನೆನಪು

ರಾಮನಗರ: ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಸವಿ ನೆನಪಿನ ಕಾರ್ಯಕ್ರಮವನ್ನು ಮಾ.15 ರಂದು ಭಾನುವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ತಿಳಿಸಿದರು. ನಗರಸಭೆಯ ತಮ್ಮ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮನಗರದ ಪುಣ್ಯ ನೆಲದಲ್ಲಿ ಜನಿಸಿ ಇಡಿ ರಾಷ್ಟ್ರ ಮೆಚ್ಚುವ ಆಡಳಿತ ನೀಡುವ ಮೂಲಕ ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ಇಂತಹ ಮಹಾನ್ ನಾಯಕ ನಮ್ಮ ನೆಲದವರು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೆಂಗಲ್ ರಾಜಕಾರಣ, ಬದುಕು ಮತ್ತು ಸಾಧನೆ ಬಗ್ಗೆ ಇತಿಹಾಸ ತಜ್ಞ ಡಾ.ತಲಕಾಡು ಚಿಕ್ಕರಂಗೇಗೌಡ ಅವರು ಮಾತನಾಡಲಿದ್ದಾರೆ. ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು. ಸಾಹಿತಿ ಡಾ. ಬೈರಮಂಗಲ ರಾಮೇಗೌಡ, ಚಿಂತಕ ಡಾ. ದೊಡ್ಡ ಬೋರಯ್ಯ, ಲೇಖಕ ಸು.ಚಿ.ಗಂಗಾಧರಯ್ಯ, ಸಾಹಿತಿ ಡಾ. ರವಿಕುಮಾರ್ ಭಾಗಿ, ರೈತಪರ ಹೋರಾಟಗಾರ್ತಿ ಅನುಸೂಯಮ್ಮ ಅವರುಗಳು ಮಾತನಾಡಲಿದ್ದು, ಜಿಲ್ಲೆಯ ಮತ್ತು ರಾಮನಗರ ತಾಲೂಕಿನ ವಿವಿಧ ಸಂಘಟನೆಗಳು ಇರಲಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ರಾಮನಗರ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಮಾತನಾಡಿದರು.

ಕನ್ನಡ ಚಳವಳಿ ವಾಟಾಳ್ ಪಕ್ಷ, ಕರುನಾಡ ಸೇನೆಯಿಂದ ಪ್ರತಿಭಟನೆ

ಗ್ಯಾಸ್ ಕೊರತೆಗೆ ಆಕ್ರೋಶ

ರಾಮನಗರ: ಅಮೆರಿಕಾ ಅಧ್ಯಕ್ಷ ಟ್ರಂಪ್ ಮಹಾನ್ ನಾಯಕನಾಗಿ ಕದನದ ಮುಂಚೆ ಪ್ರಪಂಚದ ಸ್ಥಿತಿಗತಿಗಳ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಚಿಂತನೆ ಮಾಡಬೇಕಿತ್ತು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ರಾಜ್ಯಾಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು. ಐಜೂರು ವೃತ್ತದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷ ಹಾಗೂ ಕರುನಾಡ ಸೇನೆ ವತಿಯಿಂದ ಗ್ಯಾಸ್ ಸಿಲಿಂಡರ್ ತೀವ್ರ ಕೊರತೆ ವಿರುದ್ಧ ಗ್ಯಾಸ್‌ಗಾಗಿ ಸಿಲಿಂಡರ್ ಮೇಲೆ ಕುಳಿತು ಪ್ರತಿಭಟನೆ ನಡೆಸಿ ಅವರು ಮಾತನಾಡಿದರು. 15 ದಿನದೊಳಗೆ ಯುದ್ಧ ನಿಲ್ಲದಿದ್ದರೆ ಕನ್ನಡ ವಾಟಾಳ್ ಪಕ್ಷ ಎಲ್ಲರ ಜೊತೆಗೂಡಿ ಯುದ್ಧ ನಿಲ್ಲಬೇಕು, ಗ್ಯಾಸ್ ಕೊಡಬೇಕೆಂದು ಎಲ್ಲಾ ಕನ್ನಡಪರ ಸಂಘಟನೆಗಳ ನೇತೃತ್ವದಲ್ಲಿ ರಾಜ್ಯದಲ್ಲಿ 'ಅಖಂಡ ಕರ್ನಾಟಕ ಬಂದ್' ಮಾಡುತ್ತೇವೆ.

ಹೋಟೆಲ್ ಮಾಲೀಕರಿಗೆ ನಮ್ಮ ಬೆಂಬಲವಿದೆ ಎಂದರು. ಪ್ರಧಾನಮಂತ್ರಿ ನರೇಂದ್ರಮೋದಿ, ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ, ಎಲ್ಲಾ ಮುಖಂಡರು ಒಮ್ಮತದಿಂದ ಟ್ರಂಪ್, ಇಸ್ರೇಲ್, ಇರಾನ್ ಮೂರು ದೇಶದ ನಾಯಕರನ್ನು ಭೇಟಿ ಮಾಡಿ ಮಹಾತ್ಮಗಾಂಧೀಜಿಯವರ ತತ್ವ, ಸಿದ್ಧಾಂತಕ್ಕೆ ಬದ್ಧರಾಗಬೇಕು. ಇಂದು ಮಹಾತ್ಮಗಾಂಧೀಜಿಯಂತರ ಮಹಾನ್ ನಾಯಕರು ಬೇಕಾಗಿದ್ದಾರೆ. ಅಮೆರಿಕಾ, ಇಸ್ರೇಲ್, ಇರಾನ್ ಅವರಿಗೆ ಗಾಂಧೀಜಿಯವರ ಶಾಂತಿಯ ಸಂದೇಶವನ್ನು ತಲುಪಿಸಬೇಕು ಎಂದರು.

ಒರಿಸ್ಸಾದಿಂದ ಸುಮಾರು 12 ಜನ ಶಾಸಕರು ಕರ್ನಾಟಕದ ಬೆಂಗಳೂರಿನ ಬಳಿ ಬಿಡದಿಗೆ ಬಂದಿದ್ದಾರೆ. ಅವರ ಕಾವಲಿಗೆ ಬಿಗಿ ಪೋಲೀಸ್ ಕಾವಲು ಹಾಕಲಾಗಿದೆ.



ಕಣ್ಣೀರು ಶತಸಿದ್ಧ

ಯುದ್ಧದಿಂದಾಗಿ ಭಾರತಕ್ಕೆ ಅಡುಗೆ ಎಣ್ಣೆಗೆ ಮತ್ತು ಗ್ಯಾಸ್ ಇಲ್ಲ, ಭಾರತದಿಂದ ಯಾವುದೇ ಪದಾರ್ಥಗಳು ರಫ್ತಾಗುತ್ತಿಲ್ಲ. ಇದೇ ಪರಿಸ್ಥಿತಿ 15 ದಿನಗಳು ಮುಂದುವರೆದರೆ, ನಮ್ಮ ರಾಜ್ಯದಲ್ಲಿ ನಮ್ಮ ದೇಶದಲ್ಲಿ ಪ್ರತಿ ಮನೆಮನೆಯಲ್ಲೂ ಶ್ರೀಮಂತ, ಬಡವರು ಇರಬಹುದು ಎಲ್ಲ ಕಣ್ಣಿನಲ್ಲಿ ಕಣ್ಣೀರು ಶತಸಿದ್ಧ.

ಇದು ಒಳ್ಳೆಯ ಬೆಳವಣಿಗೆಯಲ್ಲ. ಬಂದಿರುವ ಶಾಸಕರಿಗೆ ಕಿವಿಮಾತೆಂದರೆ, ಮತ್ತೆ ವಾಪಸ್ಸು ಹೋಗಬೇಕು. ಇದು ಪ್ರಜಾಪ್ರಭುತ್ವ ನಿರಂಕುಶಪ್ರಭುತ್ವವಲ್ಲ. ನಿಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದು ನಿಮಗೆ ರಕ್ಷಣೆ ಕೊಡುವುದು ಅಪರಾಧ. ಒರಿಸ್ಸಾ ರಾಜ್ಯದ ಐಜಿಪಿ. ಮತ್ತು ಚೀಫ್ ಸೆಕ್ರೆಟರಿ, ಮುಖ್ಯಮಂತ್ರಿ ಕೂಡಲೇ ಕಳುಹಿಸಿ ತಮ್ಮ ಶಾಸಕರನ್ನು ಕರೆದುಕೊಂಡು ಹೋಗಬೇಕು.

ಶಾಸಕರನ್ನು ಕದ್ದು ತಂದು ಇಲ್ಲಿಟ್ಟಿದ್ದಾರೆಂದರೆ, ಚುನಾವಣೆ ವ್ಯವಸ್ಥೆ ಕುಸಿದಿದೆ, ಕಾನೂನಿಗೆ ಬೆಂಕಿ ಬಿದ್ದಿದೆ. ಚುನಾವಣೆ ಆಯುಕ್ತರೇ ಬಂದು ಶಾಸಕರನ್ನು ಕರೆದುಕೊಂಡು ಹೋಗಲಿ. 15 ದಿನದೊಳಗೆ ಇವರನ್ನು ಕರೆದುಕೊಂಡು ಹೋಗದಿದ್ದರೆ ನಾವೇ ಮುತ್ತಿಗೆ ಹಾಕುತ್ತೇವೆ. ಶಾಸಕರಿಗೆರಕ್ಷಣೆಕೊಡುತ್ತೇವೆ. ಗೌರವದಿಂದ ಊರಿಗೆ ಕಳುಹಿಸುತ್ತೇವೆ ಎಂದರು. ಪ್ರತಿಭಟನೆಯಲ್ಲಿ ರಾಜ್ಯ ಕರುನಾಡ ಸೇನೆ ಉಪಾಧ್ಯಕ್ಷ ಎಂ.ಜಗದೀಶ್ ಐಜ ಊರು, ರಾಜ್ಯ ಉಸ್ತುವಾರಿ ಅಧ್ಯಕ್ಷ ವಿ.ಎನ್.ಗಂಗಾಧರ್, ಜಿಲ್ಲಾಧ್ಯಕ್ಷ ಜಯಕುಮಾರ್, ಜಿಲ್ಲಾ ದಲಿತ ಘಟಕದ ಅಧ್ಯಕ್ಷ ಕೆ.ಜಯರಾಮು, ಕಾರ್ಯಾಧ್ಯಕ್ಷ ಕುಮಾರ್, ಮಹಿಳಾ ಘಟಕದ ಕಾಯಾಧ್ಯಕ್ಷೆ ವೆಂಕಟಲಕ್ಷ್ಮೀ, ಮಹಿಳಾ ತಾಲ್ಲೂಕು ಕಾರ್ಯದರ್ಶಿ ಕೆ.ಆರ್.ವಿ.ಕುಮಾರ್ ತಾಲ್ಲೂಕು ವಾಟಾಳ್ ನಾಗರಾಜ್ ಆಪ್ತ ಕಾರ್ಯದರ್ಶಿ ಪಾರ್ಥಸಾರಥಿ ಉಪಸ್ಥಿತರಿದ್ದರು.

ಲೀಟರ್ ಹಾಲಿಗೆ 1 ರೂ. ಪ್ರೋತ್ಸಾಹಧನ ಘೋಷಣೆ

ರಾಮನಗರ: ಬಮೂಲ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರೈತರಿಗೆ ಪ್ರತಿ ಲೀಟರ್‌ಗೆ ರೂ.1 ಬೋನಸ್ ಅನ್ನು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ಘೋಷಿಸಿದ ಹಿನ್ನಲೆಯಲ್ಲಿ ಬಿಳಗುಂಬ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹೈನುಗಾರರಿಗೆ ಸಿಹಿ ವಿತರಿಸಿ ಸಂಭ್ರಮಿಸಲಾಯಿತು. ತಾಲೂಕಿನ ಬಿಳಗುಂಬ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಾಲು ಉತ್ಪಾದಕರಿಗೆ ಸಿಹಿ ವಿತರಿಸಿದ ಡೇರಿ ಪದಾಧಿಕಾರಿಗಳು, ಸದಸ್ಯರು, ಕಾರ್ಯದರ್ಶಿಗಳು, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಡಿ.ಕೆ.ಸುರೇಶ್ ಅವರಿಗೆ ಅಭಿನಂದನೆ ಸಲ್ಲಿಸಿದರು. ಯುವ ಕಾಂಗ್ರೆಸ್‌ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ್ ಅವರು, ಯುಗಾದಿ ಕೊಡುಗೆಯಂತೆ ಪ್ರತಿ ಲೀಟರ್ ಗೆ 1 ರೂ.ನಂತೆ ಹಾಲು ಉತ್ಪಾದಕರಿಗೆ ಬೋನಸ್ ಘೋಷಣೆ ಮಾಡಿರುವ ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರಿಗೆ ಇಡೀ ಹೈನುಗಾರರ ಪರವಾಗಿ ಅಭಿನಂದನೆ ಸಲ್ಲಿಸುತ್ತೇವೆ ಎಂದರು.

ಹೈನುಗಾರರಿಗೆ ಮಾತ್ರವಲ್ಲದೆ, ಬಮೂಲ್ ಹೊರಗುತ್ತಿಗೆ ನೌಕರರಿಗೂ 5 ಸಾವಿರ ಬೋನಸ್ ಹಾಗೂ ಡೇರಿಗಳಿಗೆ 15 ಸಾವಿರ ಬೋನಸ್ ನೀಡುತ್ತಿದ್ದಾರೆ. ಇಂತಹ ಪ್ರೋತ್ಸಾಹ ಕ್ರಮಗಳಿಂದ ಹೆಚ್ಚಿನ ಪ್ರಮಾಣದ ಹಾಲು ಉತ್ಪಾದನೆಗೆ ನೆರವಾಗಲಿದೆ. ರೈತರು ಹೈನುಗಾರಿಕೆಯಿಂದ ವಿಮುಖವಾಗುವುದನ್ನು ತಡೆಯಬಹುದು ಎಂದರು. ಗ್ರಾಮ ಪಂಚಾಯಿತಿ ಸದಸ್ಯರು ಕೆಂಚೇಗೌಡ, ಮುಖಂಡರಾದ ಶ್ರೀಧರ್, ಮಿಥುನ್, ಪ್ರಭು, ಕಾರ್ಯದರ್ಶಿ ಹೇಮಂತ್, ರಾಜಣ್ಣ, ವಾಸು, ಪುಟ್ಟಹನುಮಯ್ಯ, ಜಯಲಕ್ಷ್ಮಮ್ಮ, ದೇವರಾಜು ಹಾಗೂ ಇತರರು ಇದ್ದರು.



ಗೃಹಲಕ್ಷ್ಮೀ ಯೋಜನೆಯಲ್ಲಿ ಮೃತ ಫಲಾನುಭವಿಗಳ ವಿವರ ನಮೂದಿಸಿ

ಮಾಗಡಿ: ಮರಣ ಹೊಂದಿದ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ವಿವರವನ್ನು ಕೂಡಲೇ ನಮೂದಿಸಬೇಕು ಎಂದು ಗ್ಯಾರಂಟಿ ಅನುಷ್ಠಾನದ ಸಮಿತಿ ಜಿಲ್ಲಾಧ್ಯಕ್ಷ ಕೆ. ರಾಜು ಹೇಳಿದರು. ಹೊಸಪೇಟೆಯ ಬಮೂಲ್ ಕಚೇರಿಯಲ್ಲಿ ಗ್ಯಾರಂಟಿ ಯೋಜನೆ ಪ್ರಗತಿ ಪರಿಶೀಲನಾ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳು ಮರಣ ಹೊಂದಿದ ನಂತರ ಅವರ ಖಾತೆಗೆ ಪಾವತಿಯಾಗಿರುವ ಧನಸಹಾಯ ಮತ್ತೊಮ್ಮೆ ಸಂಬಂಧಿಸಿದಂತೆ ಮಾ.4ರ 2024 ನಂತರ ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿ ಮಾಡಿಸಿಕೊಂಡು ತದನಂತರ ಮರಣ ಹೊಂದಿದಲ್ಲಿ ಹಾಗೂ ಗೃಹಲಕ್ಷ್ಮೀ ಯೋಜನೆಯ ಸೌಲಭ್ಯವನ್ನು ನಿರಾಕರಿಸಿದ ಫಲಾನುಭವಿಗಳ ಖಾತೆಗಳಿಗೆ ಜಮೆಯಾಗಿರುವ ಧನಸಹಾಯದ ಮತ್ತವನ್ನು ಸರ್ಕಾರಕ್ಕೆ ಜಮೆ ಮಾಡುವಂತೆ ಸರ್ಕಾರದ ಲೆಕ್ಕಶೀರ್ಷಿಕೆಯನ್ನು ನೀಡಿದೆ ಮರಣ ಹೊಂದಿದ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ವಿವರವನ್ನು ನಮೂದಿಸಲು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಒದಗಿಸಿರುವ ಸೇವಾಸಿಂಧು ಲಾಗಿನ್ ನಲ್ಲಿ ಅವಕಾಶ ಕಲ್ಪಿಸಿದ್ದು ತಕ್ಷಣವೇ ಅಂಗನವಾಡಿ ಕಾರ್ಯಕರ್ತೆಯರಿಂದ ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು ವೃತ್ತ ಮೇಲ್ವಿಚಾರಕರ ಮೂಲಕ ಪಡೆದು ಸೇವಾಸಿಂಧು ಲಾಗಿನ್‌ನಲ್ಲಿ ಮರಣ ಹೊಂದಿದ ಫಲಾನುಭವಿಗಳ ವಿವರವನ್ನು ವಿಳಂಬ ಮಾಡದೇ ನಮೂದಿಸಲು ಸೂಚಿಸಿದೆ.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನಮೂದಿಸಿದ ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು ಪರಿಶೀಲಿಸಿ ಜಿಲ್ಲಾ ಉಪನಿರ್ದೇಶಕರಿಗೆ ಒದಗಿಸುವ ಸೇವಾಸಿಂಧು ಲಾಗಿನ್ ನಲ್ಲಿ ಅನುಮೋದನೆ ನೀಡುವುದು. ಬಮೂಲ್ ನಿರ್ದೇಶಕ ಎಚ್. ಎನ್.ಅಶೋಕ್ ಮಾತನಾಡಿದರು. ಅಂಗನವಾಡಿ ಕಾರ್ಯಕರ್ತರಿಗೆ ಯಾವ ರೀತಿ ಮೃತಪಟ್ಟ ಫಲಾನುಭವಿಗಳನ್ನು ಸೇವಾ ಸಿಂಧು ಆಪ್ ಮೂಲಕ ತೆಗೆಯಬಹುದು ಎಂಬುದರ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ನೀಡಲಾಯಿತು. ಅಧ್ಯಕ್ಷ ಕಲ್ಕೆರೆ ಶಿವಣ್ಣ, ಸದಸ್ಯೆ ವನಜಾ, ಜಿಲ್ಲಾ ಉಪಾಧ್ಯಕ್ಷ ಶಿವಪ್ರಸಾದ್ ಸೇರಿದಂತೆ ಇತರರು ಭಾಗವಹಿಸಿದ್ದರು.



ಕಾಳಸಂತೆಯಲ್ಲಿ ಗ್ಯಾಸ್ ಮಾರಾಟ: ಪ್ರತಿಭಟನೆ

ಕನಕಪುರ: ನಗರದ ಹೌಸಿಂಗ್ ಬೋರ್ಡ್ ಸಮೀಪದ ಎಕ್ಸ್‌ಪ್ರೆಸ್ ಏಜೆನ್ಸಿಯ ಎಲ್.ಪಿ.ಜಿ ಆಟೋ ಬಂಕ್‌ನಲ್ಲಿ ಗ್ಯಾಸ್ ಪೂರೈಕೆಯಲ್ಲಿ ಕಾಳ ಸಂತೆ ಮಾರಾಟ ಮಾಡುತ್ತಿದ್ದಾರೆ ಎಂದು ಆಕ್ರೋಶಗೊಂಡ ಆಟೋ ಚಾಲಕರು ಬಂಕ್‌ನ ಮುಂದೆ ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಬೆಳಂ ಬೆಳಗ್ಗೆ ಎಲ್‌ಪಿಜಿ ಆಟೋ ಬಂಕ್‌ನಲ್ಲಿ ಗ್ಯಾಸ್ ತುಂಬಿಸಿಕೊಳ್ಳಲು ಹೋದವರಿಗೆ ಮಾಲೀಕರಿಂದ ಶಾಕ್ ಕಾದಿತ್ತು, ಕೆಜಿಗೆ 30 ರೂಪಾಯಿ ಹೆಚ್ಚುವರಿ ಬೆಲೆ ನೀಡಿ ಗ್ಯಾಸ್ ಕೊಂಡುಕೊಳ್ಳಬೇಕಾಗಿತ್ತು. ಇದರಿಂದ ಕಾಳಂತೆ ಮಾರಾಟದ ವಿರುದ್ಧ ರೊಚ್ಚಿಗೆದ್ದ ನೂರಾರು ಮಂದಿ ಆಟೋ ಚಾಲಕರು ವಿನಾಕಾರಣ ತೊಂದರೆ ನೀಡುತ್ತಿರುವ ಆಟೋ ಗ್ಯಾಸ್ ಏಜೆನ್ಸಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಈಗಾಗಲೇ ರಾಜ್ಯ ಸರ್ಕಾರ ವಾಣಿಜ್ಯ ಸಿಲಿಂಡರ್ ಹೊರತುಪಡಿಸಿ ಕಾಳ ಸಂತೆಯಲ್ಲಿ ಮಾರಾಟ ಮಾಡುವಂತಿಲ್ಲ ಎಂಬ ಆದೇಶವನ್ನು ನೀಡಿದ್ದರೂ ಸಹ ಗ್ಯಾಸ್ ಏಜೆನ್ಸಿ ಮಾಲೀಕರು ಆಟೋ ಗ್ಯಾಸ್ ಪೂರೈಕೆಯಲ್ಲಿ ಅಭಾವ ಸೃಷ್ಟಿಸಿ ಕಾಳಸಂತೆ ಮಾರಾಟಕ್ಕೆ ಮುಂದಾಗಿದ್ದಾರೆ. ಅಭಾವ ಸೃಷ್ಟಿಸಿ ಪೂರೈಕೆಯನ್ನು ನಿಯಂತ್ರಿಸಿ ಬೇರೆ ಜಿಲ್ಲೆ ತಾಲೂಕುಗಳಲ್ಲಿ ಮಾರಾಟ ಮಾಡುತ್ತಿರುವ 69 ರೂಪಾಯಿಗಳಿಗೆ ಮಾರಾಟ ಮಾಡಬೇಕೆಂದು ಆ ಕುರುಕ್ಷ ವ್ಯಕ್ತಪಡಿಸಿದ್ದರು.

ಯುವಶಕ್ತಿ ವೇದಿಕೆ ಅಧ್ಯಕ್ಷ ಶ್ರೀನಿವಾಸ್, ಆಟೋ ಚಾಲಕರಾದ ಸಲೀಂ, ಕೌಸರ್, ನವೀನ್, ರಾಜು, ಕಬ್ಬಾಳಯ್ಯ, ಸಿದ್ದರಾಜು, ಜೀವನ್ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಯುದ್ಧದ ನೆಪದಲ್ಲಿ ಕೃತಕ ಗ್ಯಾಸ್ ಅಭಾವ ಸೃಷ್ಟಿಸಿ ಬಡವರನ್ನು ಸುಲಿಗೆ ಮಾಡಲಾಗುತ್ತಿದೆ.

ವಾಣಿಜ್ಯ ಗ್ಯಾಸ್ ಅಭಾವ ಇದೆ. ಇದನ್ನು ನೆಪ ಮಾಡಿಕೊಂಡು ಗೃಹಬಳಕೆಯ ಗ್ಯಾಸ್ ಗೆ ಅಭಾವ ಸೃಷ್ಟಿಸಬಾರದು ಈಗಾಗಲೇ ಇಲಾಖೆಯ ಅಧಿಕಾರಿಗಳು ವಾಣಿಜ್ಯ ಗ್ಯಾಸ್ ಹೊರತುಪಡಿಸಿ ಗೃಹ ಬಳಕೆಗೆ ಅಭಾವ ಇಲ್ಲವೆಂದು ದೃಢಪಡಿಸಿದ್ದಾರೆ. ಆದರೆ ಹೋಟೆಲ್‌ಗಳಲ್ಲಿ ಬದಲಾಗಿ ವಾಣಿಜ್ಯ ಗ್ಯಾಸ್ ಬದಲಾಗಿ ಗೃಹಬಳಕೆಯ ಗ್ಯಾಸ್ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಜನಸಾಮಾನ್ಯರು ಪರದಾಡುವಂತಾಗಿದೆ ತಾಲೂಕು ಆಡಳಿತ ಮತ್ತು ಪೊಲೀಸ್ ನವರು ಇದನ್ನು ಪತ್ತೆ ಹಚ್ಚಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಗ್ರಾಮ ಲೆಕ್ಕಾಧಿಕಾರಿಗಳನ್ನು ಕೂಡಲೇ ವರ್ಗಾಯಿಸಲಿ

ಹಾರೋಹಳ್ಳಿ: ಭ್ರಷ್ಟಾಚಾರದಲ್ಲಿ ತೊಡಗಿರುವ ಹಾರೋಹಳ್ಳಿ ತಾಲೂಕಿನ ಗ್ರಾಮ ಲೆಕ್ಕಾಧಿಕಾರಿಗಳನ್ನು ಬೇರೆ ಕಡೆ ವರ್ಗಾವಣೆಗೊಳಿಸದಿದ್ದರೆ ಜಿಲ್ಲಾಡಳಿತದ ವಿರುದ್ಧ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಜಯಕರ್ನಾಟಕ ಜನಪರ ವೇದಿಕೆಯ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಎಚ್ಚರಿಸಿದರು. ಹಾರೋಹಳ್ಳಿ ತಾಲೂಕಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹಾರೋಹಳ್ಳಿ ತಾಲೂಕಿನೆಲ್ಲಡೆ ವ್ಯಾಪಕ ಬ್ರಷ್ಟಾಚಾರ ನಡೆಯುತ್ತಿದೆ. ಸರಕಾರಿ ಜಮೀನುಗಳನ್ನು ಖಾಸಗೀಯವರಿಗೆ ಕಳ್ಳ ಅಧಿಕಾರಿಗಳು ಪರಭಾರೆ ನಡೆಸುತ್ತಿದ್ದಾರೆ ಜಿಲ್ಲಾಧಿಕಾರಿಗಳನ್ನು ಬದಲಿಸದಿದ್ದರೆ ದಿನ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಸರಕಾರಿ ಜಮೀನುಗಳನ್ನು ದುರ್ಬಿನ್ ಹಿಡಿದು ಹುಡುಕಬೇಕಾಗುತ್ತದೆ ಸಂಬಂಧಪಟ್ಟವರು ಕೂಡಲೇ ಇತ್ತ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಗಬ್ಬಾಡಿ ಗ್ರಾಮದ ಸರ್ವೆ ನಂ.91ರಲ್ಲಿ ಸರಕಾರಿ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಪ್ರಭಾವಿ ವ್ಯಕ್ತಿಗೆ ಖಾತೆ ಮಾಡಲಾಗಿದೆ. 2024ರಲ್ಲಿ ದುರಸ್ತಾಗಿ,2025ರಲ್ಲಿ ಖಾತೆಯಾಗಿದೆ ಈ ಸಂಬಂಧ ಜಿಲ್ಲಾಡಳಿತಕ್ಕೆ ದೂರು ನೀಡಲಾಗಿದೆ ಹೀಗಿದ್ದರೂ ಕ್ರಮ ವಹಿಸಿಲ್ಲ ಇಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಈಶ್ವರ್ ಎಂಬ ವ್ಯಕ್ತಿಯೇ ಎಲ್ಲದಕ್ಕೂ ಸೂತ್ರದಾರನಾಗಿದ್ದು,ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ಇವರ ಕೈಗೊಂಬೆಯಾಗಿದ್ದಾರೆ. ಉಪವಿಭಾಗಾಧಿಕಾರಿಯಂತೂ ಇವನ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಒಬ್ಬ ಗ್ರಾಮ ಲೆಕ್ಕಾಧಿಕಾರಿ ಜಿಲ್ಲಾಡಳಿತವನ್ನು ನಿಯಂತ್ರಣದಲ್ಲಿಟ್ಟು ಕೊಂಡಿದ್ದಾನೆ ಎಂದರೆ ಇವರ ಆಟಾಟೋಪಗಳು ಹೇಗಿವೆ ಎಂಬುದನ್ನು ಜನರೇ ಊಹೆ ಮಾಡಿಕೊಳ್ಳಬೇಕು ಎಂದರು. ಒಬ್ಬ ಗ್ರಾಮ ಲೆಕ್ಕಾಧಿಕಾರಿಗೆ ಸರಕಾರ ಹೆಚ್ಚು ಎಂದರೆ 50, 000 ಸಂಬಳ ನೀಡಬಹುದು ಆದರೆ ಗ್ರಾಮ ಲೆಕ್ಕಾಧಿಕಾರಿ ಈಶ್ವರ್ ಕೋಟಿ ಒಡೆಯ ಈ ಆಸ್ತಿಗಳೆಲ್ಲಾ ಹೇಗೆ ಬಂತು ಎಂಬುದನ್ನು ತನಿಖೆ ನಡೆಸಬೇಕು. ಸಂಚಾಲಕ ಚೀಲೂರು ಮುನಿರಾಜು, ತಾಲೂಕು ಅಧ್ಯಕ್ಷ ಶಿವರಾಜು, ಜನಪರ ವೇದಿಕೆಯ ಕಾರ್ಯದರ್ಶಿ ಎಚ್.ಎಂ.ಗಿರೀಶ್ ,ಪ್ರವೀಣ್, ಕುಮಾರ್,ನಂಜುಂಡಪ್ಪ ಇದ್ದರು

ಮಹಿಳಾ ದಿನಾಚರಣೆ। ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವಿಪ ಸದಸ್ಯ ಎಸ್.ರವಿ ಹೇಳಿಕೆ

ಉತ್ತಮ ಶಿಕ್ಷಣ ನೀಡಿದರೆ ಸ್ತ್ರೀಯರು ಜಗತ್ತು ತೂಗಬಲ್ಲರು

ಕನಕಪುರ: ತೊಟ್ಟಿಲು ತೂಗಿದ ಕೈಗಳಿಗೆ ಉತ್ತಮ ಶಿಕ್ಷಣ ನೀಡಿದರೆ ಜಗತ್ತನ್ನು ತೂಗಬಲ್ಲರು ಎಂದು ಸಾಕ್ಷಿಯಾಗಿ ನೂರಾರು ಮಹಿಳಾ ಸಾಧಕರು ನಮ್ಮೊಂದಿಗೆ ಇದ್ದಾರೆಂದು ವಿಧಾನ ಪರಿಷತ್ ಸದಸ್ಯ ಎಸ್.ರವಿ ಹೇಳಿದರು.

ಶನಿವಾರ ನಗರದ ರೂರಲ್ ಕಾಲೇಜು ಧೂಂತೂರು ಮಾರೇಗೌಡ ಸಭಾಂಗಣದಲ್ಲಿ ಮಳಗಾಳು ಪರಿಸರ ಪ್ರೇಮಿಗಳ ಸಂಘ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಮಹಿಳಾ ಸಾಧಕರಿಗೆ ಸನ್ಮಾನ ನೆರವೇರಿಸಿ ಮಾತನಾಡಿದ ಅವರು, ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸಲು, ಅವರ ಸಾಧನೆಗಳನ್ನು ಗೌರವಿಸಲು ಹಾಗೂ ಸಮಾಜದಲ್ಲಿ ಸಮಾನತೆ ತರಲು ಮಹಿಳಾ ದಿನಾಚರಣೆ ನಡೆಸಲಾಗುತ್ತಿದೆ. ಮಹಿಳೆಯರು ಲಭ್ಯ ಅವಕಾಶಗಳನ್ನು ಬಳಸಿಕೊಂಡು ಧೈರ್ಯಶಾಲಿಗಳಾಗಿ ಮುನ್ನುಗ್ಗಬೇಕು, ಸಾಧನೆಗೆ ನೂರಾರು ಕ್ಷೇತ್ರಗಳಿವೆ, ಅವುಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಇಂದು ಸರ್ಕಾರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ರಂತವರು ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಇದೊಂದು



ನಿದರ್ಶನವಾಗಿದೆ. ಎಲ್ಲಾ ರಂಗಗಳಲ್ಲೂ ಮಹಿಳೆಯರ ಸಾಧನೆ ಗಮನಾರ್ಹವಾಗಿದೆ.

ಮಳಗಾಳು ಪರಿಸರಪ್ರೇಮಿ ಸಂಘವು ಉತ್ತಮ ಹಾಗೂ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ, ರಸ್ತೆ ಬದಿ, ಸ್ಮಶಾಣ, ಶಾಲಾಕಾಲೇಜುಗಳು, ದೇವಸ್ಥಾನ ಸೇರಿದಂತೆ ಅನೇಕ ಕಡೆಗಳಲ್ಲಿ ಸಸಿ ನೆಡುವ ಮೂಲಕ ಪರಿಸರ ಪ್ರೇಮ ಮೆರೆಯುತ್ತಿರುವುದು ಶ್ಲಾಘನೀಯವಾಗಿದೆ.

ಪ್ರತಿಯೊಬ್ಬರು ಪರಿಸರ ಸಂರಕ್ಷಣೆಯ ಕುರಿತು ಸಾಮಾನ್ಯ ಜನರಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕಿದೆ. ಈ ಸಂಘವು ಎಲ್ಲರಿಗೂ ಮಾದರಿಯಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯ ಸಾಧನೆಯನ್ನು ಗುರ್ತಿಸಿ ಸನ್ಮಾನಿಸುತ್ತಿರುವುದು ಅವರಿಗೆ ಮತ್ತಷ್ಟು ಸ್ಫೂರ್ತಿದಾಯಕವಾಗಿದೆ. ವಿದ್ಯಾರ್ಥಿಗಳು ಚಿಕ್ಕಂದಿನಿಂದಲೇ ದೇಶಾಭಿಮಾನ ಹಾಗೂ ಪರಿಸರ ಪ್ರೇಮವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಆರ್.ಇ.ಎಸ್ ಸಂಸ್ಥೆ ಅಧ್ಯಕ್ಷ ಶ್ರೀಕಂಠು ಮಾತನಾಡಿ, ನಾಗರೀಕರೆಂದು ಹೇಳಿಕೊಳ್ಳುವ ನಮ್ಮಿಂದಲೇ ಇಂದು ಹೆಚ್ಚಾಗಿ ಅನಾಗರೀಕ ವರ್ತನೆಗಳು ನಡೆಯುತ್ತಿವೆ. ಭೂಮಿ ತಾಯಿಯ ಮೇಲಿನ ನಾಶದಿಂದಲೇ ಕಲುಷಿತ ಪರಿಸರದಲ್ಲಿ ನಾವು ಬದುಕುವ ಪರಿಸ್ಥಿತಿಯನ್ನು ತಂದುಕೊಂಡಿದ್ದೇವೆ. ವಿಮಾನದಲ್ಲಿ ಹೂಗುವುದನ್ನು ಕಲಿತಿರುವ ನಾವು ಅದರ ಹಾರಾಟದಿಂದ ಪರಿಸರಕ್ಕೆ ಎಷ್ಟು ಹಾನಿ ಆಗುತ್ತದೆ ಎಂಬುದನ್ನು ಗಮನಿಸಿಲ್ಲ, ಜಗತ್ತಿನ ಎಲ್ಲಾ ಪ್ರಾಣಿ ಪಕ್ಷಿಗಳಿಗಿಂತ ಮನುಷ್ಯನಿಂದಲೇ ಪರಿಸರಕ್ಕೆ ಹೆಚ್ಚು ಹಾನಿ ಆಗುತ್ತಿದೆ. ಇದನ್ನು ನಿಯಂತ್ರಿಸುವ ಬಗ್ಗೆ ಕಾಳಜಿ ತೋರಬೇಕಾದ ಅವಶ್ಯಕತೆ ಇದೆ ಎಂದರು.

ಸಬ್‌ಇನ್ಸ್‌ಪೆಕ್ಟರ್ ರತ್ನಮ್ಮ, ಪಶುವೈದ್ಯಾಧಿಕಾರಿ ಡಾ.ಶ್ವೇತ, ಯೋಗ ತರಬೇತುದಾರರಾದ ಚಂದ್ರಿಕಾ ಮೂರ್ತಿ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಕುಮಾರಿ ನಿಧಿ ಎಸ್.ರವಿ ರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಮರಸಪ್ಪ ರವಿ ವಹಿಸಿದ್ದರು. ಗೌರವಾಧ್ಯಕ್ಷ ಶ್ರೀನಿವಾಸ್, ಆರ್.ಇ.ಎಸ್ ಮಾಜಿ ಉಪಾಧ್ಯಕ್ಷ ಎಂ.ಎನ್.ಶಿವಕುಮಾರ್, ಪ್ರಾಂಶುಪಾಲ ಕೆಂಪೇಗೌಡ, ಸಂಘದ ಪದಾಧಿಕಾರಿಗಳಾದ ವೆಂಕಟೇಶ್, ಶ್ರೀಧರ್, ಜಯರಾಮ್, ಸವಿತಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದು ಪುನೀತ್ ಅವಾರ್ಡ್ ಪ್ರದಾನ

ಕೋಲಾರ: ಶ್ರೀ ಶಿರಡಿ ಸಾಯಿ ಬಾಬಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಾರ್ಚ್ 15ರಂದು ಬೆಳಿಗ್ಗೆ 10-00ಗಂಟೆಗೆ ಬೆಂಗಳೂರಿನ ಯಲಹಂಕದ ಅಂಬೇಡ್ಕರ್ ಭವನದಲ್ಲಿ ನಡೆಯುವ ಕರ್ನಾಟಕ ರತ್ನ ಪವರ್ ಸ್ಟಾರ್ ಪುನೀತ್ ಅವಾರ್ಡ್ಸ್ 2026 ಕಾರ್ಯಕ್ರಮದಲ್ಲಿ



ಕೋಲಾರದ ರಾಷ್ಟ್ರೀಯ ಅಪರಾಧ ತಡೆ ಮತ್ತು ಮಾನವ ಹಕ್ಕುಗಳ ಭಾರತ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಜಾನ್ ಸಮ್ಯೂವೆಲ್ ಕಿಮ್ .ಜೆ ರವರ ಸಮಾಜಸೇವೆ ಮತ್ತು ಮಾನವ ಹಕ್ಕುಗಳ ಕಾರ್ಯಕ್ರಮ ಮತ್ತು ಹೋರಾಟವನ್ನು ಗುರ್ತಿಸಿ ಅವರಿಗೆ 2026ನೇ ಸಾಲಿನ ಕರ್ನಾಟಕ ರತ್ನ ಪವರ್‌ಸ್ಟಾರ್ ಪುನೀತ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷ ಸಾಯಿ ಸತೀಶ್ ತೊಟ್ಲ ಅಧ್ಯಕ್ಷತೆ ವಹಿಸಲಿದ್ದು, ನಾಡಿನ ಸಮಾಜ ಸೇವಕರು ಹಾಗೂ ವಿವಿಧ ಕ್ಷೇತ್ರದಲ್ಲಿ ಗಣೀಯ ಸೇವೆ ಸಲ್ಲಿಸಿದ ಗಣ್ಯರಿಗೆ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಸಬಾ ರೇಷ್ಮೆ ಬೆಳೆಗಾರರ ಸಂಘಕ್ಕೆ 12 ಮಂದಿ ಆಯ್ಕೆ

ಕೋಲಾರ: ಶ್ರೀನಿವಾಸಪುರ ತಾಲೂಕಿನ ಕಸಬಾ



ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿಯಮಿತದ ಆಡಳಿತ ಮಂಡಳಿ ಚುನಾವಣೆಯಲ್ಲಿ ಶಬ್ಬೀರ್ ಅಹ್ಮದ್ ಪಾಷಾ ಸೇರಿ ಒಟ್ಟು 12 ಮಂದಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಆಡಳಿತ ಮಂಡಳಿಯ ಒಟ್ಟು 12 ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿತ್ತು. ಅದರಲ್ಲಿ 11 ಸ್ಥಾನಗಳು ಸಾಲಗಾರರ ಕ್ಷೇತ್ರಕ್ಕೆ ಹಾಗೂ 1 ಸ್ಥಾನ ಸಾಲಗಾರರಲ್ಲದ ಕ್ಷೇತ್ರಕ್ಕೆ ಮೀಸಲಾಗಿತ್ತು. ಚುನಾವಣೆಗೆ ಸಂಬಂಧಿಸಿದಂತೆ ನಾಮಪತ್ರ ಸಲ್ಲಿಸಲು ಮಾರ್ಚ್ 11 ಕೊನೆಯ ದಿನವಾಗಿತ್ತು. ನಾಮಪತ್ರಗಳ ಹಿಂಪಡೆಯುವ ಪ್ರಕ್ರಿಯೆ ಪೂರ್ಣಗೊಂಡ ನಂತರ ಪ್ರತಿಯೊಂದು ಸ್ಥಾನಕ್ಕೂ ತಲಾ ಒಬ್ಬರೇ ಅಭ್ಯರ್ಥಿಗಳು ಉಳಿದ ಹಿನ್ನೆಲೆ ಎಲ್ಲ ಅಭ್ಯರ್ಥಿಗಳೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಆಭಿದ್ ಹುಸೇನ್ ಸಾಬ್ ಅಧಿಕೃತವಾಗಿ ಘೋಷಿಸಿದರು. ಅವಿರೋಧವಾಗಿ ಆಯ್ಕೆಯಾದವರಲ್ಲಿ ಹಿಂದುಳಿದ ವರ್ಗ 'ಎ' ಮೀಸಲು ಕ್ಷೇತ್ರದಿಂದ ಶಬ್ಬೀರ್ ಅಹ್ಮದ್ ಪಾಷಾ, ಹಿಂದುಳಿದ ವರ್ಗ 'ಬಿ' ಮೀಸಲು ಕ್ಷೇತ್ರದಿಂದ ಸಿ. ಮುನಿವೆಂಕಟಪ್ಪ, ಬಿ.ವಿ. ವೆಂಕಟರೆಡ್ಡಿ, ಟಿ. ರಾಮಚಂದ್ರಪ್ಪ, ಎಂ. ಮುನಿಶ್ವರ್ ಬಾಬು, ಪಿ.ಎಸ್. ಮಂಜುನಾಥ ರೆಡ್ಡಿ ಹಾಗೂ ಎಂ. ಬೈರಾರೆಡ್ಡಿ, ಎಸ್‌ಸಿ ಮೀಸಲು ಕ್ಷೇತ್ರದಿಂದ ಎಚ್.ಸಿ. ಮಂಜುನಾಥ್, ಎಸ್‌ಟಿ ಮೀಸಲು ಕ್ಷೇತ್ರದಿಂದ ಸಿ.ವಿ. ದೇವರಾಜ, ಮಹಿಳಾ ಮೀಸಲು ಕ್ಷೇತ್ರಗಳಿಂದ ಭಾಗ್ಯಮ್ಮ ಹಾಗೂ ಸುನಂದಮ್ಮ, ಸಾಲಗಾರರಲ್ಲದ ಕ್ಷೇತ್ರದಿಂದ ಸಿ.ವಿ. ಸಂಪತ್ ಕುಮಾರ್ ಆಯ್ಕೆಯಾಗಿದ್ದಾರೆ.

ಚೆನ್ನದ ನಾಡು ಕಪ್ ಟೂರ್ನಮೆಂಟ್: ಬಹುಮಾನ



ಕೋಲಾರ: ನಗರದ ಚೆನ್ನದ ನಾಡು ಬ್ಯಾಸ್ಕೆಟ್ ಬಾಲ್ ಪ್ರಯೋಜಕತ್ವದಲ್ಲಿ ನಗರದ ಕ್ರೀಡಾ ಇಲಾಖೆಯ ಒಳ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಆಲ್ ಇಂಡಿಯಾ ಇಂಟರ್ ಕಾಲೇಜಿಯೇಟ್ ಯೂನಿವರ್ಸಿಟಿ ಇನ್ವಿಟೇಷನಲ್ ಬ್ಯಾಸ್ಕೆಟ್ ಬಾಲ್ ಟೂರ್ನಮೆಂಟ್ ಚೆನ್ನದ ನಾಡು ಕಪ್-2026 ಎರಡನೇ ದಿನದ ಬೆಳಿಗಿನ ಪಂದ್ಯದಲ್ಲಿ ತಮಿಳುನಾಡಿನ ಕೊಯಮತ್ತೂರು ಹಿಂದೂಸ್ತಾನ್ ಮತ್ತು ಕೇರಳದ ಸೆಂಟ್ ಆಲ್ ಬರ್ಟ್ ಯೂನಿವರ್ಸಿಟಿಯ ನಡುವೆ ಸ್ಪರ್ಧೆ ನಡೆಯಿತು.

ವಿರಾಮ ವೇಳೆಗೆ ಸೆಂಟ್ ಆಲ್ ಬರ್ಟ್ ತಂಡವು 25 ಪಾಯಿಂಟ್ ಪಡೆದರೆ, ಹಿಂದೂಸ್ತಾನ್ ತಂಡವು 37 ಪಾಯಿಂಟ್ ಗಳಿಸಿತ್ತು. ಅಂತಿಮವಾಗಿ ಸೆಂಟ್ ಆಲ್ ಬರ್ಟ್ ತಂಡವು 43 ಪಾಯಿಂಟ್ ಪಡೆದರೆ ಹಿಂದೂಸ್ತಾನ್ ತಂಡವು 60 ಪಾಯಿಂಟ್ ಪಡೆದು 17 ಪಾಯಿಂಟ್ ಅಂತರದಿಂದ ಜಯಗಳಿಸಿತು. ಅತಿಹೆಚ್ಚು ಪಾಯಿಂಟ್ ಗಳಿಸಿರುವ ಕ್ರೀಡಾ ಪಟುಗಳು ಸೆಂಟ್ ಆಲ್ ಬರ್ಟ್ ತಂಡದಲ್ಲಿ ಪೃಥ್ವಿ 10 ಪಾಯಿಂಟ್ ಪಡೆದರು. ಹಿಂದೂಸ್ತಾನ ತಂಡದಲ್ಲಿ ತೇಜೇಸ್ 16, ಅಲ್ವಿನ್ ಬಾಸೀಲ್ 16 ಹಾಗೂ ಅಡ್ವಿನ್ 12 ಪಾಯಿಂಟ್ ಪಡೆದರು. ಪಿ.ಎಸ್.ಜಿ.ಸಿ.ಎಸ್. ತಂಡವು ಕೇವಲ 3 ಪಾಯಿಂಟ್ ಅಂತರದಲ್ಲಿ ಜಯಭೇರಿ ಬಾರಿಸಿದೆ.



ಕೋಲಾರದಲ್ಲಿ ಯುಗಾದಿ ಹಿನ್ನೆಲೆ ಸಮಾಜ ಸೇವಕ ಮಾಜಿ ನಗರಸಭಾ ಸದಸ್ಯ ಮುಕ್ಕಡ್ ವೆಂಕಟೇಶ್ ಯಾವುದೇ ಪ್ರಚಾರ ಬಯಸದೇ ತಮ್ಮ ಸ್ಕೂಟರ್ ಮೇಲೆ ಸೀರೆಗಳ ಗಂಟನ್ನು ಹಾಕಿಕೊಂಡು ಬಡವರಿಗೆ ಮೊಮ್ಮಗ ಶ್ರೀಕೃಷ್ಣಯಾದವ್‌ರ ಮೂಲಕ ವಿತರಿಸುತ್ತಿರುವುದು.

ಯುಗಾದಿ: ಬಡವರಿಗೆ ಸೀರೆ ವಿತರಣೆ

ಕೋಲಾರ: ಒಂದು ನೋಟ್‌ಬುಕ್, ಪೆನ್ ನೀಡಿ ಪ್ರಚಾರ ಗಿಟ್ಟಿಸಿಕೊಳ್ಳುವ ಇಂದಿನ ದಿನಗಳಲ್ಲಿ ಸಮಾಜ ಸೇವಕ ಮಾಜಿ ನಗರಸಭಾ ಸದಸ್ಯ ಮುಕ್ಕಡ್ ವೆಂಕಟೇಶ್ ಯಾವುದೇ ಪ್ರಚಾರ ಬಯಸದೇ ತಮ್ಮ ಸ್ಕೂಟರ್ ಮೇಲೆ ಸೀರೆಗಳ ಗಂಟನ್ನು ಹಾಕಿಕೊಂಡು ನಗರದೆಲ್ಲೆಡೆ ಬಡವರಿಗೆ ತಮ್ಮ ಮೊಮ್ಮಗ ಶ್ರೀಕೃಷ್ಣಯಾದವ್‌ರ ಮೂಲಕ ವಿತರಿಸುತ್ತಾ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸುಮಾರು 15 ವರ್ಷಗಳಿಂದ ದೀಪಾವಳಿ ಮತ್ತು ಯುಗಾದಿ ಹಬ್ಬಕ್ಕೆ ನೂರಾರು ಬಡವರಿಗೆ ಸೀರೆ, ದಿನಸಿ ಕಿಟ್ ನೀಡುತ್ತಾ ಬಂದಿದ್ದ ಮುಕ್ಕಡ್ ವೆಂಕಟೇಶ್ ಆರ್ಥಿಕ ಮುಗ್ಗಟ್ಟಿನಿಂದ ಕೈಬಿಟ್ಟಿದ್ದರು. ಯುಗಾದಿ ಹಬ್ಬದ ಹಿನ್ನೆಲೆ ನಿರ್ಗತಿಕರಿಗೆ, ಬೀದಿಬದಿ ಚಿಕ್ಕ ವ್ಯಾಪಾರಸ್ಥರಿಗೆ, ಭಿಕ್ಷುಕರಿಗೆ, ಗಾರೆ ಕೆಲಸ ಮಾಡುವವರಿಗೆ ಬೈಕ್‌ನಲ್ಲಿ ಸುತ್ತಾಡಿ ಸೀರೆ ಹಂಚುತ್ತಿದ್ದು, ಶನಿವಾರ ಬೆಳ್ಳಂಬೆಳಗ್ಗೆ ಮೊಮ್ಮಗನನ್ನು ಬೈಕ್ ನಲ್ಲಿ ಕುಳಿಸಿಕೊಂಡು ಸೀರೆ ಹಂಚಿಕೆ ಮಾಡುತ್ತಿದ್ದುದನ್ನು ಕಂಡು ಅವರನ್ನು ಪ್ರಶ್ನಿಸಿದಾಗ 'ತನ್ನ ಮೊಮ್ಮಗ ಕೂಡ ತನ್ನಂತೆಯೇ ಸಮಾಜಸೇವೆ ಮುಂದುವರೆಸಲು ಬಯಸಿರುವ ಸಮಾಜಸೇವಕ ಮುಕ್ಕಡ್ ವೆಂಕಟೇಶ್, ಅವನಿಗೂ ಈ ಕಾಯಕವನ್ನು ಪರಿಚಯಿಸುತ್ತಿರುವುದಾಗಿ ತಿಳಿಸಿದರು. ಕೆಲವು ರಾಜಕೀಯ ಕಾರಣಗಳಿಂದಾಗಿ ಮತ್ತು ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಕಾರ್ಯದಿಂದ ದೂರವುಳಿದಿದ್ದೆ ಆದರೆ ಈ ಬಾರಿ ತನ್ನ ಕಾಯಕ ಮುಂದುವರೆಸಲೇಬೇಕು ಎಂಬ ಉದ್ದೇಶದಿಂದ ಯಾವುದೇ ಪ್ರಚಾರವಿಲ್ಲದೇ ಒಂದಷ್ಟು ಬಡವರಿಗೆ ನೆರವಾಗಲು ಮುಂದಾಗಿದ್ದಾಗಿ ತಿಳಿಸಿದರು.



ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಕೋಲಾರದ ಕೆವಿಆರ್‌ಸಿ ಸಭಾಂಗಣದಲ್ಲಿ ಆಲ್ ಬ್ಯಾಂಕ್ ಎಂಪ್ಲಾಯ್ಸ್ ವೆಲ್ಪೇರ್ ಸೊಸೈಟಿ ಹತ್ತನೇ ವಾರ್ಷಿಕೋತ್ಸವಕ್ಕೆ ಚಾಲನೆ ನೀಡಿದರು.

ಪರಿಸರ ಕ್ಲಬ್, ವಿಜ್ಞಾನ ಕ್ಲಬ್‌ನಿಂದ ಪ್ರಬಂಧ, ಚರ್ಚಾಸ್ಪರ್ಧೆ ಆಯೋಜನೆ

ಪರಿಸರ ರಕ್ಷಣೆಗೆ ಒತ್ತು ನೀಡಿ

ಕೋಲಾರ: ಪರಿಸರ ಸಂರಕ್ಷಣೆಯಿಂದ ಜೀವ ಸಂಕುಲದ ರಕ್ಷಣೆಯಾದರೆ, ವಿಜ್ಞಾನ ಮೂಢ ನಂಬಿಕೆಗಳನ್ನು ನಾಶಮಾಡಿ ದೇಶದ ಸಮಗ್ರ ಅಭಿವೃದ್ಧಿಗೆ ದಾರಿದೀಪವಾಗಿದೆ ಎಂದು ತಾಲೂಕಿನ ಅರಾಭಿಕೊತ್ತನೂರುಸರ್ಕಾರಿಪ್ರೌಢಶಾಲೆಮುಖ್ಯಶಿಕ್ಷಕಿ ತಾಹೇರಾ ನುಸ್ರತ್ ಅಭಿಪ್ರಾಯಪಟ್ಟರು.

ಶಾಲೆಯ ಆವರಣದಲ್ಲಿ ಪರಿಸರ ಕ್ಲಬ್ ಹಾಗೂ ವಿಜ್ಞಾನ ಕ್ಲಬ್ ಸಹಯೋಗದಲ್ಲಿ ಪ್ರಬಂಧ, ಚರ್ಚಾ ಮತ್ತಿತರ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಮತ್ತು ವಿಜ್ಞಾನ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಅವರು ಮಾತನಾಡುತ್ತಿದ್ದರು.

ಮಕ್ಕಳಲ್ಲಿ ಪರಿಸರ ಸಂರಕ್ಷಣೆಯ ಅರಿವು ಅತಿ ಮುಖ್ಯವಾಗಿದೆ, ಶಾಲೆಯ ಆವರಣದಲ್ಲಿ ಎಲ್ಲೆಂದರಲ್ಲಿ ಕಸ ಹಾಕುವುದು ತಪ್ಪು ಎಂದ ಅವರು, ಹಸಿಕಸ,ಒಣ ಕಸ ಬೇರ್ಪಡಿಸುವುದರಿಂದಾಗುವ ಪ್ರಯೋಜನಗಳ ಕುರಿತು ಅರಿವು ಮೂಡಿಸಿ ನಿಮ್ಮ ಮನೆಯಲ್ಲಿ ಪೋಷಕರಿಗೂ ಮಾರ್ಗದರ್ಶನ ನೀಡಿ ಎಂದರು.

ಆಹಾರವನ್ನು ಬೇಯಿಸುವುದರಿಂದ ಹಿಡಿದು ಪ್ರಯಾಣ, ಅಧ್ಯಯನ ಮತ್ತು ಸಂವಹನದವರೆಗೆ ವಿಜ್ಞಾನ ತಾರ್ಕಿಕವಾಗಿ ಯೋಚಿಸಲು ಮತ್ತು ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನವು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ವಿಜ್ಞಾನ ಶಿಕ್ಷಕಿ ಹಾಗೂ ಇಕೋ ಕ್ಲಬ್ ಅಧ್ಯಕ್ಷೆ ಎಂ.ಬಿ.ಶ್ವೇತಾ ಮಾತನಾಡಿ, ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಾಣ ಎಲ್ಲರ ಗುರಿಯಾಗಬೇಕು, ಇಂದು ಪ್ಲಾಸ್ಟಿಕ್ ಬಳಕೆಯಿಂದಾಗಿರುವ ಮಾಲಿನ್ಯದ ಕುರಿತು ಅರಿತು ಅಂಗಡಿಗಳಿಗೆ ಹೋಗುವಾಗ ಕೈಚೀಲ ಹಿಡಿದು ಹೋಗುವ ಪರಿಪಾಠ ಬೆಳೆಸಿಕೊಳ್ಳಿ, ನಿಮ್ಮ ಮನೆಯವರಿಗೆ ತಿಳಿಸಿ ಎಂದರು.



> **ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ವಿಜ್ಞಾನದಿಂದ ಮೂಢನಂಬಿಕೆಗಳು ನಾಶವಾಗಿವೆ ಮತ್ತು ಇಂದು ವಿಶ್ವಮಟ್ಟದಲ್ಲಿ ಭಾರತದ ಘನತೆ, ಶಕ್ತಿ ಸಾಕಾರಗೊಳ್ಳಲು ಸಹಾ ವಿಜ್ಞಾನವೇ ಕಾರಣವಾಗಿದೆ, ಇಸ್ರೋ ಮೂಲಕ ನಾವು ಚಂದ್ರನಂಗಳ ತಲುಪಿದ್ದೇವೆ, ಮಂಗಳದತ್ತಲೂ ಸಾಗುತ್ತಿದ್ದೇವೆ.**
> ■ ತಾಹೇರಾ ನುಸ್ರತ್, ಮುಖ್ಯಶಿಕ್ಷಕಿ

ಭಾರತ ಇಂದು ವಿಜ್ಞಾನ ಕ್ಷೇತ್ರದಲ್ಲಿ ವಿಶ್ವಗೌರವಕ್ಕೆ ಪಾತ್ರವಾಗಿದೆ, ಸರ್ ಸಿ.ವಿ.ರಾಮನ್, ಡಾ. ಎಪಿಜೆ ಅಬ್ದುಲ್ ಕಲಾಂ ಮತ್ತು ಸಿ.ವಿ. ಶೇಷಾದ್ರಿ ಅವರಂತಹ ಮಹಾನ್ ವಿಜ್ಞಾನಿಗಳನ್ನು ಸೃಷ್ಟಿಸಿದೆ ಎಂದು ವಿವರಿಸಿದರು.

ಶಿಕ್ಷಕಿ ಭವಾನಿ ಮಾತನಾಡಿ, ಮಕ್ಕಳಲ್ಲಿ ವೈಜ್ಞಾನಿಕ ಕುತೂಹಲ, ನಾವೀನ್ಯತೆ ಮತ್ತು ಆವಿಷ್ಕಾರವನ್ನು ಗೌರವಿಸಲು ಶಾಲೆಯ ವಿಜ್ಞಾನ ಕ್ಲಬ್ ಕೆಲಸ ಮಾಡುತ್ತಿದೆ, ಇದು ಮಗುವಿನ ದೈನಂದಿನ ಜೀವನದ ಒಂದು ಭಾಗವಾಗಿದೆ, ಸಸ್ಯಗಳು ಹೇಗೆ ಬೆಳೆಯುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದರಿಂದ ಹಿಡಿದು ತಂತ್ರಜ್ಞಾನವು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅನ್ವೇಷಿಸುವವರೆಗೆ ವಿಜ್ಞಾನವು ಕುತೂಹಲ, ತಾರ್ಕಿಕ ಚಿಂತನೆ ಮತ್ತು ಆತ್ಮವಿಶ್ವಾಸವನ್ನು ತುಂಬುತ್ತದೆ ಎಂದರು. ವಿಜ್ಞಾನ,ಪರಿಸರ ಕ್ಲಬ್‌ನಿಂದ ನಡೆಸಲಾದಸ್ಪರ್ಧೆಗಳು,ಪ್ರತಿಭಾನ್ವೇಷಣೆಪರೀಕ್ಷೆಗಳಲ್ಲಿ ಸಾಧನೆ ಮಾಡಿದ ಮಕ್ಕಳನ್ನು ಪುರಸ್ಕರಿಸಲಾಯಿತು. ಸಿದ್ದೇಶ್ವರಿ, ಎಂ.ಆರ್.ಗೋಪಾಲಕೃಷ್ಣ, ವೆಂಕಟರೆಡ್ಡಿ, ಸುಗುಣಾ, ಕೆ.ಲೀಲಾ,ಶ್ರೀನಿವಾಸಲು, ರಮಾದೇವಿ, ಚೈತ್ರಾ ಮತ್ತಿತರರಿದ್ದರು.

ಸಾಗುವಳಿ ಚೀಟಿ ಇರುವ ರೈತರಿಗೆ ಖಾತೆ ನೀಡಲಿ

ಮುಳಬಾಗಿಲು: ನೈಜ ಸಾಗುವಳಿ ಚೀಟಿ ಹೊಂದಿರುವ ರೈತರಿಗೆ ಖಾತೆ ಮಾಡಿಕೊಡಿ, ಪಿ.ನಂಬರ್ ದುರಸ್ತಿ ಮಾಡಲು ವಿಶೇಷ ತಂಡ ರಚನೆ ಮಾಡಬೇಕೆಂದು ಆಗ್ರಹಿಸಿ ರೈತ ಸಂಘದಿಂದ ಉಪತಹಸೀಲ್ದಾರ್ ಕುಮಾರ್‌ಗೆ ಮನವಿ ಸಲ್ಲಿಸಲಾಯಿತು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಮನವಿ ಸಲ್ಲಿಸಿ ಮಾತನಾಡಿ, ಕಂದಾಯ ನಿಯಮವನ್ನು ಉಲ್ಲಂಘನೆ ಮಾಡಿ ಗ್ರಾಮೀಣ ಸೇವೆ ಮರೆತು ನಗರದಲ್ಲಿ ವಾಸ್ತವ ಹೂಡಿ ಪ್ರತಿ ರೈತರ ಸೇವೆಗೂ ದಲ್ಲಾಳಿಗಳನ್ನು ನೇಮಕ ಮಾಡಿಕೊಂಡು ಹಣ ವಸೂಲಿ ಮಾಡಿ ರೈತರನ್ನು ನಿರ್ಲಕ್ಷಿಸಿ ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡಲು ಮುಂದಾಗಿರುವ ಕಂದಾಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಆಗ್ರಹಿಸಿದರು.

ಭೂಮಿ ಇಲ್ಲದ ರೈತರು ಭೂಮಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ನಮೂನೆ 50, 53, 57 ರಲ್ಲಿ ಅರ್ಜಿ ನಮೂನೆ ಸಲ್ಲಿಸಿಕೊಂಡು ಜಾತಕ ಪಕ್ಷಿಗಳಂತೆ ದರಕಾಸ್ತು ಕಮಿಟಿ ಜಾರಿಗೆ ಬರುತ್ತದೆ ನಮ್ಮ ಭೂಮಿಯ ಅಕ್ರಮ ಸಕ್ರಮವಾಗುತ್ತದೆ ಎಂದು ಕಾಯುತ್ತಿದ್ದ ಸಾವಿರಾರು ಬಡ ರೈತ ಕೂಲಿ ಕಾರ್ಮಿಕರಿಗೆ ನೆರವಾಗಲು ಮನವಿ ಮಾಡಿದರು. ರೈತರ ನಿಜವಾದ ರೈತನಾಯಕ ದಿ.ಆಲಂಗೂರು ಶ್ರೀನಿವಾಸರ ಅವಧಿಯಲ್ಲಿ ನೈಜ್ಯ ಪಾರದರ್ಶಕ ಭೂಮಿ ಇಲ್ಲದ ರೈತರಿಗೆ ಭೂಮಿ ನೀಡಿದ ನಂತರ ಇದುವರೆವಿಗೂ ರೈತರಿಗೆ ಸಾಗುವಳಿ ಚೀಟಿ ನೀಡಿಲ್ಲ ಎಂದರು. ಉಪತಹಸೀಲ್ದಾರ್ ಶ್ರೀಕುಮಾರ್‌ತಹಸೀಲ್ದಾರ್ ಗಮನಕ್ಕೆತಂದು ಎಲ್ಲಾ ಕಂದಾಯ ಅಧಿಕಾರಿಗಳ ಸಭೆ ಕರೆದು ಸಮಸ್ಯೆ ಬಗೆ ಹರಿಸುವ ಭರವಸೆ ನೀಡಿದರು. ಜಿ.ಅ.ಈಕಂಬಳ್ಳಿ ಮಂಜುನಾಥ, ರಾ.ಪ್ರ. ಕಾ.ಪಾರುಕ್ ಪಾಷ, ತಾ.ಪ್ರಕಾ.ರಾಜೇಶ್, ತಾ.ಅ.ಯಲುವಳ್ಳಿ ಪ್ರಭಾಕರ್, ಸುನಿಲ್ ಕುಮಾರ್, ಜುಬೇರ್ ಪಾಷ, ನಾಗರಾಜ್, ಸುಪ್ರಿಂ ಚಲ, ಮುನಿರಾಜು, ಮಂಗಸಂದ್ರ ತಿಮ್ಮಣ್ಣ, ಗಿರೀಶ್, ಪುತ್ತೇರಿ ರಾಜು, ನಾಗೇಶ್, ಧರ್ಮ, ವೇಣು, ಕೇಶವ, ಮುಂತಾದವರು ಇದ್ದರು.



ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಲಿ

ಮಾಲೂರು: ಪ್ರತಿಯೊಬ್ಬ ವಿದ್ಯಾರ್ಥಿಯು ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಬೇಕು ಮಾರ್ಚ್ 18 ರಂದಿ ಏಪ್ರಿಲ್ 4ವರೆಗೆ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಮ್ಮ ಗುರಿ ಶೇಕಡ 100ರಷ್ಟು ಫಲಿತಾಂಶ ಆಗಿರಬೇಕು. ಪ್ರತಿದಿನ ಕನಿಷ್ಟ 6 ರಿಂದ 8 ಗಂಟೆಗಳ ಗುಣಮಟ್ಟದ ಅಧ್ಯಯನಕ್ಕೆ ಸಮಯ ಮೀಸಲಿಡಿ ಎಂದು ತೊರಲಕ್ಕಿ ಸರ್ಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾದ ಅಶೋಕ್ ಕುಮಾರ್‌ರವರು ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾರ್ಗದರ್ಶನ ನೀಡಿ ಮಾತನಾಡುತ್ತಿದ್ದರು.

ಡಿಜಿಟಲ್ ನಿಯಂತ್ರಣ ಯಶಸ್ಸಿನ ಮೊದಲ ಹೆಜ್ಜೆ, ಪರೀಕ್ಷಾ ಅವಧಿಯಲ್ಲಿ ಮೊಬೈಲ್, ಟಿವಿ ಮತ್ತು ಸಾಮಾಜಿಕ ಜಾಲತಾಣಗಳಿಗೆ ದೂರವಿರಿ. ಅನಗತ್ಯ ಯೋಚನೆಗಳಿಂದ ದೂರವಿಟ್ಟು ತಮ್ಮ ಗುರಿಯತ್ತ ಗಮನಹರಿಸಿ ಪ್ರತಿದಿನ ಸರಿಯಾದ ಸಮಯಪಟ್ಟಿ ರಚಿಸಿ, ಬೆಳಗಿನ ಶಾಂತ ಸಮಯವನ್ನು ಪುನರಾವರ್ತನೆಗೆ ಬಳಸಿ, ಪೂರ್ವ ಸಿದ್ದತಾ ಪರೀಕ್ಷೆ 1.23 ಹಾಗೂ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿ, ಎಲ್ಲಾ ವಿಷಯಗಳಿಗೆಸಮಾನಆದ್ಯತೆನೀಡಿ, ಕಠಿಣ ವಿಷಯಗಳಿಗೆ ಮೊದಲ ಅಭ್ಯಾಸ ಮಾಡಿ ಮುಖ್ಯ ಅಂಶಗಳನ್ನು ಪಾಯಿಂಟ್‌ಗಳಾಗಿ ನೋಟ್ ಮಾಡಿಕೊಂಡು ಮರು ಅಧ್ಯಯನ ಮಾಡಿ ದಿನದ ಕೊನೆಯಲ್ಲಿ ಓದಿದ ವಿಷಯಗಳನ್ನು ಸ್ವಯಂ ಪರೀಕ್ಷೆ ಮಾಡಿಕೊಳ್ಳಿ ಮಕ್ಕಳು ಶಾಂತ ಮತ್ತು ಒತ್ತಡರಹಿತ ವಾತಾವರಣ ರೂಪಿಸಿಕೊಳ್ಳಿ ಆರೋಗ್ಯಕರ ಆಹಾರ, ಸಮರ್ಪಕನಿದ್ದೆಹಾಗೂವಿಶ್ರಾಂತಿಖಚಿತ ಪಡಿಸಿಕೊಂಡು ಉತ್ತಮ ಫಲಿತಾಂಶ ಪಡೆಯಿರಿ ಎಂದು ತಿಳಿಸಿದರು. ಶಾಲೆಯ ಮುಖ್ಯೋಪಾಧ್ಯಾಯರು ರವಿಶಂಕರ್, ಅಮರಾವತಿ, ಮಾಲತಿ, ರಾಗಿಣಿ, ವೇಣುಗೋಪಾಲ್, ಚಂದನ್ ಮುಂತಾದವರು ಉಪಸ್ಥಿತರಿದ್ದರು.



ಟೇಕಲ್‌ನ ತೊರಲಕ್ಕಿ ಸರ್ಕಾರಿ ಪ್ರೌಢಶಾಲೆಯಲ್ಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷರಾದ ಅಶೋಕ್ ಕುಮಾರ್ ಪ್ರವೇಶ ಪತ್ರ ನೀಡುತ್ತಿರುವುದು. ಈ ವೇಳೆ ಶಾಲಾ ಶಿಕ್ಷಕರು, ಸಿಬ್ಬಂದಿ ಇದ್ದರು.

ಪ್ರಜಾಪ್ರಭುತ್ವ ವಿರೋಧಿ ಕ್ರಮಕ್ಕೆ ಖಂಡನೆ: ಮನವಿ

ಬಂಗಾರಪೇಟೆ: ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ರಕ್ಷಿಸುವಲ್ಲಿ ಪವಿತ್ರವಾದ ಸಂಸತ್ತು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಇತ್ತೀಚಿನದಿನಗಳಲ್ಲಿಸಂಸತ್ತಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಆತಂಕಕಾರಿಯಾಗಿವೆ. ವಿಶೇಷವಾಗಿ ಆಮ್‌ಆದ್ಮಿ ಪಕ್ಷದ ಸಂಸದ ರಾಘವ್ ಚಡ್ಡಾ ಅವರನ್ನು ಸದನದಿಂದ ಅಮಾನತುಗೊಳಿಸಿರುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವೆಂದು ಕರ್ನಾಟಕ ದಲಿತ ರೈತಸೇನೆ ವತಿಯಿಂದ ಆಗ್ರಹಿಸಿದ್ದಾರೆ.

ಪಟ್ಟಣದ ತಹಸೀಲ್ದಾರ್ ಸುಜಾತಾ ಅವರ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ನೀಡಿ ಹುಣಸನಹಳ್ಳಿ ಎನ್.ವೆಂಕಟೇಶ್ ಮಾತನಾಡಿದ ಅವರು ಸಂಸದ ರಾಘವ್ ಚಡ್ಡಾ ಅವರು ಯುವ ಸಂಸದರಾಗಿ ಸಾರ್ವಜನಿಕರ, ಅದರಲ್ಲೂ ಬಡವರ, ದಲಿತರ ಮತ್ತು ರೈತರ ಪರವಾಗಿ ಸಂಸತ್ತಿನಲ್ಲಿ ಪ್ರಬಲವಾಗಿ ಧ್ವನಿ ಎತ್ತುತ್ತಿದ್ದರು. ಸರ್ಕಾರದ ನೀತಿಗಳ ಬಗ್ಗೆ ತಾರ್ಕಿಕವಾಗಿ ವಿಮರ್ಶೆ ಮಾಡುವುದು ಪ್ರತಿಯೊಬ್ಬ ಜನಪ್ರತಿನಿಧಿಯ ಸಾಂವಿಧಾನಿಕ ಹಕ್ಕು ಆಗಿದೆ. ಅಂತಹ ಧ್ವನಿಯನ್ನು ಅಡಗಿಸುವ ಉದ್ದೇಶದಿಂದ ಅಮಾನತು ಕ್ರಮ ಕೈಗೊಳ್ಳುವುದು ಸರಿಯಲ್ಲ. ಈ ಕ್ರಮವು ಕೇವಲ ಒಬ್ಬ ವ್ಯಕ್ತಿಯ ವಿರುದ್ಧವಲ್ಲ ನವೆಂದು ದೂರಿದರು.



ಸಂಸದ ರಾಘವ್ ಚಡ್ಡಾ ಅವರ ಅಮಾನತನ್ನು ತಕ್ಷಣವೇ ರದ್ದುಗೊಳಿಸಬೇಕು. ಸಂಸತ್ತಿನಲ್ಲಿ ವಿರೋಧ ಪಕ್ಷದ ಸದಸ್ಯರಿಗೆ ಮುಕ್ತವಾಗಿ ಮಾತನಾಡಲು ಮತ್ತು ಜನರ ಸಮಸ್ಯೆಗಳನ್ನು ಮಂಡಿಸಲು ಅವಕಾಶ ನೀಡಬೇಕು. ನ್ಯಾಯ ಮತ್ತು ಸಮಾನತೆಯ ಪರವಾಗಿ ಹೋರಾಡುವ ನಮ್ಮ ಸಂಘಟನೆಯು ಮನವಿ ಗಂಭೀರವಾಗಿ ಪರಿಗಣಿಸಬೇಕೆಂದು ಎಂದು ಆಗ್ರಹಿಸಿದರು. ಪ್ರವೀಣ್‌ಸಿದ್ದಾರ್ಥ, ಹುರ್ಲಹಳ್ಳಿ ಶಿವು ಇದ್ದರು.

ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವಾಗಲಿ

ಬಂಗಾರಪೇಟೆ: ಸಮಾಜದಲ್ಲಿನ ಪ್ರತಿಯೊಬ್ಬರಿಗೂ ನ್ಯಾಯ ಕೊಡುವಂತಹ ಕೆಲಸವನ್ನು ಮಾಡುವ ಉದ್ದೇಶದಿಂದಾಗಿ ನಮ್ಮ ಸಂಘಟನೆಯನ್ನು ಪ್ರಾರಂಭಿಸಿದ್ದೇವೆ. ಸಮಾಜದಲ್ಲಿನ ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ಒದಗಿಸುವಂತಹ ಕೆಲಸವನ್ನು ನಮ್ಮ ಸಂಘಟನೆ ವತಿಯಿಂದ ಮಾಡುತ್ತೇವೆ ಎಂದು ಕರ್ನಾಟಕ ಜನ ನಿರ್ಣಯ ವೇದಿಕೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಚೌಡಪ್ಪ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ತಾಲೂಕಿನ ಕರ್ನಾಟಕ ಜನ ನಿರ್ಣಯ ವೇದಿಕೆಯ ತಾಲೂಕು ಅಧ್ಯಕ್ಷನಾಗಿ ಎಂ.ಶ್ರೀಧರ್‌ರನ್ನು ನೇಮಕಾತಿ ಆದೇಶ ಪತ್ರವನ್ನು ನೀಡಿ ಮಾತನಾಡಿದರು. ತಾಲೂಕಿನಲ್ಲಿ ಭ್ರಷ್ಟಾಚಾರ ತಾಂಡವ ಮಾಡುತ್ತಿದ್ದು ಅವುಗಳನ್ನು ಹೊರ ತೆಗೆಯಲು ನಮ್ಮ ಸಂಘಟನೆ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ. ತಾಲೂಕು ಪದಾಧಿಕಾರಿಗಳೊಟ್ಟಿಗೆ ನಾವು ಸಹ ಕಾರ್ಯನಿರ್ವಹಿಸುತ್ತೇವೆ ಎಂದರು. ತಾಲೂಕಿನಲ್ಲಿ ಯಾರೇ ಅನ್ಯಾಯಕ್ಕೆ ಒಳಪಟ್ಟಿರುವವರ ಪರವಾಗಿ ನಾವು ನಿಂತು ನ್ಯಾಯ ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆ. ನಮ್ಮ ಶಾಖೆ ಹಾಗೂ ನಾವು ಅವರೊಟ್ಟಿಗೆ ಕೆಲಸ ಮಾಡಿ ಸಮಾಜದಲ್ಲಿ ಶಾಂತಿ ಸೌಹಾರ್ದತೆ ತರಲು ಪ್ರಯತ್ನಿಸುತ್ತೇವೆ ಎಂದರು.



ನೂತನ ಅಧ್ಯಕ್ಷ ಎಂ.ಶ್ರೀಧರ್, ಸಂಘಟನೆಯ ಗೌರವ ಅಧ್ಯಕ್ಷ ಎನ್. ಮಂಜುನಾಥ್, ರಾಜ್ಯಾಧ್ಯಕ್ಷ ಕಾರಮಂಗಳ ಕೆ.ಗಂಗಾಧರ್, ರಾಜ್ಯ ಉಪಾಧ್ಯಕ್ಷ ಎನ್.ಆರ್ ಜೀವನ ರೆಡ್ಡಿ, ರಾಜ್ಯ ಕಾರ್ಯದರ್ಶಿ ಶಿವಕುಮಾರ್, ಹಾಗೂ ನೂತನವಾಗಿ ಆಯ್ಕೆಯಾಗಿರುವ ತಾಲೂಕು ಪದಾಧಿಕಾರಿಗಳು ಇದ್ದರು.

ಶ್ಯಾಗತ್ತೂರು ಎಂಪಿಸಿಎಸ್ ಅನ್ನು 'ಸೂಪರ್‌ಸೀಡ್' ಮಾಡಲು ಮನವಿ

ಸಹಕಾರ ಸಂಘದ ಕಾಯ್ದೆ ಉಲ್ಲಂಘನೆ

ಕೋಲಾರ: ಶ್ರೀನಿವಾಸಪುರ ತಾಲೂಕು ಶ್ಯಾಗತ್ತೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಕಾನೂನುಬಾಹಿರ ಕೆಲಸಗಳ ಬಗ್ಗೆ ಕ್ರಮ ಜರುಗಿಸುವಂತೆ ಶ್ಯಾಗತ್ತೂರು ಆರ್. ನಾರಾಯಣಸ್ವಾಮಿ ಕೋಲಾರ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಮನವಿ ಸಲ್ಲಿಸಿದ್ದಾರೆ.

ಶ್ಯಾಗತ್ತೂರುಹಾಲುಉತ್ಪಾದಕರಸಹಕಾರಸಂಘದ ಅಧ್ಯಕ್ಷ ಎಸ್.ವಿ.ಸುಧಾಕರ್ ಎಂಬುವರು ಸಹಕಾರ ಸಂಘದಲ್ಲಿ 2ನೇ ಅವಧಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕೋಲಾರ ನಗರವಾಸಿಯಾಗಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಇದುವರೆವಿಗೂ ಕನಿಷ್ಟ 100 ಗ್ರಾಂ.ಹಾಲು ಹಾಕಿರುವುದಿಲ್ಲ, ಆದರೂ ಅಧ್ಯಕ್ಷರಾದ ಕಾರಣ ಪ್ರತಿ ದಿನ ಅವರ ಕೋಲಾರದ ವಾಸದ ಮನೆಗೆ ಶ್ಯಾಗತ್ತೂರಿನ ಡೈರಿಯಿಂದ 2 ಲೀಟರ್ ಹಾಲು ಉಚಿತವಾಗಿ ಸರಬರಾಜು ಆಗುತ್ತಿದೆ ಎಂದು ಆರೋಪಿಸಿದ್ದಾರೆ. ಕಳೆದ 2022ರಲ್ಲಿ ಸಹಕಾರ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಎಸ್.ವಿ.ಕೃಷ್ಣೇಗೌಡ ಎಂಬುವರು ವಯೋವೃದ್ಧರಾದ ಕಾರಣ ಅವರು ಸಹಕಾರಸಂಘದಿಂದ ನಿವೃತ್ತಿ ಹೊಂದಿರುತ್ತಾರೆ. ಅವರ ಸ್ಥಾನಕ್ಕೆ ಎಸ್.ವಿ.ಮಂಜುನಾಥ್ ಬಿನ್ ಎಸ್. ವೆಂಕಟರಾಮೇಗೌಡ ಎಂಬುವರು ಸಹಕಾರಸಂಘದ ಕಾರ್ಯದರ್ಶಿಯಾಗಿ ನೇಮಕಗೊಂಡಿರುತ್ತಾರೆ.



ಆದರೆ ಕಾರಣಾಂತರಗಳಿಂದ ಎಸ್.ವಿ.ಮಂಜುನಾಥ್ ದಿನಾಂಕ 05-08-2023ರಂದು ಕಾರ್ಯದರ್ಶಿ ಹುದ್ದೆಗೆ ಕೆಲವು ದಿನಗಳಿಗೆ ಮಾತ್ರ ನಿವೃತ್ತಿ ಘೋಷಣೆ ಮಾಡಿರುತ್ತಾರೆ. ಅವರ ಸ್ಥಾನಕ್ಕೆ ಅವರ ತಮ್ಮ ಎಸ್.ವಿ.ಮನೋಹರ್ ಬಿನ್ ಎಸ್.ವೆಂಕಟರಾಮೇಗೌಡರವರನ್ನು ನೇಮಿಸಿರುವುದಾಗಿ ಸಹಕಾರ ಸಂಘದ ನಡಾವಳಿಕೆ ಪುಸ್ತಕದಲ್ಲಿ ನಮೂದಿಸಲಾಗಿದೆ. ಆದರೆ, ದಿನಾಂಕ 29-08-2023ರಂದು ಎಸ್.ವಿ.ಮಂಜುನಾಥ್ ಕಾರ್ಯದರ್ಶಿಹುದ್ದೆಗೆರಾಜೀನಾಮೆನೀಡಿರುವುದಾಗಿ ಮತ್ತೊಮ್ಮೆ ಎಸ್.ವಿ.ಮನೋಹರ್ ಎಂಬುವರನ್ನು ಕಾರ್ಯದರ್ಶಿ ಯಾಗಿ ನೇಮಿಸಿರುವುದಾಗಿ ಸಹಕಾರ ಸಂಘದ ನಡಾವಳಿಕೆ ಪುಸ್ತಕದಲ್ಲಿ ನಮೂದಿಸಿರುತ್ತಾರೆ ಎಂದು ಆರೋಪಿಸಿದ್ದಾರೆ.

ಸಹಕಾರ ಸಂಘದ ಬೈಲಾ ಪ್ರಕಾರ ಹಾಲು ಉತ್ಪಾದಕರ ಸಹಕಾರ ಸಂಘ ನ್ಯಾಯ ಬೆಲೆ ಅಂಗಡಿ ನಡೆಸಲು ಅವಕಾಶವಿರುವುದಿಲ್ಲ, ತಾನು ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೋಲಾರಗೆ ಮಾಹಿತಿ ಹಕ್ಕು ಅಧಿನಿಯಮ 2005ರಡಿ ಮಾಹಿತಿ ಕೋರಲಾಗಿ, ಉಪ ನಿರ್ದೇಶಕರು ಮಾಹಿತಿಯನ್ನು ನೀಡಲು ಶ್ಯಾಗತ್ತೂರು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ದಿನಾಂಕ 04-08-2025ರಂದು ಪತ್ರ ಬರೆದಿದ್ದು, ಸಹಕಾರ ಕಾಯ್ದೆ ಉಲ್ಲಂಘನೆ ಮಾಡಿ ಮುಂದುವರೆಯುತ್ತಿರುವ ಶ್ಯಾಗತ್ತೂರು ಹಾಲು ಉತ್ಪಾದಕರ ಸಹಕಾರ ಸಂಘವನ್ನು ಕಾನೂನಿನ ಪ್ರಕಾರ ಸೂಪರ್‌ಸೈಡ್ ಮಾಡಿ ಆಗುತ್ತಿರುವ ಅನ್ಯಾಯವನ್ನು ತಡೆಯಲು ಕೋರಿದ್ದಾರೆ.

ಪರಿಕರ ಸಾಗಣೆ ಮಾಡುವ ವಿಡಿಯೋ ವೈರಲ್ ಹಿನ್ನೆಲೆ

ಬಿಸಿಎಂ ಹಾಸ್ಟೆಲ್‌ಗೆ ತಹಸೀಲ್ದಾರ್ ಭೇಟಿ

ಬಂಗಾರಪೇಟೆ: ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬಂದಿದ್ದ ಹೊಸ ಹಾಸಿಗೆಗಳು, ಫ್ಯಾನ್‌ಗಳು ಸೇರಿದಂತೆ ಇತರೆ ಪರಿಕರಗಳನ್ನು ಸ್ವಂತಕ್ಕೆ ಬಳಸಿಕೊಳ್ಳಲು ಹಾಸ್ಟೆಲ್ ಮೇಲ್ವಿಚಾರಕರು ತಮ್ಮ ಮನೆಗೆ ಸಾಗಾಣಿಕೆ ಮಾಡಿಕೊಂಡಿರುವುದು ವಿಡೀಯೋ ವೈರಲ್ ಆದ ಬೆನ್ನಲ್ಲೆ ತಹಸೀಲ್ದಾರ್ ಕೆ.ಎನ್.ಸುಜಾತ ಹಾಗೂ ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಶಿವಕುಮಾರಿ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪೊಲೀಸ್ ಠಾಣೆಯ ಮುಂದೆ ಇರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿಗಳ ಹಾಸ್ಟೆಲ್ ಸರ್ಕಾರದಿಂದ ವಿದ್ಯಾರ್ಥಿಗಳಿಗಾಗಿ ಪೂರೈಕೆ ಮಾಡಿದ್ದ ಹೊಸ ಹಾಸಿಗೆಗಳನ್ನು ಹಾಗೂ ಫ್ಯಾನ್‌ಗಳನ್ನು ಹಾಸ್ಟೆಲ್ ಮೇಲ್ವಿಚಾರಕಿ ಶಿವಲೀಲಾ ಪಡಸಲಗಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಪ್ರಥಮ ದರ್ಜೆ ಸಹಾಯಕ ಮಹೇಶ್ ಕುಮಾರ್ ಇವರಿಬ್ಬರೂ ಖಾಸಗಿ ತ್ರಿಚಕ್ರ ಆಟೋವೊಂದರಲ್ಲಿ ಸಾಗಾಣಿಕೆ ಮಾಡಿರುವ ವಿಡಿಯೋ ಸಾಮಾಜಿಕ ವೈರಲ್ ಜಾಲತಾಣಗಳಲ್ಲಿ ಆಗಿರುವುದರಿಂದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದೆ. ಆಹಾರ ಇಲಾಖೆ ನಿರೀಕ್ಷಕ ಚೌಡಪ್ಪ ಗ್ರಾಮ ಆಡಳಿತಾಧಿಕಾರಿ ಅಂಬರೀಶ್ ಇದ್ದರು.



> **ಸರ್ಕಾರಿ ಆಸ್ತಿಗಳನ್ನು ಕಾಪಾಡಬೇಕಾಗಿರುವ ಅಧಿಕಾರಿ ಸಿಬ್ಬಂದಿಯೇ ಕಳ್ಳತನವಾಗಿ ಸ್ವಂತಕ್ಕೆ ಬಳಕೆ ಮಾಡುವುದು ಸರಿಯಲ್ಲ. ಶೌಚಾಲಯಗಳ ಸ್ವಚ್ಛತೆ ಕಾಪಾಡುವುದರಲ್ಲಿ ವಿಫಲವಾಗಿದ್ದಾರೆ. ಈ ಬಗ್ಗೆ ಸಮಾಜಕಲ್ಯಾಣ ಇಲಾಖೆಯ ಮೇಲಾಧಿಕಾರಿಗಳಿಗೆ ಸಮಗ್ರ ವರದಿ ನೀಡಲಾಗುವುದು.**
> ■ ಕೆ.ಎನ್.ಸುಜಾತಾ, ತಹಸೀಲ್ದಾರ್

ಕಿರುಸುದ್ದಿ

ಕಾಡು ಪ್ರಾಣಿ, ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಲು ಆಗ್ರಹ

ಶಿಡ್ಲಘಟ್ಟ: ಬೇಸಿಗೆಯ ಬಿರುಬಿಸಿಲು ದಿನಗಳು ಆರಂಭವಾಗಿದ್ದು, ಕಾಡು ಪ್ರಾಣಿ, ಪಕ್ಷಿಗಳಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕೆಂದು ಯುವ ರೈತ ಮುಖಂಡ ನಡ್ಡಿನಾಯಕನಹಳ್ಳಿ ಅಜಿತ್ ಕುಮಾರ್ ಅರಣ್ಯ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ. ನಗರದಲ್ಲಿ ಅವರು ಪತ್ರಕರ್ತರೊಂದಿಗೆ ಮಾತನಾಡುತ್ತಾ ಅವರು ತಾಲೂಕಿನ ಅರಣ್ಯದೊಳಗೆ ಜಿಂಕೆ ,ಕಡುವೆ , ಕಾಡು ಹಂದಿ, ನವಿಲುಗಳು ಹೆಚ್ಚಿನ ಸಂಖ್ಯೆಯಲ್ಲಿವೆ, ಕುಡಿಯುವ ನೀರನ್ನು ಹುಡುಕಿಕೊಂಡು ಕಾಡಿನ ಜೀವನ ತೋಡಗಳಿಗೆ ಬರುವ ಸಂಖ್ಯೆ ಹೆಚ್ಚುತ್ತಿದೆ. ಹೊಲ ಗದ್ದೆ ತೋಟಗಳು ಎಲ್ಲಿಯೂ ನೀರು ಸಿಗುತ್ತಿಲ್ಲ, ತೆರೆದ ಬಾವಿಗಳು ನಮ್ಮಲ್ಲಿ ಇಲ್ಲ, ಜೊತೆಗೆ ಬಹುತೇಕ ಎಲ್ಲಾ ಕಡೆ ಆಣಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ಕಾರಣ ಕಾಡು ಪ್ರಾಣಿಗಳಿಗೆ ಕುಡಿಯುವ ನೀರು ಸಿಗದಂತಾಗಿದೆ ಎಂದು ತಿಳಿಸಿದರು. ಕುಡಿಯುವ ನೀರಿಗಾಗಿ ತೋಟಗಳಿಗೆ ಬರುವ ಜಿಂಕೆ ಕಡಿಮೆ ನವಿಲು ಕಾಡು ಹಂದಿಗಳು ತೋಟಗಳೆಲ್ಲ ಬೆಳೆಗಳನ್ನು ಮಾಡುತ್ತಿದ್ದು, ರೈತರಿಗೆ ಆಣಿ ಮಾಡುತ್ತಿವೆ. ಜೊತೆಗೆ ಕುಡಿಯುವ ನೀರಿಗಾಗಿ ಕಾಡು ಬಿಟ್ಟು ನಾಡಿಗೆ ಬರುವ ಪ್ರಾಣಿಗಳು ಕೃಷಿ ಹೊಂಡ, ಸಂಪಿಗೆ ಬಿದ್ದು ಸಾವನ್ನಪ್ಪಿಸುತ್ತಿವೆ, ಅಲ್ಲದೆ ಬೀದಿ ನಾಯಿಗಳ ದಾಳಿಗೆ ಚಿಕ್ಕ ಕಾಡು ಪ್ರಾಣಿಗಳು ಪ್ರಾಣ ಕಳೆದುಕೊಳ್ಳುತ್ತಿದೆ. ಕಾಡು ಪ್ರಾಣಿಗಳಿಗೆ ನಾಯಿಗಳಿಂದ ಕೂಡ ತೊಂದರೆಗಳು ಉಂಟಾಗುತ್ತಿವೆ. ಎಂದು ಹಂತಕ ವ್ಯಕ್ತಿ ಪಡಿಸಿದರು. ಅರಣ್ಯ ಇಲಾಖೆ ಅಧಿಕಾರಿಗಳು ಅರಣ್ಯದೊಳಗೆ ಸಣ್ಣ ಗುಂಡಿ ತೆಗೆದು ಕಾಲಿ ದೀನ್ ಪೇಪರ್ ಒತ್ತಿಸಿ ಅಥವಾ ಸಿಮೆಂಟ್ ಅಳವಡಿಸಿ ಅದಕ್ಕೆ ಕಾಲಿದ್ದೀನ್ ಪೇಪರ್ ಒತ್ತಿಸಿ, ಅದರಲ್ಲಿ ನೀರು ತುಂಬಿಸಿದರೆ ಕಾಡುಪ್ರಾಣಿಗಳಿಗೆ ಅನುಕೂಲವಾಗುತ್ತದೆ ಎಂದು ಮನವಿ ಮಾಡಿದರು.

ವೈದ್ಯಾಧಿಕಾರಿ ಹುದ್ದೆಗಳಿಗೆ ನೇರ ಸಂದರ್ಶನ

ಚಿಕ್ಕಬಳ್ಳಾಪುರ: ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಖಾಯಂ ಹುದ್ದೆಗಳು ಭರ್ತಿ ಆಗುವವರೆಗೂ ಸರ್ಕಾರಿ ಆದೇಶಗಳನ್ವಯ ಹಾಗೂ ಜಿಲ್ಲಾಧಿಕಾರಿಗಳ ಅನುಮೋದನೆಯಂತೆ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ, ಖಾಲಿ ಸ್ಥಳಗಳ ವಿವರಗಳು ಮತ್ತು ಇತರೆ ಮಾಹಿತಿಯನ್ನು www.chikkaballapur.nic.in ರಲ್ಲಿ ಪಡೆಯಬಹುದು. ಅರ್ಹ ಅಭ್ಯರ್ಥಿಗಳು ಮಾರ್ಚ್ 16 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸಮಕ್ಷದಲ್ಲಿ ನಡೆಯುವ ನೇರ ಸಂದರ್ಶನಕ್ಕೆ ಎಲ್ಲಾ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಗೆ ಹಾಜರಾಗತಕ್ಕದ್ದು, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಪ್ರತಿ ಸೋಮವಾರ ನೇರ ಸಂರ್ಶನ ಮುಖಾಂತರ ಮೂಲ ದಾಖಲೆಗಳನ್ನು ಪರಿಶೀಲಿಸಿ ನೇಮಕ ಮಾಡಿಕೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮಹೇಶ್ ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ಕ್ರೀಡಾಕೂಟ

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಕ್ರೀಡಾಕೂಟವನ್ನು ಮಾರ್ಚ್ 16 ರಂದು ಬೆಳಿಗ್ಗೆ 10.30ಗಂಟೆಗೆ ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಉನ್ನತ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಸಿ. ಸುಧಾಕರ್ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ.ಇ. ಪ್ರದೀಪ್ ಈಶ್ವರ್ ಅವರು ವಹಿಸಲಿದ್ದಾರೆ.

ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ

ಬಂಗಾರಪೇಟೆ: ಪ್ರತಿಯೊಬ್ಬರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು, ಹೆಲ್ಮೆಟ್ ಧರಿಸುವುದರಿಂದ ಜೀವ ಉಳಿಯುತ್ತದೆ ಅಪಘಾತಗಳು ಸಂಭವಿಸುವುದಿಲ್ಲ, ಅಪಘಾತಗಳು ಸಂಭವಿಸಿದ್ದರು ಪ್ರಾಣ ಹಾನಿ ಆಗುವುದಿಲ್ಲ ಎಂದು ಸಿ ಐ ಸಿ.ರವಿಕುಮಾರ್ ಹೇಳಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜ್ ಮೈದಾನದಲ್ಲಿ ಭಾರತ್ ಫೌಂಡೇಶನ್ ವತಿಯಿಂದ ಶನಿವಾರ ಸಾರ್ವಜನಿಕರಿಗೆ ಹೆಲ್ಮೆಟ್ ವಿತರಣೆ ಮಾಡಿ ಮಾತನಾಡಿದ ಅವರು ನಮ್ಮನ್ನು ನಂಬಿಕೊಂಡು ನಮ್ಮ ಕುಟುಂಬ ಬದುಕುತ್ತಿರುತ್ತಾರೆ ನಮಗೆ ಅಪಘಾತದಲ್ಲಿ ಏನಾದರೂ ಸಂಭವಿಸಿದರೆ ಅದಕ್ಕೆ ನಮ್ಮ ಕುಟುಂಬಸ್ಥರು ನೋವು ಪಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಅದಕ್ಕಾಗಿ ಪ್ರತಿಯೊಬ್ಬ ವಾಹನ ಸವಾರರು ಹೆಲ್ಮೆಟ್ ಧರಿಸಬೇಕು ಎಂದರು.



ವಿಶ್ವ ಹಿಂದು ಪರಿಷತ್‌ನಿಂದ ಮಾರ್ಚ್ 28ರಂದು ಶನಿವಾರ ಗೌರಿಬಿದನೂರು ನಗರದಲ್ಲಿ ಜರುಗಲಿರುವ ಶ್ರೀರಾಮೋತ್ಸವ ಬೃಹತ್ ಶೋಭಾಯಾತ್ರೆಯ ಕರಪತ್ರ ಮತ್ತು ಪೋಸ್ಟರ್ ಲೋಕಾರ್ಪಣೆ ನಗರದ ಶ್ರೀ ಶನಿಮಹಾತ್ಮ ದೇವಸ್ಥಾನದ ಆವರಣದಲ್ಲಿ ನೆರವೇರಿತು.

ಶ್ರೀರಾಮೋತ್ಸವ ಕರಪತ್ರ ಬಿಡುಗಡೆ

ಗೌರಿಬಿದನೂರು: ವಿಶ್ವ ಹಿಂದು ಪರಿಷದ್ ವತಿಯಿಂದ ಮಾರ್ಚ್ 28ರಂದು ಶನಿವಾರ ಗೌರಿಬಿದನೂರು ನಗರದಲ್ಲಿ ಜರುಗಲಿರುವ ಶ್ರೀರಾಮೋತ್ಸವ ಬೃಹತ್ ಶೋಭಾಯಾತ್ರೆಯ ಕರಪತ್ರ ಮತ್ತು ಪೋಸ್ಟರ್ ಲೋಕಾರ್ಪಣೆಯನ್ನು ನಗರದ ಶ್ರೀ ಶನಿಮಹಾತ್ಮ ದೇವಸ್ಥಾನದ ಆವರಣದಲ್ಲಿ ನೆರವೇರಿತು.

ಶ್ರೀರಾಮೋತ್ಸವಶೋಭಾಯಾತ್ರೆಯಕರಪತ್ರ ಹಾಗೂಪೋಸ್ಟರ್ ಲೋಕಾರ್ಪಣೆಯನ್ನು ಭಾರತ ಮಾತ ಸೇವಾ ಟ್ರಸ್ಟ್ ಅಧ್ಯಕ್ಷರಾದ ಎನ್‌ಎಂ.ರವಿನಾರಾಯಣರೆಡ್ಡಿ,ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಿಆರ್.ನರಸಿಂಹಮೂರ್ತಿ ಹಾಗೂ ಇನ್ನಿತರರು ನೆರವೇರಿಸಿದರು.

ಶ್ರೀ ರಾಮೋತ್ಸವ ಸಮಿತಿಯ ಸಂಚಾಲಕ ಸಾಗಾನಹಳ್ಳಿ ಶಿವಕುಮಾರ್ ಮಾತನಾಡುತ್ತಾ ಇದೇ ತಿಂಗಳು ಮಾರ್ಚ್ 28 ಶನಿವಾರ ಮಧ್ಯಾಹ್ನ 3 ಗಂಟೆಗೆ ನಗರದ ನದಿದಡದ ಶ್ರೀ ಪ್ರಸನ್ನ ಆಂಜನೇಯ ದೇವಸ್ಥಾನದ ಆವರಣದಿಂದ ಶ್ರೀರಾಮೋತ್ಸವದ ಶೋಭಾಯಾತ್ರೆ ಆರಂಭಗೊಂಡು ನಗರದ ಎಂಜಿ.ಸರ್ಕಲ್, ಅಂಬೇಡ್ಕರ್ ವೃತ್ತವನ್ನು ಬಳಸಿಕೊಂಡು ಬಿಎಚ್ ರಸ್ತೆಯ ಮುಖಾಂತರ ಸಾಗಿ ನಂತರ ಕೋಟೆ ಮುಖ್ಯ ರಸ್ತೆ ಮೂಲಕ ಎಂಜಿ. ವೃತ್ತದಲ್ಲಿ ಸಮಾವೇಶಗೊಳ್ಳಲಿದೆ ಎಂದರು. ಎಂಜಿ.ವೃತ್ತದಲ್ಲಿ ಸಾರ್ವಜನಿಕರ ಸಭೆಯನ್ನು ಏರ್ಪಡಿಸಲಾಗಿದ್ದು,ಶೋಭಾಯಾತ್ರೆಯಲ್ಲಿ ವಿವಿಧ ಕಲಾ ತಂಡಗಳು ಪಾಲ್ಗೊಳ್ಳಲಿದ್ದು,ತಾಲೂಕಿನ ಹಿಂದೂ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀರಾಮೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು.



ಕೆಜಿಎಫ್ ನಗರದ ಗಾಂಧಿನಗರ ವಾರ್ಡಿನಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಶಾಸಕಿ ರೂಪಕಲಾ ಎಂ.ಶಶಿಧರ್ ಭೂಮಿಪೂಜೆ ನೆರವೇರಿಸಿದರು.

ವಾಣಿಜ್ಯೋದ್ದೇಶಕ್ಕೆ ಗೃಹಬಳಕೆ ಸಿಲಿಂಡರ್ ಬಳಸುವಂತಿಲ್ಲ: ಡಿಸಿ

ಗ್ರಾಹಕರಲ್ಲಿ ಆತಂಕ ಬೇಡ



ಚಿಕ್ಕಬಳ್ಳಾಪುರ: ಗೃಹಬಳಕೆಯ ಅನಿಲ ಸಿಲಿಂಡರ್ ಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸಿದರೆ ಅಂತಹ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಅನಿಲ ವಿತರಕರ ಸಭೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಜಿಲ್ಲೆಯಲ್ಲಿ ಸರಾಸರಿ 10ರಿಂದ 11ಸಾವಿರ ಸಿಲಿಂಡರ್‌ಗಳು ಪ್ರತಿ ದಿನ ದಾಸ್ತಾನು ಇರುವಂತೆ ಇವರೆಗೆ ನಿರ್ವಹಣೆ ಮಾಡಲಾಗುತ್ತಿತ್ತು. ಪ್ರಸ್ತುತ 12 ಸಾವಿರಕ್ಕೂ ಹೆಚ್ಚು ಗೃಹಬಳಕೆ ಸಿಲಿಂಡರ್ ದಾಸ್ತಾನು ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಮುಂಜಾಗ್ರತೆಯಾಗಿ ಅನಿಲ ಸಿಲಿಂಡರ್‌ಗಳನ್ನು ತರಿಸಿಕೊಳ್ಳುವ ಪ್ರಕ್ರಿಯೆಯು ನಿರಂತರವಾಗಿ ಚಾಲ್ತಿಯಲ್ಲಿರುವಂತೆ ನಿಗಾ ಇಡಲಾಗಿದೆ.

ಜಿಲ್ಲೆಯಲ್ಲಿ ಅನಿಲ ಪೂರೈಕೆ ಹಾಗೂ ಸಮರ್ಪಕ ವಿತರಣೆಗೆ ಜಿಲ್ಲಾಡಳಿತ ಎಲ್ಲಾ ಉಪಕ್ರಮಗಳನ್ನು ತೆಗೆದುಕೊಂಡಿದ್ದು,ಸಾರ್ವಜನಿಕರು ಹಾಗೂ ಗೃಹಬಳಕೆ ಅನಿಲ

> ಗೃಹಬಳಕೆಯ ಅನಿಲ ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಆಗದಂತೆ ಜಿಲ್ಲೆಯಲ್ಲಿರುವ 27 ಅನಿಲ ವಿತರಕರ ಪ್ರತಿನಿಧಿಗಳ ಸಭೆಯನ್ನು ಕರೆದು ಸೂಚನೆಗಳನ್ನು ನೀಡಲಾಗಿದೆ ಇಂಡಿಯನ್ ಆಯಿಲ್, ಎಚ್‌ಪಿ ಪೆಟ್ರೋಲ್, ಭಾರತ್ ಪೆಟ್ರೋಲಿಯಂ ಸಂಸ್ಥೆಗಳ ಪ್ರತಿನಿಧಿಗಳ ಜತೆಯೂ ಸಹ ಚರ್ಚಿಸಲಾಗಿದೆ.
> ■ ಜಿ.ಪ್ರಭು, ಜಿಲ್ಲಾಧಿಕಾರಿ

ಗ್ರಾಹಕರು ಹೆಚ್ಚಿನ ಆತಂಕಕ್ಕೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಹೋಟೆಲ್,ಬಾರ್, ರೆಸ್ಟೋರೆಂಟ್ ಗಳು ಸೇರಿದಂತೆ ಇತರ ವಾಣಿಜ್ಯ ಸಂಸ್ಥೆಗಳು ಅಕ್ರಮವಾಗಿ ಗೃಹಬಳಕೆಯ ಸಿಲಿಂಡರ್ ಗಳನ್ನು ಬಳಸಿದರೆ ಅಥವಾ ದಾಸ್ತಾನು ಮಾಡಿದರೆ ಏಳು ವರ್ಷ ಸಜೆ ಹಾಗೂ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.ಅಂತಹ ಉಲ್ಲಂಘನೆ ಕೃತ್ಯಗಳು ಜಿಲ್ಲೆಯ ಯಾವುದೇ ಭಾಗದಲ್ಲಿ ಕಂಡು ಬಂದರೆ, ಯಾವುದೇ ವ್ಯಕ್ತಿ, ಸಂಸ್ಥೆ ಗೃಹಬಳಕೆ ಅನಿಲ ಸಿಲಿಂಡರ್ ಗಳನ್ನು ಒಂದೆಡೆ ಸಂಗ್ರಹಿಸಿ ಕೃತಕ ಅಭಾವ ಸೃಷ್ಟಿಸಿದರೆ ಮಾಹಿತಿಯನ್ನು ಹತ್ತಿರದ ಪೊಲೀಸ್ ಠಾಣೆಗೆ,ತಾಲೂಕು ಕಚೇರಿಗೆ ಹಾಗೂ ಆಹಾರ ನಾಗರಿಕ ಸರಬರಾಜುಮತ್ತು ಗ್ರಾಹಕವ್ಯವಹಾರಗಳ ಇಲಾಖೆಯ ಕಚೇರಿಗಳಿಗೆ ಮಾಹಿತಿ ನೀಡಿದಲ್ಲಿ ಕೂಡಲೇ ಕಾನೂನು ಕ್ರಮಕ್ಕೆ ಒಳಪಡಿಸಲಾಗುವುದು ಒಂದು ವೇಳೆ ಸಕ್ಷಮ ಪ್ರಾಧಿಕಾರಗಳನ್ನು ಸಂಪರ್ಕಿಸಲು ಸಾಧ್ಯವಾಗದಿದ್ದರೆ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ತಿಳಿಸುವಂತೆ ಜಿಲ್ಲಾಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗನ್ನಾಥ್ ರೈ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ ಕೆಳಗಿನಮನಿ ಹಾಗೂ ಜಿಲ್ಲೆಯ 27 ಅನಿಲವಿತರಕ ಸಂಸ್ಥೆಗಳ ಪ್ರತಿನಿಧಿಗಳು ಹಾಜರಿದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ವಿದ್ಯಾಭ್ಯಾಸಕ್ಕೆ ಒತ್ತು ನೀಡಿ

ಚಿಂತಾಮಣಿ: ಮಹಿಳೆಯರು ಕೇವಲ ಐತಿಹಾಸಿಕ ಸಾಧಕರನ್ನು ಸ್ಮರಿಸುವುದಲ್ಲದೆ, ಸ್ವತಃ ಸಾಧನೆ ಮಾಡುವತ್ತ ಹೆಜ್ಜೆ ಹಾಕಬೇಕು. ಮೊಬೈಲ್ ಹಾಗೂ ಪ್ರೀತಿ-ಪ್ರೇಮದ ಬಲೆಗೆ ಬಿದ್ದು ಉಜ್ವಲ ಭವಿಷ್ಯವನ್ನು ಹಾಳುಮಾಡಿಕೊಳ್ಳಬಾರದೆಂದು ಕರ್ನಾಟಕ ಮಹಿಳಾ ಸಾಂತ್ವನ ಕೇಂದ್ರಗಳ ಒಕ್ಕೂಟದ ಅಧ್ಯಕ್ಷೆ ಡಾ. ವಿಜಯ ವಿದ್ಯಾರ್ಥಿನಿಯರಿಗೆ ಕಿವಿಮಾತು ಹೇಳಿದರು.

ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಕಾಲೇಜು ಆಡಳಿತ ಮಂಡಳಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಘಟಕದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ದೀಪ ಬೆಳಗಿ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಕಾಲೇಜು ವಿದ್ಯಾರ್ಥಿನಿಯರನ್ನು ಹಲವು ಆಮಿಷಗಳನ್ನೊಡ್ಡಿ ಕರೆಸಿಕೊಂಡು ಬ್ಲಾಕ್ ಮೇಲ್ ಮಾಡುತ್ತಿರುವ ಪ್ರಕರಣಗಳ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು. ಮೊಬೈಲ್ ಚಟಕ್ಕೆ ಬಿದ್ದು ಪ್ರೇಮಪಾಶಕ್ಕೆ ಸಿಲುಕಿ ಜೀವನವನ್ನು ದುರಂತ ಅಂತ್ಯಗೊಳಿಸಿಕೊಳ್ಳಬೇಡಿ. ನಿಮ್ಮ ಮೇಲೆ ಪೋಷಕರು ದೊಡ್ಡ ಕನಸುಗಳನ್ನು ಇಟ್ಟುಕೊಂಡಿದ್ದಾರೆ, ಆದ್ದರಿಂದ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕೆಂದರು.

ಕಸಾಪ ತಾಲೂಕು ಅಧ್ಯಕ್ಷ ಎನ್ .ವಿ.ಶ್ರೀನಿವಾಸನ್ ಮಾತನಾಡಿ ಮಹಿಳೆ ಎಂಬುದು ಕೇವಲ ಒಂದು ವ್ಯಕ್ತಿ ಅಲ್ಲ,ಅವಳು ಈ ಸೃಷ್ಟಿಯ ಶಕ್ತಿ, ಸಹನೆ ಪ್ರೀತಿ ಮತ್ತು ತ್ಯಾಗದ ಸಂಕೇತ. ಅವಳು ತಾಯಿ ಸಹೋದರಿ ಸ್ನೇಹಿತೆ



ಪತ್ನಿ ಎಂಬ ಪಾತ್ರಗಳಲ್ಲಿ ಕುಟುಂಬ ಮತ್ತು ಸಮಾಜಕ್ಕೆ ಬೆಳಕು ನೀಡುವ ದೀಪದಂತೆ. ಒಬ್ಬ ಮಹಿಳೆ ಶಿಕ್ಷಣ ಪಡೆದರೆ ಅದು ಇಡೀ ಕುಟುಂಬಕ್ಕೆ ದೊರೆತ ಶಿಕ್ಷಣವಿದ್ದಂತೆ. ಮಹಿಳೆಯರು ಮೊದಲು ಪರಸ್ಪರ ಗೌರವಿಸುವುದನ್ನು ಕಲಿಯಬೇಕು.

ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ ಪಿ.ರಮೇಶ್ ಕಸಾಪ ವತಿಯಿಂದ ವಿದ್ಯಾರ್ಥಿನಿಯರಿಗೆ ಲಿಖಿತ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಿದ್ದು, ವಿಜೇತ ವಿದ್ಯಾರ್ಥಿನಿಯರಿಗೆ ನೆನಪಿನ ಕಾಣಿಕೆ, ಪ್ರಶಸ್ತಿ ಪತ್ರ ಮತ್ತು ಪುಸ್ತಕಗಳನ್ನು ನೀಡಿ ಗೌರವಿಸಲಾಯಿತು.

ಕುಮಾರಿ ರಕ್ಷಿತಾ ಪ್ರಾರ್ಥಿಸಿದರು, ಡಾ.ವನಿತಾ ಸ್ವಾಗತಿಸಿದರೆ, ಡಾ. ಕವಿತಾ ವಂದಿಸಿದರು, ನಿರೂಪಣೆಯನ್ನು ಶ್ವೇತಾ ಮಾಣಿಕೇರಿ ನಿರ್ವಹಿಸಿದರು.

ಪ್ರಾಧ್ಯಾಪಕ ಡಾ.ವನಿತ, ಶ್ವೇತಾ ಮಾಣಿಕೇರಿ, ಡಾ.ಕವಿತಾ, ಅಂಜನ, ಕುಮಾರಿ ಜಾಹ್ನವಿ ಯಾದವ್, ಬಾಗೇಪಲ್ಲಿ ರಾಮಕೃಷ್ಣಾರೆಡ್ಡಿ ಮತ್ತು ವಾಲಿಸಾಬ್, ಕಸಾಪದ ಕೆ.ಎಂ. ವೆಂಕಟೇಶ್, ಕೆ.ಎಸ್.ನೂರುಲ್ಲಾ, ನಾಗರಾಜು, ಸೀತಮ್ಮ ಬೋಧಕ ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ಜತೆ ಸಣ್ಣ ಮಾರುಕಟ್ಟೆ ನಿರ್ಮಾಣ

ಶಿಡ್ಲಘಟ್ಟ: ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆ ಚನ್ನಪಟ್ಟಣದಲ್ಲಿ ತಲಾ 200 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣವಾಗುತ್ತಿದೆ. ಹಾವೇರಿ, ಕಲ್ಬುರ್ಗಿ ಮತ್ತು ಮೈಸೂರಲ್ಲಿ 15-20 ಕೋಟಿ ರೂ.ವೆಚ್ಚದಲ್ಲಿ ಸಣ್ಣ ಮಾರುಕಟ್ಟೆ ನಿರ್ಮಾಣವಾಗುತ್ತಿದೆ ಎಂದು ರೇಷ್ಮೆ ಇಲಾಖೆ ಆಯುಕ್ತೆ ಹಾಗೂ ರೇಷ್ಮೆ ನಿರ್ದೇಶಕಿ ಶಿಲ್ಪನಾಗ್ ತಿಳಿಸಿದರು.

ತಾಲೂಕಿನ ಹನುಮಂತಪುರ ಬಳಿ ನಿರ್ಮಾಣ ವಾಗುತ್ತಿರುವ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ಸ್ಥಳಕ್ಕೆ ಭೇಟಿ ನೀಡಿ ನಿರ್ಮಾಣ ಕಾಮಗಾರಿ ವೀಕ್ಷಿಸಿ ಸಂಬಂಧಿಸಿದವರಿಂದ ಮಾಹಿತಿ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣವಾಗುವುದರಿಂದ ರೇಷ್ಮೆ ಗೂಡು ಬೆಳೆಯುವ ರೈತರು ಮತ್ತು ರೇಷ್ಮೆಗೂಡು ಖರೀದಿಸಿ ರೇಷ್ಮೆನೂಲು ಬಿಚ್ಚಾಣಿಕೆ ಮಾಡುವ ರೀಲರುಗಳಿಗೆ ಅನೇಕ ರೀತಿಯಲ್ಲಿ ಅನುಕೂಲವಾಗಲಿದೆ ಎಂದು ಹೇಳಿದರು.

ಹೈಟೆಕ್ ಮಾರುಕಟ್ಟೆ ನಿರ್ಮಾಣದಿಂದ ಹೆಚ್ಚಿನ ತಾಂತ್ರಿಕತೆ ಅಳವಡಿಸಿಕೊಳ್ಳಬಹುದು. ಗೂಡು ಖರೀದಿಯಲ್ಲಿ ಮತ್ತಷ್ಟು ಪಾರದರ್ಶಕತೆ ತರಬಹುದಾಗಿದೆ. ರೇಷ್ಮೆಗೂಡಿಗೆ ಗುಣಮಟ್ಟದ

> **ಆತಂಕಪಡಬೇಕಿಲ್ಲ**
> ಈ ಹಿಂದೆ ಜಿಲ್ಲೆಯಲ್ಲಿ ಇರುತ್ತಿದ್ದಕ್ಕಿಂತಲೂ ಹೆಚ್ಚು ಪ್ರಮಾಣದ ಎಲ್‌ಪಿಜಿ ಸಿಲಿಂಡರ್‌ಗಳು ಇದೀಗ ಜಿಲ್ಲೆಯಲ್ಲಿ ದಾಸ್ತಾನು ಇದ್ದು ಯಾರು ಕೂಡ ಆತಂಕಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಪ್ರಭು ತಿಳಿಸಿದರು.

ಆಧಾರದಲ್ಲಿ ಬೆಲೆ ಸಿಗುವಂತೆ ಇದರಿಂದ ಸಾಧ್ಯ ಎಂದು ವಿವರಿಸಿದರು. ರೇಷ್ಮೆ ಬೆಳೆಗಾರರು ರೇಷ್ಮೆಗೂಡು ಬಿಡ್ಡಿಂಗ್‌ನ್ನು ಆಪ್‌ನಲ್ಲಿ ನೋಡಿ ಬಿಡ್ಡಿಂಗ್‌ನ್ನು ಸ್ವೀಕರಿಸುವ ಅಥವಾ ರದ್ದುಪಡಿಸುವ ತಂತ್ರಾಂಶದ ಆಪ್‌ನ್ನು ಕೆಲ ಕಡೆ ಬಳಸುತ್ತಿದ್ದು ಇಲ್ಲಿಯೂ ಬಳಸುವ ಚಿಂತನೆ ಇದೆ. ರೀಲರು, ರೈತರಿಗೆ ಅನುಕೂಲ ಮಾಡಿಕೊಡುವ ಮಾರುಕಟ್ಟೆ ಇದಾಗ ಬೇಕೆಂಬ ನಿಟ್ಟಿನಲ್ಲಿ ಕೆಲಸಗಳು ನಡೆಯುತ್ತಿವೆ ಎಂದು ತಿಳಿಸಿದರು.ದೇಶದ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕದಿಂದಲೆ ಶೇ 43ರಷ್ಟು ಪ್ರಮಾಣದಲ್ಲಿ ರೇಷ್ಮೆ ಉತ್ಪಾದನೆ ಆಗುತ್ತಿದ್ದು ಮೊದಲ ಸ್ಥಾನದಲ್ಲಿದ್ದೇವೆ. ಇದೆಲ್ಲವನ್ನೂ ಗಮನಿಸಿ ಇಲ್ಲಿ 120 ಟನ್ ರೇಷ್ಮೆಗೂಡು ಸಾಮರ್ಥ್ಯದ 2 ಗೋದಾಮು ಗಳನ್ನು ನಿರ್ಮಿಸಲಾಗುವುದು ಎಂದು ವಿವರಿಸಿದರು.



ಸಂಪತ್ತಿಗಿಂತ ಸಂಸ್ಕಾರವೇ ದೊಡ್ಡದು: ಸ್ವಾಮೀಜಿ

ಶಿಡ್ಲಘಟ್ಟ: ಮನುಷ್ಯನ ಜೀವನದಲ್ಲಿ ಧರ್ಮ, ಅರ್ಥ,ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳು ಪ್ರಮುಖವಾಗಿವೆ. ಇದರಲ್ಲಿ ಧರ್ಮದ ಹಾದಿಯಲ್ಲಿ ಗಳಿಸಿದ ಸಂಪತ್ತು (ಅರ್ಥ) ಮಾತ್ರ ನಮಗೆ ನಿಜವಾದ ಸುಖ ಮತ್ತು ಶಾಂತಿಯನ್ನು ನೀಡಲು ಸಾಧ್ಯ ಎಂದು ಚಿಕ್ಕಬಳ್ಳಾಪುರದ ಶ್ರೀ ರಾಮಕೃಷ್ಣ ವಿವೇಕಾನಂದ ಮಠದ ಶ್ರೀ ಪೂರ್ಣಾನಂದ ಸ್ವಾಮೀಜಿ ಅವರು ಪ್ರತಿಪಾದಿಸಿದರು. ಬೆಳ್ಳೂಟಿಯ ಶ್ರೀ ಗುಟ್ಟಾಂಜನೇಯಸ್ವಾಮಿ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸಾಮೂಹಿಕ ಶ್ರೀ ಲಕ್ಷ್ಮೀ ಪೂಜಾ ಸಮಿತಿ ಹಾಗೂ ಬೆಳ್ಳೂಟಿ ಪ್ರಗತಿ ಬಂಧು ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ 'ಸಾಮೂಹಿಕ ಶ್ರೀ ಲಕ್ಷ್ಮೀ ಪೂಜೆ' ವಿಜೃಂಭಣೆಯಿಂದ ನೆರವೇರಿತು. ಶ್ರೀ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನೂರಾರು ಮಹಿಳೆಯರು ಶ್ರದ್ಧಾಭಕ್ತಿಯಿಂದ ಮಹಾಲಕ್ಷ್ಮಿಯ ಪೂಜೆ



ಯನ್ನು ನೆರವೇರಿಸಿದರು. ಗ್ರಾಮದ ಸುಭಿಕ್ಷೆ ಮತ್ತು ಲೋಕ ಕಲ್ಯಾಣಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಮೊದಲಿಗೆ ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಚಿಕ್ಕಬಳ್ಳಾಪುರದ ಶ್ರೀ ರಾಮಕೃಷ್ಣ ವಿವೇಕಾನಂದ ಮಠದ ಪೂರ್ಣಾನಂದ ಸ್ವಾಮೀಜಿ ಅವರು, ಇಂದು ಸಮಾಜದಲ್ಲಿ ಸಾಕಷ್ಟು ಹಣ ವಿದ್ದರೂ ಜನರಲ್ಲಿ ನೆಮ್ಮದಿ ಇಲ್ಲದಿರುವುದಕ್ಕೆ ಧರ್ಮದ ತಳಹದಿಯ ಕೊರತೆಯೇ ಕಾರಣ. ಸಾಮೂಹಿಕ ಶ್ರೀ ಲಕ್ಷ್ಮೀಪೂಜಾ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಹೆಚ್.ಕೆ.ಸುರೇಶ್, ಕೆ.ಎಂ.ಎಫ್.ಮಾಜಿ ನಿರ್ದೇಶಕ ಶ್ರೀನಿವಾಸ್ ರಾಮಯ್ಯ,ರೈತ ಮುಖಂಡರಾದ ಮುನಿಕೆಂಪಣ್ಣ, ಸುಗಟೂರು ನಾಗೇಶ್,ಆನೂರಿನ ಯೋಗ ಶಿಕ್ಷಕರಾದ ಶ್ರೀನಿವಾಸ್,ಬೆಳ್ಳೂಟಿ ವಲಯದ ಮೇಲ್ವಿಚಾರಕಿ ಮೇಘನಾ, ಮುಖಂಡರಾದ ರಾಮಚಂದ್ರ, ಹುಜುಗೂರು ಬಚ್ಚೇಗೌಡ ,ದೊಡ್ಡದಾಸರಹಳ್ಳಿ ಲಕ್ಷ್ಮೀದೇವಮ್ಮ ದೇವರಾಜ್ ,ಕಲ್ಪನಾ ಮುನಿರಾಜು,ಹೆಚ್.ಕೆ. ನಾಗೇಶ್ ಗೌಡ,ಚಿಕ್ಕಣ್ಣ, ಸೇವಾ ಪ್ರತಿನಿಧಿಗಳು ಇದ್ದರು.

ಜಾನಪದ ಕಲೆಗಳು ಪೂರ್ವಿಕರ ಬದುಕಿನ ಭಾಗ: ಮುನಿಶಾಮಣ್ಣ

ಶಿಡ್ಲಘಟ್ಟ: ಜಾನಪದ ಕಲೆಗಳು ನಮ್ಮ ಪೂರ್ವಿಕರ ಬದುಕಿನ ಭಾಗವಾಗಿದ್ದವು, ಜನರ ಜೀವನಾಡಿಯುವಾಗಿದ್ದವು. ಕಾಲಾನಂತರ ಬದುಕು ಬಲವಂತದಂತೆ ಬದುಕಿನ ರೀತಿ ನೀತಿಗಳಲ್ಲಿ ಬದಲಾದಂತೆ ಜಾನಪದ ಕಲೆ ಗಳು ಕೂಡ ಅನಾವಶ್ಯಕವಾಗಿರುವುದು ಬೇಸರದ ಸಂಗತಿ ಎಂದು ಕೋಲಾಟದ ಗುರುಗಳಾದ ಆರೋಹಳ್ಳಿ ಮುನಿಶಾಮಣ್ಣ ಅಭಿಪ್ರಾಯ ಪಟ್ಟರು. ತಾಲೂಕಿನ ಹನುಮಂತಪುರದ ಶ್ರೀ ಕೃಷ್ಣಸ್ವಾಮಿ ದೇವಾಲಯದಲ್ಲಿ ಕೋಲಾಟ ಕಲಿಯಲು ಮುಂದಾದ ಜನುಮಂತಪುರ, ವರದನಾಯಕನ ಹಳ್ಳಿ, ಚೀಮನಹಳ್ಳಿ ಶಿಡ್ಲಘಟ್ಟ ನಗರದ 20ಕ್ಕೂ ಹೆಚ್ಚು ಮಹಿಳೆಯರು ಕೋಲಾಟ ಕಲಿಕೆಗೆ ಕೋಲಾಟ ಕೋಲುಗಳಿಗೆಪೂಜೆಸಲ್ಲಿಸಿಅವರುಮಾತನಾಡಿದರು.



ನಮ್ಮ ಪೂರ್ವಿಕರು ಬಳುವಳಿ ನೀಡಿರುವ ಅನೇಕ ಜಾನಪದ ಕಲೆಗಳು ಮರೆಯಾಗುತ್ತಿರುವ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿ ಮಹಿಳೆಯರು ಕೋಲಾಟ ಕಲಿಕೆಗೆ ಮುಂದಾಗಿರುವುದು ಜಾನಪದ ಕೋಲಾಟದ ಹಾಡುಗಳು ಮತ್ತು ಕುಣಿತಕ್ಕೆ ಮರು ಜೀವನ ನೀಡುವಂತಿದೆಂದು ಹರ್ಷವನ್ನು ವ್ಯಕ್ತಪಡಿ ಸಿದರು.

ಕೋಲಾಟದ ಕಲಿಕೆ ಮೊದಲು ದಿನ ಕೋಲಾಟದ ಹೋಲುಗಳಿಗೆ ಪೂಜೆ ಸಲ್ಲಿಸಿ ಕೋಲಾಟದ ಮೂಲ ತಂತ್ರ ಅದರ ಮಹತ್ವವನ್ನು ತಿಳಿಸಿಕೊಡಲಾಯಿತು. ಒಬ್ಬರಿಗೊಬ್ಬರು ಕೋಲು ಒಡೆದು ವೃತಕಾರದಲ್ಲಿ ನಾನಾ ಬಂಗಿಗಳಿಂದ ಕುಣಿತ ಹೆಜ್ಜೆ ಹಾಕಿ ಕಲಿಕೆ ಆರಂಭಿಸಿದರು. ಜಾನಪದ ಕಲಾವಿದ ಈಗ ಪ್ರಕಾಶ್ ಕುಲಕಾರ್ತಿಗಳೊಂದಿಗೆಹೆಜ್ಜೆಹಾಕಿಕೋಲಾಟದಕಲಿತು ಕೊಳ್ಳುವಷ್ಟು ದಿನಗಳಲ್ಲಿ ಕಾಲವೋ ಜೊತೆಯಲ್ಲಿದ್ದು ನೆರವು ನೆರವು ನೀಡುವದಾಗಿ ತಿಳಿಸಿದರು. ಹನುಮಂತಪುರಮುನಿರತ್ನಮ್ಮ,ಗಾಯಿತ್ರಮ್ಮ,ಹನುಮಂತ ರೆಡ್ಡಿ, ವಿಮಲಮ್ಮ, ರತ್ನಮ್ಮ ನಾಗಮ್ಮ, ಹಾರ್ಮೋನಿಯಂ ಕಲಾವಿದ ಮುನಿರೆಡ್ಡಿ, ಪ್ರಭಾಕರ್ ಕಲಾವಿದ ರಮೇಶ್, ಹೊಸ ಕಲಾವಿದರು ಈ ಕೋಲಾಟ ಸಭೆಯಲ್ಲಿ ಭಾಗವಹಿಸಿದ್ದರು.

ಯೋಗಿ ನಾರೇಯಣ ಯತೀಂದ್ರರ 300ನೇ ಜಯಂತ್ಯುತ್ಸವ

ಕೈವಾರ ತಾತಯ್ಯಗೆ ಯಾವುದೇ ಜಾತಿ ಭೇದವಿಲ್ಲ

ಗೌರಿಬಿದನೂರು: ಕೈವಾರ ತಾತಯ್ಯಗೆ ಯಾವುದೇ ಜಾತಿ ಬೇಧ ಇಲ್ಲ, ಸರ್ವರೂ ಒಂದೇ ಅವರು ಒಂದು ಜಾತಿಗೆ ಸೇರಿದವರಲ್ಲ ಎಂದು ಕೈವಾರಕ್ಷೇತ್ರದಸಂಚಾಲಕ ಬಾಲಕೃಷ್ಣಭಾಗವತಾರ್ ಹೇಳಿದರು. ನಗರದ ಗಾಂಧಿ ವೃತ್ತದಲ್ಲಿ ಸದ್ಗುರು ಯೋಗಿನಾರೇಯಣಯತೀಂದ್ರರಜಯಂತ್ಯುತ್ಸವ ಸಮಿತಿಯಿಂದ 300ನೇ ಜಯಂತ್ಯುತ್ಸವ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕೈವಾರ ತಾತಯ್ಯಗೆ ಯಾವುದೇ ಜಾತಿ ಮತ ಇಲ್ಲ, ನಮ್ಮ ಕ್ಷೇತ್ರಕ್ಕೆ ಎಲ್ಲರೂ ಸಹಕಾರ ನೀಡುತ್ತಿದ್ದಾರೆ.

ತಾಲೂಕಿನಲ್ಲಿ ಬಲಜಿಗರು 4-5ಗುಂಪುಗಳನ್ನು ಮಾಡಿಕೊಂಡು ಬಲಜಿಗರಲ್ಲಿ ಒಗ್ಗಟ್ಟಾಗಿಲ್ಲ, ಆದ್ದರಿಂದ ಎಲ್ಲರೂ ಸೇರಿ ಅನ್ಯೋನ್ಯವಾಗಿ ಎಲ್ಲರೂ ಒಂದೇಕುಟುಂಬದಸದಸ್ಯರಂತೆ ಒಗ್ಗಟ್ಟಿನಿಂದ ಬಾಳ್ವೆ ನಡೆಸಲು ಸಲಹೆ ನೀಡಿದರು. ಕೈವಾರ ತಾತಯ್ಯರವರು ಅಮರನಾರಾಯಣ ಕುಲಕ್ಕೆ ಸೇರಿದವರು. ಆರ್ಯ ವೈಶ್ಯರು ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡು



ತ್ತಿದ್ದಾರೆ. ಆದರೆ ಬಲಜಿಗರು ಒಗ್ಗಟ್ಟಿನಿಂದ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಕೈವಾರ ಕ್ಷೇತ್ರದಲ್ಲಿ ದಿನಕ್ಕೆ 5 ಸಾವಿರ ಜನರು ಕೆಲಸ ಮಾಡುತ್ತಾರೆ. ನಮ್ಮಲ್ಲಿ ಅಕ್ಕಿ ಸ್ಟಾಕ್ ಇದೆ. ನಗರಸಭೆ ಮಾಜಿ ಸದಸ್ಯ ಎಸ್ ರಮೇಶ್ ಪ್ರತಿ ವರ್ಷ ಸಹೋದ್ಯೋಗಿಗಳೊಂದಿಗೆ 130 ಟನ್ ಅಕ್ಕಿಯನ್ನು ನಮ್ಮ ಕ್ಷೇತ್ರಕ್ಕೆ ನೀಡುತ್ತಾರೆ. ನಗರದಲ್ಲಿ ಕೃಷ್ಣ ದೇವರಾಯವೃತ್ತಹೆಸರಿಡುತ್ತಿರುವುದುಬಹಳಸಂತೋಷ. ರಾಜ್ಯದಲ್ಲಿ ಕೈವಾರ ತಾತಯ್ಯನವರ ಕೀರ್ತನೆಗಳು ಹೇಳುವುದು ದಲಿತರೇ. ತಾತಯ್ಯನವರ ಹಾಡುಗಳು 5 ಸಾವಿರ ಹಾಡುಗಳಿವೆ. ಎಲ್ಲಾ ಹಾಡುಗಳು ದಲಿತರೇ ಹಾಡುವುದು 'ಒಉತ್ತಮ ಸಂದೇಶ ನೀಡಿದಂತಾಗುತ್ತದೆ ಎಂದು ಹೇಳಿದರು.

ಮಾಜಿ ಶಾಸಕ ಎನ್.ಎಚ್.ಶಿವಶಂಕರರೆಡ್ಡಿ. ಮುಖಂಡರಾದ ಬಲಿಜ ಸಂಘದ ರಾಜ್ಯಾಧ್ಯಕ್ಷ ಜಗದೀಶ್.ಮಾತನಾಡಿದರು. ಮೋಹನ್, ರಮೇಶ್, ರವೀಂದ್ರನಾಥ, ನಗರಸಭೆ ಮಾಜಿ ಸದಸ್ಯ ಅನಂತರಾಜು, ಅಶ್ವತ್ಥ್. ಜಿ.ವಿ.ಅಶ್ವತ್ಥನಾರಾಯಣ. ರಮೇಶ್, ಪ್ರಕಾಶ್, ವಿಜಯ ವೆಂಕಟಾದ್ರಿ,. ಬಲಿಜ ಯುವ ಗರ್ಜನೆ ಜಿಲ್ಲಾಧ್ಯಕ್ಷ ಜಿ.ಎ.ಪ್ರದೀಪ್, ಎಚ್ .ವಿ.ವೆಂಕಟೇಶ್, ಅನಿಲ್ ಕುಮಾರ್. ಪರಮೇಶ್, ಮಾಳಪ್ಪ ಹಾಜರಿದ್ದರು.

ರಾಷ್ಟ್ರೀಯ ಮೆಗಾ ಲೋಕ ಅದಾಲತ್‌ಗೆ ಚಾಲನೆ ನೀಡಿ ಹೇಳಿಕೆ

ವಿಭಕ್ತ ಕುಟುಂಬಗಳ ಬಗ್ಗೆ ನ್ಯಾಯಾಧೀಶರ ಕಳವಳ

ಚಿಕ್ಕಬಳ್ಳಾಪುರ: ಲೋಕ ಅದಾಲತ್‌ನಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಕಕ್ಷಿದಾರರು ಮುಂದಾಗುವುದರಿಂದ ಪ್ರಕರಣಗಳಿಗೆ ಶೀಘ್ರ ಮುಕ್ತಿ ದೊರೆಯುತ್ತದೆ. ಹಣ, ಸಮಯ ಉಳಿಯುವ ಜತೆಗೆ ಪದೇ ಪದೇ ನ್ಯಾಯಾಲಯಕ್ಕೆ ಅಲೆಯುವುದು ತಪ್ಪುತ್ತದೆ ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶ ಟಿ.ಪಿ.ರಾಮಲಿಂಗೇಗೌಡ ತಿಳಿಸಿದರು.

ಜಿಲ್ಲಾ ನ್ಯಾಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮೆಗಾ ಲೋಕ ಅದಾಲತ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಅದಾಲತ್‌ನಲ್ಲಿ ನೀಡುವ ತೀರ್ಪು ನ್ಯಾಯಾಲಯದಲ್ಲಿ ಸಹಜವಾಗಿ ನಡೆಯುವ ಪ್ರಕರಣಗಳ ತೀರ್ಪುಗಳಿಗಿಂತ ಭಿನ್ನವಾಗಿದ್ದು

ಉಭಯಕಕ್ಷಿದಾರರಿಗೂಸಮಾಧಾನಮತ್ತುನೆಮ್ಮದಿ ಸಿಗುವ ಜೊತೆಗೆ ಸಮಯ ಉಳಿತಾಯವಾಗುತ್ತದೆ. ಹಿಂದಿನ ಕಾಲದಲ್ಲಿ ಅವಿಭಕ್ತ ಕುಟುಂಬಗಳಿದ್ದವು ಕುಟುಂಬದಲ್ಲಿದ್ದ ಅಜ್ಜ, ಅಜ್ಜಿ ಹಾಗೂ ಇನ್ನಿತರ ಹಿರಿಯ ಸದಸ್ಯರಿಂದ ಮಕ್ಕಳು ಅಥವಾ ಮೊಮ್ಮಕ್ಕಳು ತಪ್ಪು ಮಾಡಿದಾಗ ಮೂಲದಲ್ಲೇ ತಿದ್ದಿ ಸರಿ ಮಾಡುವ



ಕೆಲಸ ಆಗುತ್ತಿತ್ತು ಇಂದಿನ ದಿನಮಾನದಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚಾಗಿ ಇರುವುದರಿಂದ ಸಣ್ಣ ಸಣ್ಣ ಜಗಳಕ್ಕೂ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸುತ್ತಿರುವುದು ಕಳವಳಕಾರಿ ವಿಚಾರ.ಪ್ರತಿ ಸಣ್ಣಪುಟ್ಟ ವಿಚಾರಗಳನ್ನೂ ವ್ಯಾಜ್ಯಗಳನ್ನಾಗಿ ಪರಿವರ್ತಿಸಿಕೊಳ್ಳಬಾರದು ಎಂದರು.

ಸಂಯಮದಿಂದ ಪರಿಸ್ಥಿತಿಗಳನ್ನು ನಿಭಾಯಿಸಿ ಮುಂದೆ ಎದುರಾಗುವ ಸಮಸ್ಯೆಗಳಿಗೆ ಮೂಲ ದಲ್ಲೇ ಕಡಿವಾಣ ಹಾಕಬೇಕು. ಪ್ರಕರಣಗಳು ದಾಖಲಾಗುವುದರಿಂದ ಅಮೂಲ್ಯವಾದ ಸಮಯ,ಹಣ, ನೆಮ್ಮದಿ ಹಾಳಾಗುತ್ತದೆ. ಜೊತೆಗೆ ನ್ಯಾಯಾಲಯಗಳಲ್ಲೂ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ನ್ಯಾಯಾಲಯಗಳ ಮೇಲೂ ಒತ್ತಡ ಅಧಿಕವಾಗಿ ಹೊರೆಯೂ ಹೆಚ್ಚಾಗುತ್ತದೆ. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಅಭಿಲಾಷ್ ಸಣ್ಣಪುಟ್ಟ ವಿಸ್ತೀರ್ಣದ ಜಮೀನುಗಳಿಗಾಗಿ ಪ್ರತಿಷ್ಠೆಗಳಿಗೆ ಬಿದ್ದು ಅನೇಕರು ನ್ಯಾಯಾಲಯಗಳಲ್ಲಿ ಪ್ರಕರಣಗಳಿಗೆ ತಲೆಮಾರುಗಟ್ಟಲೇ ಮತ್ತು ಅನೇಕ ವರ್ಷಾನುಗಟ್ಟಲೆ ಓಡಾಡುತ್ತಿರುವವರು ಅನೇಕರಿದ್ದಾರೆ ಎಂದು ತಿಳಿಸಿದರು. ಜಿನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗೌರವಾನ್ವಿತ ನ್ಯಾಯಾಧೀಶರು ವಕೀಲರು, ಕಕ್ಷಿದಾರರು ಭಾಗವಹಿಸಿದ್ದರು.